ನವೆಂಬರ್ ೧೯೮೪


ಕಸ್ತೂರಿ



ರೂ. ೨

ದೀಪಾವಳಿ ವಿಶೇಷಾಂಕ


ದೀಪಾವಳಿಯ ಶುಭಾಶಯಗಳು
MAFATLAL GROUP
ಮಫತಲಾಲ
ಗ್ರುಪ್




ಮಿತವ್ಯಯದಿಂದ ಖರ್ಚುಮಾಡಿ ಉಳಿತಾಯ
ಮಾಡಿದ ಪ್ರತಿಯೊಂದು ರೂಪಾಯಿ ಈ ಪಣತಿಯ ಜ್ಯೋತಿಯಂತಿರುತ್ತದೆ.
ತನ್ನ ಶಕ್ತ್ಯಾನುಸಾರವಾಗಿ ಪ್ರಕಾಶವನ್ನು ನೀಡುವ ಸಾಮರ್ಥ್ಯಜ್ಯೋತಿಯಲ್ಲಿ ಇರುವಂತೆ.
ಜೀವನಪಥದಲ್ಲಿ ಸುಖದ ಪ್ರಕಾಶವನ್ನು ತೋರುವ ಶಕ್ತಿ ನಾವು ಉಳಿತಾಯ
ಮಾಡಿದ ಪ್ರತಿಯೊಂದು ರೂಪಾಯಿಯಲ್ಲಿರುತ್ತದೆ.
ನಿಮ್ಮ ಉಳಿತಾಯದಿಂದ ನಿಮ್ಮ ಹಾಗೂ ನಿಮ್ಮ ಕುಟುಂಬದವರ
ಜೀವನವನ್ನು ಸುಖಸಮೃದ್ಧಿಯ ಪ್ರಕಾಶವು ಬೆಳಗಲೆಂದು
ಈ ದೀಪೋತ್ಸವದ ನಿಮಿತ್ತ್ಯವಾಗಿ ಶುಭೇಚ್ಛೆಗಳು !!
ನಿಮ್ಮ ಉತ್ಕರ್ಷದಲ್ಲಿಯ ಪಾಲುಗಾರ
ದಿ ಸಾಂಗಲಿ ಬ್ಯಾಂಕ್ ಲಿ.
ರಜಿ. ಆಫೀಸ: ರಾಜವಾಡಾ ಚೌಕ, ಸಾಂಗಲಿ
ಚೇರಮನ್—ಎಮ್. ಆರ್. ರಣದಿವೆ


PRATIBHA-BB-787



from the makers of the famous THIRTY BRAND BEEDIES

BHARATH BEEDI WORKS PRIVATE LIMITED MANGALORE


ರಕ್ಷಿಸುತ್ತದೆ
ಪರಿಮಳ!!
ಹೆಚ್ಚು ನೊರೆ!!!
MEDIMIX
AYURVEDIC TOILET SOAP
ಮೆಡಿಮಿಕ್ಸ್
ಔಷಧಿ ಸಾಬೂನು
• ತುರಿಕಜ್ಜಿ
• ಸಿಬ್ಬರೋಗ
• ಗಜಕರ್ಣ
• ಹುಳಕಡ್ಡಿ
• ಬೆವರುಸಲೆ
• ಡೋಬಿತುರಿಕೆ
• ಮಡಿವು
• ಬಣ್ಣ ಬದಲಾಗುವಿಕೆ
• ತಲೆಹೊಟ್ಟು
CHOLAYIL PHARMACEUTICALS
22, THIRUVALLUVAR STREET, MADRAS-600011.


ಕೋರೈಸುವ ಬಿಳಿಪು ಯಾರೇ
ನೋಡಲಿ, ಒಂದೇ ಮಾತು...
ಇದು ಖಂಡಿತ
ಡೆಟ್
ಡಿಟರ್ಜೆಂಟ್
ಬಿಲ್ಲೆಯ ಒಗೆತ
Supreme
det
Shilpi DM 35A/78 Kan

ಆರ್ಥಿಕ ಸ್ವಾತಂತ್ರ್ಯ ಸಾಧನೆಯತ್ತ
ಕರ್ನಾಟಕದ ಮುನ್ನಡೆ

ಆರ್ಥಿಕ ಪ್ರಗತಿ

೧೯೭೭–೭೮ ರಲ್ಲಿ ಕರ್ನಾಟಕ ಆರ್ಥಿಕ ಕ್ಷೇತ್ರದಲ್ಲಿ ಶೇಕಡ ೬ ರಷ್ಟು ಪ್ರಗತಿ ಸಾಧಿಸಿದೆ ಎಂದು ಅಂದಾಜು ಮಾಡಲಾಗಿದೆ. ಅಖಿಲ ಭಾರತ ಪ್ರಗತಿಯ ಪ್ರಮಾಣ ಶೇಕಡ ಐದು ಮಾತ್ರ.

೧೯೭೪-೭೫ ರಲ್ಲಿ ೨೫೪೪ ಕೋಟಿ ರೂ. ಆಗಿದ್ದ ರಾಜ್ಯದ ಆದಾಯ ೧೯೭೭-೭೮ರ ಹೊತ್ತಿಗೆ ೨೮೦೦ ಕೋಟಿ ರೂ. ಏರಿದೆ ಎಂದು ಅಂದಾಜು ಮಾಡಲಾಗಿದೆ.

ತಲಾ ವರಮಾನ ೧೯೭೪-೭೫ ರಲ್ಲಿ ರೂ. ೭೮೪ ಇದ್ದದ್ದು ೧೯೭೭-೭೮ ರಲ್ಲಿ ರೂ. ೮೪೦ ಕ್ಕೆ ಏರಿದೆ.

ಅಭಿವೃದ್ಧಿ ವೆಚ್ಚದ ಪ್ರಮಾಣವೂ ಇದೇ ಅವಧಿಯಲ್ಲಿ ತಲಾ ೯೯ ರೂ. ನಿಂದ ೧೫೬ ರೂ.ಗೆ ಏರಿದೆ.

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ.

"ನನ್ನ ಮಗಳಿಗೆ ಸಂಪೂರ್ಣ ಆರೋಗ್ಯದಾಯಕ ಪೇಯಕ್ಕಿಂತ ಕಡಿಮೆ ಸಲ್ಲದು!"

ಕೇವಲ

ಕೋಂಪ್ಲಾನ್

ಪ್ರತಿ ದೇಹಕ್ಕೆ ಅತ್ಯವಶ್ಯಕವಾಗಿರುವ 23 ಪೋಷಕಾಂಶಗಳನ್ನು ಒಳಗೊಂಡಿರುವ ಸಂಪೂರ್ಣ ಆರೋಗ್ಯದಾಯಕ ಪೇಯ.



ಸ್ವಾಸ್ಥ್ಯ ಮತ್ತು ಶಕ್ತಿಗಾಗಿ, ಪ್ರತಿಯೊಬ್ಬರ ದೇಹಕ್ಕೆ ಪ್ರತಿ ದಿನ ಅತ್ಯವಶ್ಯಕವಾಗಿರುವ, ಪ್ರೋಟೀನ್‌ಗಳು, ವಿಟಮಿನ್‌ಗಳು, ಖನಿಜದ್ರವ್ಯಗಳು, ಕಾರ್ಬೋಹೈಡ್ರೇಟ್‌ಗಳು ಮತ್ತು ಇತರ ಪೋಷಕಾಂಶಗಳು, ಕೇವಲ ಕೋಂಪ್ಲಾನ್‌ನಲ್ಲಿ ವೈಜ್ಞಾನಿಕವಾಗಿ ನಿಯೋಜಿತ ಪ್ರಮಾಣದಲ್ಲಿವೆ. ಪ್ರತಿ ಸಲ ಹೆಚ್ಚಿನ ಪೋಷಕಾಹಾರದ ಅಗತ್ಯವಿರುವಾಗ ಮಕ್ಕಳಿಗೆ ಹೇಳಿಸಿದ್ದು. ಹೆಚ್ಚಾಗಿ ಊಟಕ್ಕೂ ಬಿಡುವಿಲ್ಲದ ಅವಸರದ ಪತಿಗಳಿಗೆ ಆದರ್ಶವಾಗಿದೆ. ಆರೋಗ್ಯ ಚೆನ್ನಾಗಿರದೆ ಊಟ ಒಗ್ಗದ ಕುಟುಂಬದ ಹಿರಿಯರಿಗೆ ಉತ್ತಮ. ಆಯಾಸದಿಂದ ಊಟವೇ ಬೇಡವೆನಿಸುವ ನಿಮಗೆ ಮತ್ತೂ ಉತ್ತಮ.

ನೆನಪಿಡಿರಿ, ಡಾಕ್ಟರರು ಸಂಪೂರ್ಣ ಪೋಷಕಾಹಾರವಾಗಿ ಹೆಚ್ಚಾಗಿ ಕೋಂಪ್ಲಾನ್‌ನ್ನು ಶಿಫಾರಸು ಮಾಡುತ್ತಾರೆ.

ಕೋಂಪ್ಲಾನ್ ಪ್ಲೇನ್ ಮತ್ತು ಸ್ವಾದಿಷ್ಟವಾದ ಚಾಕ್‌ಲೇಟ್, ಎಲಕ್ಕಿ-ಕೇಸರಿ ಮಾತ್ರವಲ್ಲದೆ ಮಕ್ಕಳು ಮೆಚ್ಚುವ ಹೊಸ ಸ್ಟ್ರಾಬೆರಿ ಸ್ವಾದಗಳಲ್ಲಿಯೂ ದೊರೆಯುತ್ತದೆ!

ಪ್ರೋಟೀನ್
ಕೊಬ್ಬು
ಕಾರ್ಬೋಹೈಡ್ರೇಟ್
ಕ್ಯಾಲ್ಸಿಯಮ್
ಫೋಸ್ಫರಸ್
ಸೋಡಿಯಮ್
ಕ್ಲೋರೈಡ್ (ಸಿ.ಎಲ್ ಆಗಿ)
ಪೊಟ್ಯಾಶಿಯಮ್
ಆಯರ್ನ್
ಅಯೊಡಿನ್
ವಿಟಮಿನ್ ಎ
ವಿಟಮಿನ್ ಬಿ1


ರಿಬೊಫ್ಲೇವಿನ್
ನಿಕೋಟಿನಾಮೈಡ್
ಕ್ಯಾಲ್ಸಿಯಮ್
ಪ್ಯಾಂಟೋಥಿನೇಟ್
ಕೋಲಿನ್
ಪೈರಿಡೋಕ್ಸಿನ್ (ಬಿ6)
ವಿಟಮಿನ್ ಬಿ12
ಫಾಲಿಕ್ ಆಸಿಡ್
ವಿಟಮಿನ್ ಸಿ
ವಿಟಮಿನ್ ಡಿ
ವಿಟಮಿನ್ ಇ
ವಿಟಮಿನ್ ಕೆ

ಹಾಲನ್ನು ಬೆರಸಬೇಕಾಗಿಲ್ಲ



ಸಂಪೂರ್ಣವಾದುದು

ಕೋಂಪ್ಲಾನ್ ಸಂಪೂರ್ಣ ಆರೋಗ್ಯದಾಯಕ ಪೇಯ.


ಮನುಷ್ಯನ ಅತ್ಯುತ್ತಮ ಸಾಧನೆಗೆ ತಕ್ಕುದಾದ ಪ್ರಥಮ
DORNFAB
super-suiting sensation
GWALIOR
SUITING

ಕಸ್ತೂರಿ

ವ್ಯವಸ್ಥಾಪಕ ಸಂಪಾದಕ:
ಎಚ್. ಆರ್. ಬಸವರಾಜ್

ಸಂಪಾದಕ :
ಪ. ಸು. ಭಟ್ಟ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ಅಹ್ಹಾ! ದೀಪಾವಳಿ
ಚಿತ್ರ:
ಎಚ್. ಎಸ್. ಮಧುರಾನಾಥ

ಚಂದಾದರ

ವರ್ಷ (ಅಂಚೆ ಸೇರಿ)	ರೂ. ೩೫-೦೦
ವರ್ಷ ,,	ರೂ. ೨೫-೦೦
ವರ್ಷ ,	ರೂ. ೧೪-೦೦
ರ್ಧ ವರ್ಷ ,,	ರೂ. ೭-೫೦

KASTURI November 1978

ಬೆಳಕಿಂಡಿ

ಇಲಿ ಮೊಲಗಳು ನೆಲಜೀವಿಗಳು. ಮಂಗ ವೃಕ್ಷಜೀವಿ. ಹಕ್ಕಿ-ಪಕ್ಕಿಗಳು ವಾಯುಜೀವಿಗಳು. ಮೀನು ಜಲಜೀವಿ. ಮನುಷ್ಯ ಮಾತ್ರ ಶಯ್ಯಾಜೀವಿ.

— ಡಾ. ರಾಲ್ಫ್ ಹಾಪ್ಸನ್

ಬದುಕಲಿಕ್ಕೆ ಕೇವಲ 'ಡಿಗ್ರಿ' ಮಹತ್ವದ್ದಲ್ಲ; 'ಪಿಡಿಗ್ರೀ' ಅದಕ್ಕಿಂತ ಮಹತ್ವದ್ದು.

— ಶ್ರೀರಂಗ ('ಕೇಳು ಜನಮೇಜಯ'ದಲ್ಲಿ)

'ನಮಗೆಂಥ ಜಗತ್ತು ಬೇಕು?' ಎಂಬ ಪ್ರಶ್ನೆಗೆ ನನ್ನ ಉತ್ತರ: 'ಮನುಷ್ಯನಾಗಿರಲು ಸುರಕ್ಷಿತವಾದಂಥದು.'

— ಆರ್ಥರ್ ಜೆ. ಗೋಲ್ಡ್‌ಬರ್ಗ್

ಬುರುಡೆಯೊಳಗಿನ ಮಿದುಳನ್ನು ಬುಗುರೆಯಂತಾಡಿಸುವಾಗ, ಬೆರಳುಗಳನ್ನು ಮಡಿಸಲಾರದ ಹಾಗೆ, ನರಗಳನ್ನು ಬಿಗಿ ಹಿಡಿದುಬಿಟ್ಟಾಗ ಕ್ರಾಂತಿ ಸಾಧ್ಯವೆ?

— ಮೋಹಿತ ಚಟರ್ಜಿ ('ರಾಜರಕ್ತ' ನಾಟಕದಲ್ಲಿ)

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಕೃತಕ ಗರ್ಭಧಾರಣೆ

ತೀರಾ ಇತ್ತೀಚಿನ ಸುದ್ದಿಗಳಾದ 'ಲೂಸಿ ಬ್ರೌನ್ ಜನನ' ಹಾಗು ಇದಕ್ಕೆ ಪೂರಕವಾದಂತೆ 'ಮಾನವ ಕೃತಕ ಗರ್ಭಧಾರಣೆ' ಲೇಖನಗಳನ್ನು ಅಕ್ಟೋಬರ್ ೭೮ ರ ಕಸ್ತೂರಿಯಲ್ಲಿ ಓದಿ ಬಹಳ ಸಂತೋಷವಾಯಿತು. ಲೂಸಿ ಬ್ರೌನ್‌ಳ ತಾಯಿಯಂತೆ ಅಂಡನಾಳದ ತೊಂದರೆಯಿಂದ ಬಂಜೆಯರೆನಿಸಿಕೊಂಡ ಸ್ತ್ರೀಯರು ತಮ್ಮದೇ ಸ್ವಂತ ಮಗುವನ್ನು ಇನ್ನು ಪಡೆಯಬಹುದು. ವಿಜ್ಞಾನವು ಮೂಢನಂಬಿಕೆ ಹಾಗೂ ಅಜ್ಞಾನದ ದೊಡ್ಡ ಶತ್ರು.

ದಾವಣಗೆರೆ -ಡಾ. ಮಹಬಲರಾಜು ವಿ. ಕೆ.

[ಈ ಲೇಖನ ಪ್ರಕಟವಾದ ನಂತರ ಭಾರತದಲ್ಲಿಯೇ ಜಗತ್ತಿನ ದ್ವಿತೀಯ ಪ್ರನಾಳ ಶಿಶು (ದುರ್ಗಾ) ಜನಿಸಿತೆಂಬುದೂ ಗಮನಾರ್ಹ.

-ಸಂ.]

ಮೂಕಜ್ಜಿ ಮತ್ತು ಕಾರಂತರು

ಅಕ್ಟೋಬರ್ 'ಕಸ್ತೂರಿ'ಯಲ್ಲಿ ಬಂದ 'ಕಾರಂತರು ಕಂಡ ಮೂಕಜ್ಜಿ' ಸಂದರ್ಶನ ನನ್ನಂತಹ ಯುವಕರ ಕಣ್ಣು ತೆರೆಸುವಂತಿದೆ. ಶ್ರೀ ಕಾರಂತರಂತಹ ಮಹಾನುಭಾವರಿಂದ ಬಂದ ಸಂದೇಶಕ್ಕೆ ಬೆಲೆಯಿದೆ.

ಶಿರಗುಪ್ಪಿ -ಶ್ರೀನಿವಾಸ ದಿವಾಣ ಸಿ. ಎಮ್.

'ಕಸ್ತೂರಿ' ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ [illegible] ಲೇಖನ 'ಮುಂಬಯಿ ಕನ್ನಡಿಗರ ಸಿ. ಎಮ್.' ನಾನು ತುಂಬ ಮೆಚ್ಚಿದ ಲೇಖನ. ಗಾತ್ರದಲ್ಲಿ ಚಿಕ್ಕದೇ ಆದರೂ ಆ ಮಹಾಪುರುಷನ ವ್ಯಕ್ತಿತ್ವದ ಹಿರಿಮೆಗಳನ್ನು ಪರಿಣಾಮಕಾರಿಯಾಗಿ ಬಿಚ್ಚಿ ತೋರಿಸುತ್ತದೆ.

ನ್ಯಾಮತಿ -ಎನ್. ಎಂ. ಸಿದ್ದಯ್ಯ

ಅರಿಕೆ

'ಕಸ್ತೂರಿ'ಯು ಈ ಪ್ರಪ್ರಥಮ ದೀಪಾವಳಿ ವಿಶೇಷ ಸಂಚಿಕೆಗೆ ಕನ್ನಡದ ಖ್ಯಾತ ಲೇಖಕ-ಲೇಖಕಿಯರು ನಾವು ಅವರಿಗಿತ್ತ ಅಲ್ಪಾವಧಿಯಲ್ಲೇ ಲೇಖನಗಳನ್ನಿತ್ತು ಗೌರವಿಸಿದ್ದಾರೆ. ಅವರಿಂದ ನಮಗೆ ದೊರೆತ ಉತ್ತೇಜನ ಅಪೂರ್ವವಾದದ್ದು. ಆದರೆ ಸ್ಥಳಾಭಾವದ ತೀರ ಅನಿವಾರ್ಯ ಕಾರಣಕ್ಕಾಗಿ ಕೆಲವು ಆಮಂತ್ರಿತರ ಲೇಖನಗಳನ್ನು ಮುಂದಿನ ಸಂಚಿಕೆಗೆಂದು ಉಳಿಸಿಕೊಳ್ಳಬೇಕಾಗಿ ಬಂತು. ಅದಕ್ಕಾಗಿ ಅವರ ಕ್ಷಮೆ ಕೋರುತ್ತೇವೆ. -ಸಂಪಾದಕ

ಉತ್ತಮ ಸಂಚಿಕೆ

ಅಕ್ಟೋಬರ್ ೭೮ ರ 'ಕಸ್ತೂರಿ' ಚೆನ್ನಾಗಿದೆ. ಎಲ್ಲಾ ಲೇಖನಗಳೂ ಕಥೆಗಳೂ ಸುಂದರವಾಗಿವೆ. ಈ ಸಾರಿ ಒಂದಾದರೂ ಕವನವಿಲ್ಲದಿರುವುದು ಸ್ವಲ್ಪ ಬೇಸರ ಮೂಡಿಸಿತು. ಆದರೂ 'ಕಸ್ತೂರಿ' ಸುಂದರವಾಗಿಯೇ ಇದೆ. 'ಕಸ್ತೂರಿ'ಯನ್ನು ಇದು ಚೆನ್ನಾಗಿದೆ ಈ ಸಂಚಿಕೆ ಚೆನ್ನಾಗಿಲ್ಲ ಎಂದು ಹೇಳುವ ಹಾಗೇ ಇಲ್ಲ.

ಒಂದು ಮಾತು. ಈ ಸಲದ ಪುಸ್ತಕ ವಿಭಾಗದಲ್ಲಿ ಬಂದ 'ಭಗವಾನ್ ಕೌಟಿಲ್ಯ'ದಲ್ಲಿ ಬರುವ ಘಟನೆಗಳಿಗೂ ಕೌಟಿಲ್ಯನ ಬಗ್ಗೆ ಇತಿಹಾಸದಲ್ಲಿ ಬರುವ ಘಟನೆಗಳಿಗೂ ವ್ಯತ್ಯಾಸವಿದೆಯಲ್ಲ?

ಸಿದ್ದಯ್ಯನಪುರಂ -ಎಲ್. ಪ್ರೇಮಶೇಖರ

[ಇತಿಹಾಸ ಮತ್ತು ಐತಿಹಾಸಿಕ ಕಥೆಗಳಲ್ಲಿ ಒಂದು ಮಹದಂತರವೆಂದರೆ ಇತಿಹಾಸದಲ್ಲಿ ಕಾಲ್ಪನಿಕ ವ್ಯಕ್ತಿಗಳನ್ನೂ ಸನ್ನಿವೇಶಗಳನ್ನೂ ಸೇರಿಸಲು ಬರುವುದಿಲ್ಲ; ಆದರೆ ಐತಿಹಾಸಿಕ ಕಥೆಯಲ್ಲಿ ಐತಿಹಾಸಿಕ ಘಟನೆಗಳ ಚೌಕಟ್ಟಿನಲ್ಲೇ ಕಥೆಯ ಬೆಳವಣಿಗೆಗೆ ಅನುಕೂಲವಾಗುವಂತಹ ಪೂರಕ ಘಟನೆಗಳನ್ನೂ ಪಾತ್ರಗಳನ್ನೂ ಹೆಣೆಯಬೇಕಾಗುತ್ತದೆ. -ಸಂ.]

ನವೆಂಬರ್ ೧೯೭೮

ಸಂಚಿಕೆ : ೩

ವರ್ಷ ೨೩

ಕಸ್ತೂರಿ

ದೀಪಾವಳಿ ಸಂಚಿಕೆ

ನಿಮ್ಮೊಂದಿಗೆ......

ಪ್ರಪ್ರಥಮ ಬಾರಿಗೆ ಕಸ್ತೂರಿ ದೀಪಾವಳಿ ಸಂಚಿಕೆಯನ್ನು ಓದುಗರಿಗೆ ಅರ್ಪಿಸುತ್ತಿದ್ದೇವೆ. ಅಜ್ಞಾನ ಅಂಧಕಾರದ ಕೋಟೆಯಿಂದುಂಟಾದ ಅವನತಿಯ ಅಸಮತೆ, ಈ ಕಗ್ಗತ್ತಲೆಯಲ್ಲಿ ದಾರಿಗಾಣದೆ ತೊಳಲುತ್ತಿರುವ ಸಮಾಜಕ್ಕೆ ದೀಪಾವಳಿಯ ಬೆಳ್‌ಬೆಳಕು ದಾರಿದೀಪವಾಗಬೇಕು. ಅವರ ಬಾಳಿನಲ್ಲಿ ಸಂತಸದ ಹೊನಲು ಹರಿಯಲಿ. ಬಾಳು ಹಸನವಾಗಬೇಕಾದರೆ ನಿಜವಾದ ಜ್ಞಾನ ಮನುಷ್ಯನಲ್ಲಿ ಬೆಳಗಬೇಕು, ಮಾನವ ಹೃದಯ ವಿಷಯಗಳ ಹುತ್ತವಾಗದೆ ಜ್ಞಾನಮಂದಿರವಾಗಬೇಕು. ಆ ದಿಶೆಯಲ್ಲಿ 'ಕಸ್ತೂರಿ' ತನ್ನ ಅಳಿಲ ಸೇವೆ ಸಲ್ಲಿಸಿದೆ. ಈ ದೀಪಾವಳಿ ಸಂಚಿಕೆಯಲ್ಲಿ ಲಘು ಸಾಹಿತ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ.

ಈ ಸಂಚಿಕೆ ಸರ್ವಾಂಗ ಸುಂದರವಾಗಲು ಕಾರಣರಾದ ಲೇಖಕರಿಗೆ, ಕಲಾವಿದರಿಗೆ ಹಾಗೂ ನಮ್ಮ ಕರೆಗೆ ಓಗೊಟ್ಟ ಜಾಹೀರಾತುದಾರರಿಗೆ ನಮ್ಮ ಕೃತಜ್ಞತೆ.

— ಪ. ಸು. ಭಟ್ಟ

ಪ್ರೇಮ ಪಾತಳಿ

ಎನ್ಕೆ

Water seeks its own level ಎಂದರೆ ನೀರು ತನ್ನ ಪಾತಳಿಯನ್ನೆ ಹುಡುಕಿಕೊಂಡು ಹೋಗುತ್ತದೆ ಎಂದು ಹೇಳುವರಲ್ಲವೆ ? ಹಾಗೆಯೆ ಪ್ರೇಮವು ಕೂಡ ತನ್ನ ಪಾತಳಿಯನ್ನು ಹುಡುಕಿಕೊಂಡು ಹೋಗುತ್ತದೆ. Love seeks its own level.

ತರುಣನು ತರುಣಿಯನ್ನು, ವಯಸ್ಕನು ವಯಸ್ಕೆಯನ್ನು, ಮುದುಕಿಯನ್ನು ಮುದುಕ, ನಡುಹರೆಯದವಳನ್ನು ನಡುಹರೆಯದವ ಹೀಗೆ-ಹುಡುಕಿಕೊಂಡು ಹೋಗುತ್ತಾರೆ.

ಪ್ರೇಮಕ್ಕೆ ಶೇಪು ಕೊಡಬೇಕು ಎಂಬ ನಿಯಮ-ವಿದೆ. ಯಾವ ಗಂಡನ್ನು ಕಂಡಾಗ ಹೆಣ್ಣಿನ ಕೂದಲು ನೆಟ್ಟಗಾಗುತ್ತವೆಯೋ ಅದುವೇ ಶೇಪುಕೊಡುವಿಕೆ. ಅನುಲೋಮ ಎಂಬುದರ ಅರ್ಥವೂ ಹೀಗೆಯೆ. ಲೋಮ ಎಂದರೆ ಕೂದಲು. ಅದು ಅನುವಾಗಿರ ಬೇಕಲ್ಲದೆ ಪ್ರತಿಯಾಗಿರಕೂಡದು. ಲೋಮದಂತೆ ರಕ್ತದ ಹೊಂದಾಣಿಕೆಯೂ ಆಗಬೇಕು. ಭಿನ್ನನಾಡಿಯಾಗಿರಬೇಕೆಂಬುದರ ರಹಸ್ಯವೂ ಇದೆಯೆ. ಜ್ಯೋತಿಷ್ಯದ ಪ್ರಕಾರ ಗುಣಗಳು ಕೂಡಬೇಕು ಎಂದು ಹೇಳುತ್ತೇವಲ್ಲವೆ ? ಈ ಎಲ್ಲದರ ಸೈಕಾಲಾಜಿ, ಫಿಲಾಸಫಿ ಒಂದೇ–ಪ್ರೇಮವು ತನ್ನ ಪಾತಳಿಯನ್ನು ಹುಡುಕಿಕೊಂಡು ಹೋಗುತ್ತದೆ.

ದಿನಗೂಲಿಯ ಒಬ್ಬ ಗಂಡಾಳು, ದಿನಗೂಲಿಯ ಒಬ್ಬ ಹೆಣ್ಣಾಳಿನ ಹಿಂದೇ ಜೊಲ್ಲು ಸುರಿಸುತ್ತ ಹೋಗುತ್ತಾನಲ್ಲದೆ, ಒಬ್ಬ ಮಹಾರಾಣಿಯ [illegible] ಆದರೆ ಒಬ್ಬ ರಾಜ, [illegible] ಕಾಲದಲ್ಲಿ ಒಬ್ಬ ಭಿಕ್ಷೆಯ ಬೇಡುಗಾತಿಯನ್ನು ನೋಡಿ, "This beggarmaid shall be my queen" ಎಂದು ಘೋಷಿಸಿದನೆಂದು ಒಂದು ಇಂಗ್ಲಿಷ್ ಪುರಾಣ ಕತೆ ಇದೆ. ಆ ಮಾತು ಬೇರೆ. ಮಹಾರಾಣಿಯೊಬ್ಬಳು ಭಿಕ್ಷುಕನೊಬ್ಬನಲ್ಲಿ ಪ್ರೇಮಭಿಕ್ಷೆ ಬೇಡಿದ ಜೈನ ಪುರಾಣ ಕಥೆಯೂ ಇದೆ. ಅಮೃತಮತಿ ಎಂಬ ರಾಣಿ ಒಬ್ಬ ಮಾವಟಿಗನಲ್ಲಿ ಪ್ರೇಮಭಿಕ್ಷೆ ಬೇಡಲಿಲ್ಲವೆ ? ಆ ಮಾತು ಬೇರೆ.

ನಮ್ಮ ಚರ್ಚೆಗೆ ಪ್ರಸ್ತುತವಾದುದೆಂದರೆ ಪ್ರೇಮಪಾತಳಿಯ ಸೈಕಾಲಾಜಿ. ಒಬ್ಬ ವಿಧುರ ಒಬ್ಬ ವಿಧವೆಯ ಕೈಯನ್ನೆ ಹಿಡಿಯಬಯಸುತ್ತಾನೆ. ಇದಕ್ಕೂ ಅಪವಾದಗಳಿರಬಹುದು. ಆ ಮಾತು ಬೇರೆ. ಪ್ರೇಮವಾಹಿನಿಯ ಸಹಜ ಗುಣವನ್ನೂ ನಿಮ್ಮ ಮುಂದೆ ಮಂಡಿಸಬಯಸಿದೆ ಅಷ್ಟೆ. ನೀರು ತಗ್ಗಿದ್ದಲ್ಲಿ ಹರಿದುಹೋಗುತ್ತದೆ. ತನ್ನ ಸಮಪಾತ-ಳಿಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ. ಬಾವಿಗೆ ಮೋಟಾರ್ ಯಂತ್ರ ಹಚ್ಚಿ ನೀರನ್ನು ಮೇಲಕ್ಕೆ ಹರಿಯುವಂತೆ ಮಾಡಲು ಶಕ್ಯವಿಲ್ಲವೇ ? ಶಕ್ಯವಿದೆ. ಇಲ್ಲವೆಂದವರು ಯಾರು? ಸ್ವರ್ಗದಿಂದಲೇ ಗಂಗೆಯನ್ನು ಭೂಮಿಗಿಳಿಯುವಂತೆ ಮಾಡಿದ ಭಗೀರಥ. ಆದರೆ ನಮಗೆ? ಭೂಮಿಯ ಪ್ರೇಮಗೀತ ಭೂಮಿಗೆ; ಸ್ವರ್ಗದ ಪ್ರೇಮಗೀತ ಸ್ವರ್ಗಕ್ಕೆ. ದ್ಯಾವಾ ಪೃಥಿವಿಗಳು ಒಂದಾಗುವುದು ಕವಿಸೃಷ್ಟಿಯಲ್ಲಿ. ಕುರುಡನೊಬ್ಬ ಕುರುಡಿಯನ್ನು ವಿವಾಹವಾಗುವುದು ಮಣ್ಣಿನ ಗುಣ. ಡಾಕ್ಟರನು ಡಾಕ್ಟರಿಣಿ-ಯನ್ನೇ ಹುಡುಕುತ್ತಾನೆ. ಕವಿ, ಕವಯಿತ್ರಿಯಲ್ಲಿ ಅನುರಕ್ತನಾಗುವುದು ಸಹಜ. ಸಿನಿಮಾ ನಕ್ಷತ್ರವು ಕ್ರೀಡಾಪಟುವನ್ನು ಹುಡುಕಿಕೊಂಡು ಹೋಗ-ಬಹುದು. ಆದರೆ ಒಬ್ಬ ಸಿನಿಮಾ ಹೀರೋ ಹಿರಾ-ಯಿನ್ ಕೈ ಹಿಡಿದ ಮೇಲೆ ಅವಳನ್ನೂ ಗೃಹಿಣಿಯನ್ನು ಮಾಡಿ ಅಡುಗೆಮನೆಯ ರಾಣಿಯನ್ನು ಮಾಡಿ, ಸೆರೆಯಲ್ಲಿಟ್ಟು ತಾನು ಶೃಂಗಾರ ಕಾರಾಗೃಹವೆನಿಸಿಕೊಳ್ಳುವುದು ಸ್ವಾರ್ಥ, ಸಂಕೋಚಗಳಿಗೊಂದು ನಿದರ್ಶನ.

Love seeks its own level. ಪ್ರವೃತ್ತಿ ಎಂದರೆ ವಯಸ್ಸು, ಮನಸ್ಸು. ಅಭಿರುಚಿ, ಅಭಿಲಾಷೆ ವೃತ್ತಿ ಪ್ರವೃತ್ತಿ: ಮೊದಲಾದವುಗಳನ್ನೂ ನೋಡಿದರೆ ಇದರ ಫಿಲಾಸಫಿ ಅರ್ಥವಾಗುತ್ತದೆ. ✲

ಕತ್ತಲಲ್ಲೊಂದು ದಿನ

ಕಮಲ ಹೆಮ್ಮಿಗೆ

ರಾತ್ರಿಯ ಸಮಯ. ನನ್ನ
ಬದುಕು ಇಕ್ಕಳದಲ್ಲಿ ನರಳುತ್ತೆ.
ಅದೃಶ್ಯ ಕೈ ತಪ್ಪಿಸಿ – ಜೀವ ತುಡಿಯುತ್ತೆ,
ದೀವಟಿಗೆಯ ಬೆಂಕಿ.
ಏಕಮುಖಿ ಜ್ವಲಿಸುತ್ತೆ.

ನನ್ನ ಕೈಗಳಲ್ಲಿ ನನ್ನ ಬದುಕು
ನೊರೆಯ ಹಾಗೆ
ಉಕ್ಕುತ್ತೆ.


ಮೌನದ ಕಾಡಲ್ಲಿ ಕೊರೆಯುವ ಒಮವಲ್ಲಿ
ಕೊರೆಯುವ ಸಂಗೀತದಲ್ಲಿ ರಾತ್ರಿ ಗಾಣ ಅರೆಯುತ್ತೆ,
ಪ್ರೇಮ ಸುರಿಯುವ ಹಕ್ಕಿ ಗೂಡು ತತ್ತರಿಸಿ,
ಮೌನಕ್ಕೆ ರೆಕ್ಕೆ
ಒಡೆಯುತ್ತೆ.


ಎಲೆಗಳು ಕಳಚುತ್ತವೆ,
ತೊಗಟೆಗಳು ಸುಣ್ಣಗೆ
ಜಾರುತ್ತವೆ. ಆದರೆ
ಶಾಶ್ವತತೆ
ಕಾಣದು: ಒಳಗುಡಿಗಳು ಮುಂಬಾಗಿಲಲ್ಲಿ

ಮರದ ಮೇಲೆ: ಹೊಳೆಯ ಮೇಲೆ
ಚಿಪ್ಪು ಕುಸಿಯುತ್ತೆ. ಪಂಚೇಂದ್ರಿಯಗಳಿಂದ
ಪಂಚಭೂತಗಳಿಗೆ
ಕಾಲ ಸ್ರವಿಸುತ್ತೆ.




ದೀಪಾವಳಿ ಒಲಂಪಿಕ್





267-4


Ramakrishna
Ramakrishna



ಕುಬೇರ ರಾಜ್ಯದ ಚಿತ್ರ-ವಿಚಿತ್ರ

"ರಂಜನ" ಭಟ್ಟ

ಅವರೂ ಆ 'ಕುಬೇರರ ನಾಡ'ನ್ನು ನೋಡಿಬಂದರು—ಹತ್ತಾರು ವರ್ಷಗಳ ಹಿಂದೆ. ಆದರೆ ಅಂದಿನ ನೆನಪುಗಳನ್ನು ಅವರಿನ್ನೂ ಹಸಿರಾಗಿಯೇ ಉಳಿಸಿಕೊಂಡಿದ್ದಾರೆ...

ನನ್ನ ವಿಮಾನ ಸಾನ್‌ಫ್ರಾನ್ಸಿಸ್ಕೋ ನಗರಕ್ಕೆ ಬಂದಾಗ ಅದಾಗಲೇ ಸಂಜೆ. ಘಂಟೆ ಎಂಟಾಗಿತ್ತು. ಹೊರಗೆ ಮಳೆ ಬೀಳುತ್ತಿದೆಯೆಂದು ವಿಮಾನದಲ್ಲಿಯೇ ಕೋಮಲ ಕಂಠವೊಂದು ಧ್ವನಿವರ್ಧಕದ ಮೂಲಕ ಹೇಳಿತು. ಮದ್ರಾಸಿನಲ್ಲಿ, ಅಮೇರಿಕಕ್ಕೆಂದು ನಾನು ಹೊರಟು ನಿಂತಾಗ, ಅಮೇರಿಕಕ್ಕೆ ಹೋಗಿ ಬಂದ ಗೆಳೆಯರೊಬ್ಬರು ಅಂದಿದ್ದರು: "ಅಲ್ಲಿಯ ಛಳಿ ಹಿಮಾಲಯದ ಛಳಿ. ಮೈ-ಕೈ ನಿಮಿರಿಸುವ ಛಳಿ! ಕೈಚೀಲ ಹಾಕಿಕೊಳ್ಳಿ! ತಲೆಗೆ ಮಫ್ಲರ್ ಸುತ್ತಿಕೊಳ್ಳಿ..." ಮೊದಲೇ ಇದು ಛಳಿಯ ನಾಡು! ಮೇಲೆ ಮಳೆ! ಹೊರಗೆ ಮಳೆ ಬೀಳುತ್ತಿದೆಯೆಂಬುದನ್ನು ಕೇಳಿ ಒಮ್ಮೆಲೇ ನನಗೆ ದಿಗಿಲಾಯಿತು! ಪೆಟ್ಟಿಗೆಯಿಂದ ಮದ್ರಾಸಿನಿಂದ ನನ್ನ ಜೊತೆ ತಂದ ಉಣ್ಣೆಯ ಕೈಚೀಲವನ್ನು ಹೊರ ತೆಗೆದೆ. ಜೊತೆಯಲ್ಲಿ ಉಣ್ಣೆಯ ಮಫ್ಲರನ್ನೂ ತೆಗೆದು ತಲೆಗೆ ಸುತ್ತಿಕೊಂಡೆ. ವಿಮಾನದಲ್ಲಿ ನನ್ನೊಡನೆ ಸಹ-ಪ್ರಯಾಣಿಕರಾದ ವೃದ್ಧ ದಂಪತಿಗಳು ಸಾನ್ ಫ್ರಾನ್ಸಿಸ್ಕೋ ನಗರದಲ್ಲೇ ವಾಸವಾಗಿರುವವರು. ಅವರು ನನ್ನನ್ನು ನೋಡಿ ಮುಗುಳುನಗುತ್ತಲೇ ನನ್ನನ್ನು ಕೇಳುತ್ತಾರೆ, ಆಶ್ಚರ್ಯವನ್ನು ಸೂಚಿಸಿ: "ಯಾಕೆ ಈ ವೇಷ? ನಮ್ಮ ದೇಶದ ಛಳಿಗೆ ಬೆದರಿದಿರಾ?" ವಿಮಾನದ ಒಳಗಿದ್ದಾಗ ನನಗೆ ಅವರ ಆ ಪ್ರಶ್ನೆಯ ಮರ್ಮ ತಿಳಿಯಲಿಲ್ಲ. ವಿಮಾನದಿಂದ ಕೆಳಗೆ ಇಳಿದು ಹೊರಬಂದಾಗ ಅಲ್ಲಿಯ ಹವೆ ನಮ್ಮಲ್ಲಿಯಂತೆ ಸಹಿಸಬಹುದಾದಂತಹ ಛಳಿಯ ಹವೆ ಎಂದು ನನಗೆ ಗೊತ್ತಾಯಿತು! ವಿಮಾನದಲ್ಲಿದ್ದ ವೃದ್ಧ ದಂಪತಿಗಳು ನನ್ನ ಉಣ್ಣೆಯ ಮಫ್ಲರ್-ಕೈ ಚೀಲಗಳನ್ನು ನೋಡಿ ಯಾಕೆ ಆಶ್ಚರ್ಯ ಪಟ್ಟರು-ಹಾಗೇಕೆ ನನ್ನನ್ನು ಪ್ರಶ್ನಿಸಿದರು-ಎಂದು ನನಗೆ ಆಗ ಹೊಳೆಯಿತು. ಆಗಲೇ ನನಗೆ ಗೊತ್ತಾದುದು ವಿಮಾನದಲ್ಲಿದ್ದ ಬೇರೆ ಯಾವ ಪ್ರವಾಸಿಕರೂ ನನ್ನಂತೆ ಉಣ್ಣೆಯ ಕೈಚೀಲವನ್ನಾಗಲಿ ಮಫ್ಲರನ್ನಾಗಲಿ ಯಾಕೆ ಹೊರತೆಗೆಯಲಿಲ್ಲ ಎಂದು!

ಎತ್ತರಕ್ಕೇರಿದೆ

ಸಾನ್‌ಫ್ರಾನ್ಸಿಸ್ಕೋದಿಂದ ನನಗೆ ಬರ್ಕಲಿಗೆ-(ಸುಮಾರು ಮೂವತ್ತು ಮೈಲಿ ದೂರವಿರುವ ವಿಶ್ವವಿದ್ಯಾಲಯದ ನಗರ) ಹೋಗಬೇಕಾಗಿತ್ತು. ವಿಮಾನ ನಿಲ್ದಾಣದಿಂದ ಬಸ್ಸು ನಿಲ್ದಾಣಕ್ಕೆ ಬರುವದರೊಳಗಾಗಿಯೇ ರಾತ್ರೆಯ ಘಂಟೆ ಹತ್ತೂವರೆಯಾಗಿತ್ತು. ವಿಮಾನದಲ್ಲಿ ನನ್ನ ಜೊತೆಯಲ್ಲಿ ತಂದಿದ್ದ ಬಟ್ಟೆಬರೆಗಳನ್ನು ತುಂಬಿದ್ದ ಪೆಟ್ಟಿಗೆಯನ್ನು ಕೈಯಲ್ಲಿ ಎತ್ತಿ ಹಿಡಿದಿದ್ದೆ. ಸಾಲದ್ದಕ್ಕೆ ಎರಡೂ ಬಗಲುಗಳಲ್ಲಿ ಸಾಮಾನುಗಳಿಂದ ತುಂಬಿದ್ದ ಬಗಲು ಚೀಲಗಳು! ಈ ಎಲ್ಲ ಮೂಟೆಗಳನ್ನು ಹೊತ್ತುಕೊಂಡೇ ನಿಧಾನವಾಗಿ ಹೆಜ್ಜೆ ಹಾಕುತ್ತಲೇ ಬರ್ಕಲಿಯ ಬಸ್ಸಿಗೆ ಟಿಕೇಟು ಕೊಡುವ ಬಸ್ಸು ಕಂಪೆನಿಯ ಆಫೀಸಿಗೆ ಹೋಗಿ, ಬರ್ಕಲಿಗೆಂದು ಟಿಕೇಟನ್ನು ಕೊಂಡೆ. ಇನ್ನು ಬಸ್ಸಿಗಾಗಿ ಹೋಗಬೇಕು. "ಬಸ್ಸು ಎಲ್ಲಿ?" ಎಂದು ಅಲ್ಲಿಯ ಪರಿಚಾರಕರನ್ನು ಕೇಳಿದೆ. "ಇಲ್ಲೆಲ್ಲಿದೆ ಬಸ್ಸು? ಹೀಗೆಯೇ ಮೇಲೆ ಏರಿ ಹೋಗಿ-ಎರಡನೇ ಅಂತಸ್ತಿನಲ್ಲಿ ಬಸ್ಸು ಬರುತ್ತದೆ-" ಆ ಬಸ್ಸು ಆಫೀಸಿನಲ್ಲಿದ್ದ ಪರಿಚಾರಿಕೆಯೊಬ್ಬಳು ನನಗೆ ಸೂಚನೆ ಕೊಟ್ಟಳು! ಒಂದು ಕ್ಷಣ ನನಗೆ ದಿಗಿಲಾಯಿತು! ಎರಡನೇ ಅಂತಸ್ತಿಗೆ ಬಸ್ಸು ಬರುವದುಂಟೇ? ನನ್ನ ಕಿವಿಯನ್ನೇ ನಾನು ನಂಬದಾದೆ. ಇದರೊಡನೆ ನನಗೆದುರಾದ ಇನ್ನೊಂದು ಪೇಚೆಂದರೆ ನನ್ನ ಸಂಗಡ ಇಷ್ಟೆಲ್ಲ ಸಾಮಾನುಗಳ ಮೂಟೆಗಳನ್ನೆಲ್ಲ ಹೊತ್ತುಕೊಂಡು ಆ ಎರಡೂ ಅಂತಸ್ತುಗಳನ್ನು ಹೇಗೆ ಹತ್ತಿ ಹೋಗಲಿ? ಮೊದಲೇ ನನ್ನದು ನಮ್ಮ ದೇಶದ ಪಶ್ಚಿಮ ಕರಾವಳಿಯ ಸ್ಥೂಲ ದೇಹ! ಮೇಲೆ, ಸಾಮಾನು ಮೂಟೆಗಳನ್ನು ಹೊತ್ತು ಅನುಭವವಿಲ್ಲದವ! ಆದರೂ ಆ ಅಪರಾತ್ರಿಯಲ್ಲಿ ಆ ಅಪರಿಚಿತ ನಗರದಲ್ಲಿ ನನಗೆ ಬೇರೆ ಉಪಾಯ

ವಿನಲಿಲ್ಲ! ನಮ್ಮಲ್ಲಿಯಂತೆ ಇಲ್ಲಿ ಯಾವ ಕೂಲಿ–ನಾಲಿಗಳೂ ಕಣ್ಣಿಗೆ ಬೀಳಲಿಲ್ಲ. ಒಮ್ಮೆ ಪ್ರಯಾಸ ಪಟ್ಟು ಹುಡುಕಿದಲ್ಲಿ ಯಾರಾದರೂ ಸಿಗಬಹು ದಾಗಿದ್ದರೂ ಅವರು ಕೇಳುವ ಮಜೂರಿಯನ್ನು ನಾನೆಲ್ಲಿಂದ ಕೊಡಬಹುದಾಗಿತ್ತು? ಬೇರೆ ದಾರಿ ತೋರದೆ ಇದ್ದೆಲ್ಲ ಸಾಮಾನುಗಳನ್ನು ಭದ್ರವಾಗಿ ಕೈಯಲ್ಲಿ ಬಗಲಲ್ಲಿ ಹಿಡಿದುಕೊಂಡೇ ಆ ಎರಡು ಅಂತಸ್ತುಗಳ ಮೆಟ್ಟಿಲುಗಳನ್ನು ಒಂದೊಂದಾಗಿ ಏರುತ್ತ ಹೋದೆ! ಹಾಗೆ ಏರುತ್ತ ಹೋದ ಹಾಗೆ, ದಿಲ್ಲಿಯಲ್ಲಿರುವ ಕುತುಬ ಮಿನಾರ್ ಏನು ಮಹಾ ಎತ್ತರ ಎನಿಸಿತು! ಟೋಕಿಯೋ ನಗರ ದಲ್ಲಿರುವ ಟೆಲಿವಿಶನ್ನಿನ ಗೋಪುರ ಜಗತ್ತಿ ನಲ್ಲಿಯೇ ಮಹದೆತ್ತರವಾದುದು ಎನಿಸಿಕೊಂಡಿದೆ–ಅದೇನು ಮಹಾ ಎತ್ತರ, ಈ ಬಸ್ಸು ನಿಲ್ದಾ ಣದ ಎರಡಂತಸ್ತಿನ ಮುಂದೆ ಎಂದು ನನಗೆನಿಸಿ ತೆಂದರೆ ನಂಬುವಿರಾ? ಹಾಗೆ ಆ ಮೆಟ್ಟಿಲುಗಳನ್ನು ಏರುತ್ತಿದ್ದಂತೆಯೇ ಇನ್ನೊಂದು ವಿಚಾರ ನನ್ನ ತಲೆಯಲ್ಲಿ ಬರಬೇಕೆ? ಇಂದು ನನಗೆದುರಾದ ಸಮಸ್ಯೆ ಅಂದು ಆ ಕೋಲಂಬಸನಿಗೆ ಎದುರಾ ಗಿದ್ದರೆ?

ಕ್ರಿಯಾತ್ಮಕ ಶಿಕ್ಷಣ

ಅಂದು ಆ ಅಜ್ಞಾತ ಅಮೇರಿಕಕ್ಕೆ ಶೋಧಕ ನಾಗಿ ಬಂದಿಳಿದ ಆ ಕೋಲಂಬಸ್ ಮಹಾಶಯ ನಿಗೆ ಅವನು ತನ್ನ ಹಡಗಿನಿಂದಿಳಿದು ಅಮೇರಿಕದ ನೆಲಕ್ಕೆ ಕಾಲಿಟ್ಟೊಡನೆಯೋ ಸಪ್ಪಂತೆಯೋ ತನ್ನ ಕೈಪೆಟ್ಟಿಗೆ ಹಾಗೂ ಬಗಲು ಚೀಲಗಳನ್ನು ಹೊತ್ತು ಕೊಂಡೇ ಎತ್ತರೆತ್ತರವಾದ ಕಟ್ಟಡಗಳ ಮೇಲಿನ ಅಂ ತಸ್ತಿಗೆ ಪಟಪಟನೆ ಮೆಟ್ಟಿಲೇರುತ್ತ ಏರಿ ಹೋಗುವ ಪ್ರಮೇ ಯ (ಭಾಗ್ಯವೆನ್ನಲೋ ಅಥವಾ ಯೋಗವೆನ್ನಲೋ) ಬಂದಾಗಿದ್ದರೆ, ಪ್ರಾಯಶಃ ಅವನು ಅಮೇರಿಕದ ಶೋಧದ ಹವ್ಯಾಸಕ್ಕೇ ಬೀಳುತ್ತಿರಲಿಲ್ಲವೋ ಏನೊ! ಬಹುಶಃ ಬಂದ ದಾರಿಗೆ ಸುಂಕವಿಲ್ಲ ಎಂದು ಕೊಂಡು ಆತ ಬಂದ ಹಾಗೆಯೇ ಮರಳುತ್ತಿದ್ದ ನೇನೊ! ಹಾಗಾಗಿದ್ದರೆ, ಜಗತ್ತಿನ ಇತಿಹಾಸವೇ ಬದಲಾಗುತ್ತಿರಲಿಲ್ಲವೇ ? ಹೀಗೇನೋ ಯೋಚಿ ಸುತ್ತ ಹೇಗೆ ಹೇಗೋ ಹತ್ತಿ ಆ ಕಟ್ಟಡದ ರಪಿಡನೇ ಅಂತಸ್ತಿಗೆ ಬಂದೆ. ಅಷ್ಟರಲ್ಲಿ ಬರ್ಕ–ಲಿಗೆ ಹೋಗುವ ಬಸ್ಸೂ ಬಂದಿತ್ತು.

ಬರ್ಕಲಿಯಲ್ಲಿಯ ಪ್ರಾಥಮಿಕ ಶಾಲೆ ಯೊಂದಕ್ಕೆ ನಾನು ಭೇಟಿಯನ್ನಿತ್ತು ಬಂದೆ. ಅಲ್ಲಿ ನನಗಾದ ಅನುಭವವನ್ನು ವರ್ಣಿಸಬೇಕೆನ್ನಿಸುತ್ತಿದೆ.

*

ದೂರದಿಂದ ಕಂಡಾಗ ಅದು ಶಾಲೆಯಂತೆ ನನ್ನ ಕಣ್ಣಿಗೆ ಕಾಣಲಿಲ್ಲ. ಪ್ರಾಥಮಿಕ ಶಾಲೆಯಾಗಿ ಯಂತೂ ಖಂಡಿತ ತೋರುತ್ತಿರಲಿಲ್ಲ! ಭವ್ಯ ವಾಗಿರುವ ಎರಡಂತಸ್ತಿನ ಆಧುನಿಕವಾಗಿ ಕಂಗೊ ಳಿಸುವ ಕಟ್ಟಡವದು. ರಸ್ತೆಯ ಮೇಲ್ಗಡೆ ಪಾವಟಿ ಗೆಗಳನ್ನು ಏರಿ ಹೋದೆ. ಎದುರಿಗೇ ದೊಡ್ಡ ಪಟಾಂಗಣ! ಆ ಪಟಾಂಗಣಕ್ಕೆ ಹೊಂದಿ ಸಾಲಾಗಿ ಶಾಲೆಯ ಬೇರೆ ಬೇರೆ ವರ್ಗಗಳ ಕೋಣೆಗಳು. ನಾನು ಹೋದಾಗ ವಿದ್ಯಾರ್ಥಿ–ವಿದ್ಯಾರ್ಥಿನಿ–ಯರು ಪಟಾಂಗಣದಲ್ಲಿ ಆಡುತ್ತಿದ್ದರು. ಇಲ್ಲಿಯ ಶಾಲೆಯ ಹೊತ್ತು ಮುಂಜಾನೆ ಎಂಟರಿಂದ ಮಧ್ಯಾಹ್ನ ಮೂರು ಘಂಟೆಯವರೆಗೆ. ನಾನು ಹೋದಾಗ ಮುಂಜಾನೆಯ ಹನ್ನೊಂದು ಘಂಟೆ ಯ ಹೊತ್ತು! ಮೊದಲೇ ಗೊತ್ತಾಗಿದ್ದಂತೆ ನಾನು ನೇರವಾಗಿ ಎಂಟನೇ ನಂಬರಿನ ಕೋಣೆಗೆ ಹೋದೆ. ಆ ಕೋಣೆಯಲ್ಲಿ ಪ್ರಾಥಮಿಕ ಮೂರನೇ ತರಗತಿಯನ್ನು ನಡೆಸುತ್ತಿದ್ದರು. ಆ ತರಗತಿಯ ಅಧ್ಯಾಪಕಿಯಾಗಿದ್ದರು ಶ್ರೀಮತಿ ಸಿಲ್ವರಸ್ಟನ್. ನಾನು ಹೋದಾಗ ವಿದ್ಯಾರ್ಥಿ ವಿದ್ಯಾರ್ಥಿನಿಯ ರೆಲ್ಲ ಹೊರಗಿನ ಪಟಾಂಗಣದಲ್ಲಿ ಆಡುತ್ತಿದ್ದು ದರಿಂದ ತರಗತಿಯ ಕೋಣೆ ಬರಿದಾಗಿತ್ತು. ಶಿಕ್ಷಕಿಯರಾದ ಶ್ರೀಮತಿ ಸಿಲ್ವರಸ್ಟನ್ನರು ಒಬ್ಬರೇ ಕುಳಿತು ಪುಟ್ಟದಾದೊಂದು ಹುಡುಗನಿಗೆ ಅಕ್ಷರ ಗಳನ್ನು ಬರೆಯಲು ಕಲಿಸುತ್ತಿದ್ದರು. ಆ ಕೋಣೆಯ ಒಳಗಿನ ಅಂದ ಹೇಗಿತ್ತೆನ್ನುವಿರಾ ?

ಸಾಕಷ್ಟು ವಿಶಾಲವಾದ ಆ ಕೋಣೆ ಆಟದ ಪಟಾಂಗಣಕ್ಕೆ ಹೊಂದಿಕೊಂಡಿತ್ತು. ಮುಂಭಾಗ ವನ್ನೆಲ್ಲ ಗಾಜಿನ ಉದ್ದದ ಫಲಕಗಳಿಂದ ನಿರ್ಮಿ ಸಿರುವುದರಿಂದಾಗಿ ಕೋಣೆಯ ಒಳಗೆ ಕೂತ ವರು ಪಟಾಂಗಣವನ್ನೆಲ್ಲ ನಿರೀಕ್ಷಿಸಬಹುದಾಗಿತ್ತು. ಪುಟ್ಟಪುಟ್ಟ ಖುರ್ಚಿಗಳನ್ನು ವಿದ್ಯಾರ್ಥಿ–ವಿದ್ಯಾ ರ್ಥಿನಿಯರಿಗೆಂದು ಹಾಕಿಟ್ಟಿದ್ದರು. ನಾಲ್ಕು–ಎಂಟು ವಿದ್ಯಾರ್ಥಿಗಳ ತಂಡಕ್ಕೆ ಪ್ರತ್ಯೇಕವಾದ ಮೇಜು.

ಗೋಡೆಗೆ ಹೊಂದಿ ಒಪ್ಪವಾದ ಪುಸ್ತಕಗಳ ಬೀರುಗಳು. ಕೋಣೆಯ ಮೂಲೆಯೊಂದರಲ್ಲಿ ವಿದ್ಯಾರ್ಥಿಗಳ ಬಳಕೆಗಾಗಿ ಅರೆ–ಅರೆಗಳುಳ್ಳ ಬಾಗಿಲಿರುವ ಬೀರು. ತರಗತಿಯ ಕೋಣೆಗೆ ಹೊಂದಿ ಈ ತರಗತಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆಂದೇ ಮೀಸಲಾದ ಪ್ರತ್ಯೇಕ ಸ್ನಾನದ ಮನೆ–ಶೌಚಕೂಪ! ತರಗತಿಗೆ ಎದುರಾಗಿರುವ ಗೋಡೆಗೆ ಬರೆಯುವ ಹಲಗೆಯನ್ನು ಜೋಡಿಸಿದ್ದರು.

ನಾನು ಹೋದ ಈ ಶಾಲೆ ಖಾಸಗೀ ಶಾಲೆಯಾಗಿತ್ತು. ಸರಕಾರದ ಧನಸಹಾಯ ಪಡೆಯದೆ ಊರಿನವರ ಆಶ್ರಯದಲ್ಲಿ ತನ್ನ ಕಾಲ ಮೇಲೆ ತಾನೇ ನಿಂತಿರುವ ಶಾಲೆ ಇದಾಗಿತ್ತು. ವಿದ್ಯಾರ್ಥಿ ವಿದ್ಯಾರ್ಥಿನಿಯರ ವಯಸ್ಸು ಈ ತರಗತಿಯಲ್ಲಿ ಎಂಟು–ಒಂಭತ್ತಾಗಿದ್ದಿರಬೇಕು. ಕರಿಯ ಮೈಬಣ್ಣದ ನೀಗ್ರೋ ಗಂಡು ಮಕ್ಕಳು ನಾಲ್ಕು–ಐದು ಜನರಿದ್ದರು. ಒಬ್ಬಿಬ್ಬರು ನಿಗ್ರೋ ಬಾಲಿಕೆಯರೂ ಕಣ್ಣಿಗೆ ಬಿದ್ದರು. ಒಂದು ಮೇಜಿನ ಸುತ್ತ ನಾಲ್ಕೈದು ಬಾಲಿಕೆಯರು ಕುಳಿತಿದ್ದರೆ. ಇನ್ನೊಂದು ಮೇಜಿನ ಸುತ್ತ ಬರೇ ಬಾಲಕರು. ನೀಗ್ರೋ ಹುಡುಗ ಹುಡುಗಿಯರ ತಂಡದಲ್ಲಿ ಒಬ್ಬಿಬ್ಬ ಬಿಳಿಯ ಬಾಲಕ–ಬಾಲಿಕೆಯರಿದ್ದರು.

ನಾನು ಹೋದ ಸ್ವಲ್ಪ ಹೊತ್ತಿನಲ್ಲಿಯೇ ವಿಶ್ರಾಂತಿಯ ಅವಧಿ ಮುಗಿದು ತರಗತಿಯೆಲ್ಲ ತುಂಬಿತ್ತು. ಶ್ರೀಮತಿ ಸಿಲ್ವರಸ್ಟನ್ ಮಧ್ಯ ವಯಸ್ಸಿನ ಅಮೇರಿಕನ್ ಮಹಿಳೆ. ಸ್ಥೂಲ ದೇಹದವರಾಗಿದ್ದವರು. ಪೆಸಿಫಿಕ್ ಮಹಾಸಾಗರದಲ್ಲಿ ಓಲಾಡುವ ಉಗಿ ದೋಣಿಯಂತೆ ಮಂದಗಾಮಿಯಾದ ಅವರು ಅಳುಕುತ್ತ ಬಳುಕುತ್ತ ತರಗತಿಯಲ್ಲಿ ಅತ್ತಿಂದಿತ್ತ ಓಡಾಡುತ್ತಲಿದ್ದರು. ವಿದೇಶೀಯನಾದ ನಾನು ಅವರ ತರಗತಿಯಲ್ಲಿ ಇದ್ದುದು ಅವರಿಗೆ ತುಸು ಸಂಕೋಚ. ತರಗತಿಯಲ್ಲಿ ಕಲಿಸುವಾಗಲೂ ಅವರ ಲಕ್ಷ್ಯವೆಲ್ಲ ನನ್ನೆಡೆಗೇ ಇತ್ತು. "ಓ ನಮ್ಮ ಶಿಕ್ಷಣ ಪದ್ಧತಿ ತುಂಬ ನೂತನ–ಅತ್ಯಂತ ಕ್ರಿಯಾತ್ಮಕವಾಗಿದೆ ಇಲ್ಲಿಯ ನಮ್ಮ ಶಿಕ್ಷಣ ಪದ್ಧತಿ! ನಮ್ಮ ಶಿಕ್ಷಣ ಪದ್ಧತಿ ವಿದ್ಯಾರ್ಥಿಗಳಿಗೆ ಸಂತೋಷದಾಯಕವಾಗಿದೆ–" ಎಂದು ತಮ್ಮ ಮುಂಗುರುಳನ್ನು ಸವರುತ್ತ ತುಂಬ ನಾಟಕೀಯವಾಗಿ ನನಗೆ ಹೇಳಿದರು. ನಾನು ಹೌದೆಂದು ಜೋರಾಗಿ ತಲೆಯಲ್ಲಾಡಿಸಿದೆ. ಆ ತರಗತಿಯ ಪಾಠ ಮುಂದುವರಿದಾಗ ಪ್ರೇಕ್ಷಕನಾಗಿ ನಾನು ಕುಳಿತಿದ್ದೆ.

ಪುಂಡ ಹುಡುಗರು

"ಓ ಹುಡುಗ–ಹುಡುಗಿಯರೇ, ಮೊನ್ನೆ ನಾವು ಹೇಳಿದೆನಲ್ಲವೇ? ನೆನಪಿದೆಯೆ ? ಈಜಿಪ್ತ ದೇಶದ ಬಗ್ಗೆ? ನಾವೆಲ್ಲ ಒಟ್ಟಾಗಿ ಈಗ ಆ ದೇಶದ ಬಗ್ಗೆ ಸಂಶೋಧನೆ ನಡೆಸೋಣ..." ಶ್ರೀಮತಿ ಸಿಲ್ವರಸ್ಟನ್ನರು ನಿಧಾನವಾಗಿ ಬೋಧಿಸುತ್ತಿದ್ದರು. ತರಗತಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರೆಲ್ಲ ಸ್ವಚ್ಛಂದವಾಗಿ ತಮ್ಮ ತಮ್ಮ ಚಟುವಟಿಕೆಗಳಲ್ಲಿ, ಚೇಷ್ಟೆಯಲ್ಲಿ ತನ್ಮಯರಾಗಿದ್ದರು. ಆ ಹುಡುಗ–ಹುಡುಗಿಯರ ಲಕ್ಷ್ಯವನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಶ್ರೀಮತಿ ಸಿಲ್ವರಸ್ಟನ್ನರಿಗೆ ಬಲು ಪ್ರಯಾಸವಾಯಿತು. ಇದೀಗ ಅವರು ಎಲ್ಲ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೂ ಬರೆಯಲು ಕಾಗದ ಕೊಟ್ಟರು. ಜೊತೆಗೆ 'ಈಜಿಪ್ತ ದೇಶದ ನಕ್ಷೆಯನ್ನು ಪ್ರತಿಯೊಬ್ಬರಿಗೂ ಹಂಚಿದರು. ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯ್ಯಲ್ಲಿ ಬರೆಯುವ ಪೆನ್ಸಿಲ್ಲು ಇತ್ತು. ಇನ್ನೇನು ಎಲ್ಲ ವಿದ್ಯಾರ್ಥಿ–ವಿದ್ಯಾರ್ಥಿನಿಯರೂ ಶಾಂತರಾಗಿ ಪಾಠದ ಕಡೆ ಗಮನ ಕೊಡುವದರಲ್ಲಿದ್ದರು ಎನ್ನುವದರಲ್ಲಿಯೇ ಮೈಕಲ್ ಎಂಬ ಡೊಣ್ಣ ಹುಡುಗ ಎದ್ದು ಅತ್ತಿತ್ತ ಮಂಗದ ಮರಿಯಂತೆ ಓಡಲೂ, ಅಕಾರಣವಾಗಿ ನೆಲದ ಮೇಲೆ ಧೊಪ್ಪನೆ ಕುಸಿದು ಬಿದ್ದು ವಿಕಾರವಾಗಿ ಮೈಮೋರೆ ಕೈಗಳ ಚೇಷ್ಟೆಯನ್ನಾರಂಭಿಸಿದ್ದ. ಶ್ರೀಮತಿ ಸಿಲ್ವರಸ್ಟನ್ನರ ಯಾವ ಉಪಾಯವೂ ಅವನ-ಮುಂದೆ ನಡೆಯಲಿಲ್ಲ! ಆತನ ಮಂಗಚೇಷ್ಟೆಯೆದುರು ಈಜಿಪ್ತ ದೇಶ ತುಂಬ ದೂರವಾಗಿತ್ತು! ಶ್ರೀಮತಿಯವರ ಎಲ್ಲ ಅಸ್ತ್ರಗಳೂ ಅವನ ಎದುರು ನಿರರ್ಥಕವಾಗಲು ಶ್ರೀಮತಿಯವರು ಅವನ ಹತ್ತಿರ ಬಂದು ಅವನನ್ನು ನಯದಿಂದ ಪುಸಲಾಯಿಸಿ, "ಮೈಕಲ್, ನೀನು ಹೊರಗೆ ಹೋಗಿ ಆಡಿಕೊಂಡು ಬಾ" ಎಂದು ಅವನನ್ನು ಹೊರಗಟ್ಟಿದರು. ಅಷ್ಟು ಮಾಡುವಾಗ ಅವರಿಗೆ ಸಾಕುಬೇಕಾಗಿತ್ತು. ಮೈಕಲ್ ಮನಸ್ಸಿಲ್ಲದ ಮನಸ್ಸಿನಿಂದ ಹೊರಗೆ ಹೋಗಿದ್ದ.

[illegible]ಲ್ಲಿ ಶ್ರೀಮತಿಯವರ ಬೋಧನೆ ಮುಂದುವರಿದಿತ್ತು: "ಮಕ್ಕಳಿರಾ, ನಾನು ಹಲ–ಗೆಯ ಮೇಲೆ ಬರೆದಂತೆ ನೀವು ಬರೆದುಕೊಳ್ಳುವಿರಾ? ನಾವೆಲ್ಲ ಕೂಡಿ ಒಟ್ಟಿಗೆ ಈಗ ಸಂಶೋಧನೆ ಮಾಡೋಣ. ಈಜಿಪ್ತಿನ ಗಡಿ ಯಾವುದು ಹೇಳಿ," ಎಂದು ಗೋಡೆಯ ಮೇಲಿದ್ದ ಹಲಗೆಯ ಬದಿಯಲ್ಲಿ ಅಂಟಿಸಿದ ಈಜಿಪ್ತಿನ ನಕಾಶೆಯತ್ತ ಕೈಮಾಡಿದರು. ಶ್ರೀಮತಿಯವರು ಒಂದೊಂದಾಗಿ ಈಜಿಪ್ತಿನ ಗಡಿಗಳ ಹೆಸರುಗಳನ್ನು ಹಲಗೆಯ ಮೇಲೆ ಬರೆಯುತ್ತಿದ್ದರು. ವಿದ್ಯಾರ್ಥಿಗಳು ಹಲಗೆಯ ಮೇಲೆ ಬರೆದುದನ್ನು ತಮ್ಮ ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರು. ಈಜಿಪ್ತಿನ ಜನಸಂಖ್ಯೆಯ ಬಗ್ಗೆ ವಿವರ ಕೊಡುತ್ತಿದ್ದ ಶ್ರೀಮತಿಯವರು ಬರ್ಕಲಿನಗರವಿರುವ ಕೆಲಿಫೋರ್ನಿಯಾ ಪ್ರಾಂತದ ಜನಸಂಖ್ಯೆ ಎಷ್ಟು ಗೊತ್ತಿದೆಯೆ? ಎಂದು ತರಗತಿಯನ್ನು ಪ್ರಶ್ನಿಸುತ್ತಾರೆ. ತರಗತಿಯಲ್ಲಿಯ ಯಾರೂ ಆ ಪ್ರಶ್ನೆಗೆ ಉತ್ತರ ಕೊಡುವದಿಲ್ಲ. ಆಗ ಶ್ರೀಮತಿಯವರು ಅನ್ನುತ್ತಾರೆ– "ಬೇಕಾದರೆ ಸಂದರ್ಭಗ್ರಂಥವನ್ನು ಓದಿನೋಡಿ ಹೇಳಿ–" ತಟ್ಟನೆ ಮೂರು ಪುಟ್ಟ ಬಾಲಿಕೆಯರು ಓಡಿ ಹೋಗಿ ಪುಸ್ತಕಗಳಿರುವ ಬೀರುವಿನ ಮುಂದೆ ಕುಳಿತು ಆತುರದಿಂದ ಸಂದರ್ಭಗ್ರಂಥವನ್ನು ಕೈಗೆತ್ತಿಕೊಂಡರು. ಅವರಿಗೆ ಬೇಕಾದ ಮಾಹಿತಿ ವಿವರ ಆ ಸಂದರ್ಭಗ್ರಂಥದಲ್ಲಿ ದೊರಕಲಿಲ್ಲ. ಶ್ರೀಮತಿಯವರು ಆ ಮಕ್ಕಳ ನೆರವಿಗೆ ಬಂದರು. ಶ್ರೀಮತಿಯವರಿಗೂ ಆ ಮಾಹಿತಿ ಅಲ್ಲಿ ಸಿಗಲಿಲ್ಲ. ಆದರಿಂದ ಅವರಿಗೆ ತುಂಬ ನಿರಾಸೆಯಾದಂತಿತ್ತು. "ಹೌದು ಈ ಪುಸ್ತಕದಲ್ಲಿಲ್ಲ. ನಿಮ್ಮ ಮನೆಗೆ ಹೋಗಿ ನಿಮ್ಮ ಮನೆಯಲ್ಲಿರುವ ಸಂದರ್ಭಗ್ರಂಥದಲ್ಲಿ ಕೆಲಿಫೋರ್ನಿಯಾ ಪ್ರಾಂತದಲ್ಲಿ ಜನಸಂಖ್ಯೆ ಎಷ್ಟು ಎಂಬುದನ್ನು ತಿಳಿದು ಬನ್ನಿ, ನಾಳೆ ಶಾಲೆಗೆ ಬರುತ್ತಾ–ಆಗದೆ?" ಎಂದರು. ಈಜಿಪ್ತಿನ ಅನ್ವೇಷಣೆ ಅಂದು ಅಲ್ಲಿಗೇ ಮುಗಿಯಿತು. ಇದೀಗ ಗಣಿತದ ಪಾಠ ಆರಂಭವಾಗಬೇಕು. ಶ್ರೀಮತಿಯವರು ಒಂದೊಂದು ಕಾಗದದ ತುಣುಕನ್ನು ಪ್ರತಿಯೊಬ್ಬ ವಿದ್ಯಾರ್ಥಿ–ವಿದ್ಯಾರ್ಥಿನಿಗೆ ಹಂಚಿದರು. ಕಾಗದದ ತುಂಬೆಲ್ಲ ಗಣಿತದ ಪ್ರಮೇಯಗಳು–ಕೂಡಿಸುವ ಕಳೆಯುವ ಲೆಕ್ಕಗಳು. ತರಗತಿ[illegible] ಇಲ್ಲ. ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸ್ವಚ್ಛಂದವಾಗಿ ಮಾತುಕತೆ ಜಗಳ–ಕುಸ್ತಿಯಾಟ ಎಲ್ಲವನ್ನೂ ನಡೆಸಿದ್ದರು. ಶ್ರೀಮತಿಯವರೇನೋ "ಓಂ ಶಾಂತಿಃ ಶಾಂತಿಃ" ಎಂದು ಶಾಂತಿಯ ಮಂತ್ರವನ್ನು ಒಂದೇ ಸಮನೆ ಪಠಿಸುತ್ತಿದ್ದರು. ಕವಿವರ್ಯನ ಮುಗಳಿಯವರಂತೆ "ಓಂ ಅಶಾಂತಿಃ ಓಂ ಅಶಾಂತಿಃ" ಎಂದು ಶ್ರೀಮತಿಯವರು ಅಶಾಂತಿಯ ಪಠನವನ್ನು ನಡೆಸಿದ್ದರೆ ಸಾರ್ಥಕವಾಗುತ್ತಿತ್ತೋ! ತರಗತಿಯ ಮೊದಲನೆಯ ಪಂಕ್ತಿಯಲ್ಲಿ ಕುಳಿತ ಕೆಲ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಲೆಕ್ಕವನ್ನು ಬಿಡಿಸುವದರಲ್ಲಿ ಮಗ್ನರಾಗಿದ್ದರು. ಇಷ್ಟಾಗುವಾಗ, ಹೊರಗೆ ಒಬ್ಬನೇ ಆಡುತ್ತಲಿದ್ದ ಮೈಕಲ್ ಒಳಗೆ ಬಂದಿದ್ದ. ಬಂದವನೇ ನೇರವಾಗಿ ನಾನಿದ್ದಲ್ಲಿಗೇ ಬಂದು ನನಗೆ ಉಪದೇಶ ಮಾಡುತ್ತಾನೆ. "ಸರ್ವಥಾ ನಿಮ್ಮ ಮಗನನ್ನು ಈ ಶಾಲೆಗೆ ಕಳಿಸದಿರಿ. ಇಲ್ಲಿ ಹೊರೆ ಹೊರೆ ಪಠಿಸುವ ಕೆಲಸ ಕೊಡುತ್ತಾರೆ–" ಗಟ್ಟಿಯಾಗಿ ಕಿರುಚಿ ಮೈಕಲ್ ಮಾತನಾಡುತ್ತಿದ್ದ. ಶ್ರೀಮತಿ ಸಿಲ್ವರಸ್ಟನ್ನರಿಗೆ ಏನು ಮಾಡಬೇಕೆಂದು ತೋಚದೆ ಪಿಳಿಪಿಳಿ ನೋಡುತ್ತಿದ್ದರು. ಮೈಕಲ್‌ನಿಗೆ ತರಗತಿಯಲ್ಲಿ ನಡೆಯುತ್ತಿದ್ದ ಪಾಠದೆಡೆಗೆ ಲಕ್ಷ್ಯ ಇದ್ದಂತೆ ಕಾಣಲಿಲ್ಲ. ಗವಿಮಾನವನ ತೆರ ಬಣ್ಣ ಬಣ್ಣದ ಚಿತ್ರಗಳನ್ನು ಕಾಗದದ ಮೇಲೆ ಮೂಡಿಸುತ್ತಿದ್ದ. ಇದಾಗುತ್ತಿದ್ದಂತೆಯೇ ಒಬ್ಬ ಪುಟ್ಟ ಹುಡುಗ ನನ್ನ ಬಳಿಗೆ ಬಂದು, "ನೀವು ಇಂಡಿಯಾ ದೇಶದವರೇ? ನನ್ನ ಅಜ್ಜ ಅಜ್ಜಿಯರು ನಿಮ್ಮ ಇಂಡಿಯಾ ದೇಶದಲ್ಲಿ ಕೆಲಕಾಲ ಇದ್ದರು" ಎನ್ನುತ್ತಾನೆ. ಇಲ್ಲಿಯ ಮಕ್ಕಳಿಗೆ ಪರದೇಶದ ಅಪರಿಚಿತರನ್ನು ಕಂಡಾಗ ಸಂಕೋಚ, ನಾಚಿಕೆ ಹೆದರಿಕೆ ಏನೂ ಇಲ್ಲವೇ ಇಲ್ಲವಲ್ಲ! ಈ ಹುಡುಗ–ಹುಡುಗಿಯರ ಸಾಮಾನ್ಯ ಜ್ಞಾನವಾದರೂ ಅಗಾಧವಾದುದೇ!

ಪಾಠ ಮರೆಸಿದ ಹಸಿವು

ಅದಾಗಲೇ ಮಧ್ಯಾಹ್ನ ಹನ್ನೆರಡು ಘಂಟೆಯ ಸಮಯ. ಮಕ್ಕಳಿಗೆಲ್ಲ ಹಸಿದ ಹೊಟ್ಟೆ. ತಮ್ಮ ತಮ್ಮ ತಿಂಡಿಯ ಪೊಟ್ಟಣದ ನೆನಪನ್ನು ತಂದಿತ್ತು. ಶ್ರೀಮತಿಯವರ ಪಾಠ–ಬೋಧನೆ ತರಗತಿಯಲ್ಲಿ ಯಾರಿಗೂ ಬೇಕಿದ್ದಂತೆ ಕಾಣಲಿಲ್ಲ.

ಮೈಸೂರು ಅರಮನೆ

ಮೈಸೂರು ಅರಸರ ಭವ್ಯತೆಯ ಸಂಕೇತ

ನಿಮಗಾಗಿ ತೆರೆದಿದೆ:

- ಕಾಲ: ಪ್ರತಿ ದಿನ ಬೆಳಿಗ್ಗೆ ೧೦-೩೦ ರಿಂದ ಸಾಯಂಕಾಲ ೫-೩೦ ರ ವರೆಗೆ

- ಮಾರ್ಗದರ್ಶಿತ ಸಂದರ್ಶನ ಪ್ರತಿ ಗಂಟೆಗೊಮ್ಮೆ

- ಪ್ರವೇಶ ದಕ್ಷಿಣ ದಿಕ್ಕಿನ ಅಂಬಾ ವಿಳಾಸ ದ್ವಾರದ ಮೂಲಕ ಶುಲ್ಕ ರೂ. ೧=೦೦

ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ

ಯಾರಿಗೂ ಅವರ ಬೋಧನೆ ಕೇಳಿಸುತ್ತಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಬುತ್ತಿಯ ಗಂಟನ್ನು ಬಿಚ್ಚಿ ತಿನ್ನಲು ಸುರುಮಾಡಿದ್ದರು. ಹೆಚ್ಚಾಗಿ ಎಲ್ಲರೂ ಬ್ರೆಡ್ಡು-ಹಾಲು-ಹಣ್ಣು ತಂದಿದ್ದರು. ನಮ್ಮ ದೇಶದಲ್ಲಿ ಹಿಂದೊಮ್ಮೆ ಇದ್ದವರ [illegible] ಕ್ರಿಶ್ಚಿಯನ್ನರ ತರಹ. ಅವನು [illegible] ಮಗ್ನನಾಗಿದ್ದ. ನಾನು ಆ ತರಗತಿಯಿಂದ ಹೊರಬಂದಾಗ ಆ ಮಕ್ಕಳ ಬುತ್ತಿ ಇನ್ನೂ ಮುಗಿದಿರಲಿಲ್ಲ!

*


ಅಮೇರಿಕದ ರಾಷ್ಟ್ರಾಧ್ಯಕ್ಷರಾಗಿದ್ದ ಅತ್ಯಂತ ಜನಪ್ರಿಯರೆನಿಸಿಕೊಂಡ ಜಾನ್ ಕೆನ್ನೆಡಿಯವರ ದುರಂತ ಮೃತ್ಯುವಿನ ಸುದ್ದಿಯನ್ನು ಕೇಳಿದ ಕ್ಷಣದಿಂದ– ಕಳೆದ ಕೆಲವು ದಿನಗಳಿಂದ–ಅಮೇರಿಕ ಭೂಖಂಡ ಸಂತ್ರಸ್ತವಾಗಿದೆ. ಕೆನ್ನೆಡಿಯವರು ಮರಣವನ್ನು ಕಂಡ ಬಗೆ ತೀರ ಆಶ್ಚರ್ಯ, ತೀರ ಅನಿರೀಕ್ಷಿತ! [illegible] ಮೃತ್ಯು [illegible] ಹಾಗೆ! ಎಂದಿನಂತೆ ಆ ದಿವಸ ಮುಂಜಾನೆ ನಾನು ವಿಶ್ವವಿದ್ಯಾಲಯದ ನನ್ನ ತರಗತಿಗೆ ಹೋಗಿದ್ದೆ. ಎಂದಿನಂತೆ ಎಲ್ಲ ಪಾಠಕ್ರಮಗಳು ಜರುಗಿದ್ದವು. ಮಧ್ಯಾಹ್ನ ಒಂದು ಘಂಟೆಯ ಸುಮಾರಿಗೆ ಎಂದಿನಂತೆ ನನ್ನ ಕೋಣೆಗೆ ಮರಳುತ್ತಿದ್ದೆ. ಆಶ್ಚರ್ಯ! ಹೊಟೆಲಿನಲ್ಲಿನ ಹೊರಗಿನ ಹಜಾರದ ಟೆಲಿವಿಶನ್ನಿನ ಸುತ್ತ ಜನರು ಕಿಕ್ಕಿರಿದು ನೋಡುತ್ತಿದ್ದಾರೆ. ಅಭೂತಪೂರ್ವವಾದ ದೃಶ್ಯ! [illegible] ತಮ್ಮೆಲ್ಲ ಕೆಲಸ-ಬೊಗಸೆಗಳನ್ನು ಮರೆತು ಜನ ಟೆಲಿವಿಶನ್ ನೋಡುವುದೆಂದರೆ! ಕುಬೇರರ ಈ ರಾಜ್ಯದಲ್ಲಿ ಇದು ವಿಚಿತ್ರವೇ! ಪಿಟ್ಟೆನ್ನದೆ ಜನ ಏಕಾಗ್ರತೆಯಿಂದ ಟೆಲಿವಿಶನ್ ಪರದೆಯ ಮೇಲೆ ಮೂಡಿದ ದೃಶ್ಯಾವಳಿಗಳನ್ನು ನೋಡುತ್ತಿದ್ದರು. ಏನು ಕತೆ–ಏನು ವಿಷಯ ಎಂದು ಗೆಳೆಯರೊಬ್ಬರನ್ನು ಕೇಳಿದೆ. ಆಗಲೇ ನನಗೆ ಗೊತ್ತಾದುದು–ರಾಷ್ಟ್ರಾಧ್ಯಕ್ಷರಾದ ಕೆನ್ನೆಡಿಯವರು ಕೊಲೆಗಾರನ ಗುಂಡೇಟಿಗೆ ಬಲಿಯಾಗಿದ್ದಾರೆ ಎಂದು! ಟೆಕ್ಸಾಸ್ ಎಂಬ ಅಮೇರಿಕೆಯ ದಕ್ಷಿಣ ಪ್ರಾಂತದ ಡಲ್ಲಾಸ್ ಎಂಬ ನಗರಕ್ಕೆ ಅಧ್ಯಕ್ಷ ಕೆನ್ನೆಡಿಯವರು ತಮ್ಮ ಪ್ರಿಯ ಪತ್ನಿಯವರೊಂದಿಗೆ ಭೇಟಿಯಿತ್ತಾಗ ಈ ದುರ್ಘಟನೆ ಸಂಭವಿಸಿತ್ತು!

ಡಲ್ಲಾಸ್ ನಗರದ ಆಸ್ಪತ್ರೆಯಲ್ಲಿ ಕೆನ್ನೆಡಿಯವರ ಶವವನ್ನು ಕೊಂಡೊಯ್ಯುವ ದೃಶ್ಯ, ಆ ಆಸ್ಪತ್ರೆಯ ಸುತ್ತ ಮುತ್ತಲಿನ ಸನ್ನಿವೇಶದ ಗಂಭೀರತೆಯ ದೃಶ್ಯಾವಳಿ ಇವೇ ಮೊದಲಾದವುಗಳನ್ನು ಟೆಲಿವಿಶನ್ ಪರದೆ ತೋರಿಸುತ್ತಿತ್ತು. ಇಂತಹ ವಿಪತ್ತಿನ ಸಂದರ್ಭದಲ್ಲಿಯೂ ಸಹ ಈ ಜನರ ರೀತಿ, ನೀತಿ, ನಡೆ–ನುಡಿ ಎಷ್ಟು ಉದಾತ್ತ–ಎಷ್ಟು ಧೀರ–ಗಂಭೀರ! ಈ ಸಂದರ್ಭದಲ್ಲಿ ಗಾಂಧೀಜಿಯವರ ಕೊಲೆಯ ದುರಂತ ಪ್ರಕರಣದ ನೆನಪು ನನಗಾಗುತ್ತಿದೆ. ನಾನಾಗ ಮಹಾರಾಷ್ಟ್ರದ ಸಾಂಗಲಿಯಲ್ಲಿ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಆ ದುರಂತವಾದ ಮೇಲೆ ಹತ್ತು–ಹದಿನೈದು ದಿನಗಳವರೆಗೆ ಬೀದಿಯಲ್ಲಿ ತಿರುಗಾಡುವುದು ಸಹ ಸುಲಭವಾಗಿರಲಿಲ್ಲ. ಸಾಂಗಲಿಯ ಬಹುಭಾಗದಲ್ಲೆಲ್ಲ ದುಳ್ಳುರಿಯು ನಾಲಗೆ ಯಾರೆಲ್ಲರ ಮನೆಮಠಗಳನ್ನು ಆಹುತಿಗೊಂಡು ನೆಕ್ಕಿದಾಗ ಧುತ್ತೆಂದು ಸುರುಳಿಸುರುಳಿಯಾಗಿ ಮೇಲೆದ್ದ ಕರಿಯ ಹೊಗೆಯ ಮೋಡದ ಚಿತ್ರ ಇನ್ನೂ ನನ್ನ ಕಣ್ಣೆದುರು ಕಟ್ಟಿದೆ. ಹತ್ತು–ಹದಿನೈದು ದಿನ ಪೇಟೆಗಳೆಲ್ಲ ಮುಚ್ಚಿದ್ದವು. ಹಾಲು–ತರಕಾರಿಯಿಲ್ಲದೆಯೇ ಕಾಲೇಜಿನ ವಸತಿಗೃಹದಲ್ಲಿ ಉಂಡ ನೆನಪು! ಇಲ್ಲಿಯಾದರೊ? ಅಧ್ಯಕ್ಷರ ಕೊಲೆಯ ಸುದ್ದಿಯನ್ನು ಕೇಳಿ ಜನರೇನೂ ಸ್ತಂಭೀಭೂತರಾದರು ಆದರೆ ಹದಗೆಡಲಿಲ್ಲ, ಡಿಜ್ಮೂಢರಾಗಲಿಲ್ಲ! ಜನರಿಗೇನೋ ದುಃಖವಾಯಿತು, ಆದರೆ ಹತಾಶರಾಗಲಿಲ್ಲ! ಅಳುಕಿದರು, ಆದರೆ ಅಲ್ಲಾಡಲಿಲ್ಲ! ಎಂದಿನಂತೆ ಬರ್ಕಲಿ ನಗರದ ಮಾರುಕಟ್ಟೆ ಅಂಗಡಿಗಳೆಲ್ಲ ತೆರೆದೇ ಇದ್ದವು. ಹರತಾಳದ ಕರೆಯನ್ನು ಯಾರೂ ಕೊಡಲಿಲ್ಲ! ಶಾಲೆ ಕಾಲೇಜುಗಳು ಎಂದಿನಂತೆ ಮುಂದುವರಿದಿದ್ದವು. ಭಾರತದಿಂದ ಈ ಕುಬೇರರ ರಾಜ್ಯಕ್ಕೆ ಬಂದ ನನಗೆ ಇದೆಲ್ಲವೂ ಸೋಜಿಗವೇ!

ಸತ್ತಾತ ವ್ಯಕ್ತಿ, ರಾಷ್ಟ್ರಾಧ್ಯಕ್ಷನಲ್ಲ....?

ಹೊಟೆಲ್ಲಿನಲ್ಲಿ ಸುದ್ದಿ ತಿಳಿದವನೇ ಹೊರಗೋಡಿದೆ. ದಾರಿಯಲ್ಲಿ ಕಂಡವರನ್ನು ನಿಲ್ಲಿಸಿ ಮಾತನಾಡಿದೆ– "ಅಲ್ಲ, ನಿಮ್ಮ ರಾಷ್ಟ್ರಾಧ್ಯಕ್ಷರು ಇನ್ನಿವಲ್ಲಂತಲ್ಲ!"


ನೋಡಿರಿ...
ಅತ್ಯಧಿಕ ಬಿಳುಪಿಗೆ ರಾನಿಪಾಲ್


Ranipal
Ranipal-S
whitener for synthetics and blends

[illegible]ಸೂ ಮುಗುಡದಿಂದಲೇ ತಲೆಯಲ್ಲಾಡಿಸುತ್ತಿ[illegible]. ಆದರೆ ಎಲ್ಲರೂ ತಮ್ಮ ತಮ್ಮ ವೃತ್ತಿಯಲ್ಲಿ [illegible]ದ್ದರು! [illegible] ಕೇಳಿದೆ. [illegible] ಯಾಕೆ ಹೀಗೆ ಕೇಳು[illegible]?" ಎಂಬ ಆ ಅಂಗಡಿಯವರ ಮರು ಸವಾಲಿಗೆ ನಾನು ಏನು ಹೇಳಬಹುದಾಗಿತ್ತು? ಅವರ ಅಂಗಡಿಯ ಟ್ರಾನ್ಸಿಸ್ಟರ್ ರೇಡಿಯೋ ಕರ್ಣ[illegible]ವಾಗಿ ಕೆನ್ನೆಡಿಯವರ ದುರ್ಮರಣದ ವಾರ್ತೆ [illegible] ಸಾರುತ್ತಲೇ ಇತ್ತು. [illegible] ಆ ಅಂಗಡಿಯವರಿಗೆ ನನ್ನ ಪ್ರಶ್ನೆ ಯಾಕೆಂಬುದು ತಿಳಿಯಲಿಲ್ಲವಲ್ಲ! "ಏನೂ ಇಲ್ಲ, ಸಹಜವಾಗಿ ಕೇಳಿದೆ" ಎಂದಿಷ್ಟೇ ಹೇಳಿ [illegible]. ಅಲ್ಲಿಂದ [illegible] ವಿಶ್ವವಿದ್ಯಾಲಯದ ವಿಸ್ತಾರಕ್ಕೆ ಹೋದೆ. [illegible] ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಅಮೆರಿಕನ್ ವಿದ್ಯಾರ್ಥಿನಿಯನ್ನು ಪ್ರಶ್ನಿಸಿದೆ. "ನಿಮಗೆ ಗೊತ್ತಾಯಿತೇ—ನಿಮ್ಮ ರಾಷ್ಟ್ರಾಧ್ಯಕ್ಷ ಕೆನ್ನೆಡಿಯವರ ದುರ್ಮರಣದ ವಾರ್ತೆ?" ಅವಳಾದರೋ ನನ್ನ ಅವಸರದ ಪ್ರಶ್ನೆಗೆ ತುಂಬ ನಿಧಾನವಾಗಿ, "ಕೆನ್ನೆಡಿಯವರು ಡೆಮೊಕ್ರಾಟಿಕ್ ಪಕ್ಷದವರು. ನಾನು ರಿಪಬ್ಲಿಕನ್ ಪಕ್ಷಕ್ಕೆ ಸೇರಿದವಳು. ನಮ್ಮದು ಪ್ರಜಾಪ್ರಭುತ್ವದ ನಾಡು. ನಮ್ಮಲ್ಲಿ ಘಟನಾತ್ಮಕ [illegible] ಸರ್ಕಾರವಿದೆ. ಕೆನ್ನೆಡಿಯವರ ಮರಣದಿಂದ ನಮ್ಮ ಸರಕಾರದ ನೀತಿ–ರೀತಿ ಬದಲಾಗುವುದಿಲ್ಲ." ಅಮೆರಿಕದ [illegible] ವ್ಯವಸ್ಥೆಯ ಬಗ್ಗೆ [illegible] ಭಾವನೆಯನ್ನೇ ಆಕೆ [illegible]. [illegible] ರಾಜ್ಯದ ಸ್ನಾತಕೋತ್ತರ ವಿದ್ಯಾರ್ಥಿನಿ ಆಕೆ! ವಿಶ್ವವಿದ್ಯಾಲಯದ ಆವಾರದಲ್ಲೆಲ್ಲ ಇದೇ ಬಗೆಯ ವಾತಾವರಣ. ಅಲ್ಲಲ್ಲಿ ವಿದ್ಯಾರ್ಥಿಗಳು ಗುಂಪಾಗಿ ಪಿಸು ಪಿಸು ಮಾತಾಡಿಕೊಳ್ಳುತ್ತಿದ್ದರು. ಹಾಗೆಂದು [illegible] ಉದ್ವೇಗ–ಆವೇಶವನ್ನು ತೋರುತ್ತಿರಲಿಲ್ಲ! [illegible] ರಾಷ್ಟ್ರಾಧ್ಯಕ್ಷರ [illegible] ವಿಪತ್ತಿನ [illegible] ಅಂತಹ [illegible]. ಕೆನ್ನೆಡಿಯವರ ಕೊಲೆಯಾದ ಎರಡು ಮೂರು ತಾಸಿನಲ್ಲಿಯೇ ಡಲ್ಲಾಸ್ ನಗರದ ವಿಮಾನ ನಿಲ್ದಾಣದಲ್ಲಿಯೇ ವಿಮಾನಿನ ಒಳಗಡೆ ಹೊಸ ರಾಷ್ಟ್ರಾಧ್ಯಕ್ಷರಾಗಿ ಶ್ರೀಯುತ ಜಾನ್‌ಸನ್‌ರು ಪ್ರತಿಜ್ಞಾವಿಧಿಯನ್ನು [illegible]. ಪ್ರಜಾಪ್ರಭುತ್ವದ ಉಚ್ಚ ಪರಂಪರೆಯ ಸಾಕ್ಷಿ ಇದಲ್ಲವೇ? ಶಿಸ್ತು–ಸಂಯಮಗಳಿಂದ ಶೋಭಿತವಾದಾಗ ಪ್ರಜಾಪ್ರಭುತ್ವದಂತಹ ಶ್ರೇಷ್ಠ ರಾಜ್ಯಾಡಳಿತದ ಪದ್ಧತಿ ಬೇರೆ ಇನ್ನೊಂದಿಲ್ಲ! ಕೆನ್ನೆಡಿಯವರ ವಿಧವೆ ಹೊಸ ಅಧ್ಯಕ್ಷರ ಪಕ್ಕದಲ್ಲಿಯೇ ನಿಂತು ಗಂಭೀರವಾಗಿ ಅಳುಕದೆ ಅಲ್ಲಾಡದೆ ಹೊಸ ಅಧ್ಯಕ್ಷರು ಪ್ರತಿಜ್ಞಾಪೂರ್ವಕವಾಗಿ ತಮ್ಮ ಹುದ್ದೆಯನ್ನು ವಹಿಸಿಕೊಳ್ಳುವದನ್ನು ನೋಡುತ್ತಿರುವ ಚಿತ್ರ ಪ್ರಜಾಪ್ರಭುತ್ವದ ಭವ್ಯ ಚಿತ್ರವೇ ಆಗಿತ್ತೆಂದು ನನಗೆನಿಸುತ್ತಿದೆ. ಕೆನ್ನೆಡಿಯವರ ಕೊಲೆಯಾದಂದು ರಾತ್ರಿ ನಾನು ನನ್ನ ಕೆಲವು ಗೆಳೆಯರೊಂದಿಗೆ [illegible] ನಗರ ಹಾಗೂ ಆ ನಗರಕ್ಕೆ ಹೊಂದಿಕೊಂಡಿರುವ ಓಕ್‌ಲೆಂಡ್ ನಗರಗಳನ್ನೆಲ್ಲ ಸುತ್ತಾಡಿದೆ. ಎಲ್ಲ ಕಡೆಗಳಲ್ಲಿಯೂ ಜನಜೀವನ ಎಂದಿನಂತೆ ಮುಂದುವರಿದಿತ್ತು. ಅಲ್ಲಿಯ ಚಿತ್ರಮಂದಿರದಲ್ಲಿ ರಾತ್ರಿಯ ಕೊನೆಯ ಶೋ ನಡೆಯುತ್ತಿತ್ತು. ನೋಡೋಣವೆಂದು ನಾವೂ ಹೊಕ್ಕೆವು. ಎಂದಿನಂತೆ ಇಂದೂ ಚಿತ್ರ ಮುಂದುವರಿದಿತ್ತು. ಹಾಸ್ಯದ ಸನ್ನಿವೇಶ ಬಂದಾಗ ಪ್ರೇಕ್ಷಕರು ಬಾಯ್ತುಂಬ ನಗುತ್ತಿದ್ದರು. ಅಮೇರಿಕದ ತುಂಬೆಲ್ಲ ಇದೇ ಬಗೆಯ ಪ್ರತಿಕ್ರಿಯೆ. ಕೊಲೆಯಾದುದು ವ್ಯಕ್ತಿಯೊಬ್ಬರದು, ರಾಷ್ಟ್ರಾಧ್ಯಕ್ಷರದಲ್ಲ ಎಂಬುದು ಈ ಜನರ ಅಭಿಪ್ರಾಯವೇನೋ! ಕುಬೇರ ರಾಜ್ಯದ ಜನಸಾಮಾನ್ಯರಲ್ಲಿ ಸಹ ಕಂಡುಬರುವ ಈ ಘನ ಶಿಸ್ತು ಸಂಯಮಗಳನ್ನು ನಮ್ಮ ದೇಶದಲ್ಲಿ ನಾವು ಕಾಣುವದು ಅದೆಂದೋ! ನಮ್ಮದು ಪ್ರಜಾಪ್ರಭುತ್ವ ಎಂದು ಬರೇ ಬಾಯಿಯಲ್ಲಿ ಕೊಚ್ಚಿಕೊಳ್ಳದೆಯೆ, ಕಾರ್ಯದಲ್ಲಿ ಆಚರಣೆಯಲ್ಲಿ ನಾವು ತೋರಿಸುವುದು ಅದೆಂದಿಗೋ!

ಎಂಥ ಸ್ವದೇಶಪ್ರೇಮ!

ಭಾರತದಲ್ಲಿದ್ದಾಗ ಪರದೇಶ ಪ್ರಯಾಣ ಎಂದಾಗಲೆಲ್ಲ ನನ್ನ ಮೈ ಮುಳ್ಳು ಮುಳ್ಳಾಗುತ್ತಿತ್ತು. ದೂರದ ಆ ದಿವ್ಯ'ದ ಕರೆಗೆ ನಾನು ಹಾತೊರೆದಿದ್ದೆ, ಕಾತರಿಸಿದ್ದೆ. ಈಗಲೂ ಈ ಕುಬೇರರ ನಾಡಿಗೆ ಬಂದು ಒಂದು ವರ್ಷವಾದ ಮೇಲೂ ನನಗೆ 'ದೂರ.ದೂರ'ವನ್ನು ನೆನೆಯುವದವುದರಿಂಲೇ


'ಅಮ್ಮಾ!
ನನಗೀಗ 3 ತಿಂಗಳಾದವು!'
'ಅಹುದು, ಈಗ ಕೊಡಲು ಪ್ರಾರಂಭಿಸಬೇಕು
ಫೆರೆಕ್ಸ್®'
ನಿಮ್ಮ ಮಗುವಿಗೆ ಘನ ಆಹಾರ ಕೊಡಲು
ಪ್ರಾರಂಭಿಸುವಾಗ ಡಾಕ್ಟರರು ಫೆರೆಕ್ಸ್® ನ್ನು
ಶಿಫಾರಸು ಮಾಡುತ್ತಾರೆ.
ಮಗುವಿನ ಆದರ್ಶ
ಘನ ಆಹಾರ—
ಶೀಘ್ರ ಸರ್ವಾಂಗೀಣ
ಬೆಳವಣಿಗೆಗಾಗಿ.
FAREX

ವ್ಯೆ ಮುಳ್ಳು ಮುಳ್ಳಾಗುತ್ತಿದೆ. ಆದರೆ ಮೊದಲಿನ 'ಹುಚ್ಚು' ಈಗ ನನಗೆ ಇಲ್ಲ. ಪರದೇಶದ ವಾಸ ಪ್ರವಾಸ ದೂರದಿಂದ ಆಕರ್ಷಕವೆನಿಸಿದರೂ ವಾಸ್ತವವಾಗಿ ಅಲ್ಲ. ಪರದೇಶದ ಸಮಾಜಕ್ಕೆ ಸಂಸ್ಕೃತಿಗೆ ನಾವು ಪೂರ್ತಿ ಹೊಂದಿಕೊಳ್ಳುವುದಾದರೆ ಆ ಮಾತೇ ಬೇರೆ! ಅದಿಲ್ಲದಿದ್ದರೆ ಪರದೇಶದ ವಾಸ ತ್ರಿಶಂಕುವಿನ ಸ್ವರ್ಗದಂತೆ ! ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ ಎಂಬ ರೀತಿ ನಮ್ಮದಾಗುತ್ತದೆ. ನೆಲದ ಸಂಪರ್ಕವಿಲ್ಲದೆಯೇ ಗಾಳಿಯ ಪಟದ ರೀತಿ ಪರದೇಶದ ಸಾಮಾಜಿಕ ಜೀವನದಲ್ಲಿ ನಾವು ತೇಲಾಡುತ್ತೇವೆ, ಓಲಾಡುತ್ತೇವೆ.

ಮೊನ್ನೆ ಊಟದ ಮನೆಯಲ್ಲಿ ನನ್ನ ಪಕ್ಕದಲ್ಲಿ ಕುಳಿತಿದ್ದರು ವಯೋವೃದ್ಧರಾದ ಜೋಸೆಫ್‌ರು. ತಮ್ಮ ತಾರುಣ್ಯದಲ್ಲಿ—ಅವರಿಗಾಗ ವಯಸ್ಸು ಇಪ್ಪತ್ತೈದಾಗಿದ್ದಿತಂತೆ—ಹಾಲೆಂಡು ದೇಶದಿಂದ ಈ ದೇಶಕ್ಕೆ ವಲಸೆ ಬಂದ ಅವರಿಗೆ ಈಗ ಏನಿಲ್ಲೆಂದರೂ ವಯಸ್ಸು ಎಪ್ಪತ್ತೈದಾಗಿರಬೇಕು. ಎರಡು ವರ್ಷದ ಹಿಂದೆ ಅವರ ಪ್ರೀತಿಯ ಹೆಂಡತಿ ತೀರಿ ಹೋದಳಂತೆ. ಅವರ ಮಗ ಬರ್ಕಲಿಗೆ ಹತ್ತಿರವಿರುವ ಇನ್ನೊಂದು ನಗರದಲ್ಲಿ ಶ್ರೀಮಂತನಾಗಿರುವ ಡಾಕ್ಟರರಂತೆ. ಮುದುಕರಾದ ಜೋಸೆಫ್‌ರು ಒಬ್ಬರೇ ವಾಸಿರುವ ಹೊಟೆಲ್ಲಿನ ಕೋಣೆಯಲ್ಲಿ ದಿನ ಲೆಕ್ಕ ಮಾಡುತ್ತಿದ್ದಾರೆ. ಏಕಾಂತವಾದ ಜೀವನವನ್ನು ನಡೆಸುತ್ತಿರುವ ಜೋಸೆಫ್‌ರಿಗೆ ನನ್ನಂತಹ ಎಳೆಯರ ಸಂಗವೆಂದರೆ ಬಲು ಇಷ್ಟ. ಅಕಸ್ಮಾತ್ತಾಗಿ ಅವರ ಬಳಿ ಕುಳಿತು ಊಟ ಮಾಡುವ ಯೋಗ ಅಂದು ನನಗೆ ಲಭಿಸಿತ್ತು. ಊಟದ ಮಧ್ಯೆ ಅವರು ನನ್ನೊಡನೆ ಆಡಿದ ಮಾತಾದರೂ ಎಂತಹದು? ತಮ್ಮ ತಾರುಣ್ಯದಲ್ಲಿ, ೫೦ ವರ್ಷಗಳ ಹಿಂದೆ, ತಮ್ಮ ತಾಯ್ನಾಡಾದ ಹಾಲೆಂಡಿನಲ್ಲಿ ತಾವು ಬಿಟ್ಟು ಬಂದ ಆಮ್‌ಸ್ಟರ್‌ಡಾಮ್ ನಗರದ ಅಳಿಯದ ನೆನಪು ಅವರನ್ನು ಬಲವಾಗಿ ಕಾಡಿದಂತಿತ್ತು. ಆ ಅಂದಿನ ಆಮ್‌ಸ್ಟರ್‌ಡಾಮ್ ನಗರದಲ್ಲಿ ಅವರಿದ್ದ ಮನೆಯ ಕೆಳ ಭಾಗದಲ್ಲಿ ಯಾವುದೋ ಬ್ಯಾಂಕಿನ ಕಾರ್ಯಾಲಯವಿತ್ತಂತೆ. "ಯಾವ ಬ್ಯಾಂಕದು?" ಜೋಸೆಫ್‌ರಿಗೆ ಒಮ್ಮೆಲೇ ನೆನಪಾಗುವದಿಲ್ಲ !

ಆ ಬ್ಯಾಂಕಿನ ಹೆಸರಿಗಾಗಿ ತಮ್ಮ ನೆನಪಿನ ಮಂದಿರದಲ್ಲಿ ಎಷ್ಟೋ ಹೊತ್ತು ಅವರು ಹುಡುಕಾಡಿದ ಮೇಲೆ ಒಮ್ಮೆಲೇ ಆ ಬ್ಯಾಂಕಿನ ಹೆಸರು ಅವರಿಗೆ ನೆನಪಾಗಿತ್ತು, "ಓ ಮರೆತಿದ್ದೆ ಆ ಬ್ಯಾಂಕಿನ ಹೆಸರು ಡಚ್ ಬ್ಯಾಂಕು." ಜೋಸೆಫ್ ಅವರು ಅಮೇರಿಕಕೆ ಬಂದ ಮೇಲೆ ಒಂದೆರಡು ವರ್ಷ ಅವರಿಗೂ ಹಾಲೆಂಡಿನಲ್ಲಿದ್ದ ಅವರ ಬಂಧು ಮಿತ್ರರಿಗೂ ಪತ್ರವ್ಯವಹಾರ ನಡೆಯಿತಂತೆ. ನಂತರ ಅವರಿಗೂ ಹಾಲೆಂಡಿನಲ್ಲಿದ್ದ ಅವರ ಮನೆಯವರಿಗೂ ಸಂಬಂಧವೇ ಕಡಿದು ಹೋಯಿತಂತೆ. ಜೋಸೆಫ್‌ರಿಗೆ ಹಾಲೆಂಡಿನಲ್ಲಿದ್ದ ತಮ್ಮ ಅಣ್ಣ ತಮ್ಮಂದಿರ ವಿಳಾಸ ಪತ್ತೆ ಯಾವುದೂ ತಿಳಿಯದು. ಅವರೆಲ್ಲ ಬದುಕಿದ್ದಾರೆ ಎಂಬುದನ್ನು ಸಹ ಅವರು ತಿಳಿಯರು. ಹೆಂಡತಿಯ ವಿಯೋಗದಿಂದಾಗಿ ಜೋಸೆಫ್‌ರ ಬಾಳುವೆ ಈಗ ಇದೀಗ ಭಣಭಣವಾಗಿದೆ. ಜೋಸೆಫ್ ಇದೀಗ ಕಾಣುತ್ತಿರುವ ಕನಸಾವುದು ಗೊತ್ತೆ? ತಳೆದಿರುವ ಮಹದಾಸೆ ಯಾವುದು ಗೊತ್ತೆ? ಎಷ್ಟು ಬೇಗ ಸಾಧ್ಯವೊ ಅಷ್ಟು ಬೇಗ ತಮ್ಮ ಜನ್ಮಭೂಮಿಯಾದ ಹಾಲೆಂಡಿಗೆ ಮರಳಿ ಹೋಗಿ ಅಲ್ಲಿಯೇ ವಾಸ ಮಾಡಬೇಕಂತೆ. ಓ ಈ ವಿಶಾಲ ವಿಶ್ವದ ನೂರಾರು ವಿಮಾನ ಕಂಪನಿಗಳೇ, ನಿಮಗೆ ನಮ್ಮ ಬಡ ಜೋಸೆಫ್‌ರ ಪ್ರಾರ್ಥನೆಯಿನ್ನೂ ಕೇಳಿಲ್ಲವೇ? ಮುಟ್ಟಿಲ್ಲವೇ? ಇದಕ್ಕೇನೆನ್ನಬೇಕು ? ಅಮೇರಿಕದಲ್ಲಿ ತಮ್ಮ ಬಾಳಿನ ಐವತ್ತು ವರ್ಷಗಳನ್ನು ಕಳೆದರೂ, ಬಾಳಿ ಬದುಕಿದರೂ ಜೋಸೆಫ್‌ರಿಗೆ ಇನ್ನೂ ಈ ದೇಶ ಪರದೇಶವೆನ್ನಿಸಬೇಕೆ ? ತಮ್ಮ ಈ ಇಳಿ ವಯಸ್ಸಿನಲ್ಲಿಯೂ ಅವರಿಗೆ ತಾವು ಕಳೆದ ಐವತ್ತು ವರ್ಷಗಳಿಂದ ಕಂಡು ಕಾಣದ ತಮ್ಮ ಜನ್ಮಭೂಮಿಯಾದ ಹಾಲೆಂಡಿನ ನೆನಪಾಗಬೇಕೆ? ವಿದೇಶಕ್ಕೆ ಹೊಂದಿಕೊಳ್ಳಲಾರದ ಬಂಡತನವೇ ಇದು ? ಅಥವಾ ಇದು ಮನುಷ್ಯ ಸ್ವಭಾವದ ವಿಕೃತಿಯೆ?

ಹಾಲಿವುಡ್ಡಿಗೆ ಹೋದೆ

ಈ ಮಾತುಗಳನ್ನು ಬರೆಯುತ್ತಿದ್ದಂತೆ, ಹಾಲಿವುಡ್ಡಿನಲ್ಲಿ ನನಗಾದ ಅನುಭವದ ನೆನಪು ಪಡಾತ್ತನೆ ಮೂಡುತ್ತದೆ. ಅಮೇರಿಕದ ಪಶ್ಚಿಮ ಕರಾವಳಿಯಲ್ಲಿರುವ ಲಾಸ್ ಎಂಜೆಲಿಸ್ ಎಂಬ ಮಹಾನಗರಕ್ಕೆ ನಾಲ್ಕಾರು ದಿನಗಳ ಪ್ರವಾಸಕ್ಕೆಂದು ಹೋದ ನಾನು ಲಾಸ್ ಏಂಜೆಲಿಸ್ ನಗರದ ಬಹಿ-ರ್ಭಾಗದಲ್ಲಿರುವ ಚಲಚ್ಚಿತ್ರಗಳ ಕೇಂದ್ರವೆಂದು

[illegible]ತಿ ಪಡೆದ ಹಾಲಿವುಡ್ ಉಪನಗರವನ್ನು [illegible] ಮರಳುವದುಂಟೆ? ಹಾಲಿವುಡ್ಡನ್ನೆಲ್ಲ ಸುತ್ತಿ [illegible]ದ್ದೆ! ಏನಾಶ್ಚರ್ಯ, ನಾನು ನಡೆದು [illegible]ಗುತ್ತಿದ್ದಂತೆಯೇ ಅಲ್ಲಿಯ ಅಂಗಡಿ [illegible] ವರ್ಷ ಪ್ರಾಯದ ಭಾರತೀಯರಾಗಿ ಕಾಣು[illegible], "ನೀವು ಭಾರತ[illegible]ವರೇ?" ಎಂದು ಮುಂದೆ ಬಂದು ನನ್ನ ಕೈ ಕುಲುಕಿ ನನ್ನನ್ನು ಆದರದಿಂದ ಮಾತನಾಡಿಸಿ[illegible]. ನನಗೆ ಆಶ್ಚರ್ಯ–ಅನುಮಾನ. ಓ ಅವರಿಗೆ [illegible] ಆನಂದವಾದರೂ ಎಷ್ಟು? ಬಹು ದಿನ [illegible] ಕಾಣದ ತಮ್ಮದೇ ಬಂಧುವೊಬ್ಬ ಅಕಸ್ಮಾತ್ ಸಿಕ್ಕರೆ ಯಾವ ಬಗೆಯ ಆನಂದ ಅವರಲ್ಲಿ [illegible]ಕ್ಕುತ್ತಿತ್ತೋ ಅದೇ ಬಗೆಯ ಆನಂದ–[illegible]ಭ್ರಮ –ಉತ್ಸಾಹ ಅವರದಾಗಿತ್ತು. ಅಲ್ಲೇ ಹತ್ತಿರದಲ್ಲಿದ್ದ ತಮ್ಮ ನಿವಾಸಸ್ಥಾನಕ್ಕೆ ನನ್ನನ್ನು [illegible] ಅವರ [illegible] ಭಾರತದೇಶ[illegible]–ನನ್ನ ಆಪ್ತ ಬಂಧು ಇವರು–" ಎಂದು ರಾಗವಾಗಿ ಎಳೆದು ಎಳೆದು ನನ್ನ ಪರಿಚಯ [illegible] ಹಾಗೆ [illegible]ರಿಕಕ್ಕೆ ಉಚ್ಚ ಶಿಕ್ಷಣಕ್ಕೆಂದು ನಮ್ಮ ದೇಶದ [illegible] ಮುಗಿದ ಮೇಲೆ ಅಮೇರಿಕದಲ್ಲೇ ಉಳಿದುಬಿಟ್ಟರಂತೆ. ಹಾಲಿವುಡ್ಡಿನ ಚಲಚ್ಚಿತ್ರ ಪ್ರಪಂಚದಲ್ಲಿ "ಭಾರತದ ಬಗ್ಗೆ ಸಲಹೆ–ಸಹಾಯ ನೀಡುವ ತಜ್ಞರೆಂದು [illegible]ಭಾಗ ಮಾಡುತ್ತಿದ್ದರಂತೆ. ತಮ್ಮ ಬಾಳಿನ ಮಹ[illegible] ವರ್ಷಗಳನ್ನು [illegible]ಕ್ಕೆ ಹೊಂದಿಕೊಂಡಂತಿಲ್ಲ! ಮದುವೆಯಾಗ[illegible]. ಅವರ ನಿವಾಸ ಸ್ಥಾನದಲ್ಲಿ ನಾನು ಕಂಡುದಾದರೂ [illegible]? ೧೯೨೦–೨೧ರ ಸುಮಾರಿಗೆ ಭಾರತ [illegible] ಆಂದೋಲನದ ಕಾಲದಲ್ಲಿ ನಮ್ಮ ದೇಶದ ಅಂದಿನ ಕಾಲೇಜು ವಸತಿಗೃಹದ [illegible]ಡಿಗಳಲ್ಲಿ ಸಾಮಾನ್ಯವಾಗಿ ಕಾಣಬಹುದಾ[illegible] ಫೋಟೋಗಳ ಹಾಗೂ ಪುಸ್ತಕಗಳ ಹಾಗೂ ನಿಯತಕಾಲಿಕಗಳ ಪ್ರದರ್ಶನವನ್ನು ನಾನು ಅವರ ಕೋಣೆಯಲ್ಲಿ ಅಂದು ಕಂಡು ಚಕಿತನಾದೆ ಎಂದರೆ ಅತಿಶಯೋಕ್ತಿಯಲ್ಲ! ನನ್ನ ಕಣ್ಣನ್ನೇ ನಾನು ನಂಬ[illegible]. [illegible] ಗಾಂಧೀಜಿ–[illegible] ತಿಲಕ ಮೊದಲಾದ ನಮ್ಮ ದೇಶದ ಮಹಾಮಹಾ ನಾಯಕರ ಭಾವಚಿತ್ರಗಳು! ೧೯೨೦–೩೦ರ ಸುಮಾರಿನ 'ಯಂಗ್ ಇಂಡಿಯಾ' ಪತ್ರಿಕೆಯ ಹಳೆಯ ಪ್ರತಿಗಳು! ಅವರ ಬರೆಯುವ ಮೇಜಿನ ಮೇಲೆ ಭಾರತದ ಬಗ್ಗೆ ಬರೆದ ಹಳೆಯ ಪುಸ್ತಕಗಳು! ಅವರು ನನ್ನೊಡನೆ ಅಂದು ಆಡಿದ ಮಾತುಕತೆಗಳೂ ತುಂಬ ಅನಿರೀಕ್ಷಿತ! ಬಿಟ್ಟೂ ಬಿಡದೆ ನಮ್ಮ ದೇಶದ ಸಂಸ್ಕೃತಿ–ರಾಜಕಾರಣ–[illegible] ಬಗ್ಗೆ ಅವರು [illegible] ದಿಂದ ಮಾತನಾಡಿದ್ದರು. ೧೯೩೫ರ ಸುಮಾರಿಗೆ ಅವರೊಮ್ಮೆ ಭಾರತಕ್ಕೆ ಕೆಲ ದಿನಗಳ ಭೆಟ್ಟಿ ಕೊಟ್ಟಿದ್ದರಂತೆ! ಭಾರತಕ್ಕೆ ಅವರು ಬಂದುದು ಅದೇ ಕೊನೆಯ ಸಲವಂತೆ! [illegible] ನಲ್ಲಿ ಅವರು ಬಾಳಿಬದುಕಿದರೂ ಅವರ ಮನಸ್ಸಿನಾಳದಲ್ಲಿ ಅವಿತು ಕೂತಿದ್ದುದು ಆ ಅಂದಿನ ತಮ್ಮ ತಾರುಣ್ಯದಲ್ಲಿ ಹಿಂದೆ ಬಿಟ್ಟು ಬಂದ ಭಾರತ ದೇಶ! ತುಂಬು ಹಳೆಯ, ಕ್ರಾಂತಿಕಾರರ ಸ್ವಾತಂತ್ರ್ಯ ಯೋಧರ, ಕನಸಿಗರ ಆ ಅಂದಿನ ಭಾರತ! ಅದೆಷ್ಟೋ ವರ್ಷಗಳು ಸಂದಿದ್ದುದು, ಕಾಲ ತೀವ್ರವಾಗಿ ಬದಲಾಗಿರುವುದು ಅವರಿಗೆ ಗೊತ್ತಾದಂತೆಯೇ ಕಾಣಲಿಲ್ಲ! ಇಲ್ಲಿಗೆ ಈ ಕುಬೇರರ ನಾಡಿಗೆ ಬಂದಾಗ ತರುಣರಿದ್ದ ತಮ್ಮ ಗಡ್ಡ ಇದೀಗ ನೆರೆತಿದೆ ಎಂಬುದರ ಅರಿವೂ ಅವರಿಗಿದ್ದಂತೆ ಇಲ್ಲ! ನಾನು ಅವರ ಕೋಣೆಯಲ್ಲಿ ಅವರೊಡನಿದ್ದ ಎರಡು ಘಂಟೆಯ ಕಾಲ ಅವರು ಮಾತನಾಡಿದ್ದೇ ಮಾತನಾಡಿದ್ದು, ತಮ್ಮ ಪ್ರೀತಿಯ ತಾಯ್ನಾಡು, ಅಲ್ಲಿಯ ಜನಜಂಗುಳಿ, ತಾರುಣ್ಯದ ತಮ್ಮ ಕನಸು–ಮತ್ತೆ ಮತ್ತೆ ಅವರು ಅದನ್ನೆಲ್ಲ ಮೆಲಕು ಹಾಕಿದರು. ತಪ್ಪಿಯೂ ಸಹ ಅವರು ತಾವು ವಾಸಿಸುತ್ತಿದ್ದ ತಮ್ಮ ಕಾರ್ಯಕ್ಷೇತ್ರವಾದ ಕುಬೇರರ ಈ ನಾಡಿನ ಜನರ ರೀತಿ, ನೀತಿ, ನಡೆ–ನಿಯಮ



"ಕೋಪಿಸ್ಕೊಳ್ಳಬೇಡಿ ಸಾರ್... ಕಾಗದದಲ್ಲಿ 'ಶ್ರೀ ಶ್ರೀರವರ ಚರಣಕಮಲಗಳಿಗೆ' ಅಂತ ಬರೆದಿದೆ."

ಗಳ ಬಗ್ಗೆ ಒಂದು ಶಬ್ದವನ್ನೂ ಅವರು ಆಡಲಿಲ್ಲ—ಆಡಬೇಕೆಂದು ಸಹ ಅವರಿಗನಿಸಲಿಲ್ಲ! ನನಗಾದರೋ ಅವರ ಇಲ್ಲಿಯ ಅನುಭವವನ್ನು ಕೇಳಿ ತಿಳಿಯುವ ಆಸೆ! ನನ್ನ ಇಲ್ಲಿಯ ಬಾಳಿನಲ್ಲಿ ಅವರಿಂದ ಮಾರ್ಗದರ್ಶನ ಪಡೆಯುವಾಸೆ! ಉಹೂಂ, ಒಮ್ಮೆಯೂ ಅವರಿಗೆ ಈ ದೇಶದ ಈ ಜನರ ಇಲ್ಲಿಯ ಸಮಾಜದ ನೆನಪಾಗಲಿಲ್ಲವಲ್ಲ!

ಇಂದ್ರಜಾಲ !

ಅವರು ಇದೀಗ ಕಾಣುತ್ತಿರುವ ಕನಸಾದರೂ ಯಾವುದು ಗೊತ್ತೆ? ಅದಾಗಲೇ ೭೪ ವಯಸ್ಸಿನಲ್ಲಿದ್ದ ಅವರು ಮುಂದಿನ ತಮ್ಮ ಆಯುಷ್ಯವನ್ನೆಲ್ಲ ತಮ್ಮ ಜನ್ಮಭೂಮಿಯಾದ ಭಾರತದಲ್ಲಿಯೇ ಕಳೆಯಬೇಕೆಂದಿದ್ದಾರೆ. ತಟ್ಟನೆ ನನ್ನನ್ನು ಕೇಳಿದರು: "ನಾನೀಗ ಭಾರತಕ್ಕೆ ಮರಳಿದರೆ ಅಲ್ಲಿಯ ಹಳ್ಳಿಯ ಯಾರಾದರೂ ಹುಡುಗಿಯೊಬ್ಬಳು ನನ್ನನ್ನು ಮದುವೆಯಾಗಿ ನನ್ನೊಡನೆ ಬಾಳಬಹುದಲ್ಲವೇ? ಮಹಾತ್ಮನ ... ದಾದರೂ ಮೂಲೆಯ ಹಳ್ಳಿಯಲ್ಲಿ ನಾನಿಳಿದರೆ ತಿಂಗಳಿಗೆ ೨೦೦–೩೦೦ರೂ.ಉತ್ಪನ್ನವಿರುವದಾದಲ್ಲಿ, ನಾನು ಹೆಂಡತಿಯೊಡನೆ ಸುಖವಾಗಿ ಸಂಸಾರ ತೂಗಿಸಬಹುದಲ್ಲ? ನನ್ನ ಕೊನೆಯ ಆಯುಷ್ಯವನ್ನೆಲ್ಲ ಭಾರತದಲ್ಲಿ ಕಳೆಯಬೇಕೆಂಬುದೇ ನನ್ನ ಆಸೆ–ಕನಸು!..." ಅವರ ಪ್ರಶ್ನೆ ಅನಿರೀಕ್ಷಿತವಾಗಿದ್ದುದರಿಂದ ನಾನು ದಿಗಿಲುಗೊಂಡರೂ ಅವರ ಪ್ರಶ್ನೆಗೆ "ಹೂಂ" ಎನ್ನದೆ ನನಗೆ ಬೇರೆ ಮಾರ್ಗವಿರಲಿಲ್ಲ!

ನಾನು ಲಾಸ್ಎಂಜೆಲಿಸ್‌ನ್ನು ಬಿಡುವ ದಿನ ನನ್ನನ್ನು ಅವರು ಊಟಕ್ಕೆ ಕರೆದಿದ್ದರು–ಅತ್ಯಂತ ಆಗ್ರಹ ಮಾಡಿದರು! ಸ್ವತಃ ತಾವೇ ಅವರು ನನಗಾಗಿ ಏನೆಲ್ಲ ಪಕ್ವಾನ್ನಗಳನ್ನು ತಯಾರಿಸಿದ್ದರು! ನಿಜವಾಗಿಯೂ ಭಾರತೀಯ ಭೂರಿ ಭೋಜನ ಅದಾಗಿತ್ತು! ಊಟದ ಸಮಯದಲ್ಲಿ ಮತ್ತೆ ಅವರ ಮಾತುಕತೆ ಭಾರತೀಯ ಜನಜೀವನವನ್ನು ಕುರಿತಾಗಿ! ಅಂದು ಅವರಿಗೆ ಏನು ಸಡಗರ–ಸಂಭ್ರಮ! ಭಾರತದ ಬಗ್ಗೆ, ತಮಗಿದ್ದ ಅದಮ್ಯವಾದ ಪ್ರೀತಿ–ಅಭಿಮಾನಗಳನ್ನು ನನ್ನನ್ನು ಆದರಿಸುವಲ್ಲಿ ತೋರಿಸಿದ್ದರು! ಬಸ್ಸು ನಿಲ್ದಾಣದವರೆಗೆ ಬಂದು ಭಾರತೀಯರಂತೆ ನನ್ನನ್ನು ಕೈಮಾಡಿ ಬೀಳ್ಕೊಟ್ಟರು! ನನ್ನ ಅಮೇರಿಕದ ಪ್ರವಾಸಾನುಭವದಲ್ಲಿ ಹಾಲಿವುಡ್ಡಿನಲ್ಲಿ ನನ್ನನ್ನು ಅಕಸ್ಮಾತ್ತಾಗಿ ಸಂಧಿಸಿದ ಆ ನನ್ನ ಹಿರಿಯ ಆಪ್ತರೊಡನೆ ಕಳೆದ ಆ ರಸನಿಮಿಷಗಳು ಅವಿಸ್ಮರಣೀಯ! ಕುಬೇರರ ಈ ನಾಡಿನಲ್ಲಿಗೆ ತಮ್ಮ ತಾರುಣ್ಯದಲ್ಲಿಯೇ ಬಂದು, ಈ ದೇಶದಲ್ಲಿಯೇ ೪೦–೫೦ ವರ್ಷಗಳನ್ನು ಕಳೆದರೂ–ಬಾಳಿ ಬದುಕಿದರೂ—ಈ ಇಲ್ಲಿಯ ನಾಡು–ನುಡಿ, ಜನ–ಜೀವನ, ಸಮಾಜ, ಎಲ್ಲ ಅವರಿಗೆ ಹೊರತೆನಿಸಬೇಕೆ? ತಮ್ಮ ತಾಯ್ನಾಡಿನ ಮಧುರ ಸ್ಮೃತಿ ಅವರ ಜೀವನವನ್ನು ಎಳೆಯುವ, ಸೆಳೆಯುವ ಮೂಲ ಪ್ರೇರಣೆಯಾಗಬೇಕೆ? ತಾಯ್ನಾಡಿನ ತಾಯ್ನುಡಿಯ ಇಂದ್ರಜಾಲವಿದೆನ್ನಲೆ? ✿

ಕಳೆದ ದಿನಗಳು ಎಲ್ಲಿ ಹೋಗಿ ಕೂಡುತ್ತಿಹವೊ
      ಬರುವ ದಿನಗಳು ಮತ್ತೆ ಎಲ್ಲಿಂದ ಬರುತಿಹವೊ
      ಇರುವ ದಿನಗಳು ಕರಗಿ ಬೆರಗುಗೊಳಿಸುತ್ತಿಹವು.
ತಿಗುರಿಯುಲಿ ಮಣ್ಣಿನ ಮುದ್ದೆ ಪಡೆದಾಕಾರವೊ–
ಆವಿಗೆಯಲ್ಲಿ ಸುಟ್ಟು ಸಂತೆಗೈತಂದಿಹವು:
      ಬಾರಿಸಿನೋಡಿ ತಂದು ಬೆಲೆಯ ಮೇಲೆಸರಿಟ್ಟು
      ಅಟ್ಟುಂಡ ಬದುಕು ನಮ್ಮದು. ಚಿತ್ರ – ಚೌಕಟ್ಟು
ಅನುಭವಕ್ಕೊಂದು ರೂಪ; ಕಲ್ಪನೆಯ ಸುಳಿವು – ಹೊಳವು
ಒಂದರೊಳಗೊಂದು ಹೆಣಕೊಂಡ ದಾರ ಗೋಜಲು
      ಬಿಚ್ಚಿ ಹಾಕಿದ ಬಲೆಯ ತೆಗೆದು ಹಾಕಲು
      ಕಗ್ಗಂಟು ಕತ್ತರಿಸಿ, ಮತ್ತೆ ಹುರಿಗೊಳಿಸಿ, ಚೆಲು–
ವಾದ ಹೆಣಿಕೆಗಣಿಗೈಯಲು ಎಷ್ಟೊಂದು ಹಗಲು
      ಕಳೆಯಬೇಕಿಹುದೋ. ಇರುಳಿಗು ಅದರದೇ ಕನಸು.
      ಕನಸು–ನನಸಿಗು ಸೇತು ಕಟ್ಟುವುದೆ ಬಾಳ ಸೊಗಸು?



267–6

[illegible] ಕಾಫಿಯ ಕತೆ

ತ. ರಾ. ಸು.

ಆ ದಿನ ನಾನು ಬೆಂಗಳೂರಿನಿಂದ ಮೈಸೂರಿಗೆ ಮಧ್ಯಾಹ್ನ ಹೊರಡುವ ಡೀಸೆಲ್‌ಕಾರ್‌ನಲ್ಲಿ ಹೊರಟಿದ್ದೆ.

ಸಾಮಾನ್ಯವಾಗಿ ಆ ಟ್ರೈನಿನಲ್ಲಿ ಹೆಚ್ಚು ಜನ–ಸಂದಣಿ ಇರುವುದಿಲ್ಲ. ಉಳಿದ ಡಬ್ಬಿಗಳಲ್ಲಿ ಹೇಗಿದ್ದರೂ ರಿಸರ್ವ್ಡ್ ಕಂಪಾರ್ಟ್‌ಮೆಂಟುಗಳಲ್ಲಿ ಸ್ಥಳ ಸಾಕಷ್ಟು ಖಾಲಿ ಇರುತ್ತದೆ. ಕೊನೆ ಘಳಿಗೆಯಲ್ಲಿ ಬಂದರೂ ಸ್ಥಳಕ್ಕಾಗಿ ಪರದಾಡುವ ಅವಶ್ಯಕತೆ ಬೀಳುವುದಿಲ್ಲ.

ಆದರೆ ಆ ದಿನ ಮಾತ್ರ ರೈಲು ಜನರಿಂದ ಕಿಕ್ಕಿರಿದು ತುಂಬಿತ್ತು. ರಿಸರ್ವ್ಡ್ ಕಂಪಾರ್ಟ್‌ಮೆಂಟುಗಳಲ್ಲೂ ಕೂಡ ಸ್ಥಳ ಖಾಲಿ ಇರಲಿಲ್ಲ. ಜೊತೆಗೆ ಆ ದಿನ ಆ ರೈಲಿಗೆ ಕನೆಕ್ಷನ್ ಕೊಡುವ ಮದರಾಸಿನ ರೈಲು ತಡವಾಗಿ ಬಂದು ಪ್ರಯಾಣಿಕರ ಪರದಾಟ ಇದ್ದದ್ದೂ ಹೆಚ್ಚಾಗಿ ಜನ ಅತ್ತಿಂದಿತ್ತ ಸುತ್ತಾಡುತ್ತಿದ್ದರು.

ನಾನು ಮೊದಲೇ ಸೀಟ್ ರಿಸರ್ವ್ ಮಾಡಿಸಿಕೊಂಡಿದ್ದರಿಂದ ಸ್ಥಳಕ್ಕಾಗಿ ಸ್ಪರ್ಧೆ ನಡೆಸುವ ಅಗತ್ಯ ಬೀಳದೆ ಕಿಟಕಿಯ ಪಕ್ಕದ ನನ್ನ ಸ್ಥಳದಲ್ಲಿ ಕುಳಿತು ಪ್ಲಾಟ್‌ಫಾರಂನ ಮೇಲೆ ಸುತ್ತಾಡುತ್ತಿದ್ದ ಜನರನ್ನು ನೋಡುತ್ತಿದ್ದೆ.

ರೈಲು ನಿಲ್ದಾಣವನ್ನು ಬಿಡುವ ಹೊತ್ತು ಹತ್ತಿರವಾಯಿತು. ಆ ಹೊತ್ತಿನಲ್ಲಿ ಹೊರಗಿನಿಂದ ನನ್ನನ್ನು ಯಾರೋ ಕರೆದಂತಾಯಿತು.

ಯಾರಿರಬಹುದು? ಎಂದು ನೋಡಿದೆ.

ನನಗೆ ತೀರಾ ಪರಿಚಯವಿಲ್ಲದಿದ್ದರೂ ಅಲ್ಪಸ್ವಲ್ಪ ಪರಿಚಯವಿದ್ದ ಕಾಫಿ ವ್ಯಾಪಾರಿಯೊಬ್ಬರ ಮುಖ ಕಾಣಿಸಿತು.

ನನ್ನ ಮುಖ ಅವರತ್ತ ತಿರುಗಿದ ಕೂಡಲೇ ಅವರು ಕೇಳಿದರು–

"ನಿಮ್ಮ ಕಂಪಾರ್ಟ್‌ಮೆಂಟಿನಲ್ಲಿ ಸೀಟಿದೆಯೇ?"

"ಇಲ್ಲ."

—ಎಂದೆ.

"ಒಬ್ಬರಿಗಾದರೂ ಸೀಟಿದ್ದರೆ ನೋಡಿ."

—ಎಂದು ತಮ್ಮ ಬೆನ್ನು ಕಡೆ ಕೈ ಮಾಡಿ ತೋರಿಸಿದರು.



ಆತನ ಬೆನ್ನ ಹಿಂದೆ ತಳ್ಳುವ ಕುರ್ಚಿಯಲ್ಲಿ ಕುಳಿತ ಹೆಂಗಸೊಬ್ಬರು ಕಾಣಿಸಿದರು. ಆ ಕುರ್ಚಿಯಲ್ಲಿ ಆಕೆ ಕುಳಿತ ರೀತಿಯೇ ಆಕೆಯ ಕಾಲಿಗೆ ಏನೋ ಆಗಿರಬಹುದು ಎನಿಸಿ, ಅದನ್ನು ಕಂಡ ಬಳಿಕ "ಸ್ಥಳವಿಲ್ಲ" ಎಂದು ಹೇಳಲು ಮನಸ್ಸು ಬಾರದೆ—

"ಒಳಕ್ಕೆ ಬನ್ನಿ"

—ಎಂದು ಕರೆದೆ.

"ತುಂಬಾ ಥ್ಯಾಂಕ್ಸ್, ಸಾರ್."

—ಎಂದು ಹೇಳಿ ಆತ ಕುರ್ಚಿಯನ್ನು ತಳುತ್ತಿದ್ದ ಕೂಲಿಯವನ ಸಹಾಯದೊಂದಿಗೆ ಕುಳಿತಿದ್ದ ಹೆಂಗಸನ್ನು ಎತ್ತಿಕೊಂಡು ಗಾಡಿಯೊಳಗೆ ಪ್ರವೇಶ ಮಾಡಿದರು.

ಆಕೆಗೆ ಸ್ಥಳ ಮಾಡಿಕೊಡಲು ಬೇರೆಯುವರಿಗೆ ಹೇಳಲು ಸಾಧ್ಯವಿರದಿದ್ದುದರಿಂದ ನಾನು ಕುಳಿತಿದ್ದ ಸ್ಥಳವನ್ನೇ ಆಕೆಗೆ ಬಿಟ್ಟುಕೊಟ್ಟು ಒಂದು ಪಕ್ಕದಲ್ಲಿ ನಿಂತುಕೊಂಡೆ.

ಅವರು ಗಾಡಿಯೊಳಗೆ ಬಂದ ಎರಡು ನಿಮಿಷದಲ್ಲೇ ರೈಲು ಬಿಟ್ಟು ಚಲಿಸಲಾರಂಭಿಸಿತು.

ಆತ ಕರವಸ್ತ್ರದಿಂದ ಬೆವರೊರೆಸುತ್ತಿದ್ದ ತನ್ನ

ಮುಖವನ್ನು ಒರಸಿಕೊಳ್ಳುತ್ತಾ—

"ನನ್ನಿಂದ ನಿಮಗೆ ತುಂಬಾ ತೊಂದರೆಯಾಯಿತೇನೋ. ಕೂತಿದ್ದವರು ಎದ್ದು ನಿಲ್ಲುವ ಹಾಗಾಯಿತು. ನನ್ನನ್ನು ಕ್ಷಮಿಸಿ."

—ಎಂದು ತನ್ನ ಅಸಹಾಯಕತೆ ತುಂಬಿ ತುಳುಕುತ್ತಿದ್ದ ಧ್ವನಿಯಲ್ಲಿ ಹೇಳಿದ.

"ಅದಕ್ಕೇನು ಬಿಡಿ. ರಾಮನಗರದಲ್ಲೋ, ಚನ್ನಪಟ್ಟಣದಲ್ಲೋ ಎಲ್ಲಿಯಾದರೂ ಸ್ಥಳ ಆಗುತ್ತದೆ. ಖಾಯಿಲೆಯವರಿಗಿಂತ ಸ್ವಲ್ಪ ಹೊತ್ತು ನಿಲ್ಲುವಂತಹ ನನ್ನ ಕಷ್ಟವೇನೂ ದೊಡ್ಡದಲ್ಲ."

—ಎಂದೆ.

"ಹಾಗೆ ಹೇಳುವುದು ನಿಮ್ಮ ದೊಡ್ಡತನ ಸಾರ್. ಈ ಕಾಲದಲ್ಲಿ ನಿಮ್ಮ ಹಾಗೆ ಯೋಚನೆ ಮಾಡುವ ಜನ ಬಹಳ ಕಡಿಮೆ. ನಾನು ಬೇಕಾದಷ್ಟು ಪ್ರಯಾಣ ಮಾಡಿದ್ದೇನೆ. ಪಕ್ಕದವರು ಸಾಯುತ್ತಾ ನಿಂತಿದ್ದರೂ ಸೀಟಿನ ಮೇಲೆ ಮಲಗಿದ್ದ ಜನ ಎದ್ದು ಕೂತುಕೊಳ್ಳುವುದಿಲ್ಲ. ಅಷ್ಟೇಕೆ ಸ್ವಲ್ಪ ಜಾಗ ಬಿಡಿ ಎಂದರೂ ನಾವು ಅವರ ಜಹಗೀರನ್ನೇ ಕಸಿದುಕೊಳ್ಳಲು ಹೋದವರ ಹಾಗೆ ಮೇಲೆ ಬೀಳುತ್ತಾರೆ."

—ಎಂದ.

ಆತನ ಮಾತು ಅಕ್ಕ-ಪಕ್ಕದ ಸೀಟಿನಲ್ಲಿ ತಮ್ಮ ಪಾಡಿಗೆ ತಾವು ಕುಳಿತಿದ್ದವರ ಕಿವಿಗೂ ಬಿದ್ದಿರಬೇಕು. ಅವರೂ ತಮ್ಮ ಮಧ್ಯೆ ಸ್ವಲ್ಪ ಜಾಗ ಮಾಡಿ ನಮ್ಮಿಬ್ಬರಿಗೂ ಕುಳಿತುಕೊಳ್ಳಲು ಸ್ಥಳ ಮಾಡಿಕೊಟ್ಟರು.

ಹಾಯಾಗಿ ಕುಳಿತುಕೊಳ್ಳುವುದಕ್ಕಿರಲಿ, ಆಸನ ಊರುವಷ್ಟು ಸ್ಥಳವಾದರೂ ಸಿಕ್ಕಿತಲ್ಲ ಎಂದುಕೊಂಡು ಹಾಗೇ ಕುಳಿತಕೊಂಡ ಮೇಲೆ ನಾನು ಆ ಹೆಂಗಸನ್ನು ನೋಡಿದೆ.

ಆಕೆಯುಟ್ಟ ತೆಳುವಾದ ಸೀರೆಯುಡಿಯಲ್ಲಿ ಮೊಳಕಾಲಿನ ಸ್ವಲ್ಪ ಮೇಲುಭಾಗದಿಂದ ಹಿಡಿದು ಪಾದ ಪೂರ್ತಿಯಾಗಿ ದಪ್ಪನಾಗಿ ಬ್ಯಾಂಡೇಜು ಬಿಗಿದಿದ್ದ ಕಾಲನ್ನು ಮಡಿಸಲಾಗದೆ ಇದ್ದಷ್ಟೇ ಅವಕಾಶದಲ್ಲಿ ಆ ಕಾಲನ್ನು ಚಾಚಿ ಕುಳಿತುಕೊಂಡಿದ್ದಳು.

ಬ್ಯಾಂಡೇಜನ್ನು ನೋಡಿದರೆ ಕಾಲಿಗೇನೋ ಭಾರಿ ಪೆಟ್ಟೇ ಬಿದ್ದಿರಬೇಕು ಎನಿಸಿ ಆತನನ್ನು—

"ನಿಮ್ಮವರ ಕಾಲಿಗೆ ಏನಾಯಿತು?"

—ಎಂದು ಕೇಳಿದೆ, ಕುತೂಹಲದಿಂದ.

"ಏನಾಯಿತು ಎಂದು ಹೇಳಲಿ? ಎಲ್ಲಾ ನನ್ನ ದುರದೃಷ್ಟ ಸ್ವಾಮಿ. ನಮ್ಮ ನೆಂಟರೊಬ್ಬರ ಮನೆಯ ಮದುವೆಗೆಂದು ಬಂದಿದ್ದೆವು. ಮದುವೆ ಮನೆಗೆಂದು ಹೋಗುವ ದಾರಿಯಲ್ಲೇ ಆಟೋದವನೊಬ್ಬನು ನನ್ನ ಹೆಂಡತಿಯ ಮೇಲೆ ಆಟೋ ಬಿಟ್ಟು ಕಾಲಿಗೆ ಜಖಂ ಆಗಿ ಮದುವೆಯ ಮನೆಯ ಬದಲು ಆಸ್ಪತ್ರೆಯಲ್ಲಿ ಹದಿನೈದು ದಿನ ಕಳೆಯಬೇಕಾಯಿತು."

—ಎಂದು ಹೇಳಿ ನಿಟ್ಟುಸಿರು ಬಿಟ್ಟ.

ಆತ ತನ್ನ ಹೆಂಡತಿಗಾದ ಅಪಘಾತದ ಬಗ್ಗೆ ಹೇಳಿದ ಮಾತು ಸಹಪ್ರಯಾಣಿಕರಿಗೆ ಸ್ಫೂರ್ತಿಯಾಗಿ ಒಬ್ಬೊಬ್ಬರೂ ತಮ್ಮದೇ ಆದ ವೈಖರಿಯಲ್ಲಿ ಆಟೋರಿಕ್ಷಾವನ್ನು ತೆಗಳಲು ಶುರು ಮಾಡಿದರು.

ಒಬ್ಬರು—

"ನಮ್ಮ ದೇಶದಲ್ಲಿ ಬಲವಂತವಾಗಿ ಫ್ಯಾಮಿಲಿ ಪ್ಲಾನಿಂಗ್ ತರೋಕ್ಹೋಗಿ ಸಂಜಯ ಗಾಂಧಿ ತನ್ನ ಗಾದಿ ಕಳೆದುಕೊಂಡ. ಅದಕ್ಕೆ ಬದಲು ಇನ್ನೊಂದು ಐನೂರು ಆಟೋರಿಕ್ಷಾಗಳನ್ನು ರಸ್ತೆಯ ಮೇಲೆ ಓಡಿಸಿದ್ದರೆ ಸಾಕಾಗಿತ್ತು."

—ಎಂದರೆ, ಮತ್ತೊಬ್ಬರು—

"ಈ ಆಟೋರಿಕ್ಷಾಗಳು ಬಂದು ನಮ್ಮ ದೇಶದಲ್ಲಿ ಜನರಲ್ ಇನ್ಶೂರೆನ್ಸ್ ಕಂಪನಿಯವರಿಗೆ ಅನುಕೂಲವಾಯಿತು"

—ಎಂದರು. ಮಗದೊಬ್ಬರು—

"ಜಿರಲೆಗೆ ತನ್ನ ಮೀಸೆ ತೂರಿಸೋಷ್ಟು ಸಂದು ಸಿಕ್ಕರೂ ಇಡೀ ಮೈಯನ್ನು ನುಗ್ಗಿಸುತ್ತದೆಯಂತೆ. ನಮ್ಮ ಆಟೋದವರೂ ಅಷ್ಟೇ, ಮುಂದಿನ ಒಂಟಿ ಚಕ್ರ ನುಗ್ಗುವಷ್ಟು ಸ್ಥಳ ಸಿಕ್ಕರೆ ಸಾಕು, ಇಡೀ ಗಾಡಿಯನ್ನೇ ನುಗ್ಗಿಸಿ ಬಿಡ್ತಾರೆ. ಹಿಂದೆ ಕುಳಿತ ಪ್ರಯಾಣಿಕರಾಗಲಿ ಮುಂದೆ ಬರೋ ವಾಹನಗಳದ್ದಾಗಲಿ ಅವರಿಗೆ ಲೆಕ್ಕವೇ ಇರೋದಿಲ್ಲ."

—ಎಂದರು.

ಹೀಗೇ ಮಾತು ಆಟೋದಿಂದ ಆದ, ಆಗಬಹುದಾದ ಸಾವಿರಾರು ಅಪಾಯಗಳನ್ನು ಚರ್ಚಿಸಿ, ಬಡಪಾಯಿ ಆಟೋ ಆಟಂಬಾಂಬಿಗಿಂತಲೂ ಮಾರಕವಾದ ಅಸ್ತ್ರ ಎನಿಸುವ ಭಾವನೆಯನ್ನು ಮೂಡಿಸಿದರು. ಕೆಲವರು ವಾಹನದ ಬಗ್ಗೆ ಮಾತನಾಡಿದರೆ ಮತ್ತೆ ಕೆಲವರು ಆಟೋ ಚಾಲಕರ ರಾಕ್ಷಸಿ ವರ್ತ

ಯು ಬಗ್ಗೆ ಬಗೆ ಬಗೆಯ ಕತೆ ಹೇಳಿದರು.

ಈ ಮಧ್ಯೆ ಯಾರೋ ಒಬ್ಬ ಬಡಪಾಯಿ—

"ನಮ್ಮಲ್ಲಿ ಆಟೋರಿಕ್ಷಾದವರನ್ನೇಕೆ ಅನ್ನುತ್ತೀರಿ? ನಮ್ಮ ಜನಕ್ಕೆ ರೋಡ್ ಸೆನ್ಸ್ ಸಾಲದು. ಎಷ್ಟೋ ಸಲ ಆಟೋರಿಕ್ಷಾ ಜನರ ಮೇಲೆ ನುಗ್ಗುವುದಿಲ್ಲ. ನಮ್ಮ ಜನಾನೇ ಆ ಆಟೋರಿಕ್ಷಾದ ಮೇಲೆ ನುಗ್ಗಿಕೊಂಡು ಹೋಗುತ್ತಾರೆ."

—ಎಂದು ಆಟೋದ ಬಗ್ಗೆ ಸಹಾನುಭೂತಿ ತೋರಿಸಿದಾಗ ಆ ಬಡ್ಡನ ಬಾಯಿಯನ್ನು ಹತ್ತು ಜನ ಬಾಯಿಯಿಂದ ಮುಚ್ಚಿಸಿಬಿಟ್ಟರು.

ಜನರೆಲ್ಲಾ ಈ ಮಾತಾಡುತ್ತಿದ್ದಾಗ ಆಟೋರಿಕ್ಷಾ ಚಾಲಕನ ಅಪಘಾತಕ್ಕೆ ತನ್ನ ಕಾಲನ್ನು ಬಲಿಕೊಟ್ಟ ಆ ಹೆಂಗಸಿನ ಮುಖವನ್ನು ನಾನು ನೋಡಿದೆ.

ಆಕೆ ಮಾತ್ರ ಆ ಜನರ ಮಾತಿನ ಪರಿಣಾಮವೇನೂ ತನ್ನ ಮೇಲೆ ಆಗದಂತೆ ಕಿಟಕಿಯ ಕಡೆ ಮುಖ ತಿರುಗಿಸಿಕೊಂಡು ಕುಳಿತಿದ್ದಳು. ಈ ಆಟೋ ಚರ್ಚೆ ಮುಗಿಯುತ್ತಿರುವಾಗಲೇ ರಾಮನಗರ, ಚನ್ನಪಟ್ಟಣ ದಾಟಿ ಹೋಯಿತು.

ನಾವು ಬಹಳಷ್ಟು ಜನ ಆಟೋ ಚರ್ಚೆಯಲ್ಲಿ ತೊಡಗಿದ್ದಾಗ ನಮ್ಮ ಸಹಪ್ರಯಾಣಿಕನೊಬ್ಬ ತನಗೂ ಈ ಪ್ರಪಂಚಕ್ಕೂ ಸಂಬಂಧವೇ ಇಲ್ಲದವನ ಹಾಗೆ ತನ್ನ ಕೈಯಲ್ಲಿ ಹಿಡಿದಿದ್ದ ಟ್ರಾನ್ಸಿಸ್ಟರ್‌ಅನ್ನು ಸಿಲೋನ್ ಸ್ಟೇಷನ್‌ದತ್ತ ತಿರುಗಿಸಿ, ಮಧುರಮಯವಾಗಿ ಕೇಳಿ ಬರುತ್ತಿದ್ದ ಚಿತ್ರಸಂಗೀತವನ್ನು ಕೇಳುವುದರಲ್ಲಿ ತಲ್ಲೀನನಾಗಿದ್ದ.

ನನಗೂ ಆ ವೇಳೆಗೆ ಈ ಆಟೋರಿಕ್ಷಾದ ಮಾತು ಅತಿ, ಕೇಳಿ ಸಾಕಾಗಿ ಆತನ ಕೈಯಲ್ಲಿದ್ದ ಟ್ರಾನ್ಸಿಸ್ಟರನ್ನು ನೋಡಿದೆ—

ಹೊಸದಾಗಿ ಕೊಂಡ ವಿದೇಶಿ ಟ್ರಾನ್ಸಿಸ್ಟರ್ ಇರಬೇಕು. ನೋಡುವುದಕ್ಕೆ ತುಂಬಾ ಚೆನ್ನಾಗಿತ್ತು.

"ಇದು ಯಾವ ಟ್ರಾನ್ಸಿಸ್ಟರ್? ಎಲ್ಲಿ ಕೊಂಡಿರಿ?"

—ಎಂದು ಕೇಳಿದೆ.

ನನ್ನ ದೃಷ್ಟಿ ಆತನ ಟ್ರಾನ್ಸಿಸ್ಟರ್ ಕಡೆಗೆ ಹಾಯ್ದದ್ದು ಆತನ ಭುಜವನ್ನು ತಟ್ಟಿದಂತಾಗಿರಬೇಕು. ಹೆಮ್ಮೆ ತುಂಬಿದ ಧ್ವನಿಯಲ್ಲಿ—

"ಒರಿಜನಲ್ ನ್ಯಾಷನಲ್ ಪ್ಯಾರೋಸಾನಿಕ್. ಎರಡು ಸಾವಿರ ಬಿತ್ತು. ಆದರೆ ಇದರ ಗುಣಕ್ಕೆ ಹೋಲಿಸಿದರೆ ಹೆಚ್ಚು ಬೆಲೆಯಲ್ಲ. ನೀವೇ ಕೇಳಿ ರಿಸೆಪ್ಷನ್ ಎಷ್ಟು ಚೆನ್ನಾಗಿದೆ. ಟ್ರಾನ್ಸಿಸ್ಟರ್ ಎಂದರೆ ಜಪಾನಿನದೇ ಸರಿ. ಬೇರೆ ಯಾವ ದೇಶದಲ್ಲೂ ಅಂತಹ ಅತ್ಯುತ್ತಮ ಟ್ರಾನ್ಸಿಸ್ಟರ್ ಮಾಡುವುದಿಲ್ಲ."

—ಎಂದು ಹೇಳಿದ.

ಆತ ಹೇಳಿದ ಈ ಮಾತು ನನ್ನ ಸಹಪ್ರಯಾಣಿಕರ ಮಾತಿಗೆ ಬೇರೊಂದು ಸಾಮಗ್ರಿಯನ್ನು ಒದಗಿಸಿದಂತಾಯಿತು. ಅಷ್ಟು ಹೊತ್ತು ಆಟೋರಿಕ್ಷಾದ ಬಗ್ಗೆ ನಡೆಯುತ್ತಿದ್ದ ಚರ್ಚೆ ಈಗ ರೇಡಿಯೋಗಳ ಕಡೆ ತಿರುಗಿ ಅದನ್ನು ದಾಟಿ, ಕೈಗಡಿಯಾರ, ನೈಲಾನ್ ಬಟ್ಟೆ ಇವುಗಳ ಹಾದಿಯಲ್ಲಿ ಹರಿದು ನಮ್ಮ ದೇಶದ ಕಳ್ಳ ಸಾಗಾಣಿಕೆಯ ವಿಷಯದತ್ತ ಸಾಗಿತು.

ಆಟೋಗಿಂತಲೂ ಈ ಮಾತುಗಳು ಚರ್ಚೆಗೆ ಹೆಚ್ಚು ರುಚಿಕರವಾಗಿತ್ತು. ಒಬ್ಬೊಬ್ಬರೂ ಒಂದೊಂದು ವಿಧವಾಗಿ ಆ ಬಗ್ಗೆ ಮಾತಾಡಿದರು. ನನ್ನ ಎದುರಿಗಿದ್ದ ಸಿಂಧಿ ಮಿತ್ರನೂ ಆ ಚರ್ಚೆಯಲ್ಲಿ ಭಾಗವಹಿಸಿ ಹೇಳಿದ—

"ನೀವು ಏನೇ ಹೇಳಿ ಸಾರ್, ನಮ್ಮ ದೇಶಕ್ಕೆ ನಮ್ಮ ಜನರೇ ವೈರಿಗಳು. ನಾನೂ ನನ್ನ ವ್ಯಾಪಾರದಲ್ಲಿ ಹತ್ತಾರು ಊರು, ಹತ್ತಾರು ಪ್ರಾಂತ್ಯ ನೋಡಿದ್ದೇನೆ. ನಮ್ಮ ದೇಶದಲ್ಲಿ ಬೀದಿಯ ಮೇಲೆ ಕಾಸಿಗೊಂದು ಕೊಸರಿಗೆರಡು ಸಿಗುವ ಸಾಮಾನಿದ್ದರೂ ನಮ್ಮ ಜನಕ್ಕೆ ಅದು ಬೇಡ. ಮನೆ ಮಾರಿದರೂ ಸರಿಯೇ, ಇಲ್ಲಿ ಹತ್ತು ರೂಪಾಯಿಗೆ ಸಿಗುವ ಸಾಮಾನನ್ನು ಕದ್ದ ಮಾಲು ಎಂದರೆ ನೂರು ರೂಪಾಯಿ ಹೇಳಿದರೂ ಕೊಂಡುಕೊಳ್ಳುತ್ತಾರೆ. ಕಳ್ಳಮಾಲು ಅಂದರೆ ಅದೇನು ಹುಚ್ಚೋ ಏನೋ...ನಮ್ಮ ದೇಶದಲ್ಲಿ ಗಾಂಧೀಜಿ ಹುಟ್ಟಿ ಕೆಟ್ಟರು. ಅವರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟದ್ದೇ ಸ್ವದೇಶಿ ಅಭಿಮಾನ ಬೆಳೆಸಲಿಕ್ಕೆ...ಅವರು ಸತ್ತರು... ನಮ್ಮ ದೇಶದಿಂದ ಪರದೇಶಿಯರು ಹೋದರು, ಆದರೆ ನಮ್ಮ ಜನಕ್ಕೆ ಪರದೇಶ ವ್ಯಾಮೋಹ ಮಾತ್ರ ಹೋಗಲಿಲ್ಲ. ಈ ಟ್ರಾನ್ಸಿಸ್ಟರ್ ಇದೆಯಲ್ಲ. ಇದನ್ನು ಮಾಡುವುದೇನೂ ಬ್ರಹ್ಮವಿದ್ಯೆಯಲ್ಲ. ನಾಲ್ಕು ದಿನ ಕಷ್ಟಪಟ್ಟರೆ ಸ್ಕೂಲಿಗೆ ಹೋಗುವ ಹುಡುಗನೂ ಮಾಡಬಹುದು. ಐವತ್ತು ರೂಪಾಯಿ ಕೊಟ್ಟರೆ ಮನೆಯಲ್ಲಿಯೇ ಟ್ರಾನ್ಸಿಸ್ಟರ್

ಆಗುತ್ತೆ. ಆದರೂ ನಮ್ಮ ಜನಕ್ಕೆ ಅದು ಬೇಡ. ತಾವು ಕೆಟ್ಟರೂ ಕಳ್ಳ ಮಾಲೇ ಬೇಕು. ನಾನು ನೋಡಿದೀನಲ್ಲ—ಮದುವೇಲಿ ಗಂಡಿಗೆ ಗಡಿಯಾರ ಅಂದರೆ ಜಪಾನಿಂದಾನೇ ಬರ್ಬೇಕು. ಸೂಟಿನ ಬಟ್ಟೇನೂ ಹೊರಗಿನದೇ ಆಗ್ಬೇಕು. ಹುಡುಗಿಗೆ ಕೊಡೋ ಸೀರೇನೂ ಅಷ್ಟೆ. ಫಾರಿನ್ ನೈಲೆಕ್ಸ್ ಆಗ್ಬೇಕು. ಸದ್ಯ ಹುಡುಗಿಯೂ ಅಲ್ಲಿಂದ ಬರಬೇಕು ಅಂತ ಕೇಳಿಲ್ಲವಲ್ಲ...ಎಂಥ ಜನ ಸಾರ್? ಇವರಿಗೆ ಸ್ವಾತಂತ್ರ್ಯ ಯಾಕೆ ಬೇಕು?"

—ಎಂದು ದೇಶಾಭಿಮಾನ ಪುಟಿದೇಳುತ್ತಿದ್ದ ಧ್ವನಿಯಲ್ಲಿ ಹೇಳಿದ.

ದೇಶಾಭಿಮಾನವಷ್ಟೇ ಅಲ್ಲ. ಆತನ ಧ್ವನಿಯಲ್ಲಿ ಎಂತಹದೋ ಕಹಿಯೂ ಇತ್ತು. ಅದನ್ನು ಗುರು-ತಿಸಿ—

"ನಿಮ್ಮ ದೇಶಾಭಿಮಾನ ಪ್ರಶಂಸನೀಯವಾದದ್ದು. ನಿಮ್ಮ ಬುದ್ಧಿ ನಮ್ಮ ದೇಶದ ಜನಕ್ಕೆ ಎಂದು ಬರುತ್ತೋ ಏನೋ"

—ಎಂದೆ ನಾನು.

"ಎಲ್ಲಿ ಬರುತ್ತೆ ಸಾರ್...ಅದು ಬರೀ ಕನಸು. ಒಳ್ಳೆ ಮಾಲು ಮಾಡಿಕೊಟ್ಟರೆ ನಮ್ಮ ದೇಶದ ಜನ ಒಪ್ಪಿ ತಗೋತಾರೆಂತ ಹೇಳಿ ನಮ್ಮ ಭಾವನಂಟನೊಬ್ಬ ಬೊಂಬಾಯಿನಲ್ಲಿ ಟ್ರಾನ್ಸಿಸ್ಟರ್ ಮಾಡೋ ಕಾರ್ಖಾನೆ ತೆಗೆದು ತಾನೂ ಕೆಟ್ಟ,ಅವನ ಜತೇಲಿ ನನ್ನಿಂದಲೂ ಬಂಡವಾಳ ಹಾಕಿಸಿ ನನ್ನನ್ನೂ ಮುಳುಗಿಸಿದ. ಅದಕ್ಕೆ ನೋಡಿ ಸಾರ್...ನನಗೆ ಈ ಕಳ್ಳ ಮಾಲು ಕೊಳ್ಳೋರನ್ನ ಕಂಡರೆ ಮೈಯಲ್ಲಾ ಉರಿಯುತ್ತೆ. ಬಿಡಿ ಸಾರ್...ನಮ್ಮವರೆಲ್ಲಾ ನಮ್ಕ್ ಹರಾಂ ಬಿಡಿ. ಜನ...ಈ ಜನಾನ ನಂಬಿದರೆ ನಮ್ಮ ದೇಶದಲ್ಲಿ ಕೈಗಾರಿಕೇನೂ ಬೆಳೆಯೋಲ್ಲ; ಅದಕ್ಕೆ ಬಂಡವಾಳ ಹಾಕಿರೋರೂ ಬದುಕೋಲ್ಲ."

—ಎಂದು ನಿರಾಶೆಯ ನಂಜು ತುಂಬಿದ ಧ್ವನಿಯಲ್ಲಿ ಹೇಳಿದ.

ಆತ ಹೇಳಿದ್ದನ್ನು ಕೇಳಿ ನನಗೂ ಪಶ್ಚಾತ್ತಾಪವೆನಿಸಿತು. ನನ್ನ ಕೈಯಲ್ಲಿದ್ದ ಜಪಾನಿ ಗಡಿಯಾರ ಆತನ ಕಣ್ಣಿಗೆ ಬೀಳದ ಹಾಗೆ ಹಿಂದಕ್ಕೆ ದಬ್ಬಿ, ಷೊಣ ಕೈ ಪಟ್ಟಿಯನ್ನು ಮುಂದಕ್ಕೆ ಎಳೆದುಕೊಂಡು—

"ನಿಜ, ನಿಜ...ನೀವು ಹೇಳೋದೆಲ್ಲಾ ನಿಜ. ನಮ್ಮ ಜನ ಈ ಪರದೇಶಿ ವ್ಯಾಮೋಹ ಬಿಟ್ಟು ಬಿಡಬೇಕು."

—ಎಂದು ಹೇಳಿದೆ.

ಆತನ ಮಾತು ಕೇಳಿ ನನ್ನ ಸಹಪ್ರಯಾಣಿಕರಲ್ಲೂ ದೇಶಾಭಿಮಾನ ಪುಟಿದೆದ್ದು ಕಳ್ಳ ಸಾಮಗ್ರಿ, ಕಳ್ಳ ಸಾಗಾಣಿಕೆಗಾರರು, ಅವರಿಂದ ದೇಶಕ್ಕಾಗುತ್ತಿರುವ ಅಪಾರ ನಷ್ಟ ಇವರ ಬಗ್ಗೆ ಒಬ್ಬೊಬ್ಬರೂ ಒಂದೊಂದು ಭಾಷಣವನ್ನೇ ಬಿಗಿದರು.

ಈ ಭಾಷಣ ಬಿರುಗಾಳಿಗೆ ಸಿಕ್ಕಿ ಅದುವರೆಗೂ ಎದೆ ಸೆಟೆಸಿಕೊಂಡು ಟ್ರಾನ್ಸಿಸ್ಟರ್ ಕೇಳುತ್ತಾ ಕುಳಿತಿದ್ದಾತ ಉದ್ದಕ್ಕೆ ಚಾಚಿದ ಅದರ ಏರಿಯಲ್ ಅನು ಒಳಕ್ಕೆ ದಬ್ಬಿ ಟ್ರಾನ್ಸಿಸ್ಟರ್ ಆರಿಸಿ ಅದನ್ನು ತನ್ನ ಕೈಚೀಲದೊಳಗೆ ಹುದುಗಿಸಿ ಮಾಡಬಾರದ ಅಪರಾಧ ಮಾಡಿದವನಂತೆ ತಲೆ ತಗ್ಗಿಸಿ ಕುಳಿತ.

ಮಾತು ಈ ಮಟ್ಟ ಮುಟ್ಟುವ ವೇಳೆಗೆ ರೈಲು ಮದ್ದೂರು, ಮಂಡ್ಯ, ಪಾಂಡವಪುರ ದಾಟಿ.ಶ್ರೀರಂಗಪಟ್ಟಣವನ್ನು ಬಿಟ್ಟು ಮೈಸೂರನ್ನು ಸಮೀಪಿಸುಸುತ್ತಿತ್ತು. ಅಷ್ಟು ದೂರದಿಂದಲೇ ಕಿಟಕಿಯಿಂದ ಚಾಮುಂಡಿ ಬೆಟ್ಟ ಕಂಡು ಮೈಸೂರು ಹತ್ತಿರವಾದುದನ್ನು ನೆನಪು ಮಾಡಿತು. ಆಗ ನನಗೆ ನನ್ನ ಮಿತ್ರನ ಹೆಂಡತಿಗೆ ಕಾಲಿಗೆ ಬಿದ್ದ ಪೆಟ್ಟು ನೆನಪಾಗಿ—

"ಮೈಸೂರಿನಲ್ಲಿ ನಿಮ್ಮವರಿಗೆ ಯಾರಿಗಾದರೂ ಸ್ಟೇಷನ್‌ಗೆ ಬರೋಕೆ ಹೇಳಿದ್ದೀರಾ? ಅಲ್ಲಿಯೂ ನಿಮ್ಮ ಮನೆಯವರನ್ನು ತಳ್ಳುವ ಕುರ್ಚಿಯಲ್ಲಿ ಸ್ಟೇಶನ್‌ನಿಂದ ಹೊರಕ್ಕೆ ಕರಕೊಂಡು ಹೋಗ್ಬೇಕಾಗುತ್ತದೆ ಅಲ್ಲವೇ?"

—ಎಂದು ಕೇಳಿದೆ.

"ಅಯ್ಯೋ ಆ ಯೋಚನೆ ಮಾಡದಿದ್ದರೆ ಆದೀತೆ? ಬೆಂಗಳೂರು ಬಿಡುವ ಮೊದಲೇ ನನ್ನ ಮಗನಿಗೆ ಟ್ರಂಕಾಲ್ ಮಾಡಿ ಹೇಳಿದ್ದೀನಿ— ಇದಕ್ಕೆಲ್ಲ ತಕ್ಕ ವ್ಯವಸ್ಥೆ ಮಾಡು ಅಂತ. ಆದ್ದರಿಂದ ಏನೂ ಕಷ್ಟವಾಗೊಲ್ಲ...ಸದ್ಯ ರೈಲಿನಲ್ಲಿ ಸ್ಥಳ ಸಿಕ್ಕದಿದ್ದರೆ ನನಗೆ ಬಹಳ ಕಷ್ಟವಾಗುತ್ತಿತ್ತು. ಆ ಸಮಯದಲ್ಲಿ ನೀವು ದೇವರ ಹಾಗೆ ಕಣ್ಣಿಗೆ ಬಿದ್ದು ನನ್ನ ತೊಂದರೆ ತಪ್ಪಿಸಿದಿರಿ. ಯಾವತ್ತಿಗೂ ನಿಮ್ಮ ಉಪಕಾರ ಮರ್ರ್ಯೋಲ್ಲ. ಮೈಸೂರಿನಲ್ಲಿ ನೀವು ನಮ್ಮಂಗಡಿಗೆ ಖಂಡಿತ ಬರ್ಬೇಕು."

—ಎಂದು ಹೇಳಿದ.

ಅದುವರೆಗೂ ಸುಮ್ಮನಿದ್ದ ಆತನ ಮನೆಯಾಕೆ—

"ಸ್ವಾಮಿಯೋರು ಬಹಳ ಉಪಕಾರ ಮಾಡಿದ್ರಿ.

ಅಂತೋರನ್ನ ಬರೀ ಅಂಗಡಿಗೆ ಬರ್ನ್ನೀಂತ ಕರೀತ್ರಿಲ್ಲ. ಮನೆಗೆ ಕರೀರ. ಚಾ ಕುಡಿದು ಹೋಗಲಿ."

—ಎಂದಳು.

ಅದಕ್ಕೆ ನಾನು—

"ಅದೇನು ದೊಡ ಮಾತು. ನೀವು ವಿಸ್ವಾಸವಾಗಿ ಕರೆದರೆ ಖಂಡಿತಾ ಒಂದು ದಿನ ನಿಮ್ಮ ಮನೆಗೆ ಬಂದು ಹೋಗುತ್ತೇನೆ. ಅಂಗಡಿಗೂ ಬರ್ತೇನೆ"

—ಎಂದು ಹೇಳಿದೆ.

ನಮ್ಮಿಬ್ಬರ ಮಾತು ಮುಗಿಯುವ ವೇಳೆಗೆ ರೈಲು ಮೈಸೂರು ನಿಲ್ದಾಣದಲ್ಲಿ ಬಂದು ನಿಂತಿತು.

ನನ್ನ ಸಿಂಧಿ ಮಿತ್ರ ಹೇಳಿದಂತೆಯೇ ಆತನ ಮಗ ತನ್ನ ತಾಯಿಗಾಗಿ ತಳ್ಳುವ ಕುರ್ಚಿಯೊಂದಿಗೆ ಪ್ಲಾಟ್‌ಫಾರಂ ಮೇಲೆ ಕಾಯುತ್ತಿದ್ದ.

ಇಳಿಯುವ ಜನರ ಆತುರ ಕಡಿಮೆಯಾದ ಮೇಲೆ ಮಗ ಕಂಪಾರ್ಟ್‌ಮೆಂಟಿನೊಳಕ್ಕೆ ಬಂದ. ತಂದೆ-ಮಗ ಇಬ್ಬರೂ ಆಕೆಗೆ ಸ್ವಲ್ಪವೂ ನೋವಾಗದಂತೆ ಬಹಳ ಎಚ್ಚರವಾಗಿ ಎತ್ತಿಕೊಂಡು ಹೊರಗೆ ಕರೆದೊಯ್ದರು.

ನಾನು ಮತ್ತೊಮ್ಮೆ ಅವರಿಗೆ ನಮಸ್ಕಾರ ಹೇಳಿ ಇಳಿಯಲು ಹೊರಗೆ ಹೊರಟೆ.

ನಾನು ಗಾಡಿಯಿಂದ ತಡವಾಗಿ ಬಂದಿದ್ದರಿಂದ ನಾನು ಬರುವ ವೇಳೆಗೆ ಆಟೋಗಳಿಗಾಗಿ ಕಾದುನಿಂತ ಜನರ ಕ್ಯೂ ಸಾಕಷ್ಟು ಉದ್ದ ಬೆಳೆದಿತ್ತು. ಅದರ ಕೊನೆಯಲ್ಲಿ ನಾನೂ ನನ್ನ ಸರದಿಗಾಗಿ ಕಾದು ನಿಂತೆ,

ನಿಲ್ದಾಣದಲ್ಲಿ ಜನಸಂದಣಿ ಕಡಿಮೆಯಾದ ಮೇಲೆ ನನ್ನ ಸಿಂಧಿ ಮಿತ್ರ ತಳ್ಳುವ ಕುರ್ಚಿಯ ಮೇಲೆ ಕುಳಿತ ತನ್ನ ಹೆಂಡತಿಯೊಂದಿಗೆ ಹೊರಗೆ ಬಂದ. ಅವರ ಜತೆಗೆ ಬಂದ ಮಗ ಅಲ್ಲೇ ನಿಂತಿದ್ದ ಟ್ಯಾಕ್ಸಿಯನ್ನು ಗೊತ್ತು ಮಾಡಲು ಓಡಿದ.

ಹೆಂಡತಿಯ ಬಗ್ಗೆ ಗಂಡನಿಗಿದ್ದ ಮುತುವರ್ಜಿ ತಾಯಿಯ ಬಗ್ಗೆ ಮಗನಿಗಿದ್ದ ಅಭಿಮಾನದ ಪ್ರತೀಕದಂತೆ ಆಕೆಯ ಗಾಯವಾದ ಕಾಲಿನ ಮೇಲೆ ದಪ್ಪವಾದ ರಗ್ಗು ಹೊದಿಸಲ್ಪಟ್ಟಿತ್ತು.

ಮಗ ಆ ಕುರ್ಚಿ, ಟ್ಯಾಕ್ಸಿ ಸ್ಟ್ಯಾಂಡಿನವರೆಗೂ ಬರುವುದಕ್ಕೆ ಕಾಯದೆ ತಾನೇ ಟ್ಯಾಕ್ಸಿಯನ್ನು ನಿಲ್ದಾಣದ ಮುಂಭಾಗದ ವರಾಂಡದ ಬಳಿಗೆ ತೆಗೆದುಕೊಂಡು ಹೋದ.

ದೂರದಲ್ಲೇ ನಿಂತು ನಾನದನ್ನು ನೋಡುತ್ತಿದ್ದೆ. ತಂದೆ ಮಗ ಇಬ್ಬರೂ ಸೇರಿ ಟ್ಯಾಕ್ಸಿಯ ಹಿಂದಿನ ಸೀಟಿನಲ್ಲಿ ಆಕೆಯನ್ನು ಮಲಗಿಸಿ ಕೂಲಿಯವನಿಗೆ ಕೊಡಬೇಕಾದದ್ದನ್ನು ಕೊಟ್ಟು ತಾವಿಬ್ಬರೂ ಮುಂದಿನ ಸೀಟಿನಲ್ಲಿ ಕುಳಿತುಕೊಂಡರು.

ಟ್ಯಾಕ್ಸಿ ಇನ್ನೇನು ಹೊರಡಬೇಕು ಎನ್ನುವ ಹೊತ್ತಿಗೆ ಇದ್ದಕ್ಕಿದ್ದ ಹಾಗೆ ಹತ್ತು ಜನ ಪೋಲೀಸರು ಆ ಟ್ಯಾಕ್ಸಿಯನ್ನು ಸುತ್ತುಗಟ್ಟಿ ನಿಂತರು.

ಅದನ್ನು ನೋಡಿ ನನಗೆ ಆಶ್ಚರ್ಯ, ಗಾಬರಿ

ದಾಗಿ, ಇದೇನು ವಿಷಯ? ಎಂದು ತಿಳಿಯಲು ಕಾರು ಬಿಟ್ಟು ಆ ಟ್ಯಾಕ್ಸಿಯ ಬಳಿ ಹೋದೆ.

ಟ್ಯಾಕ್ಸಿಯನ್ನು ಸುತ್ತುವರೆದಿದ್ದ ಪೋಲೀಸರಲ್ಲಿ ಒಬ್ಬರು ನನಗೆ ಚೆನ್ನಾಗಿ ಪರಿಚಯವಿದ್ದವರು, ಅವರು ಸೆಂಟ್ರಲ್ ಎಕ್ಸೈಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಆ ಗುಂಪಿನಲ್ಲಿದ್ದುದನ್ನು ಕಂಡು—

"ಈ ಟ್ಯಾಕ್ಸಿಯನ್ನು ಹೀಗೇಕೆ ತಡೆದಿದ್ದೀರಿ? ಪಾಪ, ಆಕೆಯ ಕಾಲಿಗೆ ಬಹಳ ಪೆಟ್ಟು ಬಿದ್ದು ನೋವಾಗಿದೆ."

—ಎಂದು ಹೇಳಿದೆ.

ಅದಕ್ಕೆ ನನ್ನ ಪೋಲೀಸ್ ಗೆಳೆಯರು—

"ನಿಜ ನಿಜ... ಕಾಲಿಗೆ ಬಹಳ ದೊಡ್ಡ ಪೆಟ್ಟು ಬಿದ್ದಿದೆ. ಬ್ಯಾಂಡೇಜು ಬಲವಾಗೇ ಹಾಕಿದ್ದಾರೆ. ಆ ಗಾಯ ಎಷ್ಟು ದೊಡ್ಡದಾಗಿದೆ ಅಂತ ತಿಳಿಯಬೇಕಿದ್ದರೆ ನನ್ನ ಜತೆಯಲ್ಲಿ ಬನ್ನಿ."

—ಎಂದ.

ಆ ಮಾತು ಕೇಳಿ ಕಾರಿನಲ್ಲಿ ಕುಳಿತ ನನ ಸಿಂಧಿ ಮಿತ್ರನ ಮುಖ ನೋಡಿದೆ.

ಆತನ ಮುಖ ವಿವರ್ಣವಾಗಿತ್ತು.

ನನ್ನ ಮುಖವನ್ನು ನೋಡಲಾರದೆ ಬೇರೆ ಕಡೆ ಮುಖ ತಿರುಗಿಸಿಕೊಂಡ.

"ಸೇಠಜೀ, ಏನು ಸಮಾಚಾರ?"

—ಎಂದು ನಾನೇ ಕೇಳಿದಾಗಲೂ ಆತನ ಬಾಯಿಯಿಂದ ಯಾವ ಮಾತೂ ಹೊರಬರಲಿಲ್ಲ.

ಟ್ಯಾಕ್ಸಿಯ ಬಳಿ ಪೋಲೀಸರನ್ನು ಕಂಡು, ಅದರ ಸುತ್ತ ಸಾಕಷ್ಟು ಜನ ಗುಂಪು ಸೇರಿತು. ಜನರ ಗುಂಪೂ ಹೆಚ್ಚಾಗಿದ್ದನ್ನು ಕಂಡ ಪೋಲೀಸ್ ಮಿತ್ರ—

"ಇಲ್ಲಿ ಹೊತ್ತಾದಷ್ಟು ಜನರ ಗದ್ದಲ ಹೆಚ್ಚಾಗುತ್ತೆ. ನನ್ನ ಜತೆಗೆ ಬನ್ನಿ ನಿಮ್ಮ ಮನೆಗೆ ನಾನೇ ಡ್ರಾಪ್ ಕೊಡ್ತೀನಿ."

—ಎಂದು ಹೇಳಿ ಅಲ್ಲಿದ್ದ ಪೋಲೀಸರಿಗೆ ಟ್ಯಾಕ್ಸಿಯನ್ನು ಸೆಂಟ್ರಲ್ ಎಕ್ಸೈಜ್ ಆಫೀಸಿಗೆ ತರಲು ಹೇಳಿ ನನ್ನನ್ನು ತನ್ನ ಜೀಪಿನಲ್ಲಿ ಕೂರಿಸಿಕೊಂಡ.

ಜೀಪು ಮುಂದೆ ಹೊರಟಿತು; ಹಿಂದೆ ನನ್ನ ಸಿಂಧಿ ಮಿತ್ರನಿದ್ದ ಕಾರು.

ಸ್ವಲ್ಪ ಹೊತ್ತಿನಲ್ಲೇ ಎರಡು ವಾಹನಗಳೂ ಸೆಂಟ್ರಲ್ ಎಕ್ಸೈಜ್ ಆಫೀಸ್ ತಲುಪಿದವು. ಜೀಪಿನಿಂದಿಳಿದ ನನ್ನ ಮಿತ್ರ ಇದ್ದಕ್ಕಿದ್ದ ಹಾಗೆ ಪೋಲೀಸ್ ಅವತಾರ ತಾಳಿ ಕಾರಿನಲ್ಲಿದ್ದವರನ್ನು ಕೆಳಗಿಳಿಯಲು ಅಪ್ಪಣೆಮಾಡಿದರು.

ನಾನು ಹೇಳಿದೆ—

"ಆಕೆಯ ಕಾಲಿಗೆ ಗಾಯವಾಗಿದೆಯಲ್ಲ"

—ಎಂದು.

ಆದರೆ, ನನ್ನ ಮಾತು ಮುಗಿಯುವ ಮೊದಲೇ ಆಕೆ ಯಾವ ಸಹಾಯವೂ ಬೇಕಾಗದೇ ತಾನೇ ಕಾರಿನಿಂದಿಳಿದು ತಲೆ ತಗ್ಗಿಸಿ ನಿಂತಳು.

ಎಲ್ಲರೂ ಒಳಗೆ ಹೋದ ಮೇಲೆ ನನ್ನ ಪೋಲೀಸ್ ಮಿತ್ರ ಆಕೆಗೆ ಹೇಳಿದ—

"ನಿನ್ನ ಕಾಲಿಗೆ ಕಟ್ಟಿರೋ ಬ್ಯಾಂಡೇಜನ್ನ ನೀನೇ ಬಿಚ್ತೀಯೋ...ಇಲ್ಲಾ ನಾವೇ ಬಿಚ್ಚಿಸೋಣವೋ!"

ಆಕೆ ಏನೂ ಮಾತಾಡದೆ ತಾನೇ ಕಾಲಿಗೆ ಕಟ್ಟಿದ ಬಟ್ಟೆಯ ಪಟ್ಟಿಯನ್ನು ಬಿಚ್ಚಿದಳು. ಬಟ್ಟೆ ಯನ್ನು ತೆಗೆದ ಹಾಗೆಲ್ಲ ಅದರ ಮರೆಯಲ್ಲಿ ಅವಿತ ವಾಚುಗಳು, ಬಂಗಾರದ ಬಿಸ್ಕತ್ತುಗಳು ಒಂದೊಂದಾಗಿ ಹೊರಗೆ ಕಂಡವು. ನಾನು ದಿಗ್ಭ್ರಾಂತನಾಗಿ ನನ್ನ ಸಿಂಧಿ ಮಿತ್ರನ ಕಡೆ ನೋಡಿದೆ.

ಆತ ತಗ್ಗಿಸಿದ ತಲೆಯನ್ನು ಮೇಲಕ್ಕೆ ಎತ್ತಿರಲಿಲ್ಲ.


"ಯಾಕೆ ಸೇಠಜೀ, ಸುಮ್ಮನಾಗಿಬಿಟ್ರಲ್ಲ. ಇಲ್ಲೂ ಒಂದು ದೇಶಾಭಿಮಾನದ ಭಾಷಣ ಹೊಡೀರಲ್ಲ."

—ಎಂದು ಯಾರೋ ದಪ್ಪ ಧ್ವನಿಯಲ್ಲಿ ಹೇಳಿದ್ದು ಕೇಳಿಸಿ ಅವರ್‍ಯಾರು ಎಂದು ಹಿಂತಿರುಗಿ ನೋಡಿದೆ–

ರೈಲಿನಲ್ಲಿ ನನ್ನ ಪಕ್ಕದಲ್ಲೇ ಕುಳಿತು ಪ್ಯಾರೋಸಾನಿಕ್ ಟ್ರಾನ್ಸಿಸ್ಟರ್ ಹಿಡಿದಿದ್ದಾತ.

ಅವನನ್ನು ಅಲ್ಲಿ ಕಂಡು ಆಶ್ಚರ್ಯವಾಗಿ ಇವನೇಕೆ ಇಲ್ಲಿಗೆ ಬಂದ?—ಎಂದು ನಾನು ಯೋಚಿಸುತ್ತಿರುವುದನ್ನು ಅರ್ಥ ಮಾಡಿಕೊಂಡವರಂತೆ ನನ್ನ ಪೋಲೀಸ್ ಮಿತ್ರರು, "ಇವನು ನಮ್ಮ ಗುಮಾಸ್ತನವನೇ... ಈ ಮಿಕ ದಾರಿಯಲ್ಲಿ ನಮ್ಮ ಕೈ ತಪ್ಪಿಸಿಕೊಳ್ಳದಹಾಗೆ ಹಿಂಬಾಲಿಸಿ ಬಂದ. ಕುಂಟ ಕಾಲಿನ ಕಾವಲುಗಾರ."

—ಎಂದು ನಗುತ್ತಾ ಹೇಳಿದರು.



ದತ್ತ ಫೋನ್ ಎತ್ತಿಕೊಂಡಾಗ ಪ್ರೊಫೆಸರರ ಹೆಂಡತಿಯ ಕ್ಷೀಣ ದನಿ ಕೇಳಿಸಿತು. ಮಾಜಿ ಹೆಂಡತಿ ಯಾಕ್ರವೇ ಎಂದು ತಿದ್ದಿಕೊಂಡು ಕಿವಿಗೊಟ್ಟ. 'ಕಳೆದ ಶನಿವಾರ ಪ್ರೊಫೆಸರರು ಮನೆಗೆ ಬರಲಿಲ್ಲ. ಮನೆಗೆ ಫೋನ್ ಮಾಡಿದರೆ ಯಾರೂ ಎತ್ತುವವರೇ ಇಲ್ಲ. ಎಲ್ಲಿ ಹೋಗಿದ್ದಾರೆ ಅಂತ ನಿಮಗೇನಾದರೂ ಗೊತ್ತಾ? ಅಂತ ಫೋನ್ ಮಾಡ್ದೆ' ಎಂದಳು ಆಕೆ.

'ನಾಗರ್ಜಿ ಅಂತ ಒಂದು ಊರು. ಅಲ್ಲಿ ಹಳೇ ಕಾಲದ ಗುಡಿಗಳು ಇವೆ. ಅವನ್ನ ನೋಡಬೇಕು ಅಂತ ಹೋಗಿದಾನೆ. ಆಗ್ಲೇ ಒಂದು ವಾರವಾಯಿತು. ಇಷ್ಟರಲ್ಲಿ ಬರಬೇಕಾಗಿತ್ತು. ಬಂದ್ರೆ ತಿಳಿಸ್ತೀನಿ,' ಎಂದ ದತ್ತ. ಆಕೆ ಕೃತಜ್ಞತೆ ಹೇಳಿ ಫೋನ್ ಕೆಳಗಿಟ್ಟರು.

ದತ್ತನ ಮನಸ್ಸಿನಲ್ಲಿ ಪ್ರೊಫೆಸರ್ ಸದಾಶಿವಯ್ಯ ಮತ್ತು ಅವರ ಪತ್ನಿ ವಾರಿಜಾ ತುಂಬಿಕೊಂಡರು. ಮತ್ತೆ ತಪ್ಪಾಯಿತು. ಆಕೆ ಮಾಜಿ ಪತ್ನಿ. ಅವರು ಡೈವೋರ್ಸ್ ತಗೊಂಡು ಆಗ್ಲೇ ಎಂಟು ವರ್ಷವಾಯಿತು. ಆದರೆ ವಿಚಿತ್ರ. ಸದಾಶಿವಯ್ಯನವರು ಅಂದಿನಿಂದ ತಪ್ಪದೆ ಪ್ರತಿ ಶನಿವಾರ ತಮ್ಮ ಮಾಜಿ ಹೆಂಡತಿಯ ಮನೆಗೆ ಹೋಗಿ ಸ್ವಲ್ಪ ಹೊತ್ತು ಕೂತಿದ್ದು ವಿಚಾರಿಸಿಕೊಂಡು ಬರುತ್ತಾರೆ. ಇದೇ ದತ್ತನಿಗೆ ಅರ್ಥವಾಗದ ಸಂಗತಿ. ವಿಚ್ಛೇದನ ಪಡೆಯುವುದು ಒಂದು ಬಗೆಯ ಮನೋಧರ್ಮ. ತಪ್ಪದೆ ವಾರಕ್ಕೊಮ್ಮೆ ಮನೆಗೆ ಹೋಗಿ ಬರುವುದು ಇನ್ನೊಂದು ಬಗೆಯ ಮನೋಧರ್ಮ. ಎಷ್ಟೋ ಸಾರಿ ಆ ವಿಷಯ ಕುರಿತು ಅವರನ್ನು ಕೇಳಬೇಕು ಅಂದುಕೊಳ್ಳುತ್ತಾನೆ. ಸಾಧ್ಯವಾಗುವುದಿಲ್ಲ. ಅವರೂ ಕೂಡ ಯಾವ ಸಂದರ್ಭದಲ್ಲೂ ತಮ್ಮ ವಿಚ್ಛೇದನದ ವಿಷಯ ಎತ್ತಿಲ್ಲ. ಆದರೆ ಮಾಜಿ ಹೆಂಡತಿಯ ಮನೆಗೆ ಹೋಗುವಾಗಲೆಲ್ಲಾ ಗಂಡನ ಜಬ್ಬರದಿಂದ ಆಕೆಗೆ ಪ್ರಿಯವಾದ ಹೂವನ್ನೋ ತಿಂಡಿಯನ್ನೋ ಒಯ್ಯುತ್ತಾರೆ. ಈ ಪ್ರವೃತ್ತಿ ಕೇವಲ ಕರ್ತವ್ಯ ಮೂಲವಾದದ್ದೋ ಅಥವಾ ಪ್ರೊಫೆಸರರಲ್ಲಿ ವ್ಯಾಪಕವಾಗಿ ಹಬ್ಬಿರುವ ಮಾನ

ಮೀಯತೆಯ ಕುರುಹೋ ಅಥವಾ ನಿಜವಾಗಲೂ ಇನ್ನೂ ಅವರು ತಮ್ಮ ಹಿಂದಿನ ಹೆಂಡತಿಯನ್ನು ಪ್ರೀತಿಸುತ್ತಿದ್ದಾರೋ ಎಂಬ ಸಂಶಯಗಳು ದತ್ತನನ್ನು ಆಗಾಗ ಕಾಡುತ್ತಿದ್ದವು. ಇವು ನಿವಾರಣೆಯಾಗಲು ವಾರಿಜಾ ಅವರ ಕಡೆಯಿಂದಲೂ ಯಾವುದೇ ರೀತಿಯ ಸೂಚನೆಗಳು ಸಿಕ್ಕಿರಲಿಲ್ಲ. ಅವರ ಮನೆಗೂ ಆಗಾಗ ಹೋಗುವ ಸಂದರ್ಭ ದತ್ತನಿಗೆ ಬರುತ್ತಿತ್ತು. ಸದಾಶಿವಯ್ಯ ಏನಾದರೂ ಕೊಡುವುದಕ್ಕೆ ಕಳಿಸುತ್ತಿದ್ದರು. ಕೆಲವು ಸಲ ಮಾಸಾಶನದ ಕವರ್ ಕೂಡ ದತ್ತನೇ ಒಯ್ಯುತ್ತಿದ್ದ.

ವಾಗರ್ತಿಯ ವಿಷಯ ಸದಾಶಿವಯ್ಯ, ದತ್ತನ ಹತ್ತಿರ ಚರ್ಚಿಸಿದ್ದರು. ಅಲ್ಲಿಯ ಗವಿಗಳ ವಿಷಯ ಇತ್ತೀಚೆಗಷ್ಟೇ ಬಯಲಿಗೆ ಬಂದಿತ್ತು. ಅದೊಂದು ಸಣ್ಣ ಊರು. ಊರಿಗೆ ಅಂಟಿಕೊಂಡೇ ಬೆಟ್ಟಗಳ ಸಾಲು. ಮಳೆ ಬಂದು ಬಂಡೆ ಕಳಚಿಕೊಂಡು

ಈಶ್ವರಚಂದ್ರ

ಕೆಳಕ್ಕೆ ಜಾರಿದಾಗ ಯಾವುದೋ ಅಜ್ಞಾತಕಾಲದ ಗವಿಯೊಂದು ಹೊರಗಿನ ಗಾಳಿ–ಬೆಳಕು ಕುಡಿದಿತ್ತು. ದನ ಕಾಯುವ ಹುಡುಗರು ಗಮನಿಸಿ ಅದನ್ನು ಸುದ್ದಿ ಮಾಡಿದ್ದರು. ಪತ್ರಿಕೆಗಳಲ್ಲೂ ಅದರ ವರದಿ ಬಂದಿತ್ತು. ಮೊದಲ ವಾರದಲ್ಲಿ ಕೆಲವು ಸಂಶೋಧಕರು ಅಲ್ಲಿಗೆ ಭೇಟಿ ಕೊಟ್ಟರು. ಆ ಅವಧಿಯಲ್ಲಿ ಇನ್ನೂ ಎರಡು ಗವಿಗಳು ಬೆಳಕು ಕಂಡವು. ಇವೆಲ್ಲದರ ವರದಿ, ಸಂಶೋಧನಾ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು. ಒಂದೆರಡು ಉತ್ಸಾಹಿ ವರದಿಗಾರರು ಫೋಟೋಗಳನ್ನು ಕೂಡ ತೆಗೆದು ಪ್ರಕಟಿಸಿದ್ದರು. ಗವಿ ಕಂಡು ಬಂದ ಹೊಸದರಲ್ಲೇ ಸದಾಶಿವಯ್ಯ ಅಲ್ಲಿಗೆ ಹೋಗಬೇಕೆಂದುಕೊಂಡಿದ್ದರು. ಆದರೆ ವಿಶ್ವವಿದ್ಯಾಲಯದಲ್ಲಿ ಜವಾಬ್ದಾರೀ ಕೆಲಸವೊಂದರ ನಿರ್ವಹಣೆಯಲ್ಲಿ ಕೂಡಲೇ ಅವರಿಗೆ ಬಿಡುವಾಗಲಿಲ್ಲ. ಆದರೂ ಹತ್ತು ದಿನಗಳಲ್ಲಿ ಅವರು ಬಿಡುವು ಮಾಡಿಕೊಂಡು ಹೊರಟೇಬಿಟ್ಟರು. ಮೊದಲು, ಒಂದು ತಂಡದಲ್ಲಿ ಅಲ್ಲಿಗೆ ಹೋಗಬೇಕೆಂಬ ಯೋಚನೆಯಿತ್ತು. ಆದರೆ ಸದಾಶಿವಯ್ಯನವರಿಗೆ ಅದನ್ನು ಒಂದು ವಿಹಾರ ಯಾತ್ರೆ ಮಾಡದೆ ಶುದ್ಧ ಸಂಶೋಧನಾ ಪ್ರವಾಸವಾಗಿಸುವ ಆಸೆ ಇದ್ದುದರಿಂದ ಇಬ್ಬರೇ ಹೋಗಲು ನಿರ್ಧರಿಸಿದರು. ಅವರು, ಜೊತೆಗೆ ಅವರ ಇತಿಹಾಸ ವಿಭಾಗದಲ್ಲೇ ಸಂಶೋಧನಾ ಸಹಾಯಕನಾಗಿ ಕೆಲಸಮಾಡುತ್ತಿದ್ದ ಗುರುದತ್ತ. ಆದರೆ ಹೊರಡುವುದಕ್ಕೆ ಎರಡು ದಿನ ಮೊದಲು ದತ್ತನ ಊರಿಂದ ಅವನ ತಂದೆಗೆ ಹುಷಾರಿಲ್ಲವೆಂದು ಟೆಲಿಗ್ರಾಂ ಬಂದಾಗ ಅವನನ್ನು ಊರಿಗೆ ಕಳಿಸಿ ಸದಾಶಿವಯ್ಯ ಒಬ್ಬರೇ ವಾಗರ್ತಿಗೆ ಹೊರಟರು. ದತ್ತ ಊರಿಂದ ಬಂದು ಅವರನ್ನು ವಾಗರ್ತಿಯಲ್ಲಿ ಕೂಡಿಕೊಳ್ಳಬೇಕು ಎಂದು ನಿರ್ಧಾರವಾಗಿತ್ತು. ಆದರೆ ತಂದೆಯ ಕಾಯಿಲೆ ಗಂಭೀರ ಸ್ವರೂಪದ್ದಾಗಿದ್ದರಿಂದ ಅವನು ಅಲ್ಲೇ ಒಂದು ವಾರಕಾಲ ನಿಲ್ಲುವುದು ಅನಿವಾರ್ಯವಾಯಿತು. ಅವನು ಹಿಂತಿರುಗಿದಾಗ ಸದಾಶಿವಯ್ಯನವರ ಒಂದು ನೋಟ್ ಅವನಿಗಾಗಿ ಕಾಯುತ್ತಿತ್ತು. 'ಸದ್ಯಕ್ಕೆ ನೀನು ವಾಗರ್ತಿಗೆ ಬರುವುದು ಬೇಡ, ಪ್ರಾಥಮಿಕ ಪರಿವೀಕ್ಷಣೆಯನ್ನು ನಾನೇ ಮುಗಿಸಿಕೊಂಡು ಬರುತ್ತೇನೆ' ಎರಡನೇ ಸುತ್ತಿಗೆ ನೀನು ಬರುವುದು ಅಗತ್ಯ. ದತ್ತ ನಗರಕ್ಕೆ ಹಿಂತಿರುಗಿದ ಮೇಲೆ ಪ್ರೊಫೆಸರಿಗಾಗಿ ಕಾಯುತ್ತಾ ಕೂತ.

ಎರಡು ದಿನ ಬಿಟ್ಟು ಮತ್ತೆ ಫೋನ್ ಕರೆ ಬಂತು. ದತ್ತ ವಾರಿಜಾ ಮನೆಗೇ ಹೋದ. ಮನೆಯಲ್ಲಿ ವಾರಿಜಾ ಮತ್ತು ಕೆಲಸದ ಹುಡುಗಿ ಮಾತ್ರ ಇದ್ದರು. ಆಕೆಯ ಬಿಳಿಚಿಕೊಂಡ ತೆಳ್ಳನೆಯ ದೇಹ ಮತ್ತು ಕೆಲಸದ ಹುಡುಗಿಯ ಊದಿಕೊಳ್ಳುತ್ತಿದ್ದ ದೇಹ ಪರಸ್ಪರ ಅಪಹಾಸ್ಯ ಮಾಡುತ್ತಿರುವಂಥ ವಾತಾವರಣದಲ್ಲಿ ದತ್ತ ತನ್ನ ಪ್ರೊಫೆಸರರ ಕಾರ್ಯಕ್ರಮ ಕುರಿತು ಇನ್ನೊಮ್ಮೆ ವಿವರಣೆ ಕೊಡಬೇಕಾಯಿತು. ವಾರಿಜಾ ಒತ್ತಾಯಿಸಿದ್ದರಿಂದ ಅಂಚೆಗೂ ನಿಲುಕದ ಅಜ್ಞಾತ ದೂರದಲ್ಲಿದ್ದ ವಾಗರ್ತಿಗೆ ದತ್ತನೇ ಹೊರಡಬೇಕಾಯಿತು.

೨

ಜಿಲ್ಲೆಯ ದಟ್ಟವಾದ ಕಾಡಿನ ಮಧ್ಯೆ

ಸೀಳಿಕೊಂಡು ಹೋಗುವ ಕಿರು ರಸ್ತೆಯಲ್ಲಿ ಭರದಿಂದ ಓಡಿದ ಬಸ್ಸು "ವಾಗರ್ತಿಗೆ ಮೂರು ಮೈಲಿ" ಎಂಬ ಬೋರ್ಡಿನ ಬಳಿ ಇಳಿಸಿ ಮುಂದೆ ಹೋಯಿತು. ಇಳಿದ ಜಾಗದಲ್ಲಿ ಬೋರ್ಡ್ ಕಾಣುತ್ತಿತ್ತೇ ವಿನಾ ಊರಿನ ಸುಳಿವು ಕಾಣಲಿಲ್ಲ. ಕಾಣುವ[ಂ]ತೆ ಹಾಗೂ ಇರಲಿಲ್ಲ. ಕಾಡು ದಟ್ಟವಾಗಿ] ಮುಚ್ಚಿಕೊಂಡಿತ್ತು. ಅದರ ನಡುವೆ ಹೆದರುತ್ತಾ ನುಸುಳಿಕೊಂಡು ಹೋದ. ಮುಂದೆ ಮರೆಯಾದ ಸಣ್ಣ ದಾರಿ. ಎತ್ತಿನ ಗಾಡಿ ಸುಲಭವಾಗಿ ಹೋಗಬಹುದಿತ್ತು. ಜೀಪ್ ನುಗ್ಗಬಹುದಾಗಿತ್ತು. ಕಾರು ಮುಂತಾದವು ಆ ದಾರಿಗೆ ಯೋಗ್ಯವಲ್ಲ.

ದತ್ತನಿಗೆ ಮೊದಲು ಬಂದ ಅನುಮಾನವೆಂದರೆ ತಾನು ಈಗ ಹೋಗುತ್ತಿರುವ ವಾಗರ್ತಿಯೂ ತನಗೆ ಬೇಕಾದ ವಾಗರ್ತಿಯೂ ಒಂದೇನೋ ಅಥವಾ ಬೇರೆಯೋ ಎಂದು. ಅದೇನು ಅಸಹಜವಲ್ಲ. ಒಂದೇ ಹೆಸರಿನ ಊರುಗಳು ಎಷ್ಟಿಲ್ಲ? ವಿಚಾರಿಸುವುದಕ್ಕೆ ಹತ್ತಿರದಲ್ಲಿ ಯಾರೂ ಇರಲಿಲ್ಲ. ನಿರ್ಜನವಾದ ಈ ಕಾಡುದಾರಿಯಲ್ಲಿ ಸೂಟ್‌ಕೇಸ್ ಹೊತ್ತುಕೊಂಡು ಮೂರು ಮೈಲಿ ನಡೆಯುವಷ್ಟರಲ್ಲಿ ಹೆಣವಾಗಬಹುದೇನೋ ಎಂದು ಯೋಚಿಸುತ್ತಾ, ಕತ್ತಲಾಗುವುದರೊಳಗೆ ಊರ ಸೇರಿಕೊಳ್ಳುವುದು ವಾಸಿಯೆಂದು ದತ್ತ ಹೊರಟ. ಆಗಲೇ ಐದೂ ಮುಕ್ಕಾಲಾಗಿತ್ತು. ಸೂರ್ಯ ನೆಲ್ಲೋ ದೂರದ ಗುಡ್ಡದ ಹಿಂದೆ ಇಳಿದುಬಿಟ್ಟಿದ್ದ. ಕತ್ತಲು ಬೇಗ ಆಗಿಬಿಡುತ್ತದಲ್ಲಾ ಎಂಬ ಆತಂಕದಲ್ಲಿ ದತ್ತ ಬೇಗ ಬೇಗ ನಡೆಯತೊಡಗಿದ. ನಡೆಯುತ್ತಾ ಸೂಟ್‌ಕೇಸ್ ಭಾರವಾಗಲಾರಂಭಿಸಿತು. ಬರುಬರುತ್ತಾ ಕಾಡು ದಟ್ಟವಾಗಿ, ಕಪ್ಪು ಮೂತಿಯ ಕೋತಿಗಳು ಮರದಿಂದ ಮರಕೆ ನೆಗೆಯುತ್ತಿರುವುದನ್ನು ನೋಡಿ ಎಂಥೆಂಥ ಕಾಡು ಪ್ರಾಣಿಗಳು ಇಲ್ಲಿವೆಯೋ ಎಂದು ಕಲ್ಪಿಸಿಕೊಂಡು ಮನಸ್ಸು ಸ್ವಲ್ಪ ಅಧೀರವಾಯಿತು. ತನ್ನಲ್ಲಿ ರಕ್ಷಣೆಗೆ ಯಾವ ರೀತಿಯ ಆಯುಧವೂ ಇರಲಿಲ್ಲ. ಇರುವುದೆಂದರೆ ಟಾರ್ಚ್ ಒಂದೇ. ಅದರ ಬೆಳಕಿನಿಂದ ಸ್ವಲ್ಪ ಮಟ್ಟಿಗೆ ಪ್ರಾಣಿಗಳನ್ನು ಚೆದರಿಸುವುದು ಸಾಧ್ಯವಾಗುತ್ತೇನೋ ಎಂದು ಧೈರ್ಯ ಮಾಡಿಕೊಂಡ. ಸ್ವಲ್ಪ ಮುಂಚಿನ ಬಸ್ ಹಿಡಿಯಬೇಕಾಗಿತ್ತು. ಬೆಂಗಳೂರಿನಿಂದ ಜಿಲ್ಲಾ ಕೇಂದ್ರಕ್ಕೆ ಮಧ್ಯಾಹ್ನ ಎರಡು ಗಂಟೆಗೇ ಬಂದಿದ್ದ. ಊಟ ಮುಗಿಸಿ, ನಿಲ್ದಾಣಕ್ಕೆ ಬಂದಾಗ ವಾಗರ್ತಿಗೆ ಹೋಗುವ ಬಸ್ ಆಗಷ್ಟೇ ಹೋಗಿತ್ತೆಂದೂ ಮುಂದಿನ ಬಸ್ ನಾಲ್ಕು ಗಂಟೆಗೆ ಇದೆಯೆಂದೂ ತಿಳಿಯಿತು. ಬೇರೆ ಮಾರ್ಗವೇ ಇರಲಿಲ್ಲ. ಹೇಗೂ ಕತ್ತಲಾಗುವುದರೊಳಗೆ ಊರು ತಲುಪಬಹುದು. ಆ ಮೇಲೆ ನೋಡಿಕೊಳ್ಳೋಣ ಎಂದು ನಾಲ್ಕು ಗಂಟೆಯ ಬಸ್ಸಿಗೇ ಹೊರಟಿದ್ದ.

ಎರಡೂ ಕಡೆ ದಟ್ಟವಾದ ಕಾಡು ಇದುದರಿಂದ ಆರೂ ಕಾಲಿಗೇ ಕತ್ತಲು ಇಳಿಯಲಾರಂಭಿಸಿತು. ಕೆಂಪು ಮಣ್ಣಿನ ರಸ್ತೆ ಕತ್ತಲಲ್ಲಿ ಕಂದು ಬಣ್ಣಕ್ಕೆ ತಿರುಗುತ್ತಿತ್ತು. ಆಗಲೇ ಅರ್ಧ ದೂರ ದಾಟಿ ಬಂದಿರಬಹುದು. ಎಲ್ಲೂ ಮೈಲಿ–ಫರ್ಲಾಂಗ್ ಕಲ್ಲು ಎದುರಾಗಲಿಲ್ಲ. ಸೂಟ್‌ಕೇಸ್ ಕೆಳಗಿಳಿಸಿ ಟಾರ್ಚ್ ತೆಗೆದುಕೊಂಡ. ಸೆಲ್ಲುಗಳನ್ನು ಸರಿಯಾಗಿ ಜೋಡಿಸಿ ಬೆಳಕು ಬಿಟ್ಟು ನೋಡಿ ಅನಿರೀಕ್ಷಿತವಾಗಿ ಗೆಳೆಯನೊಬ್ಬ ಸಿಕ್ಕ ಹಾಗೆ ಸಂತೋಷಪಟ್ಟ.

ಕಾಡಿನಲ್ಲಿ ನಿಶಾಚರ ಪ್ರಾಣಿಗಳ ಚಟುವಟಿಕೆ ಆರಂಭವಾದಂತಿತ್ತು. ಬಾವಲಿಗಳು ಬಿಡಿಬಿಡಿಯಾಗಿ ಮತ್ತು ಸಣ್ಣ ಸಣ್ಣ ಗುಂಪುಗಳಲ್ಲಿ ಆ ಕಡೆಯಿಂದ ಈಕಡೆಗೆ ಹಾರುತ್ತಾ ರಸ್ತೆಯಲ್ಲಿ ಕಪ್ಪು ಹಾರಿಸುತ್ತಿದ್ದವು. ಒಳಗೆಲ್ಲಿಂದಲೋ ಗುರುತಿಸಲಾಗದ ಕೂಗುಗಳು ಇದ್ದಕ್ಕಿದ್ದಂತೆಯೇ ಹೊರಟು ಥಟ್ಟನೆ ಸುಮ್ಮನಾಗುತ್ತಿದ್ದವು. ಸ್ವಲ್ಪ ದೂರ ಮುಂದೆ ಹೋದ ಮೇಲೆ ಕಾಡಿನ ನಡುವೆ ದೊಡ್ಡ ಹಸಿರ ಬಯಲು ಕಾಣಿಸಿ ಕಣ್ಣು ನೋಡುವಷ್ಟು ದೂರ ಬತ್ತದ ಗದ್ದೆಗಳು ತೆರೆತೆರೆಯಾಗಿ ಹಸಿರು ಉರುಳಿದವು. ಜನವಸತಿಗೆ ಹತ್ತಿರವಾಗುತ್ತಿದ್ದೇನೆ ಎಂದು ದತ್ತನಿಗೆ ಧೈರ್ಯ ಬಂತು. ಆಗಲೇ ಬೆನ್ನು ನೋಯುತ್ತಿತ್ತು. ಯಾರಾದರೂ ಕಣ್ಣಿಗೆ ಬಿದ್ದರೆ ಹೊರಿಸಿ ಭಾರದಿಂದ ಪಾರಾಗಬಹುದೆಂದು ನೋಡಿದ.

ಗದ್ದೆ ಕಳೆದು ಮತ್ತೆ ಕಾಡು ಪ್ರಾರಂಭವಾದಾಗ ಏರು ದಾರಿಯಲ್ಲಿ ಕತ್ತಲು ಒಮ್ಮೆಲೇ ಏರಿದಂತಾಯಿತು. ಬೆಳಕು ಬಿಟ್ಟ. ಕಾಡಿನ

ಕತ್ತಲು ಹೆಚ್ಚಾದಂತಾಯಿತು. ದಾರಿ ತಪ್ಪಿದ್ದೇನೇನೋ ಎಂದು ಅನುಮಾನ ಪ್ರಾರಂಭವಾಯಿತು. ರಸ್ತೆ, ಉದ್ದಕ್ಕೂ ಎಲ್ಲೂ ಕವಲೊಡೆದಿರಲಿಲ್ಲ. ಆದ್ದರಿಂದ ದಾರಿ ತಪ್ಪಿರಲಾರದು. ಅದೇ ಧೈರ್ಯದ ಮೇಲೆ ಬೇಗ ಬೇಗ ಹೆಜ್ಜೆ ಹಾಕತೊಡಗಿದ.

ಮತ್ತೆ ಸ್ವಲ್ಪ ದೂರ ಹೋದ ಮೇಲೆ ದೂರದಲ್ಲಿ ಮಸಕು ಮಸಕಾಗಿ ದೀಪಗಳು ಕಾಣಿಸಿದವು. ರಸ್ತೆಯ ಒಂದು ಪಕ್ಕದಲ್ಲಿ ಕೆರೆ, ಅದಕ್ಕೆ ಹೊಂದಿಕೊಂಡೇ ಅಡಕೆಯ ತೋಟಗಳು. ಇನ್ನೊಂದು ಪಕ್ಕದಲ್ಲಿ ಯಥಾಪ್ರಕಾರ ಗದ್ದೆಗಳು. ಕತ್ತಲಿನಲ್ಲೂ ಕಾಣುತ್ತಿದ್ದವು. ಮುಂದೆ ಹೋಗುತ್ತಿದ್ದಂತೆಯೇ ಮರಗಿಡಗಳ ನಡುವೆ ಕತ್ತಲಲ್ಲಿ ಮೈ ಮರೆಮಾಡಿಕೊಂಡ ಮನೆಗಳೂ, ಅಲ್ಲಲ್ಲಿ ಮಿನುಗುವ ದೀಪಗಳೂ ಕಾಣಿಸಿದವು. ಗಂಟೆ ಏಳಾಗಿತ್ತು. ಮೈ ಆಯಾಸದಿಂದ ಹಣ್ಣಾಗಿತ್ತು. ಬೇಗ ಹೋಗಿ ಒಂದು ನೆಲೆ ಸೇರಬೇಕು ಎಂದು ದತ್ತ ಮುಂದೆ ಹೋಗುತ್ತಿದ್ದ. ಹಾಗೇ ಮನೆಯ ಜಗಲಿಯಿಂದ ಜಿಗಿದ ನಾಯಿಯೊಂದು ಪ್ರತಿಭಟನೆಯ ಕೂಗು ಹಾಕತೊಡಗಿ ಹಿಂದೆಯೇ ಮನೆಯೊಳಗಿಂದ ಯಾರೋ ಹೊರಬಂದದ್ದು ಕಂಡಿತು. ನಾಯಿ ಮುಂದೆ ಬರಲು ಧೈರ್ಯ ಸಾಲದೆ ಟಾರ್ಚಿನ ಅಪರಿಚಿತ ಬೆಳಕಿನಲ್ಲಿ ಬಡಕಲು ಮೈಗೆ ಮೀರಿದ ಪ್ರತಾಪದಲ್ಲಿ ಬೊಗಳುತ್ತಿತ್ತು. "ತ್ಚು ತ್ಚು ಹುಲ್ಯಾ ಹಪ್ಪೇಗೆ ಹುಟ್ಟಿದ್ದೇ" ಎನ್ನುತ್ತಾ ತುಂಡು ಪಂಚೆಯ ಆಸಾಮಿಯೊಬ್ಬ ಮುಂದೆ ಬಂದು 'ಯಾವೂರಾತು?' ಎಂದ.

'ಹೌದಲ್ಲಾ ನಿಮ್ದು ಯಾವೂರಾತು?'

ಈಗ ಪ್ರಶ್ನೆ ಅರ್ಥಮಾಡಿಕೊಂಡು, 'ನಂದು ಬೆಂಗಳೂರು. ಇಲ್ಲಿ ಹೋಟ್ಲು ಏನಾದ್ರೂ ಇದೆಯಾ?' ಎಂದು ಕೇಳಿದ.

'ಸಣ್ಣಯ್ಯನ ಟೀ ಅಂಗ್ಡಿ ಇರ್ಪು ರಾಯ್ರು. ಹಿಂಗೇ ನೇರ ಹೋಗಿ ಅಲ್ಲಿ ಹಲಸಿನ ಮರ ಕಾಂಬುದಿಲ್ಲೋ ಅಲ್ಲೇ ಇರ್ಪು ಕಾಣಿ' ಎಂದ ಆತ.

ದತ್ತ ಆತನಿಗೆ ನಮಸ್ಕಾರ ಹೇಳಿ ಹಲಸಿನ ಮರ ಎಲ್ಲಿ ಕಾಣುತ್ತೆ ಎಂದು ನೆಟ್ಟಗೆ ಹೋದ. ನಾಯಿ ಮತ್ತು ಪೌರುಷ ಪ್ರದರ್ಶನ ಮಾಡಿ ಬೈಸಿಕೊಂಡಿತು. ದತ್ತನ ಬೆನ್ನ ಹಿಂದೆ ರಸ್ತೆಯ ಒಂದೇ ಕಡೆ ಮನೆಗಳು. ಎದುರಿಗೆ ಸ್ವಲ್ಪ ತಗ್ಗಿನಲ್ಲಿ ಎತ್ತರಕ್ಕೆ ಎದೆ ಎತ್ತಿ ನಿಂತ ತೋಟ. ಕತ್ತಲಲ್ಲಿ ಒಂದೇ ಸಮನೆ ಕಾಡೇ ಹಾಡುತ್ತಿದ್ದಂತೆ ಕೇಳುವ ಜೀರ್ ನಾದ. ಅರೆಬರೆ ಕತ್ತಲೆ ಬೆಳಕು. ಯಾವುದೋ ಬೇರೆ ಲೋಕಕ್ಕೆ ಸೇರಿದವರಂತೆ ಕಾಣುವ ಹೆಣ್ಣು ಗಂಡುಗಳು. ಸ್ವಲ್ಪ ವಿಚಿತ್ರವಾಗಿ ಕಾಣುವ ಮನೆಗಳು. ತಾನು ಇದ್ದಕ್ಕಿದಂತೆ ಎಲ್ಲಿಗೆ ಬಂದೆ ಎಂದು ದತ್ತನಿಗೆ ಅಚ್ಚರಿಯಾಗತೊಡಗಿತು. ಪ್ರಾಯಶಃ ಪ್ರೊಫೆಸರರೂ ಇಲ್ಲೆ ಎಲ್ಲೋ ತಂಗಿರಬೇಕು. ಅಥವಾ ಹತ್ತಿರ ಯಾವುದಾದರೂ ದೊಡ್ಡ ಪಟ್ಟಣದಲ್ಲಿ ಉಳಿದುಕೊಂಡು ಇಲ್ಲಿಗೆ ಬಂದು ಹೋಗಿ ಮಾಡುತ್ತಿರಬೇಕು. ಇಲ್ಲದಿದ್ದರೆ ಈ ಕೊಂಪೆಯಲ್ಲಿ ಏನು ಸಿಕ್ಕೀತು ಎಂದುಕೊಂಡ. ಆದರೆ ಇಲ್ಲೂ ಜನ ಇದ್ದಾರಲ್ಲ. ಪ್ರಕೃತಿಯೂ ಸಮೃದ್ಧವಾಗಿದ್ದಂತಿದೆ. ಏನೋ ಅಂತೂ ಬೆಳಗಾಗಲಿ ನೋಡೋಣ ಎಂದು ಅಂದುಕೊಳ್ಳುತ್ತಲೇ ನಾಯಿಗಳ ಬೊಗಳುವಿಕೆಯಲ್ಲಿ ಸುತ್ತುವರಿದು, ಟಾರ್ಚಿನ ಬೆಳಕಿನಲ್ಲಿ ಹೆದರಿಸುತ್ತಾ ಹೇಗೋ ಸಣ್ಣಯ್ಯನ ಟೀ ಅಂಗಡಿಯ ಮುಂದೆ ಬಂದೇಬಿಟ್ಟ.

ನಾಯಿಗಳ ಸದ್ದಿನಲ್ಲಿ ಅವೃತನಾಗಿ ಇವನು ಬರುತ್ತಲೇ ಬೆಂಚಿನ ಮೇಲೆ ಕೂತಿದ್ದ ಮೂರು ನಾಲ್ಕು ಜನ ಯಾರೋ ಹೊಸಬ ಬಂದವನೆಂದು ತಿರುಗಿದರು. ತಂತಿಯಲ್ಲಿ ತೂಗಿಬಿಟ್ಟಿದ್ದ ಲಾಟೀನಿನ ಬೆಳಕಿನಲ್ಲಿ ಕುರುಚಲು ಗಡ್ಡ, ತಲೆಗೆ ಸುತ್ತಿದ ಕೊಳೆ ಟವೆಲ್, ಅಡಿಕೆ ಕರೆಯ ಜಂಪರ್, ಸೊಂಟಕ್ಕೆ ಎತ್ತಿ ಕಟ್ಟಿದ ಪಂಚೆ, ಪೀಚಲು ದೇಹದ ಮಂದಿ ಕಾಣಿಸಿ ಯಾವ ಸಿನಿಮಾದಲ್ಲಿ ಇವರನ್ನು ನೋಡಿದ್ದೆ ಅಂದುಕೊಂಡು. 'ಅಂಕುರ್' ಅಥವಾ 'ನಿಶಾಂತ್' ಇರಬಹುದೇ ಅಂದುಕೊಳ್ಳುತ್ತಾ ದತ್ತ ಮೆಲ್ಲನೆ ಮೆಟ್ಟಿಲು ಏರಿದ. ಮುಖಗಳೆ ಒಳಗೆ ತಿರುಗಿದವು. ಪ್ರಾಯಶಃ ಸಣ್ಣಯ್ಯ ಅಡಕೆಲೆ ದವಡೆಗೆ ಒತ್ತರಿಸುತ್ತಾ ಮುಂದೆ ಬಂದು ಒಂದು ಅರ್ಥವಾಗದ ಉಚ್ಚಾರದಲ್ಲಿ ಒಂದು ಪ್ರಶ್ನೆ ಕೇಳಿದ. ಕೇಳುವಾಗ ಹೊರಳಿದ ಅವನ ಕಣ್ಣುಗುಡ್ಡೆಗಳು, ಬೆಂಚಿನ ಮೇಲೆ ಕೂತವರಿಗೆ ಏನೋ ಅವ್ಯಕ್ತ ಸಂವಹನೆಯಲ್ಲಿ ತೊಡಗಿವೆಯೇನೋ ಅನ್ನಿಸಿ ಅದನ್ನು ಲೆಕ್ಕಿಸದೆ, 'ಇಲ್ಲಿ ರಾತ್ರಿ ಇರಲು ಸ್ಥಳ ಇದೆಯಾ?' ಎಂದ.

ಸಣ್ಣಯ್ಯ ಜಗಲಿಗೆ ಬಂದು, ಚಿಂಡಿಗೆ ರಸ ತುಪ್ಪಿ ಕೇಳಿದ, 'ಯಾವೂರಾತು?'

ಮೊದಲು ಕೇಳಿದ ಪ್ರಶ್ನೆ ಇದೇ ಇರಬೇಕೆಂದು ಕೊಂಡು, 'ನನ್ನದು ಬೆಂಗಳೂರು. ಕೊನೇ ಬಸ್ಸಿನಲ್ಲಿ ಇಲ್ಲಿಗೆ ಬಂದೆ. ರಾತ್ರಿ ಇಲ್ಲೇ ಇರಬೇಕು. ಇರೋದಕ್ಕೆ ಜಾಗಾ ಉಂಟಾ?' ಎಂದ.

ಸಣ್ಣಯ್ಯ ಸಂಜ್ಞೆಯಿಂದ ಅವನನ್ನು ಒಳಗೆ ಕರೆಯುತ್ತಾ ಒಂದು ಹಳೆಯ ಕಾಲದ ಮರದ ಪೆಟಾರಿಯ ಮೇಲೆ ಕೂಡಿಸಿ, 'ತಾವು ಬಂದದ್ದು?' ಅಂದ.

ಅದು ಒಂದು ಯಕ್ಷಗಾನದ ಮಾತಿನಂತೆ ಕೇಳಿ. ತನ್ನ ಪ್ರಶ್ನೆಗೆ ಇನ್ನೂ ಆತ ಉತ್ತರ ಕೊಟ್ಟಿಲ್ಲ ಎಂಬುದನ್ನು ಗಮನಿಸಿ, ಯಾಕೋ ಈತ ನಿಗೂಢವಾಗುತ್ತಿದ್ದಾನೆ ಎಂದು ಅನುಮಾನಿಸುತ್ತ ಮೊದಲು ಸೂಟ್‌ಕೇಸ್ ನೆಲಕ್ಕಿಳಿಸಿ, ನಿರಿನಿಟಿಲೆನ್ನುವ ಮೂಳೆಗಳಿಗೆ ಸ್ವಲ್ಪ ವಿಶ್ರಾಂತಿ ಕೊಡಲು ಪೆಟಾರಿಯ ಮೇಲೆ ಮೈ ಊರುತ್ತಾ, 'ಮೊದಲು ಒಂದು ಕಾಫಿ ಕೊಡಿ' ಎಂದ.

ಸಣ್ಣಯ್ಯ ಮರು ಮಾತಾಡದೆ ಉರಿಯುತ್ತಿದ್ದ ಒಲೆಯ ಕಡೆ ತಿರುಗಿದ.

ದತ್ತ ಕೂತಲ್ಲಿಂದಲೇ ಎರಡೂ ಕೈಗಳನ್ನು ಹಿಂದಕ್ಕೆ ಊರಿ ಒಂದು ಸಲ ಸುತ್ತ ದೃಷ್ಟಿ ಹರಿಸಿದ. ಆಗಲೇ ಅವನಿಗೆ ಗೊತ್ತಾದದ್ದು ಎರಡು ಕಣ್ಣುಗಳು ತನ್ನ ಮೇಲೆ ನೆಟ್ಟಿವೆ ಎಂದು. ಒಳಗಡೆ ತೆರೆದುಕೊಳ್ಳುವ ಬಾಗಿಲಿನಾಚೆ ಕಂಬದ ಮರೆಯಲ್ಲಿ ಇಣುಕುತ್ತಿದ್ದ ಮುಖದ ಮೇಲೆ ಸಣ್ಣ ದೀಪವೊಂದರ ಮಬ್ಬು ಬೆಳಕು ಬಿದ್ದು ಅಷ್ಟರಲ್ಲಿ ಕಣ್ಣು ಹೊಳೆದದ್ದು ಕಂಡು ಸ್ವಲ್ಪ ಕುತೂಹಲದಿಂದ ಕತ್ತು ಚಾಚಿದಾಗ ಕಂಬ ಕದಲಿ ಒಂದಿದ್ದ ಹುಡುಗಿ ಒಳಗೆ ಇನ್ನೆತ್ತಲೋ ನಡೆದು ಮರೆಯಾದಳು. ದತ್ತ ಅಂಗಡಿ ನೋಡಿದ. ಮಸಿ ಬಳಿದುಕೊಂಡ ಗೋಡೆ ಜಂತೆಗಳ ಆ ಸಣ್ಣ ಅಂಗಡಿಯಲ್ಲಿ ಗಿಜಿ ಗಿಜಿ ಅಲ್ಲಾಡುವ ಮೇಜೊಂದು. ಪಕ್ಕದಲ್ಲಿ ಚಿತ್ರಕ್ಕೆ ಛಾಪಿ ಹಾಕಿ ಮಾಡಿಕೊಂಡ ಒಲೆ, ಆ ಕಡೆ ಗೋಡೆಗೊರಗಿನಿಂತ ಮುರುಕಲು ಗಾಜಿನ ಬೀರು, ಪಕ್ಕದಲ್ಲಿ ಒಂದು ಹಿತ್ತಾಳೆಯ ದೊಡ್ಡ ತಪ್ಪಲೆ. ಮೂಲೆಯಲ್ಲೊಂದು ಕೈಬಚ್ಚಲು ಕಾಣಿಸಿದವು. ಸಣ್ಣಯ್ಯ ಒಲೆಯ ಬಳಿ ಬಗ್ಗಿ ಕಾಫಿ ಮಾಡುತ್ತಿದ್ದ. ಅವನ ಹಿಂಭಾಗದ ತುಂಡು ಪಂಚೆಯ ಗಿಮಿಟ ಕೊಳೆ ವಿಕಾರವಾಗಿ ಕಾಣುತ್ತಿತ್ತು. ಅದನ್ನು ಹೆಚ್ಚಿಸಿ ತೋರಿಸಿದ ಮಬ್ಬು ಲಾಟೀನು ಬೆಳಕಿಗೆ ಕೃತಜ್ಞತೆ ಹಾಕುತ್ತಾ ಅವನು ಕೊಟ್ಟ ಬಿಸಿ ಬಿಸಿ ಕಾಫಿಯ ಗಳಾಸವನ್ನು ದತ್ತ ಕೈಗಿಸಿದುಕೊಂಡ.

ಕಾಫಿ ಚೆನ್ನಾಗಿರಲಿಲ್ಲ. ಆದರೆ ಬಿಸಿಯಾಗಿತ್ತು. ಏನೋ ಅಂತೂ ಬಿಸಿ ಬಿಸಿ ಗುಟಲೊಳಗೆ ಇಳಿದ ಮೇಲೆ ದೇಹಕ್ಕೆ ಸ್ವಲ್ಪ ಸಮಾಧಾನವೆನ್ನಿಸಿ, ಈಗ ನನ್ನ ಕರಣಗಳು ಸಾಕಷ್ಟು ಜಾಗ್ರತವಾಗಿವೆ ಎಂದು ಭಾವಿಸುತ್ತಾ ದತ್ತ ಸಣ್ಣಯ್ಯನೊಡನೆ ಮಾತಿಗೆ ಇಳಿದ.

'ನಿಮ್ಮ ಹೆಸರು ಸಣ್ಣಯ್ಯಾನಾ?'

'ಅಲ್ಲ, ಅದು ನಮ್ಮ ಯಜಮಾನ್ರ ಹೆಸರು. ನಾನು ವೆಂಕ. ವೆಂಕಭಟ್ಟ' ಎಂದು ಹೇಳುವಾಗ ಅವನು ಏಕೋ ನಾಚಿ ತನ್ನ ಪಾಚಿ ಹಲ್ಲುಗಳನ್ನು ಪ್ರದರ್ಶಿಸಿದ. ಅವನ ಶುಚಿತ್ವದ ಬಗೆಗೆ ಒಳಗೆ ಬರುತ್ತಲೇ ಭರವಸೆ ಕಳೆದುಕೊಂಡಿದ್ದ ದತ್ತ ಅದನ್ನು ಅಷ್ಟು ಲಕ್ಷಿಸದೆ,

'ಹಾಗಾದ್ರೆ ಸಣ್ಣಯ್ಯನವರು?' ಎಂದ.

'ನಿಮ್ಗೆ ಅವರನ್ನೇ ಕಾಣಬೇಕಿತ್ತೆ? ಹಿಂಗೆ ಬನ್ನಿ' ಎಂದು ವೆಂಕಭಟ್ಟ ಅವನನ್ನು ಕರೆದುಕೊಂಡು ಹೊರಟ.

ಸೂಟ್ ಕೇಸ್ ಅಲ್ಲೇ ಬಿಡಲೋ ಬೇಡವೋ ಅನುಮಾನಿಸುತ್ತಾ, ಟಾರ್ಚ್ ಮಾತ್ರ ತೆಗೆದುಕೊಂಡು ವೆಂಕಭಟ್ಟನನ್ನು ದತ್ತ ತಡವರಿಸುತ್ತಾ ಹೆಜ್ಜೆ ಹಾಕತೊಡಗಿದ. ಅವನ ಟಾರ್ಚಿನ ಜ್ವಲಂತ ಬೆಳಕಿನಲ್ಲಿ ಗೋಡೆಬದಿ ಪೇರಿಸಿಟ್ಟ ವಸ್ತುಗಳು ನಾಚಿಕೊಂಡು ಬೆತ್ತಲಾಗತೊಡಗಿದವು. ತನ್ನನ್ನು ಸುತ್ತಿಕೊಂಡು ಎಲ್ಲಿಗೆ ಹೋಗುತ್ತಿದ್ದಾನೆ ಈತ ಎಂದು ಅನುಮಾನಿಸುತ್ತಾ, ಪ್ರಾಯಶಃ ಆ ಹುಡುಗಿ ಹುದುಗಿರಬಹುದಾದ ಯಾವುದೋ ಪಾತಾಳಕ್ಕೆ ಕರೆದುಕೊಂಡು ಹೋಗುತ್ತಿರಬಹುದು ಎನ್ನಿಸಿ ಅವಳು ಬಲೆಯಲ್ಲಿ ಸಿಕ್ಕ ರಾಜಕುಮಾರಿ, ತಾನು ಬಿಡಿಸಲು ಬಂದ ರಾಜಕುಮಾರ ಎನ್ನಿಸಿ, ಪರವಾಗಿಲ್ಲ ಕೆಟ್ಟ ಕಾಫಿ ಕೂಡ ಕಲ್ಪನೆಗೆ ಇಷ್ಟು ಚಾಲನೆ ಕೊಡಬಲ್ಲುದೆ? ಎಂದು ಆಶ್ಚರ್ಯಪಟ್ಟ.

ಎಷ್ಟೋ ಕತ್ತಲೆ ಅಂಗಳಗಳನ್ನು ದಾಟಿ ಕೊನೆಗೆ


ಪ್ರಿಯದರ್ಶಿನಿ
ಪ್ರಿಂಟೆಡ್ ಸಿಲ್ಕ್
ಸೀರೆಗಳು ಮತ್ತು
ಉಡುಪಿನ ಬಟ್ಟೆಗಳು
ಪ್ರಿಯದರ್ಶಿನಿ
ಹ್ಯಾಂಡ್ ಲೂಮ್ ಹೌಸ್
ಕರ್ನಾಟಕ ಹ್ಯಾಂಡ್ ಲೂಮ್ ಡೆವಲಪ್ ಮೆಂಟ್
ಕಾರ್ಪೊರೇಷನ್ ಲಿಮಿಟೆಡ್‌ನ ಒಂದು ಅಂಗ

ಒಂದು ಕೋಣೆ ನುಗ್ಗಿದಾಗ ಇದ್ದಕ್ಕಿದ್ದಂತೆಯೇ ಅವಳು ಮುದುಕಿಯಂತೆ ಕಂಡಳು. ಟಾರ್ಚನ್ನು ಎತ್ತರಿಸಿ ಹಿಡಿದಿದ್ದರಿಂದ ಬೆಳಕೆಲ್ಲಾ ಅವಳ ಮೇಲೆ ಬಿದ್ದು ತಾನು ಹಿಂದೆ ಅಂದುಕೊಂಡಂತೆ ಅವಳು ಮುದುಕಿಯಲ್ಲ ಮೂವತ್ತರ ಅಂಚಿನಲ್ಲಿರುವ ಪ್ರೌಢೆ ಅನ್ನಿಸಿತು. ಅಷ್ಟರಲ್ಲಿ ಬೆಳಕು ಒಮ್ಮೆಲೇ ಬಿದ್ದು ಅವಳು ಕಣ್ಣು ಕಿರಿದುಗೊಳಿಸಿ ಇದ್ದಲ್ಲೆ ಮುದುರಿಕೊಳ್ಳುವಾಗ ವೆಂಕಭಟ್ಟ, 'ಮಲಗಿದಾರಾ'? ಎಂದ.

ಆಗ ದತ್ತನ ಗಮನ ಆ ಕೋಣೆಯ ಇತರ ವಸ್ತುಗಳ ಮೇಲೆ ಬಿತ್ತು. ಒಂದು ಪಾರ್ಶ್ವದಲ್ಲಿ ಇದ್ದ ದೊಡ್ಡ ಮಂಚದ ಮೇಲೆ ಕಂಬಳಿ ಹೊದ್ದ ಆಕಾರವೊಂದು ಮಲಗಿತ್ತು. ತಲೆಗೆ ಬಟ್ಟೆ ಸುತ್ತಿದ್ದರಿಂದ ತಲೆ ಆ ಕಡೆ ಇದೆ ಎಂದು ಗೊತ್ತಾಯಿತು. ಆಕೆ ಮಂಚದ ಕಡೆಗೆ ಕಣ್ಣು ಮಾಡಿದಳು.

'ಯಜಮಾನ್ರೆ ನಿಮ್ಮನ್ನು ಹುಡಿಕ್ಕೊಂಡು ಯಾರೋ ಬಂದಿದಾರೆ ನೋಡಿ ಬೆಂಗಳೂರಿನಿಂದ' ಎಂದ ವೆಂಕಭಟ್ಟ.

ಮಂಚದ ಮೇಲೆ ಮಲಗಿದ್ದ ಆಕಾರದಲ್ಲಿ ಚಲನೆ ತೊಡಗಿ, ಕಪ್ಪು ಕಂಬಳಿ ಹಿಂದೆ ಸರಿಯುತ್ತಾ ಬತ್ತಿದ ಮುದುಕನೊಬ್ಬ ಮೆಲ್ಲನೆ ಮೇಲೇಳುವಾಗ ದತ್ತನಿಗೆ ಮೊದಲ ಬಾರಿಗೆ ಎಂಬಂತೆ ಆತನನ್ನು ನಿಜವಾಗಿಯೂ ನಾನು ಹುಡುಕಿಕೊಂಡು ಬಂದೆನೇ ಎಂಬ ಅನುಮಾನ ಶುರುವಾಯಿತು. ಏನು ಹೇಳಬೇಕು ಎಂದು ಒಂದು ನಿಮಿಷದಲ್ಲಿ ಯೋಚಿಸಿ, ಟಾರ್ಚ ಆರಿಸಿ, ಮೂಲೆಯಲ್ಲಿದ್ದ ಸಣ್ಣ ದೀಪದ ಮಬ್ಬು ಬೆಳಕಿಗೆ ಕಣ್ಣು ಹೊಂದಿಸಿಕೊಳ್ಳುತ್ತಾ, 'ನಮಸ್ಕಾರ' ಎಂದು ಮಂಚದ ಪಕ್ಕದ ಕುರ್ಚಿಯ ಕಡೆಗೆ ಕೈ ತೋರಿಸಿ ಮುದುಕ ಕೂಡಲು ಸೂಚಿಸಿದಾಗ ಕೂತ. ಶ್ಲೇಷ್ಮ ಬೆರೆತ ಕೀರಲು ಕಂಠದಲ್ಲಿ ಸಣ್ಣಧ್ವನಿಯ ಏನು ಪ್ರಶ್ನಿಸಿದ.

'ಇಲ್ಲಿನ ಬೆಟ್ಟದ ಗವಿ ನೋಡಲು ಬಂದಿದೀನಿ. ಇವತ್ತು ರಾತ್ರಿ ಇಲ್ಲೇ ಇರಲು ಅವಕಾಶ ಮಾಡಿಕೊಡಬೇಕು' ಎಂದ ದತ್ತ.

ಅವನ ಮಾತು ಸಣ್ಣಧ್ವನಿಯಲ್ಲಿ ಏನೋ ಭಯ ಹುಟ್ಟಿಸಿತು. ಮಂಚದ ಪಕ್ಕದಲ್ಲಿ ನಿಂತಿದ್ದ ಆಕೆಯ ಬಿಳಿ ಮುಖ ಇನ್ನಷ್ಟು ಬಿಳಿಚಿಕೊಂಡಿತು. ವೆಂಕಭಟ್ಟ ಕೂಡ ಏನೋ ಊಹಿಸಿಕೊಂಡದ್ದು ಸತ್ಯವಾಯಿತು ಎಂಬ ಹಾಗೆ ಅರ್ಧ ಸಮಾಧಾನ ಅರ್ಧ ಭಯದಲ್ಲಿ ನಿಂತ.

ಮತ್ತೆ ಮುದುಕ ಕೀರಲು ಕಂಠದಲ್ಲಿ ಮಾತಾಡಿದ. ಆ ಮಾತು ನನ್ನ ಹೊರತು ಉಳಿದ ಇಬ್ಬರಿಗೆ ಅರ್ಥವಾಗದಂತೆ ದತ್ತನಿಗೆ ಅನ್ನಿಸಿತು. ಆಕೆ ಮೆಲ್ಲನೆ ಅಲ್ಲಿಂದ ಸರಿದು ಹೋದವಳು ಎರಡು ನಿಮಿಷದಲ್ಲಿ ಒಂದು ಸಣ್ಣ ದೀಪ ಹಿಡಿದುಕೊಂಡು ಬಂದಳು. ಅವಳು ಮುಂದೆ. ವೆಂಕಭಟ್ಟ ಹಿಂದೆ, ಅವರಿಬ್ಬರ ಹಿಂದೆ ದತ್ತ–ಹೀಗೆ ಸಾಗಿ ಒಂದು ಕೋಣೆ ತಲುಪಿದರು. ಅಲ್ಲಿ ಒಂದು ಮಂಚದ ಮೇಲೆ ಚಾಪೆ ಹಾಸಿತ್ತು. ಎತ್ತರದಲ್ಲಿ ಒಂದು ಕಿಟಕಿ ಇತ್ತು. ಒಳಗೆ ಹೋಗುತ್ತಿದ್ದಂತೆಯೇ ಜೈಲಿನ ಕೋಣೆಯೊಂದರೊಳಗೆ ಪ್ರವೇಶ ಮಾಡಿದ ಹಾಗೆ ದತ್ತನಿಗೆ ಅನ್ನಿಸತೊಡಗಿತು. ದೀಪವನ್ನು ಗೋಡೆಯ ಗೂಡೊಂದರಲ್ಲಿ ಇಟ್ಟು ಆಕೆ ಎರಡು ಕಂಬಳಿ ತಂದು ಮಂಚದ ಮೇಲೆ ಹಾಸಿದಳು. ವೆಂಕಭಟ್ಟ ಸೂಟ್ ಕೇಸ್ ತಂದಿಟ್ಟ. ಒಂದು ತಂಬಿಗೆಯಲ್ಲಿ ನೀರು, ಲೋಟ ಬಂತು.

ಆ ಕೋಣೆಯನ್ನು ಪ್ರವೇಶಿಸುತ್ತಿದ್ದ ಹಾಗೇ ಅದು ಯಾವುದೋ ಒಂದು ಅವ್ಯಕ್ತ ಅನುಭವವನ್ನು ಹಿಡಿಯಲು ಪ್ರಯತ್ನಿಸುವವನಂತೆ ದತ್ತ ಕೋಣೆಯೊಳಗೆ ಅತ್ತ ಇತ್ತ ಹೆಜ್ಜೆ ಹಾಕಿದ. ತನಗೆ ತೀರಾ ಪರಿಚಿತವಾದದ್ದು ಏನೋ ಇಲ್ಲಿದೆ ಅನ್ನಿಸತೊಡಗಿತು.

'ಸ್ವಲ್ಪ ಸುಧಾರಿಸಿಕೊಳ್ಳಿ. ಅಡಿಗೆ ಆದ ಕೂಡ್ಲೆ ಎಬ್ಬಿಸ್ತೀನಿ' ಎಂದು ವೆಂಕಭಟ್ಟನೂ ಹೋದ. ಹೋಗುತ್ತಾ ಸೀತಾ ಅಂತ ಏನೋ ಆಕೆಗೆ ಹೇಳಿದ್ದರಿಂದ ಅವಳ ಹೆಸರು ಸೀತಾ ಅಂತ ಗೊತ್ತಾಯಿತು.

ದತ್ತ ಮಂಚದಮೇಲೆ ಕಾಲು ಚಾಚಿ ಕೂತು ಒಂದು ಸಿಗರೇಟು ಹಚ್ಚಿದ. ನಾಲ್ಕೈದು ಸಲ ಭುಸ ಭುಸ ಹೊಗೆ ಬಿಟ್ಟು ಕೋಣೆಯಲ್ಲೆಲ್ಲಾ ಹೊಗೆ ತುಂಬಿದ ಮೇಲೆ, ಅದರ ವಾಸನೆ ಹಿಂದಿನ ವಾಸನೆಯೊಡನೆ ಸೇರಿಕೊಂಡು ಏನೋ ಹತ್ತಿರ ಹತ್ತಿರ ಬಂದಂತಾಯಿತು. ಹೌದಲ್ಲಾ ಇದು ಸಿಗಾರ್ ವಾಸನೆ. ಪ್ರೊಫೆಸರರ ಸಿಗಾರ್ ವಾಸನೆ. ಬೇರೆ ಬೇರೆ ವಾಸನೆಗಳೊಡನೆ ಬೆರೆತು ಕರಗಿದರೂ ತನ್ನ ತನವನ್ನು ಬಿಟ್ಟುಕೊಡದೆ ಉಳಿದಿದೆ. ತೆಳುವಾಗಿ ಉಳಿದಿದೆ. ಅಂದರೆ ಸದಾಶಿವಯ್ಯನವರು ಬಂದು ಇಲ್ಲೆ ತಂಗಿದ್ದರೆ?

ಈ ಮನೆಯ ಜನರ ಕಣ್ಣು, ಮಾತಿನ ರೀತಿ,

ನುಸುಳಿಜಪರೆ ನೋಡಿದರೆ ಏನೋ ಅನುಮಾನ ಹುಟ್ಟುವ ಹಾಗೆ ಕಾಣುತ್ತದೆ. ತಾನು ಗವಿ ನೋಡುವುದಕ್ಕಿಂತ ಹೆಚ್ಚಾಗಿ ಪ್ರೊಫೆಸರರನು ಹುಡುಕಿಕೊಂಡು ಬಂದವನು. ಇಲ್ಲಿಗೆ ಬಂದರೆ ಅವರ ಸುಳಿವೇ ಕಾಣುವ ಹಾಗಿಲ್ಲವಲ್ಲ ಎಂದು ದತ್ತ ಯೋಚನೆಗೆ ಒಳಗಾದ.

ಅಷ್ಟರಲ್ಲಿ ಬಾಗಿಲ ಹತ್ತಿರ ಯಾರೋ ಸುಳಿದ ಹಾಗಾಯಿತು. 'ಯಾರು?' ಎಂದ. ಸೀತಾಳ ಮುಖ ಕಾಣಿಸಿತು.

'ಕೈ ಕಾಲು ಮುಖ ತೊಳೆಯೋ ಹಂಗಿದ್ರೆ ಬಚ್ಚಲ ಮನೆ ತೋರಿಸುತ್ತೇನೆ' ಎಂದಳು.

ಅದೇ ಅವಳ ಮೊದಲ ಮಾತು ಅಭೋ ಅನ್ನಿಸುವ ಆ ಮನೆಯಲ್ಲಿ ಅವಳ ಧ್ವನಿ, ಪ್ರತಿಧ್ವನಿಗೊಂಡು ಬಂದಂತನಿಸಿತು. 'ಬಂದೆ' ಎಂದ ದತ್ತ ಒಂದು ಟವೆಲ್ ಹೆಗಲ ಮೇಲೆ ಹಾಕಿಕೊಂಡು ಅವಳನ್ನು ಹಿಂಬಾಲಿಸಿದ. ಅಗಲ ಕಿರಿದಾದ ಉದ್ದನೆಯ ಒಂದು ಪಡಸಾಲೆಯನ್ನು ದಾಟಿ ಒಂದು ದೊಡ್ಡ ಕದವನ್ನು ತೆರೆದು ಮನೆಯ ಹೊರಗಡೆ ಇದ್ದ ಬಚ್ಚಲ ಮನೆಯನ್ನು ತೋರಿಸಿದಳು. ಅಲ್ಲೂ ಒಂದು ಸಣ್ಣ ದೀಪ ಉರಿಯುತ್ತಿತ್ತು. ಮೊದಲೇ ಯೋಚಿಸಿ ಇಟ್ಟಿರಬೇಕು ಅಂದುಕೊಂಡು ಮುಖ ತೊಳೆದುಕೊಂಡು ಬಂದ. ಮನೆಯ ಹಿಂದಿನ ಹಿತ್ತಲಿನ ಕಡೆಯಿಂದ ಜೀರುಂಡೆಗಳ ಸದ್ದು ಒಂದೇ ಸಮನೆ ಬರುತ್ತಿತ್ತು. ಒಳಗೆ ಬರುತ್ತಿದ್ದಂತೆಯೇ ಯಾವ ಕಡೆ ಹೋಗಬೇಕೆಂದು ಗೊತ್ತಾಗಲಿಲ್ಲ. ಪಡಸಾಲೆಯ ಅಂಚಿನಲ್ಲಿ ಒಂದು ಕಡೆ ಬೆಳಕು ಕಂಡು ಅಲ್ಲಿಗೆ ಹೋದರೆ ಸೀತಾ ಅಲ್ಲಿ ಒಲೆ ಊದುತ್ತಾ ಕೂತಿದ್ದಳು. ಪ್ರಜ್ವಲಿಸುವ ಬೆಂಕಿಯ ಜ್ವಾಲೆಯಲ್ಲಿ ಆ ಮುಖ ತುಂಬ ಸುಂದರವಾಗಿ ಕಾಣುತ್ತಿತ್ತು. ಹೆಜ್ಜೆ ಸದ್ದು ಕೇಳಿ ಅವಳು ಈ ಕಡೆ ತಿರುಗಿದ ಕೂಡಲೇ,

'ಓ, ಇದು ಅಡಿಗೆಮನೆಯಾ! ದಾರಿ ತಪ್ಪಿ ಈ ಕಡೆ ಬಂದೆ' ಎಂದ. ಅವಳು ನಕ್ಕಳು, ಆ ನಗು ತುಂಬ ಮುಗ್ಧವಾಗಿ ಕಂಡಿತು.

'ನಿಮ್ಮ ರೂಮು ಆ ಕಡೆ' ಎಂದು ಮತ್ತೆ ನಕ್ಕಳು ಸೀತಾ.

'ಈ ಕತ್ತಲಲ್ಲಿ ಈ ಮನೆಯಲ್ಲಿ ದಾರಿಯೇ ಗೊತ್ತಾಗೋಲ್ಲ' ಎಂದ. ಅವಳು ದಾರಿ ತೋರಿಸಲು ಬಂದಳು ಕೋಣೆ ಸೇರಿದ ಮೇಲೆ ಅವಳನ್ನು ಏನಾದರೂ ಮಾತಾಡಿಸಬೇಕೆಂದು,

'ನಿಮ್ಮ ತಂದೆಗೆ ಹುಷಾರಿಲ್ವಾ?' ಎಂದ.

'ಅವರಿಗೆ ಸ್ವಲ್ಪ ಉಬ್ಬಸ. ಮಳೆಗಾಲದಲ್ಲಿ ಜಾಸ್ತಿ ಆಗುತ್ತೆ' ಅಂದಳು. ಆ ಮಾತು ಅಲ್ಲಿಗೆ ಮುಗಿಯಿತು. ಬೇರೆ ಏನು ಮಾತಾಡಬೇಕು ಎಂದು ಹೊಳೆಯಲಿಲ್ಲ.

'ಬಾಡಿಗೆ ಎಷ್ಟು ಕೊಡಬೇಕೂಂತಾನೇ ಹೇಳಲಿಲ್ಲವಲ್ಲ?' ಅಂದ. ಅವಳು ಸ್ವಲ್ಪ ನಾಚಿಕೊಂಡು ನಗುತ್ತಾ,

'ಬಾಡಿಗೆ ಅಂತ ಏನಿಲ್ಲ. ನಿಮಗೆ ಏನು ತೋಚುತ್ತೋ ಅದನ್ನು ಕೊಡಬಹುದು' ಎಂದಳು.

'ಹಾಗಲ್ಲ, ಸಾಮಾನ್ಯವಾಗಿ ಎಷ್ಟು ಬಾಡಿಗೆ ತಗೊಳ್ತೀರಿ? ಇಲ್ಲಿಗೆ ಯಾರೂ ಬರೋದೇ ಇಲ್ವೆ?'

'ಈ ಕೊಂಪೆಗೆ ಯಾರು ಬರಬೇಕು? ಅದೇನೋ ಗುಡ್ಡದಲ್ಲಿ ಗವಿ ಸಿಕ್ಕ ಮೇಲೆ ಒಂದಷ್ಟು ಜನ ಜೀಪಿನಲ್ಲಿ ಬಂದಿದ್ರು, ಹೋದ್ರು. ಯಾರೂ ಇಲ್ಲಿ ಉಳಿಯೋದಿಲ್ಲ. ಒಬ್ಬರು ಮಾತ್ರ ಮೂರು ದಿನ ಉಳಿದಿದ್ದರು. ಅಷ್ಟೆ?' ಎಂದಳು. ಅಂದಕೂಡೇ ಏನೋ ತಪ್ಪು ಮಾಡಿದವಳಂತೆ ಬೆದರಿದಳು.

'ಯಾವಾಗ ಅದು? ಒಂದು ವಾರದ ಹಿಂದೇನಾ?'

ಅವಳು ಹಿಂದೆ ತಿರುಗಿ ನೋಡಿದಳು. ಆಮೇಲೆ ದನಿ ತಗ್ಗಿಸಿ, 'ರಾತ್ರಿ ಹೇಳ್ತೀನಿ'. ಎಂದು ಹೋಗಿಬಿಟ್ಟಳು.

ದತ್ತನಿಗೆ ಅನುಮಾನಕ್ಕಿಟ್ಟುಕೊಂಡಿತು. ಮೂರೇ ದಿನ ಇದ್ದರು ಎಂದು ಹೇಳುತ್ತಾಳೆ. ಆದರೆ ಪ್ರೊಫೆಸರರು ಕನಿಷ್ಠ ಒಂದು ವಾರವಾದರೂ ಇಲ್ಲಿ ಕಳೆದಿರಬೇಕು. ಹೇಳುವದನ್ನು ಪೂರ್ತಿ ಹೇಳದೆ ಹೋಗಿಬಿಟ್ಟಳಲ್ಲ? ರಾತ್ರಿ ಹೇಳ್ತೀನಿ ಅಂದದ್ದು ಯಾಕೆ? ಮತ್ತಷ್ಟು ಗೊಂದಲಕ್ಕಿಟ್ಟುಕೊಂಡಿತು. ಇನ್ನೊಂದು ಸಿಗರೇಟ್ ಹಚ್ಚಿದ.

ಸ್ವಲ್ಪ ಹೊತ್ತಿನ ಮೇಲೆ ವೆಂಕಭಟ್ಟ ಬಂದು ಊಟಕ್ಕೆ ಎಬ್ಬಿಸಿದ. ತಾನು ಮೊದಲೇ ನೋಡಿದ್ದ ಅಡಿಗೆ ಮನೆಯಲ್ಲಿ ಮಣೆ ಬಾಳೆ ಎಲೆ ಹಾಕಿದ್ದರು. ಅನ್ನ, ಬಿಸಿ ಸಾರು, ಬಾಳೆಕಾಯಿ ಪಲ್ಯ, ಮಜ್ಜಿಗೆ, ಜೊತೆಗೆ ಮಿಡಿಗಾಯಿ ಉಪ್ಪಿನಕಾಯಿ-ಊಟ ರುಚಿಯಾಗಿತ್ತು. ಸೀತಾ ಬಡಿಸುತ್ತಿದ್ದಳು. ಸಣ್ಣಯ್ಯ ಊಟಕ್ಕೆ ಬಂದಿರಲಿಲ್ಲ. ವಿಚಾರಿಸಿದಾಗ ಅವರದ್ದು

೧೫೩ ನೇಯ ಪುಟಕ್ಕೆ

267-8

ನಿಶ್ಶೇಷ

ಎಂ. ಕೆ. ಇಂದಿರಾ

ಸ್ನಾತಕೋತ್ತರ ವಿದ್ಯಾರ್ಥಿಗಳ ಗುಂಪು ಕಾಲೇಜ್ ಆವರಣದ ಹೊಂಗೆ ಮರದ ಕೆಳಗೆ ಸೇರಿತ್ತು. ಯೋಗೀಶ ತನ್ನ ಮದುವೆಯ ಆಹ್ವಾನ ಪತ್ರಿಕೆಯನ್ನು ತನ್ನ ಗೆಳೆಯರಿಗೆಲ್ಲ ಹಂಚಿದ. ಅವರಲ್ಲಿ ನಾಲ್ಕಾರು ಮಂದಿ ವಿದ್ಯಾರ್ಥಿನಿಯರೂ ಇದ್ದರು. ಎಲ್ಲರಿಗೂ ಕೊಡುತ್ತಾ "ಖಂಡಿತಾ ಎಲ್ಲರೂ ಎರಡು ದಿನ ಮದುವೆ ಮನೇಲಿ ಇರಬೇಕು" ಎಂದ.

"ಯಾಕೆ ನಿನ್ನ ಜೊತೇಗೆ ಬಂದರಾಗೋದಿಲ್ವೆ?" ಎಂದು ನಕ್ಕ ಸಹದೇವ.

"ಓ ಸರ್ಟನ್ಲೀ; ನೀವೆಲ್ಲ ನಮ್ಮ ಜೊತೇಗೆ ಬಂದುಬಿಟ್ಟರೆ ತುಂಬಾ ಚೆನ್ನಾಗಿರುತ್ತೆ. ಬೀಗರ ಕಡೆಯೋರು ತುಂಬಾ ಜನ ಇದ್ರೆ ಮದುವೆಗೆ ಕಳೆ. ನೀವೇನು ಊರಿಂದೂರಿಗೆ ಬರಬೇಕಾಗಿಲ್ಲವಲ್ಲ. ಮೂರು ದಿನ ಇರಿ ನಂಜೊತೇಲಿ. ಕಂಪನಿ ಚನ್ನಾಗಿರುತ್ತೆ."


"ನೀನೂ ಸರಿ. ನಾವೆಲ್ಲ ಹಾಗೆ ಹೋದರೆ ಇದೆಲ್ಲ ವಾನರ ಸೈನ್ಯ ಅಂತ ಬೀಗರು ಗಾಬರಿ ಆದಾರು. ಕಡೆಗೆ ಮದುವಣಿಗನಿಗೆ ಆಗೋ ಉಪಚಾರಕ್ಕೇ ಸಂಚಕಾರ ಬಿದ್ದೀತು. ಗಂಭೀರವಾಗಿ ಊಟಕ್ಕೆ ಹೋಗೋಣ ಎಲ್ಲರೂ."

"ಛೆ! ಛೆ! ಅದೆಲ್ಲ ಆಗೋದಿಲ್ಲಪ್ಪ. ನೀವೆಲ್ಲ ವರಪೂಜೆ ದಿನಾನೇ ಬರಬೇಕು. ಅವರೇನು ದರಿದ್ರ. ಇನ್‌ಕಮ್ ಟ್ಯಾಕ್ಸ್ ಆಫೀಸರು. ಭದ್ರ ವಾಗಿದೆ ಗಂಟು. ನಾವೂ ಸರಿಯಾಗೇ [illegible] ಹಾಕಿದೀವಿ. ಇಬ್ರೇ ಹೆಣ್ಣು ಮಕ್ಳು. ಮೊದಲಿನೋಳಿಗೆ ಮದುವೆ ಆಗ್ಹೋಗಿದೆ. ಇವಳೇ ಎರಡನೇ ಮಗಳು. [illegible]."

"ನೀನೇನು ಬರಿ ದುಡ್ಡಿಗೋಸ್ಕರ ಮದುವೆ ಆಗೋ ಹಾಗೆ ಕಾಣ್ತಾ ಇದೀಯಲ್ಲ. ಇಷ್ಟು ದಿನಾ ಆದರೂ ನಿನ್ನ ಹುಡುಗಿ ಫೋಟೋನ ಕೂಡ ತೋರ್ಸಿಲ್ಲ ನಮಗೆ–" –ವರದರಾಜನ ಆಕ್ಷೇಪಣೆ.

"ಸಧ್ಯ ನಾನೇ ಸರಿಯಾಗಿ ನೋಡಿಲ್ಲ ಹುಡುಗೀನ. ಇನ್ನು ನಿಮಗೆಲ್ಲ ಎಲ್ಲಿ ತೋರಸ್ಲೀ?"

"ಎಂಥ ಗಂಡೋ ನೀನು. ಒಂದು ಫೋಟೋ ಇಲ್ಲ; ಒಂದು ರೋಮಾನ್ಸ್ ಇಲ್ಲ. ಹತ್ತೊಂಬತ್ತನೇ ಶತಮಾನದ ಮದುವೆ ಮಾಡ್ಕೊಳ್ತಾ ಇದೀಯ. ಆ ಮೇಲೆ ಏನಾದರೂ ವ್ಯತ್ಯಾಸ ಆದರೆ ನನ್ನ



[illegible]ದ್ದಾನಾ?"

"[illegible] ಆಗೋ ಹಾಗಿಲ್ಲ. ಎಲ್ಲಾ ಧನ್ಯ ವಾದಕ್ಕೊಳಗಾದ ಹುಡುಗರೇ."

"ಅದಿರ್ಲಿ. [illegible] ಯಾರದ್ದು?"

"[illegible] ಯಾರದ್ದಾದರೂ ಇರ ಬಹುದು."

ಹುಡುಗಿಯರೆಲ್ಲ ನಕ್ಕರು. ವಾಸವಿಯಂದಳು: "ನನಗೆ ಗೊತ್ತಿದ್ದ ಹಾಗೆ ಈಗ ಯಾರೂ ಇಲ್ಲಾಂತ ಕಾಣುತ್ತೆ. ಯಾರಾದ್ರೂ ಇದ್ರೆ [illegible]. ನೀನೇ ಭಾಮಿನಿ ?"

ಭಾಮಿನಿಯ ಭಾವಪೂರ್ಣ ಕಣ್ಣುಗಳು ಅಂಬ ರದ ಕಡೆ ತೇಲಿದವು: "ನಂದು! ಹೀಗೇಂತ ಹೇಳೋಕೆ ಆಗೋಲ್ಲ. ನಾನು ಮದುವೆ ಆಗೋ ಹುಡುಗನಲ್ಲಿ ಏನಾದರೂ ಒಂದು ಸ್ಪೆಶಾಲಿಟಿ ಇದ್ದರೆ ಮಾತ್ರ ನಾನು ಮದುವೆ ಆಗೋದು."

ಎಲ್ಲರ ದೃಷ್ಟಿ ಭಾಮಿನಿಯ ಕಡೆ ತಿರುಗಿತು.

"ಸ್ಪೆಶಾಲಿಟಿ ಅಂದರೆ ಏನು?"

ಉತ್ತರಿಸಿದಳು ವಾಸವಿ:

"...ನಟ. ಚಿತ್ರಕಾರ. ಕವಿ. ಸಾಹಿತಿ. ಗಾಯಕ. ಡಾಕ್ಟರ್, ಇಂಜಿನಿಯರ್ [illegible] ಇರುವುದು ಅಲ್ಲವೇನೆ?"

ಭಾಮಿನಿ ಅಸ್ಪಷ್ಟವಾಗಿ ತಲೆಯಾಡಿಸಿದಳು.

"ಅವೆಲ್ಲ ಮಾಮೂಲು. ಅಂಥವರು ಊರ ತುಂಬ ಇದ್ದಾರೆ. ಅದರಲ್ಲಿ ವಿಶೇಷತೆ ಏನು?"

ವಾಸವಿ ಅವಳ ಕಡೆಗೆ ತಿರುಗಿ ಕೇಳಿದಳು. ಸಾಮಾನ್ಯವಾಗಿ ಆಕಾಶವನ್ನೋ, ನೆಲವನ್ನೋ ನೋಡುತ್ತಾ ಮಾತಾಡುವ [illegible] ತಟ್ಟನೆ ಭಾಮಿನಿಯು ಕಡೆ ತಿರುಗಿ ನೋಡಿದ. ತಿಳಿಗೊಳದಂಥ ಮುಖ ಅವಳದು. ಒಂದು ಥರ ಸುಖವಾದ ವ್ಯಕ್ತಿತ್ವ. ಆಡಂಬರ. ಆಟಾ ಟೋಪ. ಅಲಂಕಾರ. ಯಾವುದೂ ಇಲ್ಲದೆ ಎಳೆ ಬಿಸಿಲಿನಂತೆ. ತಂಗಾಳಿಯಂತೆ ಮಲ್ಲಿಗೆಯ ಕಂಪಿ ನಂತೆ ಎಲ್ಲಾ ಮೃದು. ಎಲ್ಲಾ ಹಿತ.

"ಇದು ಯಾವುದೂ ಇಲ್ಲದಿದ್ದರೆ ಇನ್ನೆಂಥಾ ಸ್ಪೆಶಾಲಿಟೀನೇ ನಿಂದೂ? ಓ! ಫಿಲಂ ಸ್ಟಾರ್ನ ಆಗಬೇಕೇನೋ?"

ಭಾಮಿನಿಯು ಬಾಯಿಂದ ಏನು ಬರುತ್ತದೆಂದು ಕೇಳಲು ಗುಂಪಿನವರೆಲ್ಲ ಗಪ್‌ಚುಪ್ಪಾಗಿ ಕುಳಿತು ಅವಳ ಕಡೆಯೇ ನೋಡಿದರು.

ಹೂವರಳಿದಂತೆ ನಕ್ಕಳು ಭಾಮಿನಿ.

"ಅದೂ ಈಗ ತೀರಾ ಕಾಮನ್!"

"ಅದೇನು ನಿನ್ನ ಸ್ಪೆಶಾಲಿಟಿ ಸರಿಯಾಗಿ ಹೇಳಬಾರದೇನೆ ?"

"ಸಧ್ಯಕ್ಕೆ ಈಗ ಅದು ಸಸ್‌ಪೆನ್ಸ್‌ನಲ್ಲೇ ಇರಲಿ. ಸಮಯ ಬಂದಾಗ ತಾನೇ ತಿಳಿಯುತ್ತೆ."

ವಾಸವಿ ಮುಖ ಊದಿಸಿದಳು.

"ನೀನು ಸೈಕಾಲಜಿ ತಗೊಂಡು ಭಾಮಿನಿ ಹೋಗಿ ಭ್ರಾಮಿನಿ ಆಗಿದ್ದಿ. ಹೇಳದಿದ್ದರೆ ಬಿಡು ತಾಯಿ. ನಂದೇನೂ ಒತ್ತಾಯವಿಲ್ಲ."

ಭಾಮಿನಿ ಮೃದುವಾಗಿ ನಕ್ಕಳಷ್ಟೆ.

ಎಲ್ಲರಿಂದ ದೂರ ಕುಳಿತ ಜಿತೇಂದ್ರನನ್ನು ಕೇಳಿದ ಯೋಗಿಶ:

"ವಾಟ್ ಫಿಲಾಸಫಿ ? ತಮ್ಮದು ಯಾವಾಗ ?"

ತನ್ನ ಸೊಗಸಾದ ಹಲ್ಲುಗಳನ್ನು ಬಿಟ್ಟು ನಕ್ಕು ಬಿಟ್ಟ ಜಿತೇಂದ್ರ:

"ನನ್ನ ಲೈಫ್‌ನಲ್ಲಿ ಆ ಛಾನ್ಸೇ ಇಲ್ಲ."

"ಕಾರಣ ಇಲ್ದೆ ಈ ಥರ ಮಾತಾಡೋರು ಭಾಳ ಜನ. ಯಾವಾಗಿಂದ ಈ ಅರ್ಜುನ ಸಂನ್ಯಾಸ?"

"ನಾನು ಹುಟ್ಟಿದಾರಭ್ಯ."

"ಮತ್ತೆ ಕಾವಿ ಬಟ್ಟೆ ಯಾಕೆ ಹಾಕ್ಕೊಂಡಿಲ್ಲ? ಈ ಕಾಲೇಜು ಮಣ್ಣು ಮಸಿ ಎಲ್ಲ ಯಾತಕ್ಕೆ ಸಂನ್ಯಾಸಿಗಳಿಗೆ?"

"ಕಾವಿ ಬಟ್ಟೆ ಹಾಕ್ಕೊಂಡೋರೆಲ್ಲ ಸಂನ್ಯಾಸಿಗಳೇ? ಸೂಟು ಹಾಕ್ಕೊಂಡೋರೆಲ್ಲ ಸಂಸಾರಿಗಳೇ?" ಹಗುರವಾಗಿ ಕೇಳಿದ ಜಿತೇಂದ್ರ.

ಹರಿ ಮಧ್ಯೆ ಬಾಯಿ ಹಾಕಿದ: "ಜಿತೇಂದ್ರ, ಭಾಮಿನಿ, ಏನಿದು ನಿಮ್ಮಿಬ್ರದ್ದೂ ಒಂಥರ ವಿಚಿತ್ರ?"

ಭಾಮಿನಿ ನಕ್ಕಳು.

"ನಮ್ಮಿಬ್ರದ್ದೂ ಒಂಥರ ಅಲ್ಲ. ಅವರದೇ ಬೇರೆ, ನಂದೇ ಬೇರೆ."

ಪ್ರೊಫೆಸರುಗಳೂ, ಲೆಕ್ಚರರುಗಳೂ ಕಾಲೇಜಿನಿಂದ ಹೊರಬಂದದ್ದು ನೋಡಿ ಯೋಗೀಶ ಅವರಿಗೆಲ್ಲ ಇನ್ವಿಟೇಷನ್ ಹಂಚಲು ಎದ್ದು ಹೊರಟ. ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಚದುರಿಹೋದರು.

ಯೋಗಿಶನ ಮದುವೆಯಲ್ಲಿ ಎಲ್ಲರೂ ಸೇರಿದ್ದರು. ವಧು ನೋಡಲು ಸುಮಾರಾಗಿದ್ದರೂ ವಧುವಿನ ತಂದೆ ತುಂಬಾ ಶ್ರೀಮಂತರು, ಇವನಿಗೆ ಭದ್ರವಾಗಿ ಕೊಟ್ಟಿದ್ದಾರೆ ಎಂಬುದು ತಿಳಿಯಿತು. ಭಾರೀ ಆಡಂಬರದ ಮದುವೆ.

ಮದುವೆ ಕಳೆದು ಹದಿನೈದು ದಿನಗಳಾಗಿತ್ತು. ಒಂದು ದಿನ ಲೈಬ್ರರಿಯಲ್ಲಿ ಭಾಮಿನಿ ಯಾವುದೋ ಪುಸ್ತಕ ಹುಡುಕುತ್ತಿದ್ದಳು. ಸ್ವಭಾವತಃ ಏಕಾಂತಪ್ರಿಯನಾದ ಜಿತೇಂದ್ರನೂ ಯಾವುದೋ ಪುಸ್ತಕಕ್ಕಾಗಿಯೇ ಅಲ್ಲಿಗೆ ಬಂದ. ವಿದ್ಯಾರ್ಥಿಗಳು ಅಲ್ಲಲ್ಲಿ ನಿಂತು ಪುಸ್ತಕ ಹುಡುಕುತ್ತಿದ್ದರು.

"ನಮಸ್ಕಾರ" ಎಂದ ಮೆಲ್ಲಗೆ ಜಿತೇಂದ್ರ. ಅವಳು ತಿರುಗಿ ನೋಡಿ ನಕ್ಕು "ನಮಸ್ಕಾರ" ಎಂದಳು.

"ಒನ್ ಮಿನಿಟ್ ಪ್ಲೀಜ್" ಎಂದ ಬಹು ಮೆಲ್ಲಗೆ.

"ಏನು?" ಎಂದು ಕುತೂಹಲದಿಂದ ಕಣ್ಣರಳಿಸಿದಳು.

"ನಿಮ್ಮ ಹತ್ರ ಸ್ವಲ್ಪ ಮಾತಾಡಬೇಕಾಗಿತ್ತು."

ಕಣ್ಣು ತೇಲಿಸಿದಳು:

"ತುಂಬಾನಾ, ಸ್ವಲ್ಪಾನಾ?"

"ಹೇಗೋ ಹೇಳಲಾರೆ."

ಭಾಮಿನಿ ತನ್ನ ವ್ಯಾನಿಟಿಯಿಂದ ತನ್ನ ಮನೆಯ ವಿಳಾಸ ತೆಗೆದುಕೊಟ್ಟು, "ನಾನು ಈಗ ಮನೆಗೆ ಹೋಗ್ತೀನಿ. ಸ್ವಲ್ಪ ಹೊತ್ತು ಬಿಟ್ಟು ನೀವೂ ಬನ್ನಿ ರಿಕ್ಷಾದಲ್ಲಿ. ಅರಾಮವಾಗಿ ಮಾತಾಡಬಹುದು," ಎಂದಳು.

"ನಿಮ್ಮನೆಗೆ! ನಾನು!"

"ಹೆದರಿಕೆ ಏನಿಲ್ಲ, ಬನ್ನಿ. ಆ ಮೇಲೆ ನಿಮಗೇ ತಿಳಿಯುತ್ತೆ ನಮ್ಮನೆ ಎಂಥಾದ್ದು ಅಂತ."

"ನಾನು ನಿಮ್ಮನೆಗೆ ಬಂದ್ರೆ ನಿಮ್ಮ ತಾಯಿ–ತಂದೆ ಏನೂ ಅನ್ನೋದಿಲ್ವೇ ?"

"ನನಗೆ ತಾಯಿ ಇಲ್ಲ. ತಂದೆಯವರು ಒಳ್ಳೆ ವಿದ್ವಾಂಸರು. ಆದರೆ ಈಗ ಅವರಿಗೆ ಸರಿಯಾಗಿ ಕಣ್ಣು ಕಾಣಿಸೋದಿಲ್ಲ. ಹಾಗಂತ ನಾವು ಅವರ ಕಣ್ಣು ತಪ್ಪಿ ಯಾವುದೇ ಕೆಲ್ಸ ಮಾಡೋದಿಲ್ಲ. ಅದು ಬಿಟ್ರೆ [illegible] ಇದಾರೆ. ನಮ್ಮನೇಗೆ ಸದಾ ಅತಿಥಿಗಳು ಇರ್ತಾರೆ. ನೀವು ಬಂದ್ರೆ ತಪ್ಪೇನಿಲ್ಲ. ಧೈರ್ಯವಾಗಿ ಬನ್ನಿ."

"ನಾನು ಬರಲೇಬೇಕಾದ ಅವಶ್ಯಕತೆ ಏನಿಲ್ಲ. ಆದರೆ ನನ್ನ ಒಂದು ಸಮಸ್ಯೆನಾ ನಿಮ್ಮ ಮುಂದಿಡೋಣಾ ಅಂತ ಅಷ್ಟೆ."

ಬೆಳದಿಂಗಳಿನಂತೆ ನಕ್ಕಳು ಭಾಮಿನಿ.

"ಮೊದಲು ಮನೆಗೆ ಬನ್ನೀಪ್ಪಾ ನೀವು. ಅಲ್ಲಿ ನಿರಾಳವಾಗಿ ಮಾತಾಡೋಣಂತೆ."

ಮತ್ತವನು ಮಾತಾಡಲಿಲ್ಲ. ಒಂದು ಬಾರಿ ಅವಳ ಮುಖ ನೋಡಿ ಅವಳ ಪಿಠಾಸ ಜೀಬಿಗೆ ಸೇರಿಸಿದ.

ಇನ್ನರ್ಧ ಗಂಟೆಯಲ್ಲಿ ಇಬ್ಬರೂ ಭಾಮಿನಿಯ ಮನೆ ಸೇರಿದರು. ಭಾಮಿನಿ ಮನೆಗೆ ಹೋಗಿ ಕಾಲು ಗಂಟೆಯಲ್ಲೇ ಅಂಜುತ್ತ ಅಳುಕುತ್ತಾ ಅವಳ ಮನೆ ಹತ್ತಿರ ಹೋದಾಗ ಬಾಗಿಲಲ್ಲೇ ನಿಂತು ನಗುತ್ತ ಜಿತೇಂದ್ರನನ್ನು ಸ್ವಾಗತಿಸಿದಳು.

ಮುಖ್ಯ ಜಿತೇಂದ್ರನಿಗೆ ಯಾರ ಮನೆಗೂ ಹೋಗಿ ಅಭ್ಯಾಸವಿಲ್ಲ. ಹಾಸ್ಟೆಲ್ಲಾಯಿತು, ಅವ ನಾಯಿತು. ಅವನ ಅನ್ಯಮನಸ್ಕತೆಯನ್ನು ಕಂಡು ಕೆಲವರು ಅವನು ಭಾವಜೀವಿ, ಕವಿ ಎಂದೆಲ್ಲಾ ಹಾಸ್ಯಮಾಡುತ್ತಿದ್ದುದುಂಟು. ನಿಜವಾಗಿ ಅವ ನೇನೂ ಅಲ್ಲ.

"ಬನ್ನಿ" ಎಂದು ಒಳಗೆ ಕರೆದು ವಿಸ್ತಾರವಾದ ವರಾಂಡಾದ ಸೋಫಾ ತೋರಿಸಿದಳು ಭಾಮಿನಿ. ಇವನು ಕುಳಿತೊಡನೆ ಭಾಮಿನಿ ಒಳಗೆ ಹೋದಳು. ಜಿತೇಂದ್ರ ಸುತ್ತಲೂ ಕಣ್ಣಾಡಿಸಿದ. ಭಾಮಿನಿಯ ಅಭಿರುಚಿ ತಿಳಿಯಿತು. ಕೆಲಸಕ್ಕೆ ಬಾರದ ಪದಾರ್ಥ ಒಂದೂ ಅವನ ಕಣ್ಣಿಗೆ ಬೀಳಲಿಲ್ಲ. ದೊಡ್ಡ ಮನೆ ನಿಜ. ಮನೆಯ ಮುಂದೆ ಸುಂದರ ಹೂದೋಟ. ಉಪಯುಕ್ತ ಮನೆ.

ಭಾಮಿನಿ ಬರುವಾಗ ಕೈಯಲ್ಲಿ ತಿಂಡಿಗಳ ತಟ್ಟೆ ಹಿಡಿದೇ ಬಂದಳು. ಬೋಚಾಳಿಯ ಮಾತಾಡಲು ಇವನಿಗೂ ಬರದು. ನಿಜವನ್ನೇ ಹೇಳಿದ:

"ಈಗ ತಾನೇ ತಿಂಡಿ ಮುಗಿಸಿಕೊಂಡು ಬಂದೆ."

ಅವಳು ಸಹಜವಾಗಿ ನಕ್ಕಳು.

"ನಿಮಗಾಗಿರಬಹುದು. ನನಗಾಗಿಲ್ಲ. ನಮ್ಮಲ್ಲಿ ಬೆಳಗ್ಗೆ ಹತ್ತು ಗಂಟೆಗೆ ಊಟ. ಈಗ ತಿಂಡಿ. ನಾನು ಬಂದು ಕಾಲು ಗಂಟೆ ಆಯ್ತು ಅಷ್ಟೆ. ಒಟ್ಟಿಗೇ ತಿನ್ನೋಣವೆಂದು ಕೂತಿದ್ದೆ. ದಿನದ ತಿಂಡಿ ಇದು. ನೆನ್ನೆ ಕೋಡುಬಳೆ ತಿಂತೀರಲ್ಲ?"

ಮುಂದಿನ ಟೀಪಾಯ್ ಮೇಲಿಟ್ಟಳು ತಟ್ಟೆಯನ್ನ. ಬಟಾಣಿ ಭಾತು, ಕೋಡುಬಳೆ, ಬಾಳೆ ಹಣ್ಣು, ಆ ತಿಂಡಿ ಅವನಿಗೆ ಜಾಸ್ತಿ ಎನಿಸಲಿಲ್ಲ. ಬೇಡವೆನಿಸಲೂ ಇಲ್ಲ. ಕಾರಣ ಭಾಮಿನಿಯಷ್ಟು ಮೈತ್ರಿಭಾವದಿಂದ ಇದುವರೆಗೆ ಅವನಿಗೆ ಯಾರೂ ತಿಂಡಿ ಕೊಟ್ಟವರಿಲ್ಲ. 'ನನ್ನ ತಾಯಿ ಕೂಡಾ ನನಗೆ ಇಷ್ಟು ಹಿತವಾಗಿ ಒಂದು ದಿನವೂ ತಿಂಡಿ-ಊಟ ಕೊಟ್ಟಿಲ್ಲ'-ಎಂದುಕೊಂಡ ಮನಸ್ಸಲ್ಲೆ.

"ತಗೊಳ್ಳಿ"- ಎಂದು ಹೇಳುತ್ತಾ ಅವನಿಗಿಂತ ಮೊದಲು ತಾನೇ ತಿಂಡಿಗೆ ಕೈ ಹಚ್ಚಿದಳು ಭಾಮಿನಿ. ಅವಳಿಗೆ ಹಸಿವಾಗಿತ್ತು. ಇವನಿಗೆ ತಿಂಡಿ ರುಚಿಯಾಗಿ ಕಂಡಿತು. ಸದ್ದಿಲ್ಲದೆ ತಿಂಡಿ-ಕಾಫಿ ಮುಗಿಯಿತು.

"ನಿಮ್ಮ ತಂದೆಯವರು?" ಎಂದ ಜಿತೇಂದ್ರ.

"ಅವರಿಗೆ ಸ್ವಲ್ಪ ಅನಾರೋಗ್ಯ. ಹೊರಗೆಲ್ಲೂ ತಿರುಗಾಡೋದಿಲ್ಲ. ಮೊದಲು ನಮ್ಮದು ಇಂಡಸ್ಟ್ರಿ ಇತ್ತು. ಈಗ ಮಾರಿಬಿಟ್ಟರು. ಮುಖ್ಯವಾಗಿ ಅವರಿಗೆ ವಿಶ್ರಾಂತಿ ಅವಶ್ಯ."

'ಈ ಶ್ರೀಮಂತಿನಿಯ ಮನೆಗೆ ಬಂದೇನೋ ಆಯ್ತು. ಆದರೆ ನನ್ನ ಹೊಲಸು ಕಥೆ ಈಕೆಯ ಮುಂದೆ ಹೇಳುವುದರಿಂದ ಏನು ಪ್ರಯೋಜನ?'

ಜಿತೇಂದ್ರ ಗಂಟಲಿನೊಳಗೇ ತೇಗಿ ಸುಮ್ಮನೆ ಕುಳಿತ.

"ಏನೋ ಮಾತಾಡಬೇಕೆಂದ್ರಿ. ಆಡಬಹುದು."

ಅಪರಾಧಿಯಂತೆ ಅವಳ ಮುಖ ನೋಡಿ ಬೆರಳು ಹೊಸಕಿ ಮೆಲ್ಲಗೆಂದ:

"ಏನಿಲ್ಲ, ಅವತ್ತು ಮದುವೆ ಬಗ್ಗೆ ಮಾತಾಡಿದಾಗ 'ನಾನು ಮದುವೆಯಾಗುವವನಲ್ಲಿ ಏನಾದರೂ ವಿಶೇಷತೆ ಇರಬೇಕಂದ್ರಿ. ಅದು ಏನೆಂದು ನನಗೆ ಅರ್ಥವಾಗಲಿಲ್ಲ."

ಭಾಮಿನಿ ಕನಿಕರದಿಂದ ನಕ್ಕಳು.

"ನಾನು ಇದುವರೆಗೆ ಯಾರೆದುರಿಗೂ ಹೇಳಿಲ್ಲ. ನಿಮ್ಮೆದುರಿಗೆ ಹೇಳಿದರೆ ತಪ್ಪಿಲ್ಲ ಅನಿಸುತ್ತೆ. ಹೇಳ್ತೀನಿ. ಆದರೆ ಅದನ್ನ ನೀವು ನ್ಯಾಯವಾಗಿ ಸ್ವೀಕರಿಸಬೇಕು. ಇವೆಲ್ಲ ನಾಟಕದ ಮಾತೆಂದು ಭಾವಿಸಿದರೆ ನಾನು ಹೇಳಿಯೂ ಪ್ರಯೋಜನ ಇಲ್ಲ."

"ನಾನೂ ನನ್ನ ಸಮಸ್ಯೇನ ನಿಮ್ಮ ಮುಂದಿಡೋಕೆ ಬಂದಿದೀನಿ. ನಾನು ಹಾಗೆ ಭಾವಿಸಲು ಸಾಧ್ಯವೇ ಇಲ್ಲ."

"ಸರಿ ನನ್ನ ಮನಸ್ಸು ಇದು. ಈ ಬಾರಿ ಎಂ. ಎ. ಮುಗಿದ ಕೂಡಲೆ ಮದುವೆಯಾಗಬೇಕೂಂತಿದೀನಿ ನಾನು. ವರಗಳಿಗೆ ಬರವಿಲ್ಲ. ಆದರೆ ಈ ಮಾಮೂಲಿ ವರಗಳನ್ನು ಮದುವೆ ಆಗೋಕೆ ನನಗೆ ಇಷ್ಟವಿಲ್ಲ. ನಾನು ಬದುಕಿರುವವರೆಗೂ ನನಗೆ ಬಡತನವಿಲ್ಲ. ನಮ್ಮ ತಂದೆಗೆ ನಾನೊಬ್ಬಳೇ ಮಗಳು. ಪ್ರತಿ ತಿಂಗಳ ಖರ್ಚಿಗಾಗುವಷ್ಟು ಬಡ್ಡಿ ಬರುತ್ತೆ ನನಗೆ. ನಾನು ಕೆಲಸಕ್ಕೆ ಸೇರಬಹುದು; ಬಿಡಬಹುದು. ಅದೂ ನನ್ನ ಇಷ್ಟಕ್ಕೆ ಸೇರಿದೆ. ನನಗೆ ಒಂದು ಬಗೆಯ ಹುಚ್ಚು! ಬದುಕಲು ಕಷ್ಟವಾಗಿರುವಂಥ ಬಡವ ವನಾಗಿರಲಿ, ಅಂಗವಿಕಲನಾಗಿರಲಿ, ಯಾವುದೋ ರೀತಿಯಲ್ಲಿ ಅವನು ಸಮಾಜದ ದೃಷ್ಟಿಯಲ್ಲಿ ಕನಿಷ್ಟ ಅನಿಸಿಕೊಂಡಿರಲಿ, ಅಡ್ಡಿಯಿಲ್ಲ. ಅಂಥವನ ನನ್ನು ಮದುವೆಯಾಗೇಣ ಅಂತ ಆಸೆ."

ಈಗ ಸಂಕೋಚ, ದಾಕ್ಷಿಣ್ಯವನ್ನು ತೊರೆದು ಮೋಹಕವಾಗಿ ನಕ್ಕ ಜಿತೇಂದ್ರ.

"ಯಾಕೆ ನಗ್ತೀರಿ? ನೀವೂ ನನ್ನ ಹುಚ್ಚರ ಪಟ್ಟಕ್ಕೆ ಸೇರಿಸಿಬಿಟ್ರಾ ?"

"ಯಾಕೂ ಇಲ್ಲ. ಅಂತೂ ಈ ಜಗತ್ತಿನಲ್ಲಿ ಇಂಥ ಅಪರೂಪದ ವ್ಯಕ್ತೀನೂ ಇದಾರಲ್ಲ ಅಂತ ನಗು ಬಂತು. ನಿಮ್ಮ ಯೋಜನೆ ಬಹಳ ಪವಿತ್ರವಾದದ್ದು ಮತ್ತು ಪುಣ್ಯಕರವೂ ಹೌದು. ಆದರೆ ಇದನ್ನ ನಿಮ್ಮ ತಂದೆ ಒಪ್ಪಬೇಕಲ್ಲ. ಇರುವ ಒಬ್ಬ ಮಗ ಳಿಗೆ ಒಳ್ಳೆಯ ವರನನ್ನು ನೋಡಿ ಮದುವೆ ಮಾಡಬೇಕು-ಅನ್ನೋ ಆಸೆ ಅವರಿಗಿರೋದಿಲ್ವೆ? ಬಹುಶಃ ನಿಮ್ಮ ಈ ಸಂಕಲ್ಪ ಈಡೇರಲಾರದು."

· ಭಾಮಿನಿ ತಲೆಯಾಡಿಸಿದಳು:

"ಅದು ನಿಜ. ಒಳ್ಳೆಯ ಕೆಲಸಕ್ಕೆ ನೂರು ವಿಘ್ನ."

"ಹಾಗಲ್ಲ. ನಿಜವಾಗಿ ನೀವು ಈ ವಿಷಯ ಬಹಿರಂಗ ಪಡಿಸಿದರೆ ಸಾವಿರ ಜನ ನಟರು ಹುಟ್ಟಿಕೊಂಡಾರು, ನಿಮ್ಮ ಆಸ್ತಿಯ ಆಸೆಗೆ. ಇದನ್ನ ನೀವು ಗುಟ್ಟಾಗಿಟ್ಟಿರೋದೇ ಒಳ್ಳೇದು. ಸುಮ್ಮನೇ ಇದ್ದು ನಿಮಗೆ ಸೂಕ್ತ ಎನಿಸಿದ ವರ ಸಿಕ್ಕಿದಾಗ ತಟ್ಟನೆ ಮದುವೆಯಾಗಿಬಿಡಿ."

ಭಾಮಿನಿ ಗೆಜ್ಜೆಯನಾದದಂತೆ ನಕ್ಕಳು:

"ನೀವು ಇಷ್ಟು ಮಾತಾಡ್ತೀರೀಂತ ನನಗೆ ಗೊತ್ತೇ ಇರಲಿಲ್ಲ. ಇಲ್ಲಿಯವರೆಗೆ ನಾನು ಯಾರ ಹತ್ರಾನೂ ನನ್ನ ಈ ಗುಟ್ಟನ್ನು ಹೇಳಿರಲಿಲ್ಲ. ಇವತ್ತು ನಿಮ್ಮನ್ನ ಕರೆದೆ. ಹೇಳಿಯೂ ಬಿಟ್ಟೆ. ಇನ್ನು ಮುಂದೆ ಯಾರ ಹತ್ರಾನೂ ಹೇಳೋದಿಲ್ಲ. ನಿಮ್ಮನ್ನ ಧೈರ್ಯವಾಗಿ ಕರೆಯೋಕೆ ಒಂದು ಕಾರಣಾನೂ ಇದೆ ಗೊತ್ತಾ?"

"ಏನು ಕಾರಣ?"–ಜಿತೇಂದ್ರ ಕಣ್ಣರಳಿಸಿದ.

"ಇದು ನನ್ನ ತರ್ಕ ಅಷ್ಟೆ! ನೀವು ಅವತ್ತು ನಾನು ಮದುವೆ ಆಗೋ ಛಾನ್ಸೇ ಇಲ್ಲಾಂತಂದ್ರಿ. ನೀವು ವಿದ್ಯಾವಂತರು, ರೂಪವಂತರು, ಆರೋಗ್ಯ ಶಾಲಿಗಳು. ಹೀಗಿರೋವಾಗ ಮದುವೆ ಆಗೋ ಛಾನ್ಸಿಲ್ಲಾಂದ್ರೆ ಯಾರಿಗಾದರೂ ಸಂಶಯ ಬರೋದು ಸಹಜ. ನಾನು ಹೀಗೆ ಊಹಿಸಿದೆ. ನಿಮಗೆ ಮೊದಲೇ ಮದುವೆ ಆಗಿ ಏನಾದರೂ ಕಾರಣದಿಂದ ನಿಮ್ಮ ದಾಂಪತ್ಯ ಒಡೆದಿರಬಹುದು; ಅಥವಾ ನಿಮಗೆ ಏನಾದರೂ ಗುಪ್ತ ರೋಗ ಇರ ಬಹುದು; ಮತ್ತೆ ಯಾವಳಾದರೂ ಹುಡುಗಿ ನಿಮ್ಮನ್ನು ಮದುವೆ ಆಗ್ತೀನಿ ಅಂತ ನಂಬಿಸಿ ಮೋಸ ಮಾಡಿರಬಹುದು. ಪ್ರಣಯಭಂಗ ತುಂಬಾ ನಿರಾಸೆ, ವೈರಾಗ್ಯ ತರುತ್ತೇಂತ ಹೇಳ್ತಾರೆ. ಆದರೆ ಅದರ ಅನುಭವ ನನಗಿಲ್ಲ. ಇವರಲ್ಲಿ ಯಾವು ದಾದರೂ ಕಾರಣದಿಂದ ನಿಮ್ಮ ಮದುವೆ ನಿಂತಿರ ಬಹುದೂಂತ ಅಂದ್ಕೊಂಡೆ."

ಈಗಲೂ ಹಗುರವಾಗಿ ನಕ್ಕ ಜಿತೇಂದ್ರ:

"ನಿಮ್ಮ ಊಹೆ, ತರ್ಕ ಸಮಂಜಸವಾದದ್ದೇ. ಆದರೆ ಅದು ಯಾವದೂ ನನ್ನ ಮದುವೇಗೆ ಅಡ್ಡ ನಿಂತಿಲ್ಲ. ನನ್ನದೇ ಒಂದು ಸ್ವಂತ ಸಮಸ್ಯೆ. ನಿಮ್ಮ ವಿಷಯಾನ ನೀವು ಸ್ಪಷ್ಟವಾಗಿ ನನ್ನೆದುರಿಗೆ ಹೇಳಿದ್ದೀರಿ. ನಾನೂ ಸಂಕೋಚ ಬಿಟ್ಟು ಹೇಳ್ತೀನಿ. ನಾನು ಮದುವೆ ಆಗ್ಲೇಬೇಕೂ ಅನ್ನೋ ಹಟ ಆಗಲೀ, ಆಸೆಯಾಗಲೀ ನನಗಿಲ್ಲ. ಆಗದೇ ಇರೋದಕ್ಕೆ ಕಾರಣ ಹೇಳ್ತಾ ಇದೀನಿ........."

ಅವನ ಮಾತು ನಿಂತದ್ದರಿಂದ ಭಾಮಿನಿ ತಲೆ ಎತ್ತಿ ನೋಡಿದಳು:

"ಕೇಳ್ತಾ ಇದೀನಿ ಮುಂದಕ್ಕೆ ಹೇಳಿ."

"ನಾ......ನು ವೇಶ್ಯಾಪುತ್ರ!"

ಜಿತೇಂದ್ರ ಕರ್ಚೀಫಿನಿಂದ ಕೊರಳಿಗೆ ಗಾಳಿ ಹಾಕಿಕೊಳ್ಳುತ್ತಿದ್ದ. ಅವನ ಅಂತರಂಗದ ಮೂಕ ನೋವು ಮುಖದ ತುಂಬಾ ಹಾಸಿತ್ತು. ಭಾಮಿನಿ ಪಕ್ಕನೆ ನಕ್ಕು ಬಿಟ್ಟಳು:

"ವೇಶ್ಯಾಪುತ್ರ ಆದರೆ ಮದುವೆ ಆಗಬಾರದು ಅಂತ ಶಾಸ್ತ್ರ ಇದೆಯೆ? ಇದು ಯಾವ ಮಹಾ ಸಮಸ್ಯೇಂತ ನೀವು ಇಷ್ಟೊಂದು ತಲೆ ಕೆಡಿಸಿಕೊಂಡಿದ್ದೀರಿ?"

"ಶಾಸ್ತ್ರಾನೂ ಇಲ್ಲಾ. ಕಾನೂನೂ ಇಲ್ಲ. ಹಾಗೇನೆ ನಮಗೆ ಹೆಣ್ಣು ಕೊಡೋರೂ ಯಾರು ಇಲ್ಲ."

"ನಿಮಗೆ ಹೆಣ್ಣು ಕೊಡೋರಿಲ್ವೆ?!"

"ಇಲ್ಲ. ನಮ್ಮ ಹಿರಿಯರ ಕುಲ, ಶೀಲ ತಿಳಿದ ಕುಲೀನ ಮನೆತನದೋರ್ಯಾರೂ ನನಗೆ ಹೆಣ್ಣು ಕೊಡೋಕೆ ಬರೋಲ್ಲ."

"ನಿಮ್ಮ ಜನದಲ್ಲೂ ಕೊಡೋಲ್ವೆ?"

"ನಮ್ಮ ಜನದಲ್ಲಿ ಕೊಡಬಹುದು. ಆದರೆ ನಮ್ಮ ಜನದ ಹೆಣ್ಣನ್ನ ಮದುವೆ ಆಗೋಕೆ ನನಗೆ ಇಷ್ಟವಿಲ್ಲ. ನಮ್ಮ ಜನದಲ್ಲಿ ಗಂಡು ಮಕ್ಕಳು ತೀರಾ ಅಪರೂಪ, ನಾನೊಬ್ಬ ಸತದೃಷ್ಟ ಹುಟ್ಕೊಂಡಿದೀನಿ."

"ಹಾಗ್ಯಾಕಂತೀರಿ, ಹೆತ್ತ ತಾಯಿಗೆ ಎಲ್ಲಾ ಮಕ್ಕಳೂ ಒಂದೇ ಅಲ್ಲವೇ? ಈಗ ನಿಮ್ಮ ತಾಯಿ ನಿಮಗೆ ಓದಿಸ್ತಾ ಇಲ್ವೆ? ಹಾಗೆ ಮಗನಿಗೆ ಮದುವೆ ಮಾಡಬೇಕೂನ್ನೋ ಆಸೇನೂ ಇದ್ದೇ ಇರುತ್ತೆ ಅವರಿಗೆ."

ಮಂಕು ಮುಖದಿಂದ ಹೇಳಿದ ಜಿತೇಂದ್ರ:

"ನಮ್ಮ ಸಂಸಾರದ ಸ್ಥಿತಿ ಹಾಗಿಲ್ಲ. ನನ್ನ ಇಬ್ಬರು ಅಕ್ಕಂದ್ರು, ಇಬ್ಬರು ತಂಗೀರು ಅದೇ ಕಸುಬಿನಲ್ಲಿ ಚೆನ್ನಾಗಿ ಸಂಪಾದನೆ ಮಾಡ್ಕೊಂಡಿದಾರೆ. ನಾನು ಮ್ಯಾಟ್ರಿಕ್ ಮಾಡೋ ಹೊತ್ಗೆ ನಿಜವಾದ ನನ್ನ ಸ್ಥಿತಿ ನನಗೆ ಅರ್ಥ ಆಯ್ತು. ಸ್ಕೂಲು ಹುಡುಗರೆಲ್ಲ 'ಸೂಳೆಮಗ-ಸೂಳೆಮಗ' ಅಂತಾನೆ ರಾಜಾರೋಷವಾಗಿ ನನ್ನ ಕರೀತಾ ಇದ್ರು. ಕಾಲೇಜು ನಮ್ಮೂರಲ್ಲಿದ್ರೂ ಬೇರೆ ಕಡೆಗೆ ಓತ್ತೀನಿ ಅಂತ ನೆಪ ಮಾಡ್ಕೊಂಡು ಊರು ಬಿಟ್ಟೆ. ನಾನು ಓದಿದ ಕಷ್ಟ ನನಗೆ ಗೊತ್ತು. ಅಂತೂ ಇಲ್ಲೀವರೆಗೆ ಬಂದೀದೀನಿ. ಊರ ಕಡೆ ಮುಖ ಹಾಕಿಲ್ಲ. ನಾನು ಎಲ್ಲಿದೀನಿ ಅಂತ ಅವರಿಗೂ ಗೊತ್ತಿಲ್ಲ. ಅವರು ನನ್ನ ಹುಡುಕೋಕೆ ಪ್ರಯತ್ನ ಪಟ್ಟೂ ಇಲ್ಲ. ನನಗೆ ಯಾರೂ ಇಲ್ಲಾಂತಾನೇ ಇಲ್ಲೀವರೆಗೂ ಹೇಳ್ಕೊಂಡು ಬಂದಿದೀನಿ. ಬಹಳ ವರ್ಷದ ದುಗುಡಾನ ನಿಮ್ಮೊಂದೆ ಹೇಳಿ ಮನಸ್ಸು ಹಗುರ ಮಾಡ್ಕೊಂಡಿದೀನಿ. ಇದು ನಿಮ್ಮ ಬಾಯಿಂದ ಹೊರಗೆ ಇರಲಿ."

ಭಾಮಿನಿ ನಕ್ಕಳು:

"ಅದೇನೂ ಯೋಚನೆ ನೀವಿಟ್ಕೋಬೇಡಿ. ಆದರೆ ಗಂಡ್ಸಾಗಿ ನೀವು ಇಷ್ಟು ಸಣ್ಣ ವಿಷಯಾನ ಇಷ್ಟೊಂದು ತಲೇಗೆ ಹಚ್ಕೊಂಡು ಒದ್ದಾಡಬೇಕೆ? ಹೇಗೂ ಇಲ್ಲಿ ಯಾರಿಗೂ ನಿಮ್ಮ ಮನೆ ವಿಷಯ ಗೊತ್ತಿಲ್ಲವಲ್ಲ. ನಿಮಗೆ ಇಷ್ಟವಾದ ಒಂದು ಹುಡುಗೀನ ಮದುವೆ ಆಗಿ ಸುಖವಾಗಿರಿ."

"ಆ ರೀತಿ ಮೋಸ ಮಾಡಿ ಮದುವೆ ಮಾಡ್ಕೊಳ್ಳೋಕೆ ನನಗೆ ಇಷ್ಟಾನೂ ಇಲ್ಲ. ಏನೇ ಆದರೂ ನಿಜ ಸಂಗತಿ ತಿಳಿದರೆ ನನಗೆ ಈಗ ಇರೋ ನೆಮ್ಮದೀನೂ ಹಾಳಾಗುತ್ತೆ."

ಈಗ ಭಾಮಿನಿ ಗಂಭೀರಳಾದಳು:

"ಜಿತೇಂದ್ರ ಅವರೇ, ಈವಾಗಿನ ಸಮಾಜಾನ ನೀವು ಇನ್ನೂ ಸರಿಯಾಗಿ ಕಣ್ಣು ಬಿಟ್ಟು ನೋಡೇ ಇಲ್ಲಾನ್ಸುತ್ತೆ. ನಿಮ್ಮ ಮನಸ್ಸಿಗೆ ಒಂಥರ ಮಬ್ಬು, ಕಣ್ಣಿಗೆ ಒಂಥರ ಪರೆ ಬಂದಿರಭೋದು. ನಿಮ್ಮ ಗುಂಗಿನಲ್ಲೇ ನೀವು ಸುತ್ತತಾ ಇದ್ದೀರಿ. ಈವಾಗಿನ ನಾಟಕ, ಸಿನಿಮಾ, ಕತೆ ಕಾದಂಬರಿಗಳು, ಸುತ್ತ ಮುತ್ತಲಿನ ಪರಿಸರ, ಪಾಶ್ಚಾತ್ಯ ಸಮಾಜದ ಅನುಕರಣೆ ಇವುಗಳು ನಮ್ಮ ಸಮಾಜದ ಮೇಲೆ ಎಂಥ ಕೆಟ್ಟ ಪರಿಣಾಮ ಬೀರಿದೆ ಅನ್ನೋದನ್ನ ನೀವು ಗಮನಿಸಿಯೇ ಇಲ್ಲವೆ? ವೇಶ್ಯಾಕುಲ ಬಿಟ್ಟು ಬಾಕಿಯವರೆಲ್ಲ ತುಂಬಾ ನೀತಿವಂತರು, ಶೀಲವಂತರು, ಎಂದು ನೀವು ಭಾವಿಸಿದ್ದರೆ ಅದು ಖಂಡಿತಾ ನಿಮ್ಮ ಭ್ರಮೆ. ನಿಮ್ಮ ಭ್ರಮೆಯ ಮುಸುಕಿನಿಂದ ಸ್ವಲ್ಪ ಹೊರಗೆ ಬಂದು ನೋಡಿದರೆ ನಿಮ್ಮ ಮನದ ಆತಂಕ ಖಂಡಿತಾ ಕಡಿಮೆಯಾಗುತ್ತೆ. ಅದನ್ನು ಯಾರೇ ಆಗಲಿ ಬಾಯಿ ಬಿಟ್ಟು ಆಡಬಾರದು. ಆಡಿದರೆ ಪ್ರಯೋಜನಾನೂ ಇಲ್ಲ."

ಜಿತೇಂದ್ರ ಕೊರಳು ಬಾಗಿ ಕುಳಿತವನು ಕತ್ತೆತ್ತಿ ಕೇಳಿದ:

"ನಮ್ಮ ಮಾತನ್ನ ಯಾರೂ ಕೇಳಿಸಿಕೊಳ್ತಾ ಇಲ್ವೇ?"

"ಇಲ್ಲ. ಅಡಿಗೆಯಾಕೆ ಒಳಗಿದಾರೆ. ಮಾಲಿ ಹೊರಗಿದಾನೆ. ಅಪ್ಪಾಜಿ ರೂಮಿನಲ್ಲಿದಾರೆ. ಧೈರ್ಯವಾಗಿರಿ."

[illegible]

"ಓ! ಎಷ್ಟು ಹೊತ್ತಾಯ್ತು. ನಾನು ಬಂದು ನಿಮಗೆ ತುಂಬಾ ತೊಂದರೆ ಕೊಟ್ಟೆ. ನಾನಿನ್ನು ಬರಲಾ? ನಿಮ್ಮ ತಂದೆಯವರನ್ನ ಕಾಣಬಹುದೋ [illegible]!"

"ಈಗ ಕಾಣಬೇಕಾದ ಅವಶ್ಯಕತೆ ಇಲ್ಲಾ ಅನ್ನಿಸುತ್ತೆ. ಅಂಥ ಸಂದರ್ಭ ಬಂದಾಗ ನಾನೇ ಭೇಟಿಮಾಡ್ತೀನಿ. ನೀವು ಮಾತ್ರ ನಿಮ್ಮ ವಿಷಯಾನ ಇನ್ನು ಯಾರ ಮುಂದೂ ಹಾಯಬಿಡಬೇಡಿ. ನಿಮ್ಮ ತಾಯಿ ಅಕ್ಕ-ತಂಗಿಯರ ಮೇಲಿನ ಬೇಜಾರವನ್ನು ಮರೆತ್ಬಿಡಿ. ನಮ್ಮ 'ಕುಲೀನ' ಎಂದು ಕರೆಸಿಕೊಳ್ಳೋ ಸಮಾಜ ಅಗೋಚರ ವೇಶ್ಯಾಕುಲ ಆಗಿದೆಯಲ್ಲ. ಇದಕ್ಕೇನಂತೀರಿ? ನಿಮಗೆ ಜನ್ಮ ಕೊಟ್ಟ ತಂದೆ ಒಬ್ಬರೇ; ಜನ್ಮವಿತ್ತ ತಾಯಿ ಒಬ್ಬರೇ. ನಿಮ್ಮ ಮನಸ್ಸಿನ ಆ ಕೊಳೇನ ತೊಳ್ಕೊಳ್ಳಿ ನೋಡೋಣ."



"ನಿಮ್ಮಂತಹ ಜನಪ್ರಿಯ ವ್ಯಕ್ತಿಗಳಿಗೆ 'ಎಂ. ಎ.' ಅಂತ ಕೇವಲ ಎರಡಕ್ಷರದ ಕ್ವಾಲಿಫಿಕೇಷನ್ ಬರೆಸಿಹೋದ ಸಾರ್ ?

ಆಕೆ ಮಾತಿನ ಒಗಟು ಅವನಿಗೆ ಅರ್ಥ ಆಗಲಿಲ್ಲ. ಆದರೂ ಹೇಳಿದ:

"ಮತ್ತೆ ನಾನಿಲ್ಲಿಗೆ ಬರ್ತೀನೋ [illegible] ಗೊತ್ತಿಲ್ಲ. ಆದರೆ ಇವತ್ತು ನನ್ನ ಮನಸ್ಸಿನ ಬೇಗುದಿ ನಿಮ್ಮ ಮುಂದೆ ಹೇಳಿಕೊಂಡಿದ್ದರಿಂದ ನನ್ನ ಮನಸ್ಸು ಎಷ್ಟೋ ಹಗುರಾಯ್ತು. ಬರಲಾ?"

"ಇನ್ನೊಂದೇ ಮಾತು. ಇಲ್ಲೊಬ್ಬಳು ಒಳ್ಳೇ ಮನೆತನದ ಹುಡುಗಿ ಇದಾಳೆ. ಇಲ್ಲೀ ತನಕ ಅಂತೂ ಸರಿಯಾಗಿದಾಳೆ. ಅವಳು ಒಪ್ಪಿದರೆ ಮದುವೆಯಾಗ್ತೀರಾ?"

ಒಂದು ಗಳಿಗೆ ಯೋಚಿಸಿ ಹೇಳಿದ:

"ಏನೋ. ನಾನೀಗ ಏನೂ ಹೇಳಲಾರೆ ನನ್ನ ಮನಸ್ಸು ಸರಿಯಾಗಬೇಕು; ನನ್ನ ಈ ಕೊರ್ಸು ಮುಗೀಬೇಕು. ಮುಖ್ಯವಾಗಿ ನನಗೆ ಹಿಂದಿಲ್ಲ–ಮುಂದಿಲ್ಲ: ಆಸ್ತಿ-ಮನೆ, ದುಡ್ಡು-ಕಾಸು ಏನೂ ಇಲ್ಲ. ನನಗೆ ಕೆಲಸ ಸಿಕ್ಕು, ನಾನು ಒಂದು ನೆಲೆ ನಿಂತ ಮೇಲಲ್ಲವೇ ಮುಂದಿನ ಮಾತು?"

"ಅದೆಲ್ಲಾ ನನಗೆ ಗೊತ್ತಿರುವ ವಿಷಯ ತಾನೇ? ನಿಮ್ಮ ಕೋರ್ಸೆಲ್ಲಾ ಮುಗೀಲಿ. ಅವಸರ [illegible] ಇಲ್ಲ. ಸುಮ್ನೆ ಕೇಳ್ದೆ. ಅವಳೂ ನಾನೂ ಹೈಸ್ಕೂಲ್ ಫ್ರೆಂಡ್ಸ್. ಅವಳ ಚಿಕ್ಕ ವಯಸ್ಸಿನ ಫೋಟೋ ಒಂದಿದೆ ನನ್ನ ಹತ್ರ. ಬೇಕಾದರೆ ತೋರಿಸ್ತೀನಿ ಬನ್ನಿ."

"ಬೇಡ ಬಿಡಿ. ಮುಖ್ಯವಾಗಿ ಅವರು ಒಪ್ಪಿದ ಮೇಲಲ್ವೆ ಮದುವೆ ಮಾತು? ಇನ್ನೂ ಬೇಕಾದಷ್ಟು ಸಮಯ ಇದೆಯಲ್ಲ."

"ಪರವಾಗಿಲ್ಲ ಬನ್ನಿ" ಎನ್ನುತ್ತಾ ಹೊರಟೇ ಬಿಟ್ಟಳವಳು. ಅವಳ ಹಿಂದೆ ಹೊರಟ ಅವನು ಅವಳ ರೂಮಿನ ಬಾಗಿಲ ಹೊರಗೆ ನಿಂತ, ಅವಳು ರೂಮಿನ ದೀಪ ಹಾಕಿ ಅಲ್ಮೇರಾದಿಂದ ಒಂದು ಅಲ್ಬಂ ತೆಗೆದು ಹಾಳೆ ತಿರುವಿದಳು. ಅವಳು ರೂಮಿನದು ಮಂಕು ಬೆಳಕಿನ ಡೂಂ ಲೈಟು. ಟೇಬಲ್ ಲ್ಯಾಂಪ್ ಬೇರೆ ಇತ್ತು. ಅಲ್ಬಂನಲ್ಲಿ ಒಂದು ಫೊಟೋ ತೋರಿಸಿ,

"ಒಳಗೆ ಬನ್ನಿ ಪರವಾಗಿಲ್ಲ. ಈ ಫೋಟೋ ತೆಗೆಸಿದಾಗ ಅವಳಿಗೆ ಹದ್ನಾಲ್ಕು ವರ್ಷವೋ ಏನೋ?"

ಅವನು ಸಂಕೋಚದಿಂದ ಒಳಗೆ ಕಾಲಿಟ್ಟ. ಮೆತ್ತಗಿನ ರತ್ನಗಂಬಳಿ ಕಾಲಿಗೆ ತಂಪು ಕೊಟ್ಟಿತು. ಅವಳು ದೀಪದ ಕೆಳಗೆ ನಿಂತು ಹುಡುಗಿಯ ಫೋಟೊ ಅವನ ಕೈಗೆ ಕೊಟ್ಟಳು. ಎರಡು ಜಡೆಯ, ಲಂಗ

ಫ್ರೋಟೋ ತೊಟ್ಟ ಹದಿನ್ನಾಲ್ಕರ ಸುಂದರ ಮುದ್ದು ... ಜಿತೇಂದ್ರ ಆ ಮಂಕು ಬೆಳಕಿನಲ್ಲಿ ... ಮುಖಕ್ಕೆ ಹತ್ತಿರ ... ಭಾಮಿನಿ ತುಟಿ ಬಿಗಿದು ಕೆನ್ನೆ ಕಣ್ಣುಗಳಲ್ಲಿ ... ನು ತುಂಬಿ ಅವನ ಮುಖ ನೋಡು ... ದೀನನಾಗಿ ಫ್ರೋಟೋ ಅವಳ ... ಹೇಳಿದ:

... ಲೈಫ್‌ನಲ್ಲಿ ನಾನು ತುಂಬಾ ನೊಂದಿದೀನಿ ... ನನ್ನ ಹತ್ರ ಇಂಥಾ ಹುಡುಗಾಟ ಬೇಡ ...

"ನಿಮ್ಮ ಹತ್ರ ನಾನೇಕೆ ಹುಡುಗಾಟ ಆಡಲಿ? ನಿಜಾನೇ ಹೇಳ್ತಾ ಇದೀನಿ. ನಿಮಗೆ ನಾನು ಫೋರ್ಸ್ ... ತಾ ಇಲ್ಲ. ನಿಮ್ಮ ಕೋರ್ಸ್ ಮುಗಿದು ನಿಮಗೆ ... ಆಗಿ ಎಲ್ಲಾ ಆದಮೇಲೆ ತಾನೆ ನಾನು ಹೇಳಿದ್ದು. ಸುಮ್ಮನೆ ಫ್ರೋಟೋ ತೋರಿಸಿದೆ ಅಷ್ಟೆ. ನಿಮಗೆ ... ಬೇಕಾದಷ್ಟು ಸಮಯ ಇದೆ."

... ಇನ್ನೂ ಹುಡುಗಿ ಹಿರಿಯರು ...

"ಆ ವಿಷಯದಲ್ಲಿ ಅವಳ ತಂದೆ ಅವಳಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ."

ಅವನು ಅವಳ ಕಡೆಗೆ ಕಣ್ಣು ತೇಲಿಸಿದ:

"ಭಾಮಿನಿ ಇದು ನಿಜಾನೋ, ಕನಸೋ?"

"ಖಂಡಿತಾ ನಿಜ. ಹುಡುಗಿ ನಿಮಗೆ ಒಪ್ಪಿಗೇನಾ?"

ಅವನು ನಿಂತಂತೆ ಮೈ ತೂಗಿದ. ಎಡಗೈಯಿಂದ ಕಣ್ಣು ಮುಚ್ಚಿಕೊಂಡು:

"ಇಷ್ಟೊಂದು ಸುಖ-ಸಂತೋಷ, ತೃಪ್ತಿ-ಆನಂದ ... ಳ್ಳೋ ಶಕ್ತಿ ನನಗಿಲ್ಲ ಭಾಮಿನಿ" ಎಂದು ... ದರಿದ.

ಪೈಜಾಮ, ಜುಬ್ಬ, ವೇಸ್ಟ್‌ಕೋಟು ತೊಟ್ಟ ... ಯುವಕನನ್ನು ಭಾಮಿನಿ ಭುಜ ಹಿಡಿದು ಕುರ್ಚಿಯಲ್ಲಿ ಕೂರಿಸಿದಳು.

"ಜಿತೇಂದ್ರ ನೀವು ಇಷ್ಟು ಮನೋದೌರ್ಬಲ್ಯ ಅಂಟಿಸಿಕೊಂಡರೆ ಹೇಗೆ? ಸ್ವಲ್ಪ ಶರಬತ್ತು ಮಾಡಿ ಕೊಡಲಾ?" ಅವನು ಕಣ್ತೆರೆ ... ನೋಡಿದ. ಆ ಹದಿನಾಲ್ಕು ವರ್ಷದ ... ಈಗ ಇಪ್ಪತ್ತೆರಡು ವರ್ಷದ ಯುವತಿ. ... ಅವನಿಗೆ ವಿದ್ಯುತ್ ಶಾಕಿನಂತಾಗಿತ್ತು. ... ರಿತು. ಸಣ್ಣಗೆ ನಡುಗುತ್ತಿದ್ದ:

"ಏನೂ ಬೇಡ ಭಾಮಿನಿ. ಹೊಟ್ಟೆ ತುಂಬಾ ... ತವಿದೆ. ಇದು ಸುಳ್ಳಾದರೆ ಮಾತ್ರ ನನ್ನ ಹೃದಯ ಚೂರು ಚೂರಾಗುತ್ತದೆ."

ಭಾಮಿನಿ ಅವನ ಸೊಂಪುಗೂದಲಿಗೆ ಎಡಗೈ ಇಟ್ಟು ಬಲಗೈಯಿಂದ ಅವನ ಎದೆ ಸವರಿದಳು. ನಿಜವಾಗಿ ಅವನ ಎದೆ ಢಡಗುಟ್ಟುತಿತ್ತು.

"ನಾನು ನಿಮ್ಮೆದುರಿಗೆ ನಿಂತಿರುವುದು ಸುಳ್ಳೇ?"

ಅವಳು ನಗುತ್ತಿದ್ದಳು. ಅವಳ ಮುಂದೆ ತಾನು ಹೇಡಿ ಎನಿಸಿತು. ಅವಳ ಸ್ಪರ್ಶಸುಖ ಅವನಿಗೆ ಅಮಲು ತಂದಿದ್ದರೂ ತಟ್ಟನೆ ಎದ್ದು ನಿಂತು:

"ನಿಮ್ಮ ತಂದೆ ರೂಮು ಯಾವುದು?" ಎಂದ.

"ಪಕ್ಕದ್ದು" ಎನ್ನುವಂತೆ ಸನ್ನೆಮಾಡಿದಳು.

"ಈಗ ನನ್ನ ಬಿಟ್ಬುಕೊಡಿ ಭಾಮಿನಿ, ನಾನು ಈ ಸುಖದ ಅಮಲಿನಲ್ಲಿ ಕಾಲೇಜಿಗೆ ಬರಲಾರೆ. ಎರಡು ದಿನ ಬರುವುದಿಲ್ಲ."

"ಹಾಗೇ ಮಾಡಿ"-ಎಂದಳು ಅವನ ಕಿವಿಯ ಹತ್ತಿರ ಬಾಯಿಟ್ಟು ಪಿಸುಗುಟ್ಟಿದಳು:

"ಇನ್ನು ಮೇಲೆ ಏಕವಚನ."

"ಇಲ್ಲ ಭಾಮಿನಿ ಈಗಲೇ ಬೇಡ. ಆದರೂ ನನಗೆ ಭರವಸೆ ಏನು?"

ಅವನ ಬಲಗೈ ಮೇಲೆ ತನ್ನ ಬಲಗೈ ಇಟ್ಟು ಹಿತವಾಗಿ ಅದುಮಿದಳು. ಕ್ಷಣಕಾಲ ಕಣ್ಣು ಮುಚ್ಚಿದಳು. ಅವಳ ಮುಂಗೈ ಮೇಲೆ ಹಸಿರು ಹಚ್ಚೆ ಗಾಯಿತು. ಅವಳು ಕಣ್ತೆರೆಯುವುದರಲ್ಲಿ ಅವನು ಅಲ್ಲಿಂದ ಮಾಯವಾಗಿದ್ದ ಅದೇ ಕುರ್ಚಿಯಲ್ಲಿ ಅವಳು ಕುಳಿತು ಕಣ್ಣು ಮುಚ್ಚಿದಳು. ✡

... ಹೊಸ ಕೆಲಸದಾಕೆಯನ್ನು ನಿಯಮಿಸಿಕೊಳ್ಳುತ್ತಿದ್ದ ಕಮಲಮ್ಮ ಕೇಳಿದರು : "... ಈ ಮೊದಲು ಮೂರು ಕಡೆ ಕೆಲಸ ಮಾಡಿ ಬಿಟ್ಟೆ ಅಂದೆಲ್ಲಾ...ಬಿಟ್ಟದ್ಯಾಕೆ ಅಂತ ಹೇಳ್ಳೇ ಇಲ್ಲ..."

"...ರು. ಹೇಳ್ಳಿಲ್ಲ..." ಉತ್ತರಿಸಿದಳು ಕೆಲಸದಾಕೆ. "ನೀವು ಕೂಡ ಈ ... ಹೋದವರು ನಿಮ್ಮನೇ ಕೆಲಸ ಬಿಟ್ಟದ್ಯಾಕೆ ಅಂತ ಹೇಳ್ಳೇ ಇಲ್ಲ..."

ನಗೆಮಲ್ಲಿಗೆ

"ಸುಮಿ, ನೀನು ಮೊದ್ಲಿಗಿಂತ ಸುಂದರಿಯಾಗ್ತಿದೀಯ...ಹ್ಯಾಗೆ?" ಆತ ಗೆಳತಿಗೆ ಹೇಳಿದ.

"ಡಯಟ್ ಮಾಡ್ತಿದೀನಿ. ದಿನಕ್ಕೆ ಕೇವಲ ಮೂರು ಬ್ರೆಡ್ ಸ್ಲೈಸ್, ಮೂರು ಗ್ಲಾಸು ನೀರು ಮಾತ್ರ ತಗೋಳ್ತೀನಿ. ಅದನ್ನೇ ಅನುಗಾಲವೂ ಮುಂದುವರಿಸಬೇಕೊಂತೀನಿ."

"ಹೌದಾ? ಹಾಗಾದ್ರೆ ನಿನ್ನನ್ನ ಮದುವೆಯಾಗ್ಲಿಕ್ಕೆ ಅಡ್ಡಿ ಇಲ್ಲ."

*

ಆ ಫ್ಯಾಕ್ಟರಿಯ ಮ್ಯಾನೇಜರರು ಒಂದು ಹೊಸ ಯೋಜನೆ ಹಾಕಿಕೊಂಡು ಎಲ್ಲ ವಿಭಾಗಗಳಲ್ಲೂ ಈ ರೀತಿ ಫಲಕಗಳನ್ನು ಬರೆಸಿ ಹಾಕಿದರು: "ನಾಳೆ ಅಂತ ಕಾಲ ಕಳೀಬೇಡಿ. ಇವತ್ತೇ ಮಾಡಿಮುಗಿಸಿ."

ಒಮ್ಮೆ ಮ್ಯಾನೇಜರರ ಮಿತ್ರ ಕೇಳಿದ: "ಈ ರೀತಿ ಬರೆಸಿದ ಮೇಲೆ ನಿಮ್ಮ ಫ್ಯಾಕ್ಟರಿಯ ಕೆಲಸ ಬಲು ಸುಗಮವಾಗಿ ಸಾಗಿರಬೇಕು..."

ಬೆವರೊರೆಸಿಕೊಂಡ ಮ್ಯಾನೇಜರರು "ಏನು ಮಾಡ್ಲಿ? ಆ ರೀತಿ ಬರೆಸಿ ಹಾಕಿದ ಮರುದಿನವೇ ನಮ್ಮ ಕ್ಯಾಶಿಯರ್ ೫೦ ಸಾವಿರ ರೂ.ಗಳೊಂದಿಗೆ ಓಡಿಹೋದ. ಪರ್ಸನೆಲ್ ಆಫೀಸರ್ ಟೈಪಿಸ್ಟ್ ರಜನಿಯನ್ನು ಹಾರಿಸಿಕೊಂಡೊಯ್ದ. ಕಾರ್ಮಿಕರಂತೂ 'ಸಂಬಳ ಹೆಚ್ಚಿಸಿ' ಅಂತ ಸರತಿ ಅನ್ನ ಸತ್ಯಾಗ್ರಹ ಶುರೂ ಮಾಡಿದ್ರು..."

*

ಆತ ಒಬ್ಬ ಪ್ರಸಿದ್ಧ ಸಿನಿಮಾ ನಟ. ಅರವತ್ತಾದರೂ ಕಾಲೇಜು ಹುಡುಗನ ಪಾತ್ರವೇ ಬೇಕೆಂದು ಅವನ ಹಟ. ಎಂಬತ್ತು ಮೀರಿದ ವಯಸ್ಸಿಗೆ ಆತನಿಗೆ ಎಲ್ಲೆಡೆಯೂ ಸತ್ಕಾರಗಳಾದುವು. ಈ ವಯಸ್ಸಿನಲ್ಲೂ ಆತ ಕಲಾಸೇವೆ ಮುಂದುವರಿಸಲೋಸುಗ ರಂಗಭೂಮಿಯನ್ನು ನಂಬಿಕೊಂಡ. [illegible]ತ್ತನೆಯ ವಯಸ್ಸಿನಲ್ಲೂ ಇ[illegible] [illegible]ತನ ಇರುವುದನ್ನು ಕಂಡು ಅ[illegible] ಪಡೆಯಲು ಬಂದ ಪತ್ರಿಕಾ[illegible] ಕೇಳಿದ: "ಅದು ಹೇಗೆ ನೀವು [illegible] ಚಟುವಟಿಕೆಯಿಂದಿದ್ದೀರಿ? [illegible] ಗುಟ್ಟೇನು?"

"ಓಹ್, ಅದು ಬಹಳೇ [illegible] ಮಾತು" ಎಂದನಾ ನಟವರ. [illegible] ಮುಂಜಾನೆ ಆರರೊಳಗೇ ಏಳುತ್ತೇನೆ. [illegible] ಸೇವಕರು ನನಗಾಗಿ ಕಾಫಿ ತರುತ್ತಾ[illegible] ಕುಡಿಯುತ್ತೇನೆ. ಅಷ್ಟರಲ್ಲೇ ಮತ್ತೊ[illegible] ನನಗಾಗಿ ಅಂದಿನ ಪತ್ರಿಕೆ ಹಿಡಿದು ನಿ[illegible]ತ್ತಾನೆ. ನಾನು ನಿಧನವಾರ್ತೆಗಳ[illegible] ವಿಟ್ಟು ನೋಡುತ್ತೇನೆ. ಒಂ[illegible] ಹೆಸರು ಅದರಲಿಲ್ಲದೇ ಹೋ[illegible] ಕೆಲಸಕ್ಕೆ ಉತ್ಸಾಹದಿಂದ [illegible] ಬಿಡುತ್ತೇನೆ..."

*

ನ್ಯಾಯಾಲಯದಲ್ಲಿ ಅಪರಾ[illegible] ವಕೀಲರು ಪ್ರಶ್ನೆ ಹಾಕಿದರು: "ಅ[illegible] ಹೇಳ್ತಿಯಾ, ಈ ಸಹಿ ನಿನ್ನದಲ್ಲ[illegible]

"ಹೌದು. ನನ್ನದಲ್ಲ."

"ಈ ಕೈಬರಹವೂ ನಿನ್ನದಲ್ಲ[illegible]"

"ಅಲ್ಲವೇ ಅಲ್ಲ."

"ನಿನ್ನ ಕೈಬರಹಕ್ಕೂ ಇದ[illegible] ಹೋಲಿಕೆ ಇದೆಯೆ?"

"ಇಲ್ಲ ಅಂದೆನಲ್ಲ."

"ಅದನ್ನ ಹ್ಯಾಗೆ ಹೇಳ್ತಿ?"

"ನನಗೆ ಬರೆಯಲು ಬರೋದೇ ಇಲ್ಲ.."

*

ಅಪ್ಪ: ನೀನು ನನ್ನ ಜೇಬಿನಿಂದ [illegible] ರೇಟು ಕದ್ದು ಸೇದುವಾಗ ನಿನ್ನ [illegible] '[illegible] ತಪ್ಪು' ಅಂತ ಹೇಳ್ಲಿಲ್ಲವೇನೋ [illegible]

ಮಗ: ಹೇಳಿತು. ಆದ್ರೆ ನೀನೇ [illegible] ಲ್ಲಪ್ಪಾ ಒಮ್ಮೆ, 'ಬೇರೆಯವ[illegible] ಕೇಳಿಕೆ ಅವಲಂಬಿಸದೇ ನಿನ್ನ [illegible] ಮಾಡು' ಅಂತ.

*

ರಾಮಶೆಟ್ಟಿಗೆ ಆ ವರ್ಷ ನಿ[illegible]

ಹೆಚ್ಚು ಲಾಭ ಬಂತು. ಆನಂದದಿಂದ ಆತ ತನ್ನ ಕಾರಕೂನನನ್ನು ಕರೆದವನೇ 'ಚೆಕ್ ಬುಕ್ ಕೊಡ್ರೀ' ಅಂದ. ಕೈಗೆ ಬಂದ ಚೆಕ್‌ಬುಕ್ಕಿನ ಒಂದು ಚೆಕ್ ಮೇಲೆ ಕಾರಕೂನನ ಹೆಸರು ಬರೆದು ೫೦೦-೦೦ ರೂ. ಗಳ ಮೊಬಲಗನ್ನೂ ಸೂಚಿಸಿದ. 'ಬರ್‍ರೀ ಬಾಳ ಲಾಭಾಗ್ಯೆತಿ, ತಗೋಳ್ರಿ ಬಕ್ಷೀಸು' ಅಂತ ಕಾರಕೂನನ ಕೈಗೆ ಚೆಕ್ ನೀಡಿದ.

ಕಾರಕೂನ ಅದನ್ನು ತಿರುಗಿಸಿ ನೋಡಿ 'ಸೈನೇ ಮಾಡಿಲ್ಲಲ್ರೀ' ಅಂದ.

'ಮುಂದಿನ ವರ್ಸಾನೂ ಹಿಂಗ ಲಾಭಾದ್ರ ಸೈ ಮಾಡಾನಂತ ಹೋಗ್ರಿ' ಎಂದವನೇ ರಾಮುಶೆಟ್ಟಿ ಸೀತಮ್ಮನ ಮುಖ ನೋಡಲು ಚಕಚಕನೇ ಹೆಜ್ಜೆ ಹಾಕಿದ.

*

ಪ್ರೇಮಿಗಳಿಬ್ಬರೂ ಸಿಹಿಸಿಹಿ ಮಾತುಗಳನ್ನಾಡುತ್ತ ಮೈಮರೆತು ಬಿಟ್ಟಿದ್ದರು. ಅಷ್ಟರಲ್ಲೇ ಸ್ವಲ್ಪ ದೂರದಿಂದ ಗಡಿಯಾರ ಹತ್ತು ಗಂಟೆ ಬಾರಿಸಿತು. ಅದನ್ನು ಕೇಳಿ ಬೆಚ್ಚಿದ ಪ್ರಿಯಕರ ಪ್ರೇಯಸಿಗೆ ಹೇಳಿದ: "ನೋಡಿದೆಯಾ? ನಿನ್ನೊಂದಿಗೆ ಮಾತಾಡುತ್ತ ಕುಳಿತುಬಿಟ್ಟರೆ ಹೊತ್ತು ಹೋದದ್ದೇ ಗೊತ್ತಾಗುತ್ತಿಲ್ಲ. ಏಳು ಗಂಟೆಯಿಂದಲ್ಲವೇ ನಾವು ಮಾತನಾಡಲಾರಂಭಿಸಿದ್ದು? ಹತ್ತೇ ನಿಮಿಷವಾಯಿತು ಅನಿಸಿಬಿಟ್ಟಿದೆ, ಇಷ್ಟೊತ್ತಾದರೂ..."

"ಮೂರ್ಖರ ಹಾಗೆ ಮಾತಾಡ್ಬೇಡಿ. ನೀವು ಬಂದು ಹತ್ತು ನಿಮಿಷಗಳಾದದ್ದು ನಿಜ."

"ನೀನೇ ಮೂರ್ಖಳ ಹಾಗೆ ಮಾತಾಡ್ತಿದ್ದೀ. ಹತ್ತು ಗಂಟೆ ಹೊಡೆದದ್ದು ಕೇಳಿಸಲಿಲ್ವೆ?"

"ಕೇಳಿಸ್ತು" ಎನ್ನುತ್ತ ನಕ್ಕ ಪ್ರೇಯಸಿ, "ಪಕ್ಕದ ರೂಮಿನಲ್ಲಿ ನಮ್ಮಪ್ಪ ಗಡಿಯಾರ ರಿಪೇರಿ ಮಾಡ್ತಿದಾರೆ" ಅಂದಳು.

*

ಮಾಸ್ತರರು 'ಕರುಣೆ' ಯ ಬಗ್ಗೆ ಪಾಠ ಮಾಡಿದ ಮೇಲೆ ಪ್ರಶ್ನೆಗಳನ್ನು ಕೇಳಲಾರಂಭಿಸಿದರು.

"ದೇವದಾಸ, ಒಂದು ಹುಡುಗ ಕತ್ತೇನ ಹೊಡೀತಿದ್ದಾನೆ ಅಂತಿಟ್ಕೊಳ್ಳಿ. ನಾನು ಆತನ್ನ ಬೈದು ಬಿಡಿಸ್ತೀನಿ. ಹೀಗೆ ಮಾಡುವುದರಿಂದ ನನ್ನಲ್ಲಿ ಎಂಥ ಗುಣ ಇದೆ ಅಂತ ಹೇಳಬಹುದು?"

"ಭ್ರಾತೃಪ್ರೇಮ" ಅಂದ ದೇವದಾಸ.

*

ಡಾಕ್ಟರ್: ನೋಡ್ರಿ. ಈ ಥರ್ಮಾಮೀಟರನ ನಿಮ್ಮ ಹೆಂಡ್ತಿ ಬಾಯೊಳಗ ನಾಲಿಗಿ ಕೆಳಗಿಟ್ಟು ಅರ್ಧಾ ಮಿನಿಟನ ತನಾ ಬಾಯಿ ಮುಚ್ಚಲಿಕ್ಕೆ ಹೇಳ್ರಿ.

ಪತಿ: ಡಾಕ್ಟರ್ ಸಾಹೇಬ್ರ, ಹೆಂಗಾರ ಮಾಡಿ ಅರ್ಧಾ ತಾಸು ಬಾಯಿ ಮುಚ್ಚೋ ಅಂಥಾ ಥರ್ಮಾಮೀಟರ್ ಕೊಡ್ರಿ ಆಕೀಗೆ.

*

ಆತ ಜಪಾನಿ ಯುವಕ. ಆತನೊಂದಿಗಿದ್ದವ ಚೀನದ ಹುಡುಗ. ಜಪಾನಿಗೆ ಓದಲು ಬಂದವ. ಇಬ್ಬರಲ್ಲೂ ಸ್ನೇಹ ಬೆಳೆಯಿತು. ಒಮ್ಮೆ ಜಪಾನಿ ಹುಡುಗ ಆತನಿಗೆ ಒಂದು ಭವ್ಯ ಕಟ್ಟಡವನ್ನು ತೋರಿಸಿ, "ಹ್ಯಾಗನಿಸ್ತು?" ಎಂದು ಕೇಳಿದ.

"ಅಷ್ಟು ದೊಡ್ಡದೇನಲ್ಲ. ನಮ್ಮ ದೇಶದಲ್ಲಿ ಇಂಥ ಕಟ್ಟಡಗಳು ಊರಿಗೆ ನೂರು ಇವೆ. ನಿಮಗೆ ನಂಬಿಕೆಯಾಗದಿದ್ರೆ ಬನ್ನಿ ನಮ್ಮ ದೇಶಕ್ಕೆ."

"ಛೆ ಛೇ ಹಾಗೇನಿಲ್ಲ. ನಿಮ್ಮ ಮೇಲೆ ನಂಬಿಕೆ ಇಲ್ವೆ? ಆದ್ರೂ ಇಂಥ ಕಟ್ಟಡ ನಿಮ್ಮಲ್ಲಿ ನೂರಾರು ಇವೆಯೆ? ಅಂತ ಆಶ್ಚರ್ಯವಾಗ್ತಿದೆ."

"ಯಾಕೆ?"

"ಇದು ಹುಚ್ಚರಾಸ್ಪತ್ರೆ."

ಸುಬ್ಬಕ್ಕ ಕೊಟ್ಟ ಬೋನಸ್

ಪಿಪೋವಳಿ ಘೋಳು!

ಟಿ. ಸುನಂದಮ್ಮ

"Old is gold" (ಹಳೆಯದು ಬಂಗಾರ)–ಇದೊಂದು ಮುದ್ದಾದ ಆಂಗ್ಲ ನುಡಿಗಟ್ಟು; ಪ್ರಾಸದ ಸೊಬಗು. ಬಂಗಾರದ ಮೆರಗು. ಸಂಕ್ಷೇಪ ಸಂಕೇತ !

ಶ್ಲೇಷಾರ್ಥವನ್ನಾದರೂ ಮಾಡಿರಿ, ಗೂಢಾರ್ಥವನ್ನಾದರೂ ಹುಡುಕಿರಿ, ಅಕ್ಷರಶಃ ಅರ್ಥೈಸಿರಿ; ಅಂತೂ ಅದೊಂದು ಅನುರೂಪ ಸೂಕ್ತಿ–ಎನ್ನುತ್ತಾರೆ ತಜ್ಞರು, ಅಕ್ಷರಶಃವಂತೂ ಸತ್ಯ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಹಳೆಯ ಬಂಗಾರ ಅಪ್ಪಟವಾದರೆ, ಹೊಸದು, ನಮ್ಮ ಕಪ್ಪಾಡಿಗ ತಂದು [illegible]. [illegible] ಪ್ರಮಾಣದ ಲೆಕ್ಕದಿಂದ ಪ್ರಾರಂಭವಾಗಿ ನೀರಿಗೆ ಹಾಲೆಷ್ಟು ಸೇರಿದೆ ಎಂದು ಕೇಳುವ ಪರಿಸ್ಥಿತಿ! (ಡೈರಿ ಹಾಲಾದರೆ ಹಾಲಿನ ಪುಡಿಗೆಷ್ಟು ಹಾಲು ಬೆರಕೆ ಎಂದು ಪ್ರಶ್ನೆ.)

ಈ ಸೂತ್ರದ ತಿರುಳನ್ನು [illegible] ನಮ್ಮ ಮನೆ. ಅದರ ಪ್ರತಿಯೊಂದು [illegible] ಮರದ ಸಾಮಾನೇ ಜಾಸ್ತಿ. [illegible] ಪೀಠೋಪಕರಣ. ಪ್ರಾಚೀನ [illegible]. ಪುರಾತನ ಕಟ್ಟಡವೇ ಕಲ್ಲುಗುಂಡು ಇತ್ಯಾದಿ, ಇತ್ಯಾದಿ......! ಹೀಗಾಗಿ, ಆಕೆ ಆಯುಷ್ಯ ತೀರಿ ಮುಂದಿನ ಲೋಕಕ್ಕೆ ಮೂರು ವರ್ಷಗಳ ಹಿಂದೆ "ಅಪ್ಪರ್ನ್" ಆಗುವವರೆಗೆ ನಮ್ಮ ಮನೆಯಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ.

ವಿಶಾಲವಾದ ಸಿಟ್ಟಿಂಗ್ ರೂಮ್. ಅದರಲ್ಲಿ ತಾತ ತಮ್ಮ ತೋಟದ ತಾಜಾ ಮರಗಳಿಂದಲೇ ತಯಾರಿಸಿ ತರಿಸಿ ಹಾಕಿದ್ದ ಎರಡು ಉದ್ದನ್ನ ಒರಗು ಬೆಂಚುಗಳು, ಮನೆಗಳಲ್ಲಿ ಸೋಫಾ ಹಾಕುವ ಪದ್ಧತಿ ಬಂದ ಹೊಸದರಲ್ಲಿ ಅಪ್ಪ ಕೊಂಡಿದ್ದ ಸೋಫಾ ಸೆಟ್ಟು, ತಂದೆ ತಂದು ಸೇರಿಸಿದ್ದ ಚಿತ್ರಪಟದ ನಾಲ್ಕು ಕರಿಮರದ ಕುರ್ಚಿಗಳು. ಇಷ್ಟು "ಫರ್ನೀಚರ್" ಇದ್ದಿತೆಂದ ಮೇಲೆ "ಸಿಟ್" ಮಾಡಲು (ಅಂದರೆ ಕೂರಲು) ಧಾರಾಳವಾಗಿ ಆಸನಗಳಿದ್ದುವೆನ್ನುವುದು ವ್ಯಕ್ತವಾಗಿರಬಹುದು. ಆದರೆ ಇತ್ತೀಚೆಗೆ ನಮ್ಮ ಮನೆಗೆ "ವಿಸಿಟರ್ಸ್" ಬರುವುದೇ ಅಪರೂಪವಾಗಿತ್ತು; ಕಾರಣ ಬೆಂಚುಗಳ ಮೇಲೆ ಕೂತವರಿಗೆ "ಎಮರ್ಜೆನ್ಸಿ" ಶಿಕ್ಷೆ! ಕಾಲುಗಳು ನೆಲ ಮುಟ್ಟುತ್ತಲೇ ಇರಲಿಲ್ಲ! (ಒಳ್ಳೆಯ ಮರವನ್ನು ಕತ್ತರಿಸಿ ವ್ಯರ್ಥಮಾಡುವುದೇಕೆ ಎನ್ನುವ ಘನ ಉದ್ದೇಶದಿಂದ ಬಹುಶಃ. ಜೊತೆಗೆ ಬಂಟೆಗಾಲುಗಳನ್ನು ಅಂಟಿಸಿದ್ದ) ಸೋಫಾ ಸೆಟ್ಟು ನೋಡಲಿಕ್ಕೆ ಸೊಗಸೇ: ಅದರ ಎತ್ತರಕ್ಕೆ ಮರುಳಾಗಿ ಮೆತ್ತನ್ನ ಪೀಠದ ಆಕರ್ಷಣೆಯಿಂದ ಮೃದುವಾಗಿ ತಳವೂರಿದಾಗ ಜಾರು ಬಂಡೆಯಾಗಿ ಕೂತವರು ಸೋಫಾದ ಮೂಲೆಯಲ್ಲಿ ಮುದುಡಿ ಹೋಗುತ್ತಿದ್ದರು (ಒಂದು ಕಾಲದಲ್ಲಿದ್ದ "ಸ್ಪ್ರಿಂಗ್"ಗಳು "ಬಂದಾನೊಂದು" ಕಾಲದಲ್ಲಿ ಆಗಿಹೋಗಿದ್ದುವಲ್ಲ?). ಇನ್ನು ಚಿತ್ರದ ಕುರ್ಚಿಗಳ ವರ್ಣನೆಗೆ ಬದಲು ಭೀಷ್ಮಾಚಾರ್ಯ ಮಲಗಿದ ಶರಪಂಜರ ನೆನಪಿಸಿದರೆ ಸಾಕು!

ಮುಸುರೆ ತಿಕ್ಕುವವರು, ಮನೆಗೆಲಸದವರು ಇಂದಿನ ಮಂತ್ರಿಮಂಡಲಗಳಷ್ಟೇ ಅಸ್ಥಿರ. ಭಾರದ ಪಾತ್ರೆಗಳನ್ನೆತ್ತಲಾರರು. ಮಸಿ ತಿಕ್ಕಲಾರರು. ಮನೆಯ ಕತ್ತಲು ಕೋಣೆಗಳನ್ನು ಗುಡಿಸಲಾರರು ! ದೊಡ್ಡ ಕಿಟಕಿಗಳಿದ್ದು ಕಳ್ಳಕಾಕರಿಗೆ ಅನುಕೂಲ ಮಾಡಿಕೊಡುವ ದಡ್ಡತನ ನಮ್ಮ ತಾತನದಾಗಿರ

ಲಿಲ್ಲ. ತಾತನ ನಂತರ ಕಿಟಕಿಗಳನ್ನಷ್ಟು ಬದಲಾಯಿಸಲು ಪ್ರಯತ್ನಿಸಿದ ತಂದೆಯವರಿಗೆ ವಿರೋಧ ಪಕ್ಷದ ಪ್ರತಿಭಟನೆ ವಿಧಾನ ಸಭೆಗಿಂತ ಒಂದಂಶ ಹೆಚ್ಚಾಗಿಯೇ ಎದುರಾದಾಗ, ಯೋಜನೆ ಅಲ್ಲಿಗೇ ಕೈಬಿಟ್ಟರು! ಅಮ್ಮನಿಗೇ–ಓಕೆ. ಮನೆ ಸೊಸೆಯಾಗಿ ಬಂದಿದ್ದ ನನ್ನವಳಿಗೆ ಸಹ ಹೆಚ್ಚು ಬೆಳಕು ಕಣ್ಣು ಚುಚ್ಚುತ್ತಿತ್ತಲ್ಲ!

"ಅಪ್ಪ ಹಾಕಿದ ಆಲದ ಮರ ಅಂತ ನೇಣು ಹಾಕ್ಕೊಳ್ಳೋಕ್ಕೆ ಆಗುತ್ತೇ?"–ಅಣೆ ಮುತ್ತಿನಂತಹ ಕಸ್ತೂರಿ ಕನ್ನಡದ ನಾಣ್ಣುಡಿ ಇದು ಎನ್ನುವುದನ್ನು ನಾನಂತೂ ಅನುಭವದಿಂದ ಕಂಡುಕೊಂಡಿದ್ದೇನೆ. (ಆದರೆ ತೀರ ಇತ್ತೀಚಿನ ವರೆಗೆ ಮನೆಯಲ್ಲಿ ಯಾರೆದುರೂ ಅನ್ನುವ ಸಾಹಸ ಮಾಡಿರಲಿಲ್ಲ!)

ಡಿಗ್ರಿ ತೆಗೆದುಕೊಂಡ ಹೊಸತು; ಬೊಂಬಾಯಿನಲ್ಲೊಂದು ಉದ್ಯೋಗಕ್ಕೆ "ಇಂಟವ್ರ್ಯೂ" ಬಂದಿತ್ತು; ವಿದೇಶ ಯಾತ್ರೆ ಹೊರಡುವಷ್ಟು ಉದ್ವೇಗ ಮನೆಯವರದು! "ದಾರೀಲಿ ಯಾವಯಾವದೋ ನೀರು ಕುಡೀಬೇಡ ಮಗೂ"–ತಾತನ ಆದೇಶ.

Water bottle ಕೊಂಡು ತರುವೆನೆಂದಾಗ ಅಜ್ಜಿಯದು ಪ್ರಬಲ ವಿರೋಧ. "ರಬ್ಬರ್ ಡಬ್ಬ ಅನಾರೋಗ್ಯ; ದಿವ್ಯವಾದ ತಿರುಪಿನ ತಂಬಿಗೆ ಇದೆ" ಎನ್ನುತ್ತ ಹುಳಿ ಹಚ್ಚಿ ಬೆಳ್ಳಗೆ ಬೆಳಗಿ ನೀರು ತುಂಬಿ ತಂದಿಟ್ಟೇಬಿಟ್ಟರು!...ಭವ್ಯವಾಗಿತ್ತು. ರೈಲಿನಲ್ಲಿ ಗಳಿಸಿದ ಬೈಗುಳು–ಭಾರವಾದ ಕಂಚಿನ ಚೊಂಬಿಗೆ ಕೈ ಬಳೆಯಗಲದ ಪೀಠ; ಗಳಿಗೆಗೊಮ್ಮೆ ಉರುಳಿ ಬದಿಯ ಪ್ಯಾಸೆಂಜರುಗಳ ಹೆಜ್ಜೆ ಚಚ್ಚಿ ಕಂಪಾರ್ಟ್‌ಮೆಂಟೆಲ್ಲ ನೀರು ಹರಿದು ಹಾಸಿಗೆ ಪೆಟ್ಟಿಗೆ ನೆಂದು......!

ಎನ್ನರಸಿ ಚೆನ್ನರಸಿಯಾಗಿ ಅರಿಸಿನ ಗಲ್ಲ ಅಡ್ಡ ಕುಂಕುಮದ ಕನಕಲಕ್ಷ್ಮಿ ನನ್ನ ಕೈ ಹಿಡಿದು ಅಕ್ಕಿ ತುಂಬಿದ ಸೇರು ಉರುಳಿಸಿ ಹೊಸಿಲು ದಾಟಿದ್ದ ಮೊದಲವರ್ಷ; ಮಂಗಳಗೌರಿ ವ್ರತ ಸಾಂಗೋಪಾಂಗವಾಗಿ ನಡೆದಿದ್ದ ಶ್ರಾವಣ ಮಂಗಳವಾರ. ಸಂಜೆಯ ಆರತಿ ಪ್ರಕರಣಕ್ಕೆ ಇವಳನ್ನು ತಯಾರಿಸಿದರು ಅಮ್ಮ. "ಅತ್ತೆಯವರ ಸೀರೆ ಇದು ಉಟ್ಟುಕೋ ಹಳೇ ಕಾಲದ್ದು, ಅವರ ಧಾರೇದು! ಬಣ್ಣ ಜರಿ, ಹೊಳಪು ಹೇಗಿದೆ ನೋಡು. ಈಗಿನ ಸೀರೆಗಳನ್ನ ಇದರ ಮುಂದೆ ನಿವಾಳಿಸಬೇಕು."



ನಿಜಕ್ಕೂ ಅಜ್ಜಿಯ ಸೀರೆ ಚೆನ್ನಾಗಿತ್ತು–ಕರೀ ಒಡಲಿನಲ್ಲಿ ಕಲಾಪತ್ತಿನ ಚೌಕಳಿ, ಕೈಜೋಡಿ ಸರಪಳಿ ಹೆಣೆದ ಕೆಂಪಂಚು; ಕನಕಲಕ್ಷ್ಮಿಗೆ ಒಪ್ಪಿತ್ತು. (ಆದರೂ, ಮದುವೆಗೆ ತೆಗೆದಿದ್ದ ನೀಲಿ ಬನಾರಸ್ ಸೀರೆ ಉಡಬಾರದಿತ್ತೇ ಇವಳು–ಎನ್ನುವ ಅಳುಕು ನನಗೆ.)

ಕರೆಯುವ ಮನೆಗಳಿಗೆ ಇವಳ ಬೆಂಗಾವಲು ನಾನು. ಐದಾರು ಆಹ್ವಾನ ಮುಗಿದಿದ್ದಾಗ ಶ್ರಾವಣದ ಧಾರಾಪಾತ್ರೆ ಸುರಿದು ಇಬ್ಬರೂ ನೆಂದು ಹಿಂದಿರುಗುತ್ತಿದ್ದಾಗ ಭೇಟಿಯಾದ ನಾಲ್ಕಾರು ಗೆಳೆಯರು ಸಂಶಯದ ದೃಷ್ಟಿಯಿಂದ ನಮ್ಮ ಕಡೆ ನೋಡಿ ಪಿಸುಗುಟ್ಟಿಕೊಂಡು ಹೋದ ರಹಸ್ಯ ಮನೆ ಮುಟ್ಟಿದ ಮೇಲೆ ತಿಳೀತು. ಒಗೆತ ಕಂಡರಿಯದ ಅಜ್ಜಿ ಸೀರೆ ಭಾರಕ್ಕೆ ಹಿಂಜಿ ಅಲ್ಲಲ್ಲಿ ಕಿಟಕಿ ಬಾಗಿಲುಗಳು ಮೂಡಿದ್ದವು; ಕರಿಯೊಡಲು ಕರಗಿ ಹರಿದು ಕನಕಲಕ್ಷ್ಮಿಯ ಕೈ ಮುಖ ಕಾಲುಹೆಜ್ಜೆಗಳಿಗೆ ಅಪ್ಪಟ ಕಪ್ಪು ರಂಗು ಹಚ್ಚಿತ್ತು!......ಮಾರನೆಯ ದಿನ ಕಛೇರಿಗೆ ಹೋದಾಗ ಆ ಗೆಳೆಯರು ,"ನಿಮ್ಮ ಮದುವೆಗೆ ನಾವೂ ಬಂದಿದ್ದೆವು; ಬಂಗಾರದಂಥಾ

ಹೆಂಡ್ತಿ ಇಟ್ಕೊಂಡು. ಅದ್ಯಾವುದ್ರೀ ನಿನ್ನೆ ನಿಮ್ಮ ಜತೆಲಿ ಅಮಾವಾಸ್ಯೆ?" ಗುಸಗುಸಿಸಿ ನಕ್ಕರು. "ಅಂದ ಹಾಗೆ, ಎಲ್ಲಿ ಹಾರಿಸಿಕೊಂಡು ಬಂದಿದ್ದಳೋ ಆ ಸರಕು ಜರ್ಜೀಸೀರೆ?" ಕುಹಕಿದ ಅಕೌಂಟೆಂಟ್ ಅನಂತರಾಮು!

ನಾಲ್ಕು ತಿಂಗಳು ಅವರಮ್ಮನ ಕೈಲಿ ಬಾಣಂತನದ ಆರೈಕೆ ಮಾಡಿಸಿಕೊಂಡು ಪಾಪುವನ್ನೆತ್ತಿಕೊಂಡು ಬಂದವಳು, ಕನಕು. ಮೊದಲನೇ ಮಗ ಮಾಣಿಕ್ಯ–ನನಗೆ ಏನೆಲ್ಲ ತಂದು ಉಪಚಾರ ಮಾಡುವ ಚಪಲ; (ಸುಮಾರಾಗಿ ಕೈ ತುಂಬ ಸಂಬಳವೂ ಆ ವೇಳೆಗೆ ಬರುತ್ತಿತ್ತಲ್ಲ?) "ಪೆರಾಂಬ್ಯುಲೇಟರ್" ತರ್ತೀನೆ; ಸಂಜೆ ವೇಳೆ ಗಾಳಿ ಸವಾರಿ ಮಾಡಿಸಲಿಕ್ಕೆ ಅನುಕೂಲ" [illegible] ಸಲಹೆ ಬಂತು–"ಅದಕ್ಯಾಕೆ ಮತ್ತೆ ದುಡ್ಡು ದಂಡ ಮಾಡ್ತೀಯಾ? ನಿನಗೆ ನಿಮ್ ಅಜ್ಜಿ ತಾತ ತೆಗೆದದ್ದು ಇದೆ; ಅಟ್ಟದ ಮೇಲೆ ಇತ್ತು; ಒಂದೇ ಚಕ್ರ ಮಾತ್ರ, ಕಿತ್ಕೊಂಡಿತ್ತು, ಒಂದೇ ಹ್ಯಾಂಡಲ್ ಕಳದು ಹೋಗಿತ್ತು. ಸೀಟ್ ಇರಲಿಲ್ಲ. ಟಾಪ್ ಒಂದು ಚೂರು ಹರಿದಿತ್ತು. ಅಷ್ಟೆ. ನಾನಾಗಲೇ ಪಾಪು [illegible]




ಸೈಕಲ್ ಅಂಗಡಿಗೇ ಕಳಿಸಿಕೊಟ್ಟಿದ್ದೇನೆ. ಹೊಸ ಗಾಡಿ ಮಾಡಿ ತಂದ್ಕೊಡ್ತಿನಿ ಅಂತ ಹೇಳಿದಾನೆ........."

ಕಾಯಕಲ್ಪ ನಡೆಸಿಕೊಂಡು ಗಾಢ ಕೆಂಪು ಕಲರ್ ಪೇಯಿಂಟ್ ಮಾಡಿಸಿಕೊಂಡಿದ್ದ "ಅಪ್ಪನ ಆಸ್ತಿ" ಯಲ್ಲಿ ಮಗುವನ್ನು ಮಲಗಿಸಿಕೊಂಡು ಹೊರಟಾಗ, ಗಣೇಶನ ಮೆರವಣಿಗೆ ನೋಡುವವರಂತೆ ರಸ್ತೆಯ ಎರಡೂ ಬದಿಯಲ್ಲಿ ಮಹಡಿಗಳ, ಮನೆಗಳಿಂದ ಜನ ನಿಂತು ನೋಡಿದರು. ಎತ್ತಿನ ಗಾಡಿಯಂತಹ ಕಮಾನು, ಮಿನಿ ಜಟಕಾ ಚಕ್ರ, ನನ್ನ ಭುಜದೆತ್ತರಕ್ಕೆ ಜೋಡಿಸಿದ್ದ ಹಿಡಿಗಳು... "ಏನೋ ಸಾಮಾನು ಮಾರೋ ಗಾಡಿ ಅಂದ್ಕೊಂಡೆ" ಎಂದು ಒಬ್ಬರು ಹಿಗುಟ್ಟಿದರೆ "ಪುರಾತನ ವಸ್ತುಗಳಿಗಾಗಿ ಈ ಊರಿನಲ್ಲಿ ಒಂದು ಮ್ಯೂಸಿಯಂ ಇದೆ" ಎಂದು ಅರ್ಥವತ್ತಾಗಿ ಜೋರಾಗಿ ಅಂದವರು ಇನ್ನೊಬ್ಬರು. ಪೂರಿ ಜಗನ್ನಾಥನ ಕಟ್ಟಿಗೆ ತೇರಿನಂತೆ ಎಳೆದು ಮನೆಗೆ ತಂದ ಆ ಗಾಡಿ ಪುತ್ತೆ ಅಟ ಏರಿತೆಂದು ಹೇಳಬೇಕಾದದ್ದೇ ಇಲ್ಲ.

Old is gold ಅನುಕೂಲ ಸೂತ್ರವಲ್ಲ ಎಂದು ನಾನು ಎಂದೋ ಮನಗಂಡಿದ್ದೆ. ಈ ಮೂರು ವರ್ಷ ಹಳ್ಳಿ ಮನೆಯಲ್ಲಿ ಸಾಕಷ್ಟು ಮಾರ್ಪಾಟೂ ಮಾಡಿದ್ದೆ. ಆದರೂ...ದುರ್ಬಲ ಘಳಿಗೆ! ಸುಬ್ಬಕ್ಕನ ಪ್ರಕರಣದಲ್ಲಿ ಸೋತೆ. "ರೀ, ಸುಬ್ಬಕ್ಕ ಸಿಕ್ಕಿದ್ದಳು. ಪಾಪ, ತುಂಬ ಕಷ್ಟದಲ್ಲಿದ್ದಾಳೆ–ನಿಮ್ಮನೇಲಿ ಅಡಿಗೆ ಮಾಡಿಕೊಂಡು ಇರ್ತೀನಿ; ಅನ್ನ ಬಟ್ಟೆ ಕೊಟ್ಟರೆ ಸಾಕು ಅಂದಳು..." ಕನಕಲಕ್ಷ್ಮಿ ಹೇಳಿದಾಗ ಅಜ್ಜಿಯ ರಾಜ್ಯಭಾರದಲ್ಲಿದ್ದ ಅನೇಕ ಆಶ್ರಿತರಲ್ಲಿ ಒಬ್ಬಳಾದ ಸುಬ್ಬಿಯನ್ನು ಸ್ವಾಗತಿಸಲು ನಾನು ಸಿದ್ಧನಿರಲಿಲ್ಲ. ಆದರೆ ಕನಕು, "ದೀಪಾವಳಿ ಬಂತು, ಹೊಸ ಅಳಿಯ ಬೇರೆ ಬರ್ತಾರೆ. ಸುಬ್ಬಕ್ಕ ಕಡಬು ಹೋಳಿಗೆ ಸೊಗಸಾಗಿ ಮಾಡ್ತಾಳೆ ಕಣ್ರೀ," ಅಂದಾಗ...

ಇಪ್ಪತ್ತು ವರ್ಷಗಳ ನಮ್ಮ ಗೃಹಸ್ಥಿಯಲ್ಲಿ ಕನಕು ಏನೇನೋ ಕಲಿತಳು; ಚೀಲ ಹೆಣೆಯುವುದು, ಮಣಿ ಪೋಣಿಸುವುದು, ಗೊಂಬೆ ಮಾಡುವುದು, ಸ್ವೆಟರ್ ನೇಯುವುದು ಎಟ್ಸೆಟ್ರಾ ಎಟ್ಸೆಟ್ರಾ! ಆದರೆ ಅಡಿಗೆ ಮಾತ್ರ ಕಲಿತಿರಲಿಲ್ಲ. ಅವಳ ಕೆಟ್ಟ ಪಾಕ ತಿಂದ ನಾಲಿಗೆಗೆ ಸುಬ್ಬಕ್ಕ ರಸಗವಳ ನೀಡಿದಳು ನಿಜ. ಅಮಟೆ, ಉಪ್ಪಿನಕಾಯಿ, ನೆಲ್ಲಿ ಗೊಜ್ಜು, ಮಾವಿನ ಚಿತ್ರಾನ್ನ ಹುಣಿಸೆ ತೊಕ್ಕು ನೆಕ್ಕಿಸಿದಳು



[illegible] ಅವಳಿಗೆ ಹೇಗೆ ನನ್ನ ಮರುಕಳಿಕೆ ಮಾಡಬೇಕು? ನನ್ನ ಗತಚಾರಿತ್ರ್ಯದ ಧೂಳು ಕೊಡವಬೇಕು ?

ರಮೇಶನ ರ್‍ಯಾಂಕ್ ಕಾರ್ಡ್; ಪ್ರತಿ ಸಬ್ಜೆಕ್ಟ್‌ನಲ್ಲೂ ಫರಮಾಯಿಸಿ ಪರ್ಸೆಂಟೇಜ್ ತೆಗೆದುಕೊಂಡಿರುವುದನ್ನು ಕಂಡು ಕೆಂಪಾದೆ. "ನಾಚಿಕೆಕೇಡು" ಇದೇನೋ ನಿನ್ನ ಹಣೆಬರಹ! ರುಜು ಮಾಡಲ್ಲ ಹೋಗು" ಎಂದು ಗುಡುಗಿದಾಗ ಬಾಗಿಲ ಬಳಿ ಹಾಕುತ್ತಿದ್ದ ಸುಬ್ಬು. "ಬಿಡೋ ನಂಜಣ್ಣ; ನೀನು ಎರಡ್ವರ್ಷಕ್ಕೆ ಒಂದ್ಸಾರಿ ಫೇಲ್ ಆಗ್ತಿರಲಿಲ್ವೇ?" ಎನ್ನುವುದೇ ?

ನೆರೆಮನೆ ಮರದ ಸೀಬೆಕಾಯಿ ಕದ್ದು ಬಿದ್ದು ಕಾಲು ಮುರಕೊಂಡದ್ದು, ಅಪ್ಪನ ಪಾಕೆಟ್‌ನಲ್ಲಿ ಅರವತ್ತು ಹಾರಿಸಿದ್ದು, ಊರಲ್ಲಿ ಕಳ್ಳರ ಗ್ಯಾಂಗ್ ಬಂದಿರುವ ಸುದ್ದಿಗೆ ಬೆದರಿ ಮೂರು ದಿನ ಬಚ್ಚಿಟ್ಟು ಕೊಂಡಿದ್ದು...ಇಂತಹ ನನ್ನ ಶೌರ್ಯ ಸಾಹಸಗಳ ಅಮೃತೋಕ್ತಿಗಳನ್ನು ಆಗಾಗ್ಗೆ ಉದ್ಧರಿಸಿ, ನನ್ನ ಗೌರವದ ಮಟ್ಟವನ್ನು ಕುಟುಂಬದಲ್ಲಿ ಬಹಳ ಕೆಳಗಿಳಿಸಿಬಿಟ್ಟಳು. ಯಾವುದೋ "ಈವ್‌ಟೀಸಿಂಗ್" ಸಮಾಚಾರವನ್ನು ಕನಕು ಓದಿ ಹೇಳಿದಾಗ "ನಂಜುಂಡ ಏನು ಕಮ್ಮಿ? ಕುಂತೀರಾಜರ ಕಮಲೀ ಕಡೆ ಕಣ್ಣು ಹಾಯಿಸಿದಾಗಲಂತೂ ಇವನಿಗೆ ಅವಳಪ್ಪನಿಂದ ಬಿದ್ದ ಪ್ರಹಾರ...ಹಿಹಿ... ಹಿಹಿಹಿ!" ಸುಬ್ಬಕ್ಕನ ಈ ಪ್ರತಿಕ್ರಿಯೆಯಿಂದ ಕೈಕೇಯೀ ರೂಪ ತಾಳಿದ ಕನಕಲಕ್ಷ್ಮಿಯನ್ನು ಒಲಿಸಲು ನನಗೆ ಒಂದು ವಾರ ಫ್ಲಸ್ ಪ್ರಿಂಟೆಡ್ ಸಿಲ್ಕ್ ಸೀರೆ ಬೇಕಾಯಿತು.

ದೀಪಾವಳೀ ದಿನ ಅಳಿಯನೆದುರು ಸುಬ್ಬಕ್ಕ ಕೊಡವಿದ ಧೂಳಂತೂ ರಿಕಾರ್ಡ್ ಸ್ಥಾಪಿಸಿ ಬಿಟ್ಟಿತು; ಮೊದಲ ಬಾರಿ ಕನಕಳ ಜತೆ ಸಿನಿಮಾಕ್ಕೆ ಹೋದ ನಾನು ಅವಳನ್ನಲ್ಲೇ ಮರೆತು ಬಂದದ್ದು, ಮಾವನ ಮನೆಗೆ ದೀಪಾವಳಿಗೆ ಹೋಗುವಾಗ ಕನಕಳಿಗೆ ಮೆಚ್ಚುಗೆ ಎಂದುಕೊಂಡು ಹೋದ ಕಾಮನ ಬಿಲ್ಲಿನ ರಂಗು ಸೀರೆಯನ್ನು ಅವಳು ಕತ್ತರಿಸಿ ಬಾಗಿಲ ಪರದೆ ಹಾಕಿದ್ದು, ಭಾವಮೈದುನರಿಗೆ ಒಯ್ದಿದ್ದ ಆನೆ ಪಟಾಕಿ ಕುದುರೆ ಪಟಾಸು-ಆಟಂ ಬಾಂಬುಗಳನ್ನು ಹಚ್ಚಿಸುವ ಧೈರ್ಯವಿಲ್ಲದೆ ಹುಷಾರಿಲ್ಲವೆಂದು ಬೆಚ್ಚಗೆ ಹೊದ್ದು ಮಲಗಿದ್ದು...ಚಿನಕುರುಳಿ ಚಕಮಕಿ ಹಾರಿಸಿಯೇ ಹಾರಿಸಿದಳು ಸುಬ್ಬಕ್ಕ; ಕೇಳುವ ಹಾಗಿಲ್ಲ, ಏಳುವ ಹಾಗಿಲ್ಲ-ಕಡುಬು ಹೋಳಿಗೆ ಆಂಬೋಡೆ ಹುಳಿಯನ್ನ ಮೆದ್ದುತ್ತ "ಊಟಕ್ಕೆ ಕೂತಿದ್ದೆಯಲ್ಲ ? ನೆತ್ತಿ ಹತ್ತಿತು... "ನೀರು ! ನೀರು !"

✡

ಮುಕ್ಕಾಲು ಮದುವೆ

ಜಾನಕಿ : ಹಾಗಾದ್ರೆ ಸುಂದರತ್ತೆ ಮದುವೇನೇ ಆಗ್ಲಿಲ್ಲಾನ್ನು...
ರಾಧಾ : ಮುಕ್ಕಾಲುಪಾಲು ಮದುವೆ ಆಗೇ ಹೋಗಿತ್ತು...ಆಕೆಯಂತೂ ಹಾಜರಿದ್ಲು...ಪುರೋಹಿತರೂ ಇದ್ರು...ಆದ್ರೆ...
ಜಾನಕಿ : ಆದ್ರೆ? ಏನಾಯ್ತು?
ರಾಧಾ : ಗಂಡೇ ಬರಲಿಲ್ಲ...


ವಿಶೇಷ ಕೊಡುಗೆ!
1.5 ಕಿಲೋ ಪ್ಲಾಸ್ಟಿಕ್ ಜಾಡಿ
ಶ್ರೇಷ್ಠ ದರ್ಜೆ ಮತ್ತು...
1.5 ಕೇಜಿ ಶ್ರೇಷ್ಠದರ್ಜೆಯ ಡಿಟರ್ಜೆಂಟ್ ವಾಷಿಂಗ್ ಪೌಡರ್-ಪುನಃ ಉಪಯೋಗಿಸಬಹುದಾದ, ಆಕರ್ಷಕ ಪ್ಲಾಸ್ಟಿಕ್ ಜಾಡಿಯಲ್ಲಿ ದೊರೆಯುತ್ತದೆ.
ಬೆಲೆ ರೂ. 17.95 ಮಾತ್ರ
(ಸ್ಥಳೀಯ ತೆರಿಗೆಗಳು ಪ್ರತ್ಯೇಕ)
ಪಾಯಿಂಟ್
ಶ್ರೇಷ್ಠ ತರಗತಿಯ
ಡಿಟರ್ಜೆಂಟ್ ವಾಟಿಂಗ್ ಪೌಡರ್
ಬೆಲೆಯನ್ನು ಹೋಲಿಸಿ. ಗುಣವನ್ನು ಪರೀಕ್ಷಿಸಿ
ನೀವೇ ಕಂಡುಕೊಳ್ಳಿರಿ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು ಇವರ ಒಂದು ಉತ್ಕೃಷ್ಟ ತಯಾರಿಕೆ.
Point
1·5kg.
RE-USABLE
JAR
PDP/59

ಇದುವೇ ಜೀವ ಇದು ಜೀವನ

ನನ್ನ ತಂಗಿ ತನ್ನ ಯಜಮಾನರು ಮತ್ತು ಮಕ್ಕಳೊಡನೆ ಮಧ್ಯ ಪ್ರದೇಶದ ಖಂಡ್ವಾ-ದಲ್ಲಿ ವಾಸಿಸುತ್ತಿದ್ದಳು. ಒಮ್ಮೆ ನಾನು ಅವರ ಮನೆಗೆ ಹೋಗಿದ್ದಾಗ ನಡೆದ ಪ್ರಸಂಗ ಇದು.

ಒಂದು ದಿನ ನನ್ನ ತಂಗಿಯ ಗೆಳತಿಯರು ಮನೆಗೆ ಬಂದರು. ಎಲ್ಲರೂ ಗುಜರಾತಿ ಮತ್ತು ಹಿಂದಿ ಮಾತನಾಡುವವರು. ಯಾರಿಗೂ ಕನ್ನಡ ಬಾರದು. ಕುಶಲ ಪ್ರಶ್ನೆಗಳಾದ ಮೇಲೆ ಒಬ್ಬಳು ತನಗೆ ಮದುವೆ ಗೊತ್ತಾಗಿರುವುದಾಗಿ ತಿಳಿಸಿ ಎಲ್ಲರಿಗೂ ಸಿಹಿ ಹಂಚಲು ಪ್ರಾರಂಭಿಸಿದಳು. ತಕ್ಷಣ ನನ್ನ ತಂಗಿಯ ೨ ಮತ್ತು ೪ ವರ್ಷದ ಮಕ್ಕಳು "ನಂಗೆ, ನಂಗೆ" ಎನ್ನುತ್ತಾ ಕುಳಿತಲ್ಲಿಂದಲೇ ಅವಳ ಕಡೆ ಕೈ ಚಾಚಲಾರಂಭಿಸಿದರು. ಸಿಹಿ ಹಂಚುತ್ತಿದ್ದವಳಿಗೆ ಕಕ್ಕಾಬಿಕ್ಕಿ. ಉಟ್ಟಿದ್ದ ಸೀರೆ, ತೊಟ್ಟಿದ್ದ ರವಿಕೆ ನೋಡಿಕೊಂಡಳು. ಎಲ್ಲ ಸರಿಯಾಗಿತ್ತು. ಏನೂ ಅರ್ಥವಾಗಲಿಲ್ಲ. ಬಂದಿದ್ದವರೆಲ್ಲ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಮಕ್ಕಳು "ನಂಗೆ, ನಂಗೆ" ಎನ್ನುವುದನ್ನು ನಿಲ್ಲಿಸಲೇ ಇಲ್ಲ. ಕೊನೆಗೆ ಆಕೆ ಕೋಪಗೊಂಡು, "ಏ ಕ್ಯೊಂ ನಂಗೆ ನಂಗೆ ಬೋಲತೇ ಹ್ಯೆಂ, ಹಮ್ ತೋ ಕಪಡೇ ಪೆಹನೇ ಹೀ ಹ್ಯೆ" (ಇವರು ನಾವು ಬೆತ್ತಲೆ ಇದ್ದೇವೆಂದು ಏಕೆ ಹೇಳುತ್ತಿದ್ದಾರೆ, ನಾವು ಬಟ್ಟೆ ಹಾಕಿಕೊಂಡೇ ಇದ್ದೇವಲ್ಲ) ಎಂದು ಸಿಡುಕಿದಾಗಲೇ ನಮಗೆ ಸಂದರ್ಭದ ಅರಿವಾದದ್ದು. 'ನಂಗೆ' ಎಂಬ ಕನ್ನಡ ಪದಕ್ಕೆ ಹಿಂದಿಯಲ್ಲಿ ಬೆತ್ತಲೆ ಎಂದರ್ಥ. ನಾವು ಕನ್ನಡದಲ್ಲಿ 'ನಂಗೆ' ಎಂಬ ಪದಕ್ಕೆ ಹಿಂದಿಯ 'ಮುಝೇ' ಎಂದರ್ಥ ಎಂದು ವಿವರಿಸಿದಾಗಲೇ ಆಕೆಗೆ ಸಮಾಧಾನವಾದಂತೆ ತೋರಿತು.

-ವಿ. ಪದ್ಮಾವತಮ್ಮ

ಭಾಲ್ಕಿಯಿಂದ ಹೈದ್ರಾಬಾದಿಗೆ ಹೋಗಬೇಕಾಗಿತ್ತು. 'ಬೀದರಿನ ರಾಣಿ' ಎಂದು ಹೆಸರಾದ ನಮ್ಮ ಗಾಡಿ ಬಹು ಮೆಲ್ಲಗೇ ಸಾಗಿತ್ತು. ನಾನು ಕುಳಿತಿದ್ದ ಲೇಡಿಸ್ ಕಂಪಾರ್ಟಮೆಂಟನಲ್ಲಿ ಇನ್ನೂ ಐದಾರು ಜನ ಹುಡುಗಿಯರು, ಮಧ್ಯವಯಸ್ಕ ಮಹಿಳೆಯರು ಕುಳಿತಿದ್ದರು.

ಕಿಟಕಿಯ ಒಂದು ಪಕ್ಕಕ್ಕೆ ನಾನು ಕುಳಿತಿದ್ದೆ. ನನ್ನಿಂದ ನಾಲ್ಕಡಿ ಅಂತರದಲ್ಲಿ ಓರ್ವ ತರುಣಿ, ಇಪ್ಪತ್ತು-ಇಪ್ಪತ್ತೆರಡು ವರ್ಷದ-ವಳಿರಬೇಕು. ಸುಂದರಿ. ಹೊಸದಾಗಿ ಮದು-ವೆಯಾಗಿತ್ತೆಂದು ತೋರುತ್ತದೆ. ಆಕೆಯ ವೇಷ-ಭೂಷಣ, ಕೈಲಿ ಹಿಡಿದಿದ್ದ 'ಜಂಬದ ಚೀಲ,' ತೊಡೆಯ ಮೇಲಿರಿಸಿಕೊಂಡಿದ್ದ ಆಂಗ್ಲ ಸಿನಿಮಾ ಪತ್ರಿಕೆಗಳು, ಪರ್ಲ್ ಬಕ್‌ಳ ಕಾದಂಬರಿ, ಕಣ್ಣಿಗೆ ಧರಿಸಿದ್ದ ತಂಪಿನ ಚಾಳೀಸು ಎಲ್ಲಾ ಆಕೆ ಶ್ರೀಮಂತಳು, ಓದಿದವಳು ಎಂದು ಸಾರುತ್ತಿದ್ದುವು. ಆಕೆಯ ಪಕ್ಕದಲ್ಲಿ ಆಕೆಯ ತಂಗಿ-ತಾಯಿ ಕುಳಿತಿದ್ದರು. ಅವರ ವೇಷ-ಭೂಷಣವೂ ಆಧುನಿಕ.

ನಾನು ನನ್ನ ಪಾಡಿಗೆ ಕೈಲಿ ಹಿಡಿದಿದ್ದ ಕನ್ನಡ ಕಾದಂಬರಿ, ವಾರಪತ್ರಿಕೆಗಳ ಪುಟ ತಿರುವುತ್ತ ಕುಳಿತಿದ್ದೆ. ದೂರದ ಪ್ರಯಾಣ ಎಂದು ಸಾದಾ ನೂಲಿನ ಸೀರೆಯುಟ್ಟಿದ್ದೆ. ರೈಲು ಹತ್ತುವ ಮುನ್ನ ಬಸ್‌ನಲ್ಲಿ ಬಂದದ್ದರಿಂದ ನನ್ನ ತಲೆಗೂದಲು ಹಾರಾಡುತ್ತಿದ್ದವು.

ಆ ತರುಣಿ ನನ್ನೆಡೆ ನೋಡಿದಾಗ ನಗಲೆತ್ನಿಸಿದೆ, ಪರಿಚಯ ಬೆಳೆಸುವ ಇರಾದೆಯಿಂದ. ಆಕೆ ಮೂಗುಮುರಿದು ಮತ್ತೆ ತನ್ನ 'ಜಂಬ'ದಲ್ಲಿ ಕುಳಿತಳು. ಆಕೆಯ ತಾಯಿಗೋ ತನ್ನ ಮನೆ - ಮಕ್ಕಳು - ಶ್ರೀಮಂತಿಕೆಯನ್ನು ಹೊಗಳುವುದೇ ಒಂದು ಕೆಲಸವಾಗಿ-

ಬಿಟ್ಟಿತ್ತು. ಮಾತು ಮಾತಿಗೆ ತನ್ನ ಯಜಮಾನರು ಹಾಗೆ, ತನ್ನಳಿಯ ಹೀಗೆ ಎಂದು ಹೇಳಿಕೊಳ್ಳುತ್ತಿದ್ದಳು. ಮಗಳು ಬಿ. ಎ. ವರೆಗೆ ಒಮ್ಮೆಯೂ ಫೇಲಾಗದೇ ಕಲಿತದ್ದು ಎಲ್ಲಿಯೂ ವರ ನೋಡುವ ತೊಂದರೆಯಿಲ್ಲದೇ ತಾನಾಗಿಯೇ ಇವಳನ್ನು ಮೆಚ್ಚಿ ಕಲಿತ ವರನೊಬ್ಬ ಮದುವೆಯಾದದ್ದು ಮುಂತಾದ ವಿಷಯವನ್ನು ಹೇಳಿದ್ದೇ ಹೇಳಿದ್ದು.

ನನ್ನ ಕಡೆ ತಿರುಗಿತು ಆ ಮಹಾ ತಾಯಿಯ ಲಕ್ಷ್ಯ. "ಸರ್ರಿ, ನೀವು ಯಾವೂರಿಗೆ?" ಕೇಳಿದಳು. "ಹೈದ್ರಾಬಾದಿಗೆ," ಎಂದೆ. ಯಾವ ಊರು, ದೆಸೆ, ಕುಲ, ಗೋತ್ರ ಕೇಳುತ್ತ ಕಾಲೇಜು ಓದಿದ ಹುಡುಗಿಯರು ಹಾಗೆ ಹೀಗೆ ಅಂತ ಮಾತಾಡುವುದರೊಳಗೆ ಬೀದರ ಬಂತು. "ನೀವೆಲ್ಲಿಯವರೆಗೆ ಓದಿದ್ದೀರಿ?" ಎಂದಳು. ನನಗೆ ಹೇಳಿಕೊಳ್ಳಲು ಮನಸ್ಸಿರಲಿಲ್ಲ. "ಇಂಟರ್‌ವರೆಗೆ ಓದಿರಬೇಕು. ಅಲ್ಲವೆ?" ಎನ್ನುತ್ತ ಆ ತರುಣಿ ನನ್ನ ಕಡೆ ನೋಡಿದಾಗ ನಾನು ನನ್ನ ಬ್ಯಾಗಿನಿಂದ ವಿಸಿಟಿಂಗ್ ಕಾರ್ಡ್ ತೆಗೆದು ಆಕೆಯ ಕೈಗಿತ್ತೆ. ಓದಿ ಪೆಚ್ಚಾಗಿಬಿಟ್ಟಳು. ನಂತರ, "ನಮ್ಮಜಮಾನರೂ ಹೆಲ್ತ್ ಆಫೀಸರ್ ಆಗಿದ್ದಾರೆ. ಅವರ ಪರಿಚಯ ಇರಬೇಕಲ್ಲ," ಅಂದಳು. ಮುಖ ಪಾತ್ರೆ ಕೆಳಗೆ ಹಾಕಿದಂತೇ ಇತ್ತು.

-ಡಾ. (ಶ್ರೀಮತಿ) ವಸುಧಾ ದೇಸಾಯಿ

ನನ್ನ ತಮ್ಮನಿನ್ನೂ ಏಳೆಂಟು ವರ್ಷಗಳವನಾಗಿದ್ದಾಗಿನ ಮಾತು. ಮರುದಿನ ಮನೆಯಲ್ಲಿ ನಮ್ಮ ಅಜ್ಜಿಯ ಶ್ರಾದ್ಧ. "ನಾಳೆ ನಿಮ್ಮ ಅಜ್ಜಿ ಬರುತ್ತಾರೆ," ತಾಯಿ ಅಂದು ತಮ್ಮನಿಗೆ ಹೇಳಿದರು. ಎಷ್ಟೊತ್ತಿಗೆ ಬರುತ್ತಾರೆಂದು ಅವನು ಕೇಳಿದ್ದಕ್ಕೆ ಮಧ್ಯಾಹ್ನ ೧೨ ಗಂಟೆಗೆಂದು ಹೇಳಿದರು.

ಮರುದಿನ ಶ್ರಾದ್ಧ ವಿಧಿಗಳೆಲ್ಲ ಪೂರಯಿಸಿ ನಾವೆಲ್ಲ ಊಟಕ್ಕೆ ಕುಳಿತೆವು. ತಮ್ಮ ಎಲ್ಲೋ ಹೊರಗೆ ಹೋಗಿರಬೇಕೆಂದು ಅವನ ಬಗ್ಗೆ ಯಾರೂ ಅಷ್ಟಾಗಿ ಯೋಚಿಸಲೇ ಇಲ್ಲ. ಇನ್ನೇನು ನಮ್ಮ ಊಟ ಮುಗಿಯುವ ಹೊತ್ತಿಗೆ ಅವನು ಮನೆಗೆ ಬಂದ. ಮೈಯೆಲ್ಲ ಬೆವರಿನಿಂದ ತೊಯ್ದು ಹೋಗಿತ್ತು. ಊಟದ ಹೊತ್ತಿನಲ್ಲಿ ಎಲ್ಲಿ ಹೋಗಿದ್ದಿಯೋ ಎಂದು ಕೇಳಿದರೆ ಅಜ್ಜಿಯನ್ನು ಕರೆತರಲು ಬಸ್ ಸ್ಟ್ಯಾಂಡಿಗೆ ಹೋಗಿದ್ದಾಗಿ ನುಡಿದ. ೧೨ ಗಂಟೆಗೆ ಬೆಂಗಳೂರು ಬಸ್ ಬಂದು ಹೋದ ನಂತರ ಎರಡು ಮೂರು ಬಸ್ಸುಗಳು ಬಂದು ಹೋದರೂ ಅಜ್ಜಿ ಬರಲೇಯಿಲ್ಲವಾದ್ದರಿಂದ ಕಾದು ಕಾದು ಬೇಸತ್ತು ಮನೆಗೆ ಬಂದೆ ಎಂದು ಹೇಳಿದ. ಹಿಂದಿನ ದಿನವೇ ತಾಯಿ ಅವನಿಗೆ ಹೇಳಿದ್ದು ತಟ್ಟನೆ ನನಗೆ ನೆನಪಾಗಿ ನಕ್ಕು ಸುಮ್ಮನಾದೆ.

-ಅ. ಕೃ. ರಾಧಾಕೃಷ್ಣ

ಕಲಿಯುಗದ ದೇವರುಗಳು

ಎಂ. ಪಿ. ಮನೋಹರಚಂದ್ರನ್

ಹಿಂದೆ ವಿವೇಕಾನಂದರು ಕಂಡ ಕಂಡ ಸಾಧು ಸಂತರನ್ನೆಲ್ಲ ನೀವು ಪ್ರತ್ಯಕ್ಷವಾಗಿ ದೇವರನ್ನು ನೋಡಿದ್ದಿರಾ ಎಂದು ಕೇಳಿದ್ದರಂತೆ. ಆಗಿನ ಕಾಲದಲ್ಲಿ ನಾನಿರಲಿಲ್ಲ. ಈಗಿನ ಕಾಲದಲ್ಲಿ ಅವರಿಲ್ಲ. ಇದ್ದಿದ್ದರೆ ವಿವೇಕಾನಂದರಿಗೆ ಸಾಕು ಸಾಕೆನ್ನಿಸುವಷ್ಟು ದೇವರುಗಳ ದರ್ಶನಮಾಡಿಸುತ್ತಿದ್ದೆ. ಈಗಿನ ಕಾಲದ ದೇವರು ಸರ್ಕಾರಿ ನೌಕರ. ದೇವರನ್ನು ಗುಡಿಯಲ್ಲೇ ನೋಡಬೇಕಾಗಿಲ್ಲ. ಅವನು ಸರ್ವಾಂತರ್ಯಾಮಿ ಎಂದು ಬಲ್ಲವರು ಹೇಳುವುದು ಬಲು ಸತ್ಯ. ಸರ್ಕಾರಿ ನೌಕರನನ್ನು ನೀವು ಆಫೀಸೆಂಬ ಗುಡಿಯಲ್ಲಿ ಕಾಣಲು ಸಾಧ್ಯವೆ ? ಅವನು ತಾನು ಕೆಲಸ ಮಾಡಬೇಕಾದ ಜಾಗವೊಂದನ್ನು ಬಿಟ್ಟು ಬೇರೆ ಕಡೆಗಳಲ್ಲೆಲ್ಲ ಪ್ರತ್ಯಕ್ಷನಾಗಿರುತ್ತಾನೆ. [illegible] ಅವನಿಗೆ ಕೆಲಸಗಳು ಬಹಳ. ಕ್ಯಾಂಟೀನಿನಲ್ಲಿ ಕಾಫಿ [illegible] ತನ್ನನ್ನೇ ನಂಬಿ ಬದುಕುತ್ತಿರುವ ಕ್ಯಾಂಟೀನ್ ಮಾಲಿಕನ ಉದ್ಧಾರ ಮಾಡಬೇಕು. ಟೈಪಿಸ್ಟ್ ಶಕುಂತಲೆಯ ಮುಂದೆ ದುಷ್ಯಂತನಂತೆ [illegible] ನಿಲ್ಲದಿದ್ದರೆ ಪವಿತ್ರ ಪ್ರೇಮಕ್ಕೆ [illegible]? ಸಾಹೇಬನನ್ನು ಎಲೆ ಅಡಿಕೆಯೊಂದಿಗೆ ಅಗಿದು ಉಗಿಯುತ್ತ ಸಹೋದ್ಯೋಗಿಗಳೊಂದಿಗೆ ಕೆಲವಾರು ರಸ ನಿಮಿಷಗಳನ್ನು ಕಳೆಯದಿದ್ದರೆ ಬದುಕು ನೀರಸವಾಗದಿದ್ದೀತೆ?

ನಮ್ಮ ಜನರೂ ಅಷ್ಟೆ. ಭಗವಂತನನ್ನು ಕಾಣಬೇಕೆಂದು ಬಯಸುವವರಿಗೆ ಅದೆಷ್ಟು ಭಕ್ತಿ ಪೂರ್ವಕ ಕಾಯುತ್ತಿರುತ್ತಾರೋ ಸರ್ಕಾರಿ ನೌಕರನ ದರ್ಶನಕ್ಕೂ ಅಷ್ಟೇ ಕಾಯುತ್ತಿರುತ್ತಾರೆ.





ಬಲು ಸಹನಾಜೀವಿಗಳು. ಒಂದು ನೂರು ಜನ ಕ್ಯೂ ನಿಂತು ಕಾದಿರಲಿ. ನಮ್ಮ ಗುಮಾಸ್ತ ಪಕ್ಕದ ವನೊಂದಿಗೆ ತನ್ನ ಹರಟೆ ಹೊಡೆಯುತ್ತಲೇ ಇರುತ್ತಾನೆ. ಕ್ಯೂನಲ್ಲಿನ ಜನ ಭಕ್ತಿಯಿಂದ ತುಟಿ ಪಿಟಕ್ಕೆನ್ನದೆ ಸರ್ಕಾರಿ ನೌಕರನ ಕಟಾಕ್ಷಕ್ಕಾಗಿ ಕಾದು ನಿಂತಿರುತ್ತಾರೆ. ದೇವರನ್ನು ಸುಪ್ರಸನ್ನಗೊಳಿಸಲು ಸ್ತೋತ್ರಗಳಿದ್ದಂತೆ ಸರ್ಕಾರಿ ನೌಕರನನ್ನು ಪ್ರಸನ್ನವದನನ್ನಾಗಿಸಲು ಹಾಡುಗಳಿದ್ದರೆ ಅದೆಷ್ಟು ಮಜವಿರುತ್ತದೆ! ಕ್ಯೂನಲ್ಲಿನ ಜನ ತಾಳಗಳನ್ನು ಬಡಿಯುತ್ತ ಹಾಡುತ್ತ ಭಕ್ತಿರಸದ ಪರಾಕಾಷ್ಟೆಯನ್ನು ಮುಟ್ಟಿದಾಗ ಸರ್ಕಾರಿ ನೌಕರ ತನ್ನ ಹರಟೆಯನ್ನು ನಿಲ್ಲಿಸಿ ಪ್ರಸನ್ನವದನದಿಂದ ತನ್ನ ಸೀಟಿನಲ್ಲಿ ಪ್ರತ್ಯಕ್ಷನಾಗಿ ನಿಮಗೇನು ವರ ಬೇಕು ಎಂದು ಕೇಳುವ ಚಿತ್ರ ಅದೆಷ್ಟು ಮನಮೋಹಕ! ಕ್ಯೂ ನಿಂತ ಜನ ತಮ್ಮ ತಮ್ಮಲ್ಲೇ ಕ್ಯೂ ನಲ್ಲಿನ ತಮ್ಮ ಸ್ಥಳದ ಸಲುವಾಗಿಯೇ ಇಲ್ಲವೆ ಹಿಂದಿನವರು ದಬ್ಬಿದನೆಂದೋ ಅಥವ ಇನ್ಯಾರೋ ಅಕ್ರಮವಾಗಿ ಕ್ಯೂನಲ್ಲಿ ಸೇರಿದನೆಂದೋ ಗುದ್ದಾಡುತ್ತಾರೆಯೇ ಹೊರತು ತನ್ನ ಸೀಟಿಗೆ ಬರದ ಸರ್ಕಾರಿ ನೌಕರನನ್ನು ಅಪ್ಪಿತಪ್ಪಿಯೂ ದಬಾಯಿಸುವ ಕೀಳು ಅಭಿರುಚಿಯನ್ನು ತೋರಿಸುವುದಿಲ್ಲ. ತಮ್ಮ ಮೇಲೆ ಜನಕ್ಕೆ ಅಪಾರ ಪ್ರೇಮವಿದೆಯೆಂಬುದರ ಅರಿವು ಸರ್ಕಾರಿ ನೌಕರರಿಗೂ ಇದೆ. ಅವರಾದರೂ ಅಷ್ಟೆ. ತಮ್ಮ ಪಾಡಿಗೆ ಅವರನ್ನು ಬಿಟ್ಟರೆ ಅವರಂಥ ಸಭ್ಯ ಜನ ಬೇರೆ ಸಿಗುವುದಿಲ್ಲ. ಒಬ್ಬರ ತಂಟೆಗೆ ಹೋಗದೆ ಸರ್ಕಾರಿ ನೌಕರ ತಾನಾಯಿತು ತನ್ನ ಕ್ಯಾಂಟೀನಾಯಿತು, ತನ್ನ ಸ್ನೇಹಿತರಾಯಿತು, ಆಫೀಸಿನ ಗೆಳತಿಯರಾಯಿತು ಒಟ್ಟಿನಲ್ಲಿ ಕೆಲಸವೊಂದನ್ನು ಬಿಟ್ಟು ಇನ್ನೆಲ್ಲವೂ ಆಯಿತು!

ಹಾಗೆಂದಾಗ ನಿಮ್ಮ ಮನಸ್ಸಿನಲ್ಲಿ ಅವರು ಕೆಲಸವನ್ನೇ ಮಾಡುವುದಿಲ್ಲವೆಂಬ ಭಾವನೆ ಬೇಡ. ಅವರು ಜನರ ಸಲುವಾಗಿಯೇ ಇರುವ ವಿಧೇಯ ಸರ್ಕಾರಿ ಸೇವಕರು ಎಂಬುದನ್ನು ಮರೆಯಬೇಡಿ!

ಜನತೆಯ ಸುಖ ದುಃಖಗಳನ್ನು ಜನತೆ ಆರಿಸಿದ ಜನತಾ ಪ್ರತಿನಿಧಿಗಳು ವಿಚಾರಿಸಿಕೊಳ್ಳುತ್ತಾರೆಂದು ನೀವು ತಿಳಿದಿದ್ದರೆ ಅದು ನಿಮ್ಮ ಮನಸ್ಸಿನಲ್ಲಿರುವ ಅನೇಕ ಮೂರ್ಖ ಕಲ್ಪನೆಗಳಲ್ಲಿ ಒಂದು ಎಂದು ಅನ್ನಬೇಕಾಗುತ್ತದಷ್ಟೆ. ಜನತಾ ಪ್ರತಿನಿಧಿಗಳು ಬರುತ್ತಾರೆ ಹೋಗುತ್ತಾರೆ ಆದರೆ ಸದಾ ಇರುವವರು ಸರ್ಕಾರಿ ನೌಕರರು ಮಾತ್ರ. ಆದ್ದರಿಂದ ನಮ್ಮ ದೇಶ ಪ್ರಗತಿಯಾಗುತ್ತಿದೆ ಎಂದು ನೀವು ಒಪ್ಪುವುದಾದರೆ ಅದರ ಕೀರ್ತಿ ಇಡೀ ದೇಶದ ತುಂಬ ತುಂಬಿರುವ ಸರ್ಕಾರಿ ನೌಕರರಿಗೆ ಸೇರಬೇಕು ಅಲ್ಲವೆ? ಅಂದಮೇಲೆ ಅವರು ಕೆಲಸ ಮಾಡುತ್ತಾರೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪವಾಡಗಳನ್ನು ನಂಬದವರಿಗೆ ದರದರ ಎಳೆದುಕೊಂಡು ಬಂದು ಈ ಪವಾಡಗಳನ್ನು ತೋರಿಸಬೇಕು. ಆಫೀಸಿನಲ್ಲಿ ತನ್ನ ಕುರ್ಚಿಯಿಂದ ಅದೃಶ್ಯನಾಗಿರುವ ಸರ್ಕಾರಿ ನೌಕರ ಅದು ಹೇಗೆ ಕೆಲಸಮಾಡುತ್ತಾನೆ? ಇದು ಪವಾಡವಲ್ಲದಿದ್ದರೆ ಇನ್ಯಾವುದಕ್ಕೆ ಪವಾಡವೆನ್ನುತ್ತೀರಿ? ಹಿಂದೆಲ್ಲ ತಮ್ಮ ಇರುವನ್ನು ತಿಳಿಸಲು ಕುರ್ಚಿಗೆ ಕೋಟು ಸಿಕ್ಕಿಸಿ ಸರ್ಕಾರಿ ನೌಕರ ಅದೃಶ್ಯನಾಗುತ್ತಿದ್ದ. ಈಗಿನ ಸರ್ಕಾರಿ ನೌಕರ ತನ್ನ ಕೋಟ–ನ್ನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಹಾಗಾಗಿ ಅವನು ಬಂದಿದ್ದನೇ ಎಂಬುದು ಜಿಜ್ಞಾಸೆಯ ವಿಷಯವಾಗಬಹುದು. ಉದಾಹರಣೆಗೆ ಒಂದು ಪ್ರಸಂಗವನ್ನು ಹೇಳುವೆ ಕೇಳಿ.

ನನ್ನ ಮಿತ್ರನಾದ ಕಲ್ಲೇಶಿಯನ್ನು ನೋಡಲು ಹೋಗಿದ್ದೆ. ಅವನೂ ನಾನೂ ಒಟ್ಟಿಗೆ ಓದಿದವರು. ನಾನು ಇಂಜಿನಿಯರಿಂಗ್ ಮುಗಿಸಿ ಅಧ್ಯಾಪಕ

ನಾದ. ಅವನು ತುಂಬ ಕಷ್ಟಪಟ್ಟು S.S.L.C. ಮುಗಿಸಿ ಗುಮಾಸ್ತನಾದ. ಹೆಚ್ಚು ಓದಿದ ನಾನು ಇನ್ನೂ ಅಧ್ಯಾಪಕನಾಗೇ ಇದ್ದೇನೆ. ಕಲ್ಲೇಶಿ ಎರಡನೆಯ ದರ್ಜೆ ಗುಮಾಸ್ತನಾಗಿ, ಮೊದಲನೇ ದರ್ಜೆ ಗುಮಾಸ್ತನಾಗಿ, ತಹಶೀಲದಾರನಾಗಿ ಈಗ ಅಸಿಸ್ಟೆಂಟ್ ಕಮೀಷನರನಾಗಿದ್ದಾನೆ. ಇಂಥ ಅನೇಕ ಪವಾಡಗಳನ್ನು ನೋಡಿದ ಮೇಲೆಯೇ ನನಗೆ ದೇವರಲ್ಲಿ, ಕರ್ಮದಲ್ಲಿ ನಂಬಿಕೆ ಉಂಟಾಗಿದ್ದುದು. ಇರಲಿ, ವಿಷಯಕ್ಕೆ ಬರುತ್ತೇನೆ. ನನ್ನನ್ನು ನೋಡಿದವನೇ ಕಲ್ಲೇಶಿ "ಕುಂತ್ಕಳಲೇ" ಎಂದು ಎದುರಿಗಿದ್ದ ಕುರ್ಚಿಯನ್ನು ತೋರಿಸಿ ಉಪಚರಿಸಿದ. ನಾನು ಕೂತೆ. ನನ್ನೆದುರು ತನ್ನ ಸಾಹೇಬಗಿರಿಯನ್ನು ತೋರಿಸಲು ಕಲ್ಲೇಶಿ ಆಸೆಪಟ್ಟಿದ್ದನೋ ಏನೋ ಗೊತ್ತಿಲ್ಲ. ಜವಾನನ್ನು ಕರೆದು, "ಕೃಷ್ಣಪ್ಪನ್ನ ಕರಿ" ಎಂದ. ಜವಾನ ಹೋಗಿ ಬಂದು, "ಕೃಷ್ಣಪ್ನೋರು ಕ್ಯಾಂಟೀನ್ಕಡಿ ಹೋಗವ್ರಂತೆ" ಎಂದ. ಕಲ್ಲೇಶಿ ಅಸಮಾಧಾನದಿಂದ "ಅಲ್ಲೇ ಹೋಗ್ ಕರ್ಕಂಬ. ಅರ್ಜೆಂಟೈತನ್ನು" ಎಂದ. ಜವಾನ ಅರ್ಧ ಗಂಟೆ ಹೋದ.

"ಈ ಬಡ್ಡೀಮಗ್ನೂ ಅವನ್ನ ತೇಗೇ ಕಾಫಿ ಕುಡ್ಕಂತ ಕುಂತ್ನೇನೋ." ಎಂದು ಕಲ್ಲೇಶಿ ಗೊಣಗುತ್ತಿದ್ದಂತೆಯೇ ಒಳ ಬಂದ ಜವಾನ, "ಕ್ಯಾಂಟೀನಿಂದ ಅವ್ರು ಸ್ಟೋರ್ಸ್ ಕಡಿ ಹೋದ್ರಂತೆ" ಎಂದ. "ಎಲ್ಲಿದ್ರೂ ಎಳ್ಕಂಬ ಹೋಗೋ" ಎಂದು ಕೂಗಾಡಿದ ಕಲ್ಲೇಶಿ. ಪಾಪ, ಅವನಿಗೆ ಮೈ ಪರಚಿಕೊಳ್ಳುವಷ್ಟು ಅಸಹಾಯಕತೆ, 'ಅಮ್ಮ, ನಿಮ್ಮ ಮನೆಗಳಲ್ಲಿ ನಮ್ಮ ಕೃಷ್ಣನ ಕಂಡೀರೇನಮ್ಮ' ಎಂಬಂತೆ ಜವಾನ ಒಂದೊಂದು ಕಡೆಯೂ ಹೋಗಿ ಬರುವುದು ನಡೆಯಿತು. ಕೊನೆಗೂ ಕೃಷ್ಣಪ್ಪನ ದರ್ಶನ ಭಾಗ್ಯ ಲಭಿಸಿತು. ಕಲ್ಲೇಶಿ ತನ್ನ ಸಿಟ್ಟನ್ನೆಲ್ಲ ತಡೆಹಿಡಿದು, "ಎಲ್ಲಾಗೆ ಮಾಯ ಆಗಿದ್ರಿ? ಗಂಟೆಗಟ್ಲೆ ಪತ್ತೆ ಇಲ್ಲಲ್ಲ" ಎಂದಾಗ ಕೃಷ್ಣಪ್ಪ ತಣ್ಣಗೆ, "ನಾನೆಲ್ಲೂ ಹೋಗಿಲ್ಲ ಸಾರ್, ಪ್ರೈವೇಟರಿಗೆ ಹೋಗಿದ್ದೆ ಅಷ್ಟೆ" ಎಂದ. ಕಲ್ಲೇಶಿ ತಣ್ಣಗಾದ. ಅದೊಂದು ಜಾಗವನ್ನು ಹುಡುಕುವುದು ಸಾಧ್ಯವಿಲ್ಲ ನೋಡಿ. ಅಲ್ಲದೆ ಆ ಮಹತ್ಕಾರ್ಯಕ್ಕೆ ಹೋಗಬಾರದೆಂದಾಗಲೀ, [illegible] ಸರ್ಕಾರಿ ನೌಕರರ ನಿಯಮಾವಳಿಯಲ್ಲಿ ಏನೂ ತಿಳಿಸಿಲ್ಲವಲ್ಲ.

ಸರ್ಕಾರಿ ನೌಕರ ಕೆಲಸವನ್ನೇ ಮಾಡುವುದಿಲ್ಲ ವೆನ್ನುವುದು ತಪ್ಪು. ನಿಮಗೆ ಅವನಿಂದ ಕೆಲಸ ಮಾಡಿಸಿಕೊಳ್ಳುವುದು ತಿಳಿದಿರಬೇಕು. ರಾತ್ರಿ ಟ್ರೈನಿಗೆ ನಾನು ದೊಡ್ಡ ದೊಡ್ಡ ನಾಲ್ಕು ಪೆಟ್ಟಿಗೆಗಳು, ಸಾಲದ್ದಕ್ಕೆ ಅಜ್ಜಿ ಬೇರೆ, ಇವರೆಲ್ಲರ ಸಮೇತ ಹೊರಟಾಗ ಅಣ್ಣ ಕೇಳಿದ. "ರಿಸರ್ವ್ ಮಾಡ್ಸಿದಿಯೇನೋ?" "ಇಲ್ಲ" ಎಂದೆ. "ತಿಂಗಳ್ಮುಂಚೇನೇ ಎಲ್ಲ ರಿಸರ್ವ್ ಆಗ್ಬಿಟ್ಟಿರುತ್ತೆ. ಇನ್ನೇನು ಹೋಗ್ತಿಯೋ ಈ ರಾತ್ರೀಲಿ. ನಾಳೆ ಹೋಗು" ಎಂದ. ಆದರೆ ನನ್ನಲ್ಲಿ ನನಗೆ ತುಂಬ ನಂಬಿಕೆ. ಸ್ಟೇಶನ್ಗೆ ಹೋದಾಗ ರೈಲು ಬೇಗ ಬಂದು ನಿಂತೇಬಿಟ್ಟಿತ್ತು. ಬೋಗಿಯೊಳಗೆ ನುಗ್ಗುತ್ತಿದ್ದ ನನ್ನನ್ನು ಗಾರ್ಡ್ ತಡೆದು "ರಿಸರ್ವ್ ಆಗಿದೆ. ಲಗೇಜ್ ಮಾಡಿಸಿಲ್ಲ ಮಾಡಿಸಿ" ಹಾಗೆ ಹೀಗೆ ಎಂದು ಹುಲಿಯಂತೆ ಬಾಯಿ ತೆರೆದು ಹಾರಿದ. ನಾನು ಮಾತನಾಡದೆ ಅವನ ಕೈಗೆ ಒಂದು ಸಣ್ಣ ನೋಟನ್ನಿಟ್ಟೆ. ಅವನು ಇಲಿಯಾದ. ತಾನೇ ಆ ಹೆಣಭಾರ ಪೆಟ್ಟಿಗೆಗಳನ್ನು ತೂಕ ಮಾಡಿಸಿ ಒಳಗಿಡಿಸಿದ. ಸ್ಲೀಪಿಂಗ್ ಕೋಚಿನಲ್ಲಿ ಸೀಟು ಕೊಡಿಸಿದ. ನನ್ನ ಅಜ್ಜಿಯನ್ನು ಮಲಗಿಸಿ ರಗ್ಗು ಹೊದಿಸಿ "ಚಳಿ ಬಹಳ. ಪಾಪ!" ಎಂದ. ಎಂಥ ಮಾನವೀಯತೆ!

ನಾನು ಎಷ್ಟೋ ತಪ್ಪುಗಳನ್ನು ಮಾಡಿದ್ದೇನೆ. ಆದರೆ ಪೋಲೀಸ್ ಸ್ಟೇಶನ್ಗೆ ಹೋಗಿಲ್ಲ. "ಪೋಲೀ





ಸಿನವನ ಕೈಗೆ ಐವತ್ತು ಪೈಸೆಯೋ ರೂಪಾಯಿಯೋ ಹಾಕು. ಅವರು ತುಂಬ ಒಳ್ಳೆಯ–ಜನ" ಎಂದು ನನ್ನ ಹಿರಿಯರು ಹೇಳಿದ್ದು ಸತ್ಯ. ಕೈಗೆ ದುಡ್ಡು ಬಂದೊಡನೆಯೇ ಪೋಲಿಸಪ್ಪ ತಾನೇ ಡಬ್ಬಲ್ ರೈಡ್ ಮಾಡಿ ನನ್ನ ಮನೆಯ ವರೆಗೂ ಬಿಟ್ಟಿದ್ದುಂಟು.


ಇದನ್ನು ನೀವು ಭ್ರಷ್ಟಾಚಾರವೆನ್ನುತ್ತೀರಿ ಅಲ್ಲವೆ ? ಸರ್ಕಾರದಲ್ಲಿ ಕೆಲಸಮಾಡಿಸಿಕೊಳ್ಳಲು ವಶೀಲಿ ಉಪಯೋಗಿಸಬಹುದು. ಆದರೆ ಎಲ್ಲರಿಗೂ ವಶೀಲಿಯ ಮಾವ ಇರುವುದು ಹೇಗೆ ಸಾಧ್ಯ ? ಹಾಗಾಗಿ ನಮ್ಮ ಕೆಲಸಕ್ಕೆ ಸರ್ಕಾರಿ ನೌಕರನನ್ನೇ . ಅವಲಂಬಿಸಬೇಕು. ಸರ್ಕಾರಿ ನೌಕರ ದೇವರಿದ್ದಂತೆ ಎಂದ ಮೇಲೆ ಅವನನ್ನು ಬರಿಗೈಯಲ್ಲಿ ಕಂಡರೆ ಕೆಲಸವಾಗುವುದೆ? ಹಾಗಾಗಿ. ಪ್ರಜಾಪ್ರಭುತ್ವದಲ್ಲಿ ಭ್ರಷ್ಟಾಚಾರ ಒಂದು ಅಂಗವಾಗಿ ಬಿಟ್ಟಿದೆ. ಭ್ರಷ್ಟಾಚಾರದಲ್ಲೂ ಒಂದು ರೀತಿಯ ಮೆಚ್ಚತಕ್ಕ ಶಿಸ್ತಿದೆ. ಕೆಲವು ಆಫೀಸುಗಳಲ್ಲಿ ಜವಾನನಿಂದ ಆಫೀಸರನವರೆಗೆ ಕೊಡಬೇಕಾದುದನ್ನು ಮೊದಲೇ ವಸೂಲಿ ಮಾಡಿಬಿಡುತ್ತಾರೆ. ಉದಾಹರಣೆಗೆ... ಹೋಗಲಿ ಬಿಡಿ, ನಿಮಗೆ ಗೊತ್ತೇ ಇರುತ್ತದೆ.

ಒಂದು ವ್ಯವಸ್ಥಿತ ಶಿಸ್ತು ಇದ್ದರೆ ಭ್ರಷ್ಟಾಚಾರ ಪ್ರಜಾಪ್ರಭುತ್ವದ ಶಿಷ್ಟವಾದ ವ್ಯವಸ್ಥೆಯಾಗುತ್ತದೆ? ಪ್ರತಿಯೊಂದು ಕೆಲಸಕ್ಕೂ ಇಷ್ಟು ಎಂದು ಮುಂಚೆಯೇ ನಿರ್ಧರಿಸಲ್ಪಟ್ಟ ಪಟ್ಟಿಯನ್ನೇ ಘನ ಸರ್ಕಾರ ಪ್ರಕಟಿಸಿ ಬಿಟ್ಟರೆ ಜನತೆಗೂ ಉಪಕಾರ ಮಾಡಿದಂತಾಗುವುದು. ಆಫೀಸಿಗೆ ನಾಯಿಯಂತೆ ಅಲೆದಾಡುವುದರ ಬದಲು ದೇವರ ಹುಂಡಿಗೆ ಹಾಕಿದಂತೆ ಎಷ್ಟೋ ಅಷ್ಟು ತೆತ್ತು ಕೆಲಸ ಮಾಡಿಸಿಕೊಳ್ಳಬಹುದು. ಕೇವಲ ಐದೇ ವರ್ಷ ಜನಸೇವೆ ಮಾಡುವ ಶಾಸಕರಿಗೆ ಕ್ಷೇತ್ರ ಭತ್ಯ, ಪುಗುಸಟ್ಟೆ ನಿವಾಸ. ವಿದ್ಯುಚ್ಛಕ್ತಿ, ಪ್ರವಾಸ ಭತ್ಯ ಸಾಲದ್ದಕ್ಕೆ ವೇತನ, ನಿವೃತ್ತಿ ವೇತನ ಇತ್ಯಾದಿ ಇತ್ಯಾದಿ ಸೌಲಭ್ಯಗಳಿವೆ. ಶಾಸಕರ ಈ "ಇತ್ಯಾದಿ" ಏನು ಎಂಬುದು ನಿಮಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಸೌಲಭ್ಯಗಳನ್ನೆಲ್ಲ ಸಮರ್ಥಿಸಿಕೊಳ್ಳುತ್ತ "ಏಕೆ ಸ್ವಾಮಿ, ಶಾಸಕರಿಗೂ ಹೊಟ್ಟೆ ಇದೆ. ಹೆಂಡತಿ ಮಕ್ಕಳಿದ್ದಾರೆ." ಎಂದು ಹೇಳಿಕೆ ನೀಡಿದ್ದಾರೆ. ಮೂವತ್ತು ನಲವತ್ತು ವರ್ಷ ಜನಸೇವೆ ಸಲ್ಲಿಸುವ ಸರ್ಕಾರಿ ನೌಕರನಿಗೆ ಪುಗುಸಟ್ಟೆ ಮನೆಯಿಲ್ಲ. ವಿದ್ಯುಚ್ಛಕ್ತಿಯ ಬಿಲ್ ತಾನೇ ಕೊಡಬೇಕು. ಟೆಲಿಫೋನ್, ಪ್ರಯಾಣ ಸೌಲಭ್ಯಗಳಿಲ್ಲ. ಸಂಬಳ ಸಾಲದು. ಆದರೆ ಸರ್ಕಾರಿ ನೌಕರನಿಗೂ ಹೆಂಡತಿ ಮಕ್ಕಳಿದ್ದಾರೆ. ಹೊಟ್ಟೆ ಇದೆ!

ಭ್ರಷ್ಟಾಚಾರ ಅವನಿಗೆ "ಇತ್ಯಾದಿ"ಯಾಗುವುದು ಅನಿವಾರ್ಯ.

ಆದ್ದರಿಂದಲೇ ನಾನು ನಿಮಗೆ ಮೊದಲೇ ತಿಳಿಸಿದುದು–ಸರ್ಕಾರಿ ನೌಕರ ಬೇರೆ ಅಲ್ಲ, ದೇವರು ಬೇರೆ ಅಲ್ಲ ಎಂದು.

ಇನ್ನು ಮುಂದೆ ಸರ್ಕಾರಿ ನೌಕರನನ್ನು ನೀವು ಹೇಗೆ ಕಾಣಬೇಕು ಎಂಬುದು ತಿಳಿಯಿತಲ್ಲವೆ?



ಸಂಬಂಧ

ಪಿ. ವಿ. ಶಾಸ್ತ್ರಿ ಕಬ್ಬಳ್ಳಿ

ವಂದನಾಳ ಸಮಸ್ಯೆ ಬೇರೆ.

ಸುರೇಶನ ಸಮಸ್ಯೆ ಬೇರೆ.

ಆದರೆ ಅವರಿಬ್ಬರೂ ಪ್ರೀತಿಸಿದವರು.

ಅವರಿಬ್ಬರ ಪ್ರೀತಿಯಲ್ಲಿಯೇ ಸಮಸ್ಯೆ ಹುಟ್ಟಿದ್ದು.

ಸಮಸ್ಯೆ ಪ್ರೀತಿಯಲ್ಲಿ ಹುಟ್ಟಿದ್ದೇನೋ ಹೌದು; ಆದರೆ ಅದು ಪ್ರೀತಿಯೊಡನೆ ಒಂದಾಗಲಿಲ್ಲ. ಬಹುತೇಕ ಬದುಕು ಸಾಯುವುದು ಸಮಸ್ಯೆಗಳಲ್ಲಿಲ್ಲ. ಅವುಗಳ ಪರಿಹಾರಗಳಲ್ಲಿ. ಆದರೂ ನಾವು ಪರಿಹಾರಗಳನ್ನು ಕುರಿತೇ ಹೆಚ್ಚು ತಲೆ ಕೆಡಿಸಿಕೊಳ್ಳುತ್ತೇವೆ.

ಪ್ರೀತಿಯೂ ಅಲ್ಲ; ಸಮಸ್ಯೆಯೂ ಅಲ್ಲ: ಬದುಕೂ ಅಲ್ಲ. ಪರಿಹಾರ ಮುಖ್ಯವಾದಾಗ ಅವರಿಬ್ಬರೂ ಸಿಡಿದುಹೋದಂತೆ ಬದುಕಿನ ವಿಭಿನ್ನ ದಿನ್ನೆಯ ಮೇಲೆ ಕೆನ್ನೆಗೆ ಕೈಕೊಟ್ಟು ಕುಳಿತರು.

ಆಕೆಗೆ ಈಗ ಎರಡು ತಿಂಗಳು ಆಗುತ್ತ ಬಂದಿದೆ.

ಅದು ಅವನಿಗೆ ಭೀಕರ ಸ್ವಪ್ನವಾಗಿದೆ.

ಆದರೆ ಆಕೆಗೆ ಅದು ಸವಿಗನಸೂ ಅಲ್ಲ, ದುಃಸ್ವಪ್ನವೂ ಅಲ್ಲ, ಆಕೆ ಗರ್ಭಪಾತ ಮಾಡಿಸಿಕೊಳ್ಳಬೇಕು ಎಂದು ಅವನ ವಾದ. ತನಗೆ ಎರಡು ತಿಂಗಳಾಗಿದ್ದು, ತನಗೇ ಮೊದಲು ತಿಳಿದದ್ದು, ಆತನಿಗೋ ಒಂಭತ್ತು ತಿಂಗಳ ನಂತರ

ಗೊತ್ತಾಗುತ್ತಿತ್ತೆಂದು ಆಕೆಯು ಹೇಳಿಕೆ. ಹೊಟ್ಟೆಯು ಲ್ಲಿ ಹೊಳೆತ ಹೊಸಕೆ ಈಗ ಪ್ರೀತಿಯು. ಸ್ವಾತಂತ್ರ್ಯದ ಸುಂದರ ಸಂಕೇತವಾಗಿಯುಂತೂ ಉಳಿಯುಲಿಲ್ಲ.

ಬಸುರು ತೆಗೆಯಿಸಿಕೊಂಡರೆ ಬದುಕಿನ ಸಮಸ್ಯೆಗಳೆಲ್ಲ ಪರಿಹಾರವಾಗವು ಎಂದು ಆಕೆ ಹೇಳಿದರೆ ತನಗೆ ಅದೇ ದೊಡ್ಡ ಸಮಸ್ಯೆಯೆಂದು ಹೇಳುವುದನ್ನು ಆತ ಬಿಡಲೊಲ್ಲ. ತಾನು ಬಸಿರಾಗದಿದ್ದರೂ ಬದುಕಿಗೆ ಸಮಸ್ಯೆಗಳ ಅನೇಕ ಟಿಸಿಲುಗಳೊಡೆಯಬಹುದಿತ್ತು: ಆದುದರಿಂದ ಈ ವಿಷಯವನ್ನು ದೊಡ್ಡದು ಮಾಡಿಕೊಳ್ಳದೆ ಪ್ರೀತಿಯನ್ನು ರಕ್ಷಿಸಿಕೊಳ್ಳಬೇಕು; ಅದರೊಂದಿಗೆ ಬದುಕನ್ನು ಸಾಗಿಸಬೇಕು ಎಂದು ಆಕೆ ವಿಚಾರ ಮಾಡುತ್ತಾಳೆ. ಈಗ ಅವರು ಒಬ್ಬರನ್ನೊಬ್ಬರು ಬಹಳ ಸಾರೆ ತೀರು ಗುಪ್ತದ ಮೇಲೆ ಸಂಧಿಸುತ್ತಿದ್ದಾರೆ. ಭೇಟಿಗೆ ಬರುವಾಗ ತಲೆಯನ್ನು ತುಂಬಿ ತರುತ್ತಿದ್ದರು. ಒಂದೆಡೆ ಕುಳಿತು ಮಾತನಾಡಬೇಕು ಎಂದುಕೊಂಡಾಗ ತಲೆಯಲ್ಲಿ ಗಾಳಿ ಮಾತ್ರ ಉಳಿದಿರುತ್ತಿತ್ತು. ಶಬ್ದಗಳ ಬಡಿವಾರವಿಲ್ಲದೆ ವಿಚಾರಗಳ ಲೇವಾದೇವಿ ನಡೆಯುವ ವೇಳೆಗೆ ಸುತ್ತೂ ಕತ್ತಲೆ ಕವಿದಿರುತ್ತಿತ್ತು. ಕೊನೆಗೂ ಆಕೆಗೇ ಏನಿಷ್ಟು ಹೊಳೆಯುತ್ತಿತ್ತು. ಅವನ ಭುಜದ ಮೇಲೆ ಕೈಯಿಟ್ಟು, "ಬದುಕು ಯಾವಾಗಲೂ ಅನಿರೀಕ್ಷಿತ. ಪರಿಹಾರದ ಕಡೆಗೇ ಏಕೆ ಧಾವಿಸಬೇಕು?" ಎನ್ನುತ್ತಾಳೆ.

ಆತ ಅವಳ ಕಡೆಗೆ ಮುಖ ಮಾಡಿ, "ಅಂದರೆ?" ಎನ್ನುತ್ತಾನೆ.

"ಪರಿಹಾರ ಅನಿರೀಕ್ಷಿತವಾಗಿರುವುದರಿಂದ ಅದು ಅಪಹರಿಹಾರ್ಯವೇ ಆಗಿರಬೇಕೆಂದಿಲ್ಲ. ಅಲ್ಲವೆ ?"

"ಅಂದರೆ?"

"ಈ ಮಾತು ಅಸಾಧ್ಯವಾದರೂ ಇದನ್ನು ಮೆಚ್ಚಿಕೊಳ್ಳುವುದೇ ಬದುಕಿನ ಲಕ್ಷ್ಯಕ್ಕೆ ಸಾಕ್ಷಿಯಲ್ಲವೇ?" ಎಂದು ಆತನ ಕೆನ್ನೆ ಮುಟ್ಟಿದರೆ, ಆತ ಮತ್ತೆ, "ಅಂದರೆ?" ಎನ್ನುತ್ತಾನೆ.

"ಪ್ರತಿಭಟಿಸಿದರೇ ಜೀವಿಸಿರುವುದು ಸತ್ಯವೆಂದಾದರೂ, ಪ್ರತಿಭಟನೆ ಸಾಮಾನ್ಯ ಜೀವನದ ತೀರಾ ಸಾಮಾನ್ಯ ರೀತಿಯಾಗುವುದು ಬೇಡವೆ ?"

"ಅಂದರೆ...?"

"ಸುರೇಶ್, ನನ್ನೊಂದಿಗೆ ನೀನು ವಿಚಾರ ಮಾಡುತ್ತಿಲ್ಲ; ನೀನೂ ತಲೆ ಕೆಡಿಸಿಕೊಳ್ಳಲು ಬೇಕಾದಷ್ಟನ್ನೇ ಚಿಂತಿಸುತ್ತೀಯೆ...?"

"ಅಂದರೆ...?" ಎಂದು ಆಕೆಯು ಕೈ ಹಿಡಿದು ಬೆರಳುಗಳಲ್ಲಿ ಬೆರಳುಗಳನ್ನು ಹೆಣೆದುಕೊಳ್ಳುತ್ತಾನೆ.

"ನಾನೂ ನೀನೂ ಪ್ರೀತಿಸಿದವರು. ಆದರೆ ಒಬ್ಬರನ್ನೊಬ್ಬರನ್ನು ಇಬ್ಬರೂ ಮೂರನೆಯವರಂತೆ ನೋಡುತ್ತಿದ್ದೇವಲ್ಲ !"

"ಅಂದರೆ...?"

"ಅಂದರೆ, ನಿನಗೆ ತಿಳಿಯಬೇಕೆಂದರೆ, ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮನ್ನು ಅಲಕ್ಷ್ಯ ಮಾಡುವ ಜಗತ್ತಿನೊಂದಿಗೇ ಒಪ್ಪಂದ ಮಾಡಿಕೊಳ್ಳಲು ನಾವು ಮನಸ್ಸಿನಲ್ಲಿ ಕುನ್ನಿಗಳಂತೆ ಕಚ್ಚಾಡುತ್ತಿಲ್ಲವೆ? ನಾವು ಒಂದು ವ್ಯವಸ್ಥಿತ ಜೀವನ ಕ್ರಮವನ್ನು ಬಯಸುವಷ್ಟು, ಅದರ ಬಗೆಗೆ ಆಶೆಬುರುಕರಾಗುವಷ್ಟು ಈ ಜಗತ್ತು ಸಂವೇದನಾಶೀಲವಾಗಿದೆಯೆ ?" ಎಂದು ಅವನ ಕೈಗಳಿಂದ, ಕೈಗಳನ್ನು ತಪ್ಪಿಸಿಕೊಂಡು ಆತನ ಹರಡಿದ ತಲೆ ಕೂದಲನ್ನು ನೇವರಿಸುತ್ತಾಳೆ. ಆತನಿಗೆ ಅಸಹ್ಯವೆನಿಸಿದರೂ, ನಾಚಿಕೆ ಎನಿಸಿದರೂ ಅನಿವಾರ್ಯವಾಗಿ ಮತ್ತೆ, "ಅಂದರೆ?" ಎನ್ನುತ್ತಾನೆ.

"ಅಂದರೆ ಯಾರಯಾರದೋ ಆಸೆ. ಆಜ್ಞೆಗೆ, ಹೊಂದುವಂತೆ ಬದುಕನ್ನು ಕತ್ತರಿಸಿಕೊಳ್ಳುತ್ತ ಹೋದರೆ ಕೊನೆಗೆ ಉಳಿಯುವ ಬದುಕು ಅವರ ಅಳತೆಯದೂ ಆಗುವದಿಲ್ಲ; ನಮ್ಮ ಆಸೆಯದೂ ಆಗುವದಿಲ್ಲ!" ಎನ್ನುತ್ತಾ ವಂದನಾ ಅವನನ್ನು ಬಿಗಿದುಕೊಳ್ಳುತ್ತಾಳೆ. ಆತನ ಎದೆಯ ಮೇಲೆ ಮುಖವಿಟ್ಟು ಮೂಕಿಯಾಗುತ್ತಾಳೆ. ಅವನು ಬಿದ್ದ ಮರವನ್ನು ಆಧರಿಸಿಕೊಂಡು ನಿಂತ ಬಂಡೆಗಲ್ಲಿನಂತೆ ನಿಶ್ಚಲ ಭಾವನಾಗಿ ಕುಳಿತುಕೊಳ್ಳುತ್ತಾನೆ, ಆಕೆ ಮುಖವೆತ್ತಿ ಅವನ ಕಣ್ಣುಗಳಲ್ಲಿ ಕಣ್ಣುಗಳನ್ನಿರಿಸುತ್ತಾಳೆ. ಆತನ ಗಲ್ಲ ತುಂಬಿದ ಸುಂದರ ಮುಖದಲ್ಲಿ, ಆಕರ್ಷಕ ಕಣ್ಣಿನ ಗುಂಡಿಗಳಲ್ಲಿ ಆಕೆಯ ಪ್ರತಿಬಿಂಬ ಹೆಣದಂತೆ ತೇಲುತ್ತದೆ! ಹುಟ್ಟನ್ನು ಹುಗಿದ ಶೃಂಗಾರವಾದ ಗೋರಿಯ ಬಳಿ ಸುರೇಶ ಹಣೆಗೆ ಕೈಯಿಟ್ಟು ಕುಳಿತದ್ದೂ ತೋರಿತು.

"ಇನ್ನೂ ಕಲಿತು ಮುಗಿಯಲಿಲ್ಲ...

"ಮದುವೆಯಾಗುವಂತೆಯೂ ಇಲ್ಲ...

"ಮನೆಯವರು ಒಪ್ಪುವದಂತೂ ಖಂಡಿತ ಸಾಧ್ಯವಿಲ್ಲ...

"ಅದಕ್ಕಿಂತಲೂ ಹೆಚ್ಚಾಗಿ, ನನಗೆ ಈಗ ಅಪ್ಪನಾಗುವ ಆಸೆಯೂ ಇಲ್ಲ.

"ಅದಕ್ಕಿಂತಲೂ ಹೆಚ್ಚಾಗಿ, ಹೀಗೆ ಆಗುವಾಗ ನಾನು ಸರಿಯಾಗಿ ವಿಚಾರಿಸಿದ್ದೇನೆ, ಎಂಬ ಸಮಾಧಾನವೂ ಇಲ್ಲ.

"ಅದಕ್ಕಿಂತಲೂ ಹೆಚ್ಚಾಗಿ, ಇಷ್ಟೊಂದು ದೊಡ್ಡ ಘಟನೆಯನ್ನು ಹುಡುಗಾಟದ ಹುಚ್ಚಿನಲ್ಲಿ ನಡೆಯಿಸಿಬಿಟ್ಟಿದ್ದೇನೆ ಎಂಬ ದುಃಖವಿದೆ...

"ಆದುದರಿಂದ ಗರ್ಭಪಾತದಲ್ಲಿ ಇವೆಲ್ಲಕ್ಕೂ ಪರಿಹಾರ ಕಂಡುಕೊಳ್ಳಬೇಕಾಗಿದೆ..." ಆತ ಅದೇ ರಾಗವನ್ನು ಹೆಚ್ಚು ವಿಲಂಬಿತದಲ್ಲಿ ಹಾಡಿದ!

"ಆದರೆ ಸುರೇಶ್..." ಆಕೆ ಅವನ ಮುಖದಿಂದ ಕಣ್ಣುಗಳನ್ನು ತೊಲಗಿಸಿ, "ಪ್ರೀತಿಗೆ ಹೊಣೆಗಾರಿಕೆಯಿರುವದಿಲ್ಲವೆ...?

"ಹಾಗೆ ಮಾಡಿದರೆ ಹೀಗಾಗುತ್ತದೆಯೆನ್ನುವುದನ್ನು ತಿಳಿಯದಷ್ಟು ನಾವು ಅಜ್ಞಾನಿಗಳಾಗಿದ್ದರೂ, ಇಷ್ಟೊಂದು ದೊಡ್ಡ ಭಾವವನ್ನು ಕೇವಲ ಒಂದು ಘಟನೆಯೆಂದು ಪರಿಗಣಿಸುವುದು ಸಾಧ್ಯವೆ...?

"ಮುತ್ತಿಟ್ಟು ಅಪ್ಪಿಕೊಂಡು, ಒಬ್ಬರನ್ನೊಬ್ಬರು ಜೀವರನ್ನಾಗಿಸುವ ಹಾಗೆ ತಿಕ್ಕಿತೆವಳಿದಾಗ—ಬಸಿರು ಆಕಾಶದಿಂದ ಬಿದ್ದಿತೆ...?" ಮಾತು ಮುಗಿಸಿದಾಗ ಆಕೆಯ ಮೈಯೆಲ್ಲ ಬೆವತಿತ್ತು. ಕತ್ತಲೆ ಬಿರಿಯಲಾಗದಷ್ಟು ದಟ್ಟವಾಗಿ ಮುಸುಕಿತ್ತು. ಇಬ್ಬರೂ ಎದ್ದರು. ಬೇರೆ ಬೇರೆ ದಿಕ್ಕಿಗೆ ಹೊರಟರು. ಬಹುತೇಕ ಆ ದಿಸೆಯಲ್ಲಿ ಅವರ ಮನೆಯಿದ್ದಿರಬೇಕು.

ವಂದನಾ ಮನೆಗೆ ಬಂದು ಬಿರುಗಾಳಿಯ ಸುಳಿಯಲ್ಲಿ ಗಿರ್ರ್ ಎಂದು ತಿರುಗಿದಳು! ಕೊನೆಯದಾಗಿ ಒಂದು ಮಾತಿನಲ್ಲಿ, "ಈ ಮನೆಗೆ ನೀನು ಕಾಲಿಡಕೂಡದು !" ಎಂಬ ಭರತವಾಕ್ಯದಲ್ಲಿ ತಂದೆ ಕುತ್ತಿಗೆ ಹಿಡಿದು ಹೊರದಬ್ಬಿ ಬಾಗಿಲು ಜಡಿದುಕೊಳ್ಳುವಲ್ಲಿ ಆ ಪ್ರಸಂಗ ಮುಗಿದಿತ್ತು. ಆಕೆ ಕತ್ತಲಲ್ಲಿ ಸುರೇಶನ ಹಾಸ್ಟೆಲ್ ಕಡೆ ಕಾಲೆಳೆದುಕೊಂಡು ಹೊರಟಿದ್ದಳು. ತನ್ನ ಬಸುರಿನಲ್ಲಿ ತೋಳವಿಲ್ಲ, ನರಿಯಿಲ್ಲ. ಇದ್ದರೊಂದು ಮಾನವ ಕೂಸು ಇದ್ದೀತು. ಇದ್ದರೆ ಏನು



ಇದ್ದಾನು; ಬುದ್ಧ ಇದ್ದಾನು! ಆ ಕೂಸು ಹುಟ್ಟಿದರೂ ಹುಟ್ಟೀತು: ಇಲ್ಲವೇ ಸತ್ತೇ ಹುಟ್ಟೀತು; ಅಥವಾ ಹುಟ್ಟಿದ ತಕ್ಷಣ ಸತ್ತೀತು. ಉಸಿರಾಡುವ ಮಾಂಸದ ಮುದ್ದೆಯು ಸುತ್ತಾ ದೈತ್ಯ ವೇಷ ಕಟ್ಟಿಕೊಂಡು ಸಮಸ್ಯೆಗಳು ನಡೆಯಿಸಿದ ಯಕ್ಷಗಾನದಿಂದ ಅವಳು ಮಗುವನ್ನು ಬಚಾವು ಮಾಡಬೇಕಿತ್ತು. ಆತನ ಹಾಸ್ಟೆಲಿನ ದಾರಿಯನ್ನು ಬದಲಿಸಿ, ಬಸ್‌ಸ್ಟ್ಯಾಂಡಿಗೆ ಹೋಗಿ ಖಾಲಿಯಿರುವ ಸಿಮೆಂಟ್ ಬೆಂಚಿನ ಮೇಲೆ ಕುಳಿತಳು. ರಾತ್ರಿಯ ಪ್ರಯಾಣಿಕರ ಗದ್ದಲ ತುಂಬಾ ಇದ್ದಿತು.

ಮೂರು ದಿನಗಳನ್ನು ಅವಳು ಪೀರು ಗುಡ್ಡ ಮತ್ತು ಬಸ್‌ಸ್ಟ್ಯಾಂಡಿನಲ್ಲಿ ಕಳೆದಿದ್ದಳು. ಪೀರುಗುಡ್ಡವನ್ನು ಹತ್ತುವಾಗ ಮತ್ತು ಇಳಿಯುವಾಗ ತಪ್ಪದೆ ಕಣ್ಣಿಗೆ ಬೀಳುತ್ತಿದ್ದುದು ರಾಡಿ ನೀರು ತುಂಬಿದ ತೊಡುಕೆರೆ. ತನ್ನ ನೋಡಿದರೆ ಬೆಚ್ಚಿ ಬೀಳುವಂತೆ ವರ್ತಿಸುವ ಆತ ಇನ್ನು ತನ್ನನ್ನು ಹುಡುಕಿಕೊಂಡು ಬರಲಿಕ್ಕಿಲ್ಲವೆಂಬ ಭಾವನೆ ಬಲವಾಗಿ ಬೆಳೆಯುತ್ತಿದೆ. ಆತನೂ ಇಲ್ಲದ ಬದುಕನ್ನು ಆಕೆ ಈಗ ಕಲ್ಪಿಸಿಕೊಳ್ಳುವಷ್ಟು ಬದುಕನ್ನು ಗಟ್ಟಿಯಾಗಿ ಕಚ್ಚಿಕೊಳ್ಳತೊಡಗಿದ್ದಾಳೆ.

....

"ಏನೆಂದು ನೀನು ಮದುವೆಯಾಗುತ್ತಿ?" ಎಂದು ಸುರೇಶನ ತಂದೆ ಈ ದಿನ ವಿಚಾರಣೆ ಪ್ರಾರಂಭಿಸುತ್ತಾರೆ.

"ಅಂದರೆ?"

"ಅಂದರೆ ಎಂದರೆ ಏನಯ್ಯಾ ? ಅವಳೇನು ಅಪ್ಸರೆಯೇ?"

"ಆಕೆ. ಒಳ್ಳೆಯವಳು ಅಪ್ಪ..."

"ಒಳ್ಳೆಯವರು ಎಷ್ಟು ಮಂದಿಯಿಲ್ಲ ಮಗಾ?"

"ಆಕೆ ನನ್ನನ್ನು ಬಹಳ ಪ್ರೀತಿಸುತ್ತಾಳೆ..."

"ನಿನ್ನಂಥವನನ್ನು ಆಕೆಯಂಥ ನೂರು ಜನ ಪ್ರೀತಿಸಬಹುದು ಸುರೇಶಾ..."

"ಹಾಗಲ್ಲ-ನಾನೂ ಅವಳನ್ನು ಪ್ರೀತಿಸುತ್ತೇನೆ..."

"ಹೌದೋ...ಆದರೆ ನೀನು ಇವಳನ್ನು ಬಿಟ್ಟು ಬೇರೆ ಯಾರನ್ನೂ ಆ ದೃಷ್ಟಿಯಿಂದ ನೋಡಲಿಲ್ಲ ಎಂದಷ್ಟೇ ಅರ್ಥ. ತಿಳೀತಾ ?"

"ತಿಳೀತು. ಆದರೆ ನನ್ನ ಬಿಟ್ಟು ಅವಳು ಬದುಕಲಾರಳು..."

"ಹಾಗೆಯೇ ಹೇಳುತ್ತಾರೆ ಮರಿ, ಎಲ್ಲರೂ..."

"ಅವಳನ್ನು ಬಿಟ್ಟರೆ ನಾನು ಸಾಯುತ್ತೇನೆ..."

"ನೋಡು ಇಲ್ಲಿ ತಪ್ಪಿತು. ಈ ನಿರ್ಧಾರ ಮಾಡಿಕೊಂಡರೆ ನಿನಗೆ ಮತ್ತೊಂದು ರೀತಿಯಿಂದ ವಿಚಾರ ಮಾಡಲೇ ಬರುವದಿಲ್ಲ..." ಎಂದರು ತಂದೆ.

"ನನಗೆ ಬೇರೆ ವಿಚಾರ ಮಾಡುವ ಮನಸ್ಸೇ ಇಲ್ಲ..."

"ಹೀಗೆಲ್ಲ ಮನಸ್ಸಿಗೆ ಅಣೆಕಟ್ಟು ಹಾಕಿದರೆ ಆರೋಗ್ಯದ ಬದುಕು ಬೆಳೆಯಲಾರದು ಮಗು..."

"ನಾನು ಗಂಭೀರವಾಗಿ ಹೇಳುತ್ತಿದ್ದೇನೆ... ನೀವು ಬೇಸರ ಮಾಡಿಕೊಳ್ಳಬಾರದು..."

"ನನ್ನ ಬೇಸರವನ್ನು ಕುರಿತು ನೀನು ತಲೆ ಕೆಡಿಸಿಕೊಳ್ಳಬೇಡ. ನೀನು ಗಂಭೀರದ ಮಾತು ಹೇಳಿದಿ ಸರಿ... ನೀನು ಪ್ರೀತಿಯನ್ನು ಅಷ್ಟು ಗಂಭೀರವೆಂದು ತಿಳಿದುಕೊಂಡದ್ದಾದರೆ ನನ್ನದೇನೂ ಅಭ್ಯಂತರವಿಲ್ಲ... ಮದುವೆಯಾಗು..."

"ಈಗಲೇ ಆಗಬೇಕು."

"ಯಾಕೆ–ಪರೀಕ್ಷೆ ಮುಗಿಯಲಿ..."

"ಇಲ್ಲ... ನಾಳೆಯೇ ರಜಿಸ್ಟರ್ ಆಗಬೇಕು..."

"ಆಗು... ಆದರೆ ಈ ಅವಸರದ ವ್ಯವಹಾರಕ್ಕೆ ನನ್ನ ಆಶೀರ್ವಾದವಿಲ್ಲ."

"ಇಲ್ಲ–ನೀವು ಆಶೀರ್ವದಿಸಬೇಕು. ಅದಿಲ್ಲದೆ ನನಗೆ ಸಮಾಧಾನವಾಗುವದಿಲ್ಲ..."

"ನಿನಗೆ ಸ್ಪಷ್ಟ ಹೇಳುತ್ತೇನೆ. ನಿನ್ನ ಅಪ್ಪ ಉಳಿದ ಅಪ್ಪಂದಿರಂತೆ ಸಿಟ್ಟು ಮಾಡಿಲ್ಲವೆಂದು ತಪ್ಪು ತಿಳಿದುಕೊಳ್ಳಬೇಡ. ಎಲ್ಲ ಅಪ್ಪಂದಿರಿಗೂ ಇಂಥ ವಿಷಯದಲ್ಲಿ ಒಂದೇ ಭಾವನೆ. ಕೆಲವರು ಸಹಿಸಿಕೊಳ್ಳುತ್ತಾರೆ; ಕೆಲವರು ಉರಿದು ಬೀಳುತ್ತಾರೆ... ಒಂದು ಮಾತು ಹೇಳುತ್ತೇನೆ. ಅಪ್ಪನ ಆಸ್ತಿಪಾಸ್ತಿಯ ಮೇಲೆ ನೀವು ಮಕ್ಕಳು ಪ್ರೇಮದ ನಾಟಕ ಆಡಬಾರದು! ಜೀವನವನ್ನು ಎಲ್ಲೆಂದರೆ ಅಲ್ಲಿ ಸ್ವಾಗತಿಸುವ ಗೊತ್ತು ವ್ಯವಹಾರಕ್ಕೆ ಕೈಹಾಕಬಾರದು! ಈಗ ಮದುವೆಯ ಮಾತು ಬೇಡ. ಹೋಗು ಕಾಲೇಜಿಗೆ; ಓದು; ತಿಳಿದುಕೊ... ಇನ್ನೆಂದೂ ಇಂಥ ಹೊಣೆಗೇಡಿ ಧಂಧೆಗೆ ಕೈ ಹಾಕ

ಬೇಡ......" ಎಂದು ಅವರು ಹೇಳಿ ಒಂದೂ ಕ್ಷಣ ಕೂಡ್ರುವೆ ಮಲಗುವ ಖೋಲಿಗೆ ನಡೆದರು.

....

ಪೀರುಗುಡ್ಡದ ಪಶ್ಚಿಮದ ಇಳುಕಲಿನಲ್ಲಿ ಆತ ನಿಂತು ಮೇಲೆ ನೋಡಿದ. ವಂದನಾ ಮುದ್ದೆಯಾಗಿ ಕುಳಿತಿದ್ದು ಆತನಿಗೆ ಕಾಣಿಸಿತು. ಅವಳ ಹತ್ತಿರವೇ ಅವನು ಹೊರಟಿದ್ದ. ಅವಳನ್ನು ಕಂಡವನೇ ಆ ಕಡೆ ಹೋಗುವ ಇಷ್ಟವಿಲ್ಲದವನಂತೆ ಒದ್ದಾಡಿದ. ಆದರೆ ಕೊನೆಯ ಸಾಹಸವೆಂಬಂತೆ ಗುಡ್ಡ ಏರತೊಡಗಿದ.

ಆತ ಪತ್ತಿರ ಬಂದರೂ ಆಕೆ ಹಾಗೆಯೇ ಕುಳಿತಿದ್ದಳು. ಅಲ್ಲಿ ಅವಳು ಅವನನ್ನು ಕಾಯುತ್ತ ಕುಳಿತು ಎಷ್ಟೋ ದಿನಗಳು ಸಾಗಿ ಹೋಗಿದ್ದವು. ಅವನು ಅಲ್ಲಿಗೆ ಬಂದನು. ಈ ಜೀವನವನ್ನು ಸ್ವೀಕರಿಸಿಯೂ ಸಮಸ್ಯೆಯೊಂದಿಗೆ ಪ್ರೀತಿಯನ್ನು, ಬದುಕನ್ನು ಮರೆಯಲಿಕ್ಕಿಲ್ಲ. ಪರಿಹಾರದ ನೆಪದಲ್ಲಿ ಜೀವನವನ್ನು ಒತ್ತಿ ಒತ್ತಿ ಹಿಚುಕಿ ಹಾಕಲು ಕೊಡಲಿಕ್ಕಿಲ್ಲ ಎಂದೆಲ್ಲ ವಿಚಾರ ಮಾಡುತ್ತಲೇ ಇದ್ದಳು.

ಹತ್ತಿರ ಬಂದವನು ದೂರದಲ್ಲಿ ಕುಳಿತು. ಒಬ್ಬರಿಗಾಗಿ ಒಬ್ಬರು ಬಂದವರು. ಆದರೆ ಮಾತನಾಡುವದಕ್ಕಾಗಿ ಅವರು ಏನೇನೋ ಕಾಯುತ್ತಿದ್ದರು. ಮಾತು ಬದುಕನ್ನು ತೊಡಕನ್ನಾಗಿಸುವ ಸಾಧ್ಯತೆಯೆಂಬುದು ಅವರಿಬ್ಬರಿಗೂ ತಿಳಿದಂತಿತ್ತು.ಆದರೆ ಉಸಿರಿಲ್ಲದೆ ಮಧ್ಯದಲ್ಲಿ ಬಿದ್ದಿರುವ ಬದುಕಿಗೆ ಶಬ್ದ–ಸಂಸ್ಕಾರ ಕೊಡುವದು ಅನಿವಾರ್ಯವಾಗಿ ಮಾತು ಪ್ರಾರಂಭವಾಗುತ್ತದೆ......

"ನಾನು ಬಂದಿದ್ದೇನೆ......"

"ನಾನು ಬಂದಿದ್ದೇನೆ......"

"ನಿನಗೆ ಕೊನೆಯದಾಗಿ ಒಂದು ಮಾತನ್ನು ಹೇಳಲು ಬಂದಿದ್ದೇನೆ......"

"ಕೊನೆಯ ಮಾತನ್ನು ನಾನು ಎಂದೂ ಕೇಳಲು ಬಯಸುವದಿಲ್ಲ......"

"ನನಗೆ ಗತಿಯಿಲ್ಲ. ಉಸಿರು ಕಟ್ಟುತ್ತಿದೆ..."

"................"

"ನಿನ್ನನ್ನು ನಾನು ಪ್ರೀತಿಸುತ್ತಿಲ್ಲ......!" ಎಂದು ಆತ ಎದ್ದು ನಿಂತ.

"ನೀನು ಹೇವರಿ ಈ ಮಾತನ್ನು ಹೇಳುತ್ತಿದ್ದೀಯೆ. ......ನೀನು ಖಂಡಿತಕ್ಕೂ ನನ್ನನ್ನು ಬಹಳ ಪ್ರೀತಿ ಮಾಡುತ್ತಿದ್ದೀಯೆ........."

"ಇಲ್ಲ, ಇಲ್ಲ ನಾನು ನಿನ್ನನ್ನು ಪ್ರೀತಿಸಿದ್ದಿಲ್ಲ; ಈಗ ಪ್ರೀತಿ ಮಾಡುತ್ತಿಲ್ಲ-ಬಹುತೇಕ ನಾನು ಯಾರನ್ನೂ ಪ್ರೀತಿಸಲಿಕ್ಕಿಲ್ಲ......ಪ್ರೀತಿ ಸರ್ವಸ್ವವಲ್ಲ. ಮರ್ಯಾದೆಯ ಪರದೆಯ ಹಿಂದೆ ಪ್ರೀತಿ ಶೃಂಗಾರವಮಾಡಿಕೊಳ್ಳಲಾರದು. ರಂಗದ ಮೇಲೆ ನಗ್ನವಾಗಿ ನರ್ತಿಸುವ ಅದು ತಿಪ್ಪೆಯ ಮೇಲೆ ಸೂಳೆಗಾರಿಕೆಯನ್ನು ನಡೆಸುತ್ತದೆ......ವಂದನಾ, ನಾನು ನಿನ್ನನ್ನು ಪ್ರೀತಿಸುವದಿಲ್ಲ; ಖಂಡಿತ ಇಲ್ಲ!" ಎಂದು ಆತ ಎದ್ದು ಹೊರಟುಬಿಟ್ಟ.

ಆಕೆ ಅಲ್ಲಿಯೇ ಕುಳಿತಿದ್ದಳು.

ರಾತ್ರಿ ಹನ್ನೆರಡು ಹೊಡೆದದ್ದು ಕೇಳಿಸಿದಾಗ ಆಕೆ ಎದ್ದು ಸುರೇಶನ ಹಾಸ್ಟೆಲ್ ಕಡೆ ಹೊರಟಳು. ಹಾಸ್ಟೆಲಿನ ಕೋಣೆಗಳಲ್ಲಿ ನಿಶ್ಶಬ್ದವಾಗಿ ದೀಪ ಉರಿಯುತ್ತಿದ್ದವು. ಒಂದು ಕೋಣೆಯಲ್ಲಿ ಮಾತ್ರ ದೀಪವಿರಲಿಲ್ಲ. ಆತ ಅಲ್ಲಿ ಇಲ್ಲದ್ದನ್ನು ತಿಳಿದು ಬಸ್ ಸ್ಟ್ಯಾಂಡಿಗೆ ಹೋದಳು. ಜನ ತುಂಬಿಕೊಂಡಿದ್ದರು. ಕೂಡ್ರಲು ಸ್ಥಳವಿರಲಿಲ್ಲ. ಗದ್ದಲವೇ ಗದ್ದಲ. ವ್ಯಕ್ತಿಯನ್ನು ರುಬ್ಬಿ ಶೂನ್ಯವಾಗಿಸುವ ಆ ಬಸ್ಸಿನಿಂದ ಹೊರ ಬಂದು ಮೇಲೆ ನೋಡಿದಳು. ರಸ್ತೆ ನಿರ್ಜನವಾಗಿತ್ತು. ಬೆಳದಿಂಗಳು, ರಸ್ತೆಯ ಬಲ್ಬುಗಳು ಒಟ್ಟಾಗಿ ಬೆಳಕು ಚೆಲ್ಲಿದ್ದವು. ಎಲ್ಲಿಗೆ ಹೋಗಬೇಕೆಂದು ಹೊಳೆಯದೆ ಊರ ಹೊರಗಿನ ಪೀರುಗುಡ್ಡದ ಕಡೆಯೇ ನಡೆದಳು.

ಊರು ದಾಟಿದಂತೆ ಹೊರವಲಯದ ಗುಡಿಸಲುಗಳ ಅಂಗಳದಲ್ಲಿ ಮಲಗಿದ್ದ ನಾಯಿಗಳೆದ್ದು ಬೊಗಳತೊಡಗಿದವು. ಆಕೆ ಬಹು ವೇಗವಾಗಿ ನಡೆದು ಪೀರುಗುಡ್ಡದ ಕೆಳಗಿನ ಕೆರೆಯ ಬಳಿ ಬಂದಿದ್ದಳು. ದೂರದಲ್ಲಿ ಯಾರೋ ಬೆಳದಿಂಗಳ ಮಬ್ಬು ಬೆಳಕಿನಲ್ಲಿ ಕೆರೆಯ ದಂಡೆಯ ಮೇಲೆ ಶತಪಥ ಹಾಕುತ್ತಿದ್ದರು. ಅವರು ಒಮ್ಮೆಲೇ ಕೆರೆಯಲ್ಲಿ ಹಾರಿ ಧುಮುಕಿದ್ದು ಕಂಡಿತು. ವಂದನಾ ಆ ನಿಶ್ಶಬ್ದ ಘಟನೆಗೆ ನಿರ್ಲಿಪ್ತ ಸಾಕ್ಷಿಯಂತೆ ನೋಡುತ್ತ ನಿಂತಿದ್ದಳು. ✡

ಈಗ...! ಚುರುಕಾದ ಜೀವನಕ್ಕಾಗಿ ಶಕ್ತಿ ಕೊಡುವ ಇಂಧನ ಪಡೆಯಿರಿ.



ಬೂಸ್ಟ್

ಮಾಲ್ಟ್ ಚಾಕೊಲೇಟ್ ಹಾಲಿನ ಪೇಯ

ರೈಲಿಗೆ ಇಂಧನ ಹೇಗೆ ಅಗತ್ಯವೋ, ನಿಮಗೂ ಸಹ ದಿನವನ್ನು ಉಲ್ಲಾಸದಿಂದ ಆರಂಭಿಸಲು ಪ್ರತಿದಿನ ಇಂಧನ ಅಗತ್ಯ. ದಿನವಿಡೀ ಎಲ್ಲ ಕೆಲಸಗಳನ್ನು ಚಕಚಕನೆ ಮಾಡಿಕೊಂಡು ಹೋಗಲು ನಿಮಗೆ ಶಕ್ತಿ ನೀಡುವ ಇಂಧನ ಬೇಕು.

ಆದ್ದರಿಂದಲೇ ಪ್ರತಿದಿನ ಬೆಳಗ್ಗೆ ನಿಮಗೆ ಬೂಸ್ಟ್ ಅಗತ್ಯ. ಮಕ್ಕಳಿಗಂತೂ ಇದರ ಅಗತ್ಯ ಇನ್ನೂ ಹೆಚ್ಚು. ಏಕೆಂದರೆ ಮಕ್ಕಳ ಶಕ್ತಿ ಆಟ-ಪಾಠಗಳಲ್ಲೇ ಹೆಚ್ಚಾಗಿ ವ್ಯಯವಾಗುತ್ತದೆ.

ಅವರಿಗೆ ಬೂಸ್ಟ್ ಕೊಡಿ. ಇದು ಹೊಸ ಮಾಲ್ಟ್ ಚಾಕೊಲೇಟ್ ಹಾಲಿನ ಪೇಯ. ಪೌಷ್ಟಿಕ ಆಹಾರದ ಬಗ್ಗೆ ಒಳ್ಳೆಯ ಅನುಭವ ಪಡೆದಿರುವ "ಹಾರ್ಲಿಕ್ಸ್"ನ ತಯಾರಕರೇ ಈ ಪೇಯವನ್ನು ತಯಾರಿಸಿದ್ದಾರೆ.

ಕೆನೆಯಿಂದ ಸಮೃದ್ಧವಾದ ಬೂಸ್ಟ್ ನಿಮಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತದೆ. ಏಕೆಂದರೆ ಅದನ್ನು ಗಟ್ಟಿಯಾದ ಕೆನೆಹಾಲು, ಗೋಧಿ, ಬಾರ್ಲಿ, ಮಾಲ್ಟ್ ಮತ್ತು ಕೋಕೋ ಇವುಗಳಿಂದ ತಯಾರಿಸಲಾಗಿದೆ.

ನಿಮ್ಮ ಮಕ್ಕಳ ಬೆಳವಣಿಗೆಗೆ. ಬೂಸ್ಟ್, ಇಂತಹುದೇ ಇತರ ಯಾವ ಚಾಕೊಲೇಟ್ ಪೇಯ ಹೊಂದಿರುವುದಕ್ಕಿಂತ ಹೆಚ್ಚು ಪೌಷ್ಟಿಕಾಂಶಗಳನ್ನು ಒಳಗೊಂಡಿದೆ.

ಬೂಸ್ಟ್‌ನಲ್ಲಿರುವ ಕೆನೆಭರಿತ ಮಾಲ್ಟ್ ಚಾಕೊಲೇಟ್ ಸವಿ ನಿಮ್ಮ ಇಡೀ ಕುಟುಂಬಕ್ಕೆ ಬಹಳ ಪ್ರಿಯವಾಗುತ್ತದೆ. ಪ್ರತಿದಿನ, ನಿಮ್ಮ ದಿನವನ್ನು ಉಲ್ಲಾಸದಿಂದ ಪ್ರಾರಂಭಿಸಲು ಬೂಸ್ಟ್ ಅತ್ಯುತ್ತಮ ಸಾಧನ.

ಎರಡು ಸೈಜ್‌ಗಳಲ್ಲಿ ದೊರೆಯುತ್ತದೆ.

'ಹಾರ್ಲಿಕ್ಸ್'ನ ತಯಾರಕರಿಂದ

ದೊಸ್ತೊವಸ್ಕಿಯ ನೆನಪು

ಬಿ. ಅರುಣನಾರಾಯಣ

ನಾನು ಸತ್ಯವನ್ನು ಕಂಡಿದ್ದೇನೆ. ಜನತೆ ಈ ಜಗತ್ತಿನಲ್ಲಿ ಬಾಳುವ ಸಾಮರ್ಥ್ಯವನ್ನು ಕಳೆದುಕೊಳ್ಳದೆಯೇ ಅದರ ಜೀವನ ಸುಂದರವೂ ಸುಖಮಯವೂ ಆಗಿರಲು ಸಾಧ್ಯವಿದೆ ಎಂದು ನನಗೆ ಗೊತ್ತು. ಕೆಡುಕು ಮಾನವನ ಸಹಜ ಪ್ರವೃತ್ತಿ ಎಂದು ನಾನೆಂದೂ ನಂಬಲು ಸಾಧ್ಯವಿಲ್ಲ…"


ಹಾಸ್ಯಾಸ್ಪದ ವ್ಯಕ್ತಿಯ ಕನಸು ["Dream of a Ridiculous Man"] ಎಂಬ ಕಥೆಯಲ್ಲಿ ಡೊಸ್ಟೋವಸ್ಕಿ ಜಗತ್ತಿನ ಕುರಿತು, ಮಾನವನ ಒಳಿತಿನಲ್ಲಿ ತನಗಿರುವ ಅಗಾಧ ವಿಶ್ವಾಸದ ಕುರಿತು ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

೬೦ ವರ್ಷಗಳ ತುಂಬು ಜೀವನದಲ್ಲಿ ಅಪಸ್ಮಾರ, ತೀವ್ರ ಆರ್ಥಿಕ ಮುಗ್ಗಟ್ಟು, ಕ್ರೂರವಾದ ಸಾಮಾಜಿಕ ಅನ್ಯಾಯಗಳನ್ನು ಅನುಭವಿಸಿಯೂ ಮಾನವತೆಗೆ ಶ್ರೇಷ್ಠ ಸಾಹಿತ್ಯವನ್ನು ನೀಡಿ ಕಣ್ಮರೆಯಾದ ರಷ್ಯದ ಮಹಾನ್ ವಿಚಾರವಾದಿ ಸಾಹಿತಿ ಫ್ಯೋದೋರ್ ಡೊಸ್ಟೊವಸ್ಕಿ (೧೮೨೧–೧೮೮೧) ಯ ಬದುಕು ಅಖಂಡ ಯಾತನೆಯ ಶೋಕಗೀತೆಯಾಗಿತ್ತು.

೧೮೨೧ರಲ್ಲಿ ಡೊಸ್ಟೊವಸ್ಕಿ ಮೊಸ್ಕೋದ ಮಾರಿನ್ಸ್ಕಿ ಚಾರಿಟಿ ಆಸ್ಪತ್ರೆಯಲ್ಲಿ ಜನಿಸಿದ. ತಂದೆ ವೈದ್ಯ ವೃತ್ತಿಯಲ್ಲಿದ್ದ ಮಿಖಾಯಿಲ್ ಡೊಸ್ಟೊ

ವಸ್ಕಿ ತಾಯಿ ಮರಿಯಾ ಡೊಸ್ಟೊವಸ್ಕಿ. ಮೃದು ಹೃದಯಿಯೂ ಧಾರ್ಮಿಕ ಮನೋಭಾವದವಳೂ ಆದ ಮರಿಯಾ ತನ್ನ ೩೭ನೇ ವಯಸ್ಸಿನಲ್ಲಿ ಕ್ಷಯ ದಿಂದ ತೀರಿಕೊಂಡಳು. ಜೀವನವಿಡೀ ಗಂಡನ ನಿರ್ದಯ ಸ್ವಭಾವ, ಒರಟು ವರ್ತನೆಯಿಂದ ಆಕೆ ನರಳಿದಳು.

೧೮೩೧ರಲ್ಲಿ ಮಿಖಾಯಿಲ್ ಡೊಸ್ಟೊವಸ್ಕಿ ಡಾರ್ವೊಯೆ (ದಕ್ಷಿಣ ರಷ್ಯ) ಎಂಬಲ್ಲಿ ಒಂದು ಎಸ್ಟೇಟ್ ಖರೀದಿಸಿದ. ೭೬ ಮಂದಿ ಸೇವಕರು ಅಲ್ಲಿ ದುಡಿಯುತ್ತಿದ್ದರು. ಎಸ್ಟೇಟಿಗೆ ಸರಿಯಾದ ಗಡಿ ರೇಖೆ ಇಲ್ಲದ ಕಾರಣ ನೆರೆಯ ಎಸ್ಟೇಟಿನ ಮಾಲಿಕರಿಗೂ ಮಿಖಾಯಿಲ್‌ಗೂ ಸದಾ ಜಗಳ. ಎಸ್ಟೇಟಿನ ಉಸ್ತುವಾರಿಯನ್ನು ಕಾಯಿಲೆ ಪೀಡಿತ ಪತ್ನಿಯೇ ನೋಡಿಕೊಳ್ಳುತ್ತಿದ್ದಳು. ೧೮೩೭ರಲ್ಲಿ ಆಕೆ ತೀರಿಕೊಂಡಾಗ ಮಿಖಾಯಿಲ್‌ಗೆ ಅದು ಬಲವಾದ ಆಘಾತ ನೀಡಿತು. ಆತ ವೈದ್ಯವೃತ್ತಿಯಿಂದ ನಿವೃತ್ತ ನಾಗಿ ಎಸ್ಟೇಟಿನಲ್ಲಿ ವಾಸಿಸಲು ತೊಡಗಿದ.



ಮಿಖಾಯಿಲ್ ಡೊಸ್ಟೊವಸ್ಕಿ ವಿಪರೀತ ಕುಡಿ ಯುತ್ತಿದ್ದ. ಕುಡಿದಾಗಲಂತೂ ಬುದ್ಧಿ ಸ್ಥಿಮಿತವನ್ನೇ ಕಳೆದುಕೊಂಡು ಸಿಕ್ಕಾಬಟ್ಟೆ ಹುಚ್ಚು ಹುಚ್ಚಾಗಿ ವರ್ತಿಸುತ್ತಿದ್ದ. ಎಸ್ಟೇಟಿನ ಸೇವಕರನ್ನಂತೂ ಅಮಾ ನುಷ ಕ್ರೌರ್ಯದಿಂದ ಕಾಣುತ್ತಿದ್ದ. ಒಂದು ದಿನ ಎಸ್ಟೇಟಿನ ಕೂಲಿಯಾಳುಗಳು ನಿರಾಸಕ್ತಿಯಿಂದ ಕೆಲ-ಸ ಮಾಡುತ್ತಿರುವುದನ್ನು ನೋಡಿ, ಆತ ಸಿಟ್ಟಿನಿಂದ ಉರಿದು ಬೈಯಲು ತೊಡಗಿದ. ಬಹಳ ಕಾಲದಿಂದ ಅವರಲ್ಲಿ ದ್ವೇಷ ಒಳಗೊಳಗೇ ಹೊಗೆಯಾಡು ತ್ತಿತ್ತು. ಅವರು ಮೌನವಾಗಿ ಬೈಗಳನ್ನೆಲ್ಲಾ ನುಂಗಿ ಕೊಂಡರು. ಕೊನೆಗೆ ಅವರಲ್ಲೊಬ್ಬನಿಗೆ ತಾಳ್ಮೆ ಕಡಿಯಿತು. "ಇನ್ನು ಸಾಕು ಮಿತ್ರರೇ, ಅವನನ್ನು ಮುಗಿಸಿಬಿಡೋಣ" ಎಂದು ಆತ ಕಿರುಚಿದ್ದೇ ತಡ, ಉಳಿದ ೧೫ ಮಂದಿ ಸೇವಕರೂ ಮಿಖಾ ಯಿಲ್ ಡೊಸ್ಟೊವಸ್ಕಿಯ ಮೇಲೆ ಬಿದ್ದು ಆ ಸ್ಥಳ ದಲ್ಲೇ ಅವನನ್ನು ಇರಿದು ಕೊಂದರು.

ತಂದೆಯ ಕೊಲೆ ತಾಯಿಯ ಅಕಾಲ ಮರಣ ಇವೆರಡು ಘಟನೆಗಳೂ ಡೋಸ್ಟೊವಸ್ಕಿಯ ಬಾಲ್ಯ ಜೀವನದ ಮೇಲೆ ಕರಿ ನೆರಳಿನಂತೆ ಹರಡಿತು. ಅವನ ಎಳೆ ಮನಸ್ಸನ್ನು ಅವು ಜರ್ಜರಿತಗೊಳಿಸಿದುವು. ಡೊಸ್ಟೊವಸ್ಕಿಯನ್ನು ಜೀವನವಿಡೀ ಪೀಡಿಸುತ್ತಿದ್ದ ಮೂರ್ಛೆರೋಗಕ್ಕೆ (Fits) ಈ ಎರಡು ಘಟನೆ ಗಳೇ ಮೂಲ ಕಾರಣವೆಂದು ಅನೇಕ ಮನ ಶ್ಶಾಸ್ತ್ರಜ್ಞರು ಭಾವಿಸುತ್ತಾರೆ.

ಲಂಪಟನೂ ವಿಷಯಲೋಲುಪನೂ ಕ್ರೂರಿ ಯೂ ಆದ ತಂದೆಯ ಕೊಲೆ ಡೊಸ್ಟೊವಸ್ಕಿಯ ಮನಸ್ಸನ್ನು ಸದಾ ಕೊರೆಯುತ್ತಿತ್ತು. ಅವನ ಜಗ ತ್ಪ್ರಸಿದ್ಧ ಕೃತಿ ಕರಮಜೋವ್ ಸಹೋದರರು (Brothers Karamazov) ರಚನೆಗೆ ಮೂಲ ಪ್ರೇರಣೆ ಒದಗಿಸಿದ್ದು ಈ ಕೊಲೆಯೇ ಎಂದು ಖ್ಯಾತ ಮನಶ್ಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ ತನ್ನ ಒಂದು ಲೇಖನ (Dostoevsky and Patricide)ದಲ್ಲಿ ಹೇಳಿದ್ದಾನೆ. ಮನುಷ್ಯನ ಅಂತರಾಳದಲ್ಲಿ ಸುಪ್ತವಾಗಿ ಹೊಗೆಯಾಡುತ್ತಿರುವ ಪಾಪಪ್ರಜ್ಞೆಯ ಗಾಢವಾದ ವಿಶ್ಲೇಷಣೆ ಆ ಕೃತಿಯಲ್ಲಿದೆ.

ಬಾಲ್ಯದ ದುಃಖಮಯ ದಿನಗಳು ಅವನ ಜೀವನದ ಸಂಧ್ಯೆಯಲ್ಲೂ ಆಗಾಗ ಅವನಿಗೆ ನೆನ

ಪಾಗುತ್ತಿತ್ತು. ಕರಮಜೋವ್ ಸೋದರರು ಕಾದಂಬರಿಯಲ್ಲಿ ಒಂದು ಇಡೀ ಅಧ್ಯಾಯವನ್ನು ಮಕ್ಕಳ ಮಾನಸಿಕ ತೊಳಲಾಟಕ್ಕೆ ಮೀಸಲಾಗಿಟ್ಟಿದ್ದಾನೆ. ಕುಡುಕ ತಂದೆಯ ಅಸ್ತವ್ಯಸ್ತ ಬದುಕಿನಿಂದಾಗಿ ತೀವ್ರವಾಗಿ ನೊಂದುಕೊಳ್ಳುವ ಬಾಲಕ ಇಲ್ಯೂಷಾನ ವ್ಯಕ್ತಿತ್ವ ಚಿತ್ರಣದಲ್ಲಿ ಡೊಸ್ಟೊವಸ್ಕಿ ತನ್ನ ಬಾಲ್ಯದ ಅನುಭವಗಳನ್ನೇ ನಿರೂಪಿಸಿದ್ದಾನೆ.

ಪೀಟರ್ಸ್‌ಬರ್ಗ್‌ನ (ಈಗಿನ ಮಾಸ್ಕೋ) ವಿಶ್ವವಿದ್ಯಾಲಯದಲ್ಲಿ ಪದವೀಧರನಾದ ಬಳಿಕ ಡೊಸ್ಟೊವಸ್ಕಿಯ ಜೀವನ ಎರಡು ಕವಲಾಗಿ ಒಡೆಯಿತು.

ಸಾವು ಹೊಂಚುಹಾಕಿದ ಕ್ಷಣಗಳು

೧೮೪೭ರಲ್ಲಿ ಡೊಸ್ಟೊವಸ್ಕಿ ಸಮಾಜವಾದಿ ವಿಚಾರಧಾರೆಯತ್ತ ಆಕರ್ಷಿತನಾದ. ಕ್ರಾಂತಿಕಾರಿ ಸಮಾಜವಾದಿಗಳ ಪ್ರಗತಿಪರ ಅಧ್ಯಯನ ತಂಡಗಳು ಹಾಗೂ ಸಭೆಗಳಲ್ಲಿ ಆತ ಭಾಗವಹಿಸಲೂ ತೊಡಗಿದ. ಈ ತಂಡದ ಚಟುವಟಿಕೆಗಳು ರಾಷ್ಟ್ರವಿರೋಧಿ ಎಂದು ಪರಿಗಣಿಸಲ್ಪಟ್ಟಿದ್ದವು. ೧೮೪೯ರಲ್ಲಿ ತಂಡದ ಇತರ ಸದಸ್ಯರೊಂದಿಗೆ ಡೊಸ್ಟೊವಸ್ಕಿಯೂ ಬಂಧಿಸಲ್ಪಟ್ಟ. ಪೀಟರ್ಸ್‌ಬರ್ಗ್‌ನ ಸೈಂಟ್ ಪೀಟರ್.ಸೈಂಟ್ ಪಾಲ್ ಕೋಟೆಯ ಏಕಾಂತವಾಸಕ್ಕೆ ಅವನನ್ನು ತಳ್ಳಲಾಯಿತು. ೮ ತಿಂಗಳು ಅಲ್ಲಿ ಕಳೆಯಬೇಕಾಯ್ತು. ವಿಚಾರಣೆ ಮುಂದುವರಿಯುತ್ತಿತ್ತು. ರಾಷ್ಟ್ರದ್ರೋಹದ ಅಪರಾಧಕ್ಕಾಗಿ ಡೊಸ್ಟೊವಸ್ಕಿಗೂ ಅವನ ಸಂಗಡಿಗರಿಗೂ ಮರಣದಂಡನೆ ಶಿಕ್ಷೆ ಲಭಿಸಿತು. ಸಾವು ಅವರ ಕತ್ತು ಹಿಸುಕಲು ಹೊಂಚುಹಾಕುತ್ತಿತ್ತು. ಮೃತ್ಯುವನ್ನು ನಿರೀಕ್ಷಿಸುತ್ತಾ ಕುಳಿತ ಬದುಕಿನ ಉಗ್ರ ಕ್ಷಣಗಳವು. ಆಗ ಆತನಿಗೆ ೨೮ ವರ್ಷ. ದಟ್ಟವಾಗಿ ಮಂಜು ಕವಿದ ಒಂದು ಮುಂಜಾವು ಎಲುಬು ಕೊರೆಯುವ ಚಳಿಯಲ್ಲಿ ಡೊಸ್ಟೊವಸ್ಕಿಗೂ ಅವನ ಸಂಗಡಿಗರಿಗೂ ಕಣ್ಣಿಗೆ ಕಪ್ಪು ಬಟ್ಟೆ ಬಿಗಿದು ವಧಾಸ್ಥಾನಕ್ಕೆ ಕರೆದೊಯ್ದರು. ಕೊಲೆಗಡುಕ ಸೈನಿಕರ ಬಂದೂಕಿನ ತುದಿಗಳು ಅವರ ಎದೆಗೆ ನೇರವಾಗಿ ಗುರಿ ಮಾಡಲ್ಪಟ್ಟಿದ್ದುವು. ಹೆಪ್ಪು ಗಟ್ಟಿದ ಭೀಕರ ಮೌನ. ಪಾದ್ರಿ ಕೈಯಲ್ಲಿ ಶಿಲುಬೆ ಹಿಡಿದು ನಿಂತಿದ್ದ. ಗುಂಡೇಟಿಗೆ ಬಲಿಯಾಗಬೇಕಾದ ಕೈದಿಗಳಲ್ಲಿ ಡೊಸ್ಟೊವಸ್ಕಿಯ ಸರದಿ ಎರಡನೆಯದು. ಬದುಕಲು ಇನ್ನೂ ಕೆಲವು ಕ್ಷಣಗಳು ಉಳಿದಿದ್ದುವು. ಕೆಲವೇ ನಿಮಿಷಗಳೊಳಗೆ ಜಾರ್ ನಿಕೋಲಸ್‌ನ ಆಜ್ಞೆಯನ್ನು ಘೋಷಿಸಿದರು. ಕೈದಿಗಳ ಮರಣ ದಂಡನೆ ಶಿಕ್ಷೆ ರದ್ದು ಮಾಡಿ ೪ ವರ್ಷಗಳ ಕಾಲ ಸೈಬೀರಿಯಾದಲ್ಲಿ ಕಠಿಣ ದುಡಿಮೆಯ ಶಿಕ್ಷೆ ವಿಧಿಸಿದ್ದರು.

ಶಿಕ್ಷೆ ಅನುಭವಿಸಲು ಸೈಬೀರಿಯಾಕ್ಕೆ ಹೋಗುವ ಮೊದಲು ಡೊಸ್ಟೊವಸ್ಕಿ ತನ್ನ ಹಿರಿಯಣ್ಣ ಮಿಖಾಯಿಲ್‌ಗೆ ಬರೆದ ಕೆಲವು ಸಾಲುಗಳು ಹೀಗಿವೆ: "ನನ್ನ ಪ್ರೀತಿಯ ಅಣ್ಣ, ನಾನಿನ್ನೂ ಎದೆಗುಂದಿಲ್ಲ. ಜೀವನ ಎಲ್ಲ ಕಡೆಯೂ ಒಂದೇ. ಅಲ್ಲಿಯೂ ನನ್ನ ಸುತ್ತ ಜನರಿರುತ್ತಾರೆ. ಅವರ ಮಧ್ಯೆ ನಾನೂ ಒಬ್ಬ ಮನುಷ್ಯನಾಗಿ ಉಳಿದುಕೊಳ್ಳುವುದು, ದುರದೃಷ್ಟದ ಸಮ್ಮುಖದಲ್ಲೂ ಸದಾ ಮನುಷ್ಯನಾಗಿ ಉಳಿದುಕೊಳ್ಳುವುದು, ಎಂದಿಗೂ ಧೈರ್ಯ ಕಳಕೊಳ್ಳದಿರುವುದು ಇದು ಜೀವನ. ಇದುವೇ ಮಹತ್ತರ ಸವಾಲು..."

ನಿರ್ದಯ ಬದುಕು

ಸೈಬೀರಿಯಾದ ಒಮಸ್ಕ್ ಸೆರೆಮನೆಯಲ್ಲಿ ಕಠಿಣ ದುಡಿಮೆಯ ನಾಲ್ಕು ವರ್ಷಗಳು ಕ್ರೂರ ಮೌನ ಕವಿದ ಬದುಕಾಗಿ ಪರಿಣಮಿಸಿತು. ಪಿತೃಹತ್ಯಾಪಾತಕರು, ಪತ್ನೀಘಾತಕರು, ದರೋಡೆಕೋರರು, ಅತ್ಯಾಚಾರಿಗಳು ಮುಂತಾದ ಪಾತಕಿಗಳ ಒಡನಾಟದಲ್ಲಿ, ಡೊಸ್ಟೊವಸ್ಕಿಯ ಜೀವನ ಕಳೆಯಿತು. ಇಟ್ಟಿಗೆಗಳನ್ನು ಸುಟ್ಟು, ಕಟ್ಟಡ ಕಟ್ಟುವ ಸ್ಥಳಕ್ಕೆ ಮಣ್ಣು ಹೊತ್ತು ಕೊರೆಯುವ, ಇರಿಯುವ ಚಳಿಯಲ್ಲಿ ಅವನ ಜೀವನ ಕಳೆಯಿತು. ಸ್ನಾನ ಮಾಡುವಾಗಲಾಗಲಿ ಆಸ್ಪತ್ರೆಗೆ ಹೋಗುವಾಗಲಾಗಲಿ ಅವನ ಕೈ ಕೋಳಗಳನ್ನು ಕಳಚಲಿಲ್ಲ.

ಸೈಬೀರಿಯಾದ ಕೈದಿ ಶಿಬಿರದಲ್ಲಿ ಕಳೆದ ಯಾತನಾಮಯವಾದ ಆ ನಾಲ್ಕು ವರ್ಷಗಳ ಘನೀಭೂತವಾದ ಅನುಭವಗಳನ್ನು ಡೊಸ್ಟೊವಸ್ಕಿ "ಸಾವಿನ ಮನೆಯ ಟಿಪ್ಪಣಿಗಳು" (Notes from the House of Dead) ಎನ್ನುವ ಕೃತಿಯಲ್ಲಿ ನಿರೂಪಿಸಿದ್ದಾನೆ. ಅದರ ಪುಟ ಪುಟಗಳಲ್ಲೂ ಹಸಿಯಾದ ಮಾನವೀಯತೆಯ ಕಂಪು ಹರಡಿದೆ. ಸೈಬೀರಿಯಾದ ಕೈದಿ ಶಿಬಿರದಲ್ಲಿ ಪಿತೃಹತ್ಯಾಪಾತಕಿಯೊಬ್ಬನಿದ್ದ. ಆತ ನಿದ್ದೆಯಲ್ಲಿ ಆಗಾಗ ಕನವರಿಸುತ್ತಿದ್ದ.

"ಹಿಡಿಯಿರಿ ಅವನನ್ನು, ಅವನ ತಲೆ ಕತ್ತರಿಸಿ"ಎಂದು ಕಿರುಚುತ್ತಿದ್ದ. 'ಕರಮುಜೋವ್ ಸಹೋದರರು' ಕೃತಿಯಲ್ಲಿ ನಿರೂಪಿತರಾದ ಜಮೀನ್ದಾರ ಫ್ಯೊಡೋರ್ ಪ್ಲಾಪೋವಿಚ್, ಕರಮುಜೋವ್‌ನ ಕೊಲೆ. (ಪಿತೃ ಹತ್ಯೆ) ಪಿತೃಹತ್ಯಾಪಾತಕನ ಜೀವನವೇ ಹಿನ್ನೆಲೆ ಒದಗಿಸಿರಬೇಕು. ಪರಿಸರದ ಕ್ರೌರ್ಯ, ಮನುಷ್ಯ ಮನುಷ್ಯನ ಮೇಲೆ ಎಸಗುವ ಅಮಾನುಷ ಅನ್ಯಾಯ ಮೃಗೀಯ ದಬ್ಬಾಳಿಕೆ, ಶೋಷಣೆ ಮುಂತಾದ ವನ್ನೆಲ್ಲ ಸೈಬೀರಿಯಾದಲ್ಲಿ ಅನುಭವಿಸಿದರೂ ಡೊಸ್ಟೊವಸ್ಕಿಯಲ್ಲಿ ಜೀವನ ಪ್ರೀತಿ ಒಂದಿಷ್ಟೂ ಕುಗ್ಗಲಿಲ್ಲ.

ದುರಂತಮಯ ಸಂಘರ್ಷ

ಸೈಬೀರಿಯಾದಿಂದ ಬಿಡುಗಡೆಯಾಗಿ ಪೀಟರ್ ಬರ್ಗ್‌ಗೆ ಹಿಂತಿರುಗಿದ ಬಳಿಕ ಡೊಸ್ಟೊವಸ್ಕಿ ಐದು ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿದ. ೧೮೫೪ರ ಬಳಿಕ ಲೇಖಕನಾಗಿ ಅವನ ಬದುಕು ಆರಂಭವಾಯಿತು. ಆದರೆ ಪುಸ್ತಕ ಪ್ರಕಟಣೆಯಿಂದ ದೊರೆತ ಹಣವೆಲ್ಲ ಸಾಲಗಾರರ ವಶವಾಗುತ್ತಿತ್ತು. ಮುಂದಿನ ೨೫ ವರ್ಷಗಳು ಅವನ ವೈಯಕ್ತಿಕ ಜೀವನ ದುರಂತಮಯ ಸಂಘರ್ಷದಿಂದ ಕೂಡಿತ್ತು. ಏಕಾಏಕಿ ಅವನ ಮೇಲೆ ದಾಳಿಮಾಡುತ್ತಿದ್ದ ಮೂರ್ಛೆ ರೋಗ ಅವನ ಮಾನಸಿಕ ಪ್ರಪಂಚವನ್ನೆ ಜರ್ಜರಿತಗೊಳಿಸಿತು. ಹತಾಶ ಜೂಜುಕೋರನಾಗಿದ್ದ ಆತ. ಒಂದು ಬಾರಿ ಜೂಜಾಡಲು ಕೈಯಲ್ಲಿ ದುಡ್ಡಿಲ್ಲದೆ ಹೆಂಡತಿಯ ಕಿವಿಯ ಆಭರಣಗಳನ್ನೂ ಸೀರೆಯನ್ನೂ ಒತ್ತೆಯಿಟ್ಟನಂತೆ. ಜೂಜಿನಲ್ಲಿ ಆತನಿಗಿದ್ದ ಅದಮ್ಯ ಆಸಕ್ತಿ 'ಗ್ಯಾಂಬ್ಲರ್' ಕಾದಂಬರಿಯಲ್ಲಿ ಮನೋವೇಧಕವಾಗಿ ವರ್ಣಿತವಾಗಿದೆ. ಜೂಜುಕೋರರ ಮಾನಸಿಕ ಪ್ರವೃತ್ತಿಗಳ ವಿಶ್ಲೇಷಣೆ ಆ ಕೃತಿಯಲ್ಲಿ ಅಸದೃಶವಾಗಿ ನಿರೂಪಿತವಾಗಿದೆ. ೧೮೫೭ರಲ್ಲಿ ಡೊಸ್ಟೊವಸ್ಕಿ ಇಸಯೇವಾ ಎಂಬ ಹೆಸರಿನ ವಿಧವೆಯನ್ನು ಪ್ರೀತಿಸಿ ವಿವಾಹವಾದ. ಆದರೆ ದಾಂಪತ್ಯ ಜೀವನ ಸುಖಮಯವಾಗಿರಲಿಲ್ಲ. ಆಕೆ ಸದಾ ರೋಗಗ್ರಸ್ತೆ. ಹಿಸ್ಟೀರಿಯಾ ವ್ಯಾಧಿ ಪೀಡಿತಳಾಗಿದ್ದಳು. ಎಂಟು ವರ್ಷ ಆಕೆಯ ಜೊತೆ ಬಾಳ್ವೆ ಸಾಗಿಸಿದ. ಆ ಮೇಲೆ ವಿವಾಹ ವಿಚ್ಛೇದನ ಮಾಡಿಕೊಂಡು ೧೮೬೭ರಲ್ಲಿ ಅನ್ನಾ ಗ್ರಿಗೋರಿಯೆವ್ನಾ ಎಂಬ ಸ್ಟೆನೋಗ್ರಾಫರಳನ್ನು ವಿವಾಹವಾದ. ಡೊಸ್ಟೊವಸ್ಕಿಯ ಅಂತ್ಯಕಾಲದವರೆಗೂ ಆಕೆ ಅವನ ಜೊತೆಯಲ್ಲಿದ್ದಳು. ಡೊಸ್ಟೊವಸ್ಕಿಯ ಅಮೂಲ್ಯ ಸಾಹಿತ್ಯವನ್ನು ಭವಿಷ್ಯತ್ ಜನಾಂಗಕ್ಕೆ ಉಳಿಸಿದ ಮಹಾನುಭಾವೆ ಆಕೆ. ಮಾತ್ರವಲ್ಲ, ಡೊಸ್ಟೊವಸ್ಕಿಯ ಸಾಹಿತ್ಯಿಕ ಜೀವನದ ನೆನಪುಗಳನ್ನೂ ಆಕೆ ಬರೆದಿಟ್ಟಳು. ಮಾಸ್ಕೋದಲ್ಲಿ ಡೊಸ್ಟೊವಸ್ಕಿಯ ಮ್ಯೂಸಿಯಂ ನಿರ್ಮಾಣಕ್ಕೂ ಆಕೆಯೇ ಪ್ರೇರಕ ಶಕ್ತಿ.

೧೮೭೩–೮೧ರ ಅವಧಿಯಲ್ಲಿ ಡೊಸ್ಟೊವಸ್ಕಿ ಪತ್ರಕರ್ತನಾಗಿ ದುಡಿದ. ಇಪೋಕಾ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ. ಆ ಬಳಿಕ ಗ್ರಾಜ್ಡಾನಿಕ್ ಪತ್ರಿಕೆಯ ಸಂಪಾದಕನಾದ. 'ಲೇಖಕನ ದಿನಚರಿ' (Diary of a Writer) ಎನ್ನುವ ಶೀರ್ಷಿಕೆಯಡಿಯಲ್ಲಿ ಆತ ಬರೆಯುತ್ತಿದ್ದ ಲೇಖನಮಾಲೆ ತುಂಬ ಜನಪ್ರಿಯವಾಯಿತು: ಸಮಕಾಲೀನ ಯುರೋಪಿನ ಜ್ವಲಂತ ರಾಜಕೀಯ ಸಮಸ್ಯೆಗಳನ್ನೂ ಸಾಮಾಜಿಕ ಸಮಸ್ಯೆಗಳನ್ನೂ ತನ್ನ ಕಾದಂಬರಿ ರಚನೆಗೆ ಪ್ರೇರಣೆ ನೀಡಿದ ಅನುಭವಗಳನ್ನೂ ಗಾಢ ವೈಚಾರಿಕತೆಯಿಂದ ಆ ಲೇಖನಮಾಲೆಯಲ್ಲಿ ನಿರೂಪಿಸಿದ. ಮುಂದೆ ಅದು ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

೧೮೬೨, ೬೩, ೬೫ರಲ್ಲಿ ಡೊಸ್ಟೊವಸ್ಕಿ ಜರ್ಮನಿ, ಸ್ವಿಟ್ಜರ್‌ಲೆಂಡ್, ಇಟಲಿ, ಇಂಗ್ಲೆಂಡ್‌ಗಳಿಗೆ ಪ್ರವಾಸ ಕೈಗೊಂಡ.

೧೮೮೦ರಲ್ಲಿ ಡೊಸ್ಟೊವಸ್ಕಿ ಮಾಸ್ಕೋದಲ್ಲಿ ಕವಿ ಪುಷ್ಕಿನ್ನನ ವಿಗ್ರಹದ ಅನಾವರಣ ಸಂದರ್ಭದಲ್ಲಿ ಅಲ್ಲಿ ನೆರೆದ ಜನತೆಯನ್ನು ಉದ್ದೇಶಿಸಿ ಮಾಡಿದ ಭಾಷಣ ಜಾಗತಿಕ ಸಾಹಿತ್ಯದಲ್ಲೇ ಮೌಲ್ಯಾತ್ಮಕ ಕೃತಿಯಾಗಿದೆ.

ಮರುವರ್ಷವೇ ಆತ ತೀರಿಕೊಂಡ.

ರಷ್ಯದ ಜನಸಾಮಾನ್ಯರು, ಬುದ್ಧಿಜೀವಿಗಳು ಅಗಾಧ ಸಂಖ್ಯೆಯಲ್ಲಿ ಈ ಮಹಾನ್ ಲೇಖಕನ ಶವಯಾತ್ರೆಯಲ್ಲಿ ಭಾಗವಹಿಸಿ, ಒಬ್ಬ ಚಕ್ರವರ್ತಿಗೆ ನೀಡಬಹುದಾದ ಶವಸಂಸ್ಕಾರ ವೈಭವವನ್ನು

ಈ ನತದೃಷ್ಟ ಲೇಖಕನಿಗೆ ನೀಡಿದರು.

ಕೃತಿಗಳು

೧೮೪೬ರಲ್ಲಿ ದೊಸ್ತೊವಸ್ಕಿಯ ಪ್ರಥಮ ಕಾದಂಬರಿ 'ಬಡ ಜನರು' (Poor People) ಪ್ರಕಟವಾಯಿತು. ಕಡುಬಡತನದಲ್ಲಿ ನರಳಿದ ಗುಮಾಸ್ತನ ಬದುಕಿನ ಸಾಮಾಜಿಕ ದುರಂತದ ವಾಸ್ತವಿಕ ನಿರೂಪಣೆ ಇರುವ ಕೃತಿ ಅದು. ನೀರಸ ಏಕಾಂತದಲ್ಲಿ ಬದುಕು ತಳ್ಳುವ ಕನಸುಗಾರ. ಮಾನಸ ಲೋಕದ ವಿಶ್ಲೇಷಣೆ ಆ ಕೃತಿಯಲ್ಲಿದೆ. ಇದೇ ಕಾಲದಲ್ಲಿ ರಚಿತವಾದ ಮತ್ತೊಂದು ಕೃತಿ 'ಬೆಳ್ಳಗಿನ ರಾತ್ರಿಗಳು' (White Nights) ಪೀಟರ್ಸ್‌ಬರ್ಗಿನ ವರ್ಣರಂಜಿತ ಜೀವನದ ಹಿನ್ನೆಲೆಯಲ್ಲಿ ಚಿತ್ರಿತವಾದ ಪ್ರೇಮ ಕತೆ. ಆಧುನಿಕ ಜಗತ್ತಿನ ಪರಿಸರದ ಕ್ರೌರ್ಯದಲ್ಲಿ ತಾರುಣ್ಯದ ಸುಂದರ ಕನಸುಗಳು ನಾಶವಾಗಿ ಹೇಯ ವಾಸ್ತವಿಕತೆಯೇ ಜಯ ಗಳಿಸುತ್ತದೆ ಎಂಬುದನ್ನು ದೊಸ್ತೊವಸ್ಕಿ ಆ ಕೃತಿಯಲ್ಲಿ ನಿರೂಪಿಸಿದ್ದಾನೆ.

ಸಾವಿನ ಮನೆಯ ಟಿಪ್ಪಣಿಗಳು (Notes from the House of Dead) ಕೃತಿಯಲ್ಲಿ. ಕೈದಿಯಾಗಿ ತನ್ನ ಜೀವನಾನುಭವಗಳನ್ನು ವರ್ಣಿಸಿದ್ದಾನೆ. ಅಪರಾಧ ಮತ್ತು ಶಿಕ್ಷೆಯ ಸಮಸ್ಯೆಯ ವಿಶ್ಲೇಷಣೆಯಲ್ಲಿ ಅವನಿಗಿರುವ ಅದಮ, ಆಸಕ್ತಿ, ಕೊಲೆ ಗಡುಕರು, ಅತ್ಯಾಚಾರಿಗಳು, ವಿಕೃತ ಕಾಮಿಗಳು, ಮುಂತಾದವರ ಮನಸ್ಸಿನ ಕರಾಳ ಮೂಲೆಗಳನ್ನು ಶೋಧಿಸಿ ಅಸಾಧಾರಣ ವಾಸ್ತವಿಕತೆಯಿಂದ ಚಿತ್ರಿಸಿದ ಈ ಕೃತಿಯನ್ನು ಹೋಲುವ ಮತ್ತೊಂದು ಕೃತಿ ಜಾಗತಿಕ ಸಾಹಿತ್ಯದಲ್ಲಿರುವುದಾದರೆ ಅದು ದಾಂತೆಯ "ಇನ್‌ಫರ್ನೋ" ಇರಬಹುದೇನೊ ? ೨೦ನೇ ಶತಮಾನದ ಮಧ್ಯಭಾಗದಲ್ಲಿ ನಾಝೀ ಕೈದಿಗಳ ಯಾತನಾ ಶಿಬಿರಗಳಲ್ಲಿ (Concentration Camps) ಹಿಟ್ಲರನ ಅಮಾನುಷ ಹಿಂಸೆ ಅನುಭವಿಸಿದ ಕೈದಿಗಳು ಈ ಕೃತಿಯನ್ನು ಓದಿದ್ದರೆ ತಮ್ಮ ಯಾತನೆಗಳ ಪ್ರತಿಧ್ವನಿಯೇ ಆ ಕೃತಿಯಲ್ಲಿರುವುದು ಅವರಿಗೆ ತಿಳಿಯುತ್ತಿತ್ತೇನೊ.

ಮನುಷ್ಯನ ಹೃದಯದಲ್ಲಿ ಸುಪ್ತವಾಗಿ ಹೊಗೆಯಾಡುತ್ತಿರುವ ಪಾಪ ಪ್ರಜ್ಞೆಯ ಗಾಢ ವಿಶ್ಲೇಷಣೆ ಇರುವ ಅವನ "ಕರಮಜೋವ್ ಸಹೋದರರು" ಕಾದಂಬರಿ, ಜಾಗತಿಕ ಸಾಹಿತ್ಯದ ಕೆಲವೇ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ. 'ಮಹಾಪಾಪಿಯೊಬ್ಬನ ಜೀವನ (The Life of a Great Sinner) ಎಂದು ಮೊದಲು ಈ ಕಾದಂಬರಿಗೆ ಆತ ಶೀರ್ಷಿಕೆ ನೀಡಿದ. ಈ ಕಾದಂಬರಿ ಪೂರ್ತಿ ಬರೆದು ಮುಗಿಸಲು ೮ ವರ್ಷ ಬೇಕಾಯಿತು. "ಮನುಷ್ಯನ ಅಂತರಿಕ ಜಗತ್ತಿನ ಯಾಂತ್ರಿಕ ವಿಚಾರಗಳನ್ನು ಕುಟ್ಟಿ ಪುಡಿಮಾಡಿದ ಒಳಿತು–ಕೆಡುಕುಗಳ ನಡುವಿನ ಗಡಿಯನ್ನು ಚಿತ್ರಿಸಿದ ಅಪರೂಪದ ಕೃತಿ ಅದು, ಎಂದು ಕರಮ ಜೋವ್ ಸಹೋದರರು ಕೃತಿಯ ಬಗ್ಗೆ ಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಹೇಳಿದ ಮಾತು ಅಕ್ಷರಶಃ ನಿಜ. ಮನುಷ್ಯ ಸ್ವಭಾವದ ಪ್ರತಿಯೊಂದು ವೈಪರೀತ್ಯವನೂ ವಿಕೃತಾವಸ್ಥೆಯನ್ನೂ ಅಲ್ಲಿನ ಪಾತ್ರಗಳು ಪ್ರತಿಬಿಂಬಿಸುತ್ತವೆ. ಜೀವನ–ಮರಣ, ಧರ್ಮ–ನಾಸ್ತಿಕತೆಗೆ ನಡೆಯುವ ನಿರಂತರ ಸಂಘರ್ಷ ಆ ಕೃತಿಯಲ್ಲಿದೆ.


'ಅಪರಾಧ ಮತ್ತು ಶಿಕ್ಷೆ' (Crime and Punishment) ದೊಸ್ತೊವಸ್ಕಿಯ ಮತ್ತೊಂದು ಪ್ರಸಿದ್ಧ ಕೃತಿ. ನ್ಯಾಯಶಾಸ್ತ್ರ ವ್ಯಾಸಂಗ ಮಾಡುತ್ತಿದ್ದ ರಾಥೋಲ್ನಿಕೋಲ್ ಎಂಬ ವಿದ್ಯಾರ್ಥಿಯೊಬ್ಬ ಗಿರವಿದಾರ ಮುದುಕಿಯೊಬ್ಬಳನ್ನು ಕೊಲೆ ಮಾಡುವುದು ಕಾದಂಬರಿಯ ಕಥಾವಸ್ತು. ಕೊಲೆಗೆ ಮುನ್ನ ಅವನ ಮನಸ್ಸಿನ ತೊಳಲಾಟ, ತುಡಿತಗಳು. ಕೊಲೆಯ ಬಳಿಕ ಅನುಭವಿಸುವ ನರಳಾಟ. ಭ್ರಮಾಧೀನ ಸ್ಥಿತಿಯನ್ನು ಹೃದಯ ವೇಧಕವಾಗಿ ಅಲ್ಲಿ ಚಿತ್ರಿಸಲಾಗಿದೆ. ತನ್ನ ಕುಟುಂಬದ ಜೀವನ ನಿರ್ವಹಣೆಗಾಗಿ ೧೮ರ ವಯಸ್ಸಿನ ಉಕ್ಕುವ ತಾರುಣ್ಯದಲ್ಲಿ ಸೂಳೆಯಾದ ಸೋನಿಯಾ ಮಾರ್ಮಲೆಡೋವಳ ನಾಚಿಕೆ ಗೇಡಿ ಬಾಳ್ವೆಯನ್ನು ಹೆಣ್ಣಿನ ಅಸಹಾಯಕತೆಯನ್ನು ನಿರುದ್ವೇಗದಿಂದ ಚಿತ್ರಿಸಿದ ರೀತಿ ಬೆರಗುಗೊಳಿಸುತ್ತದೆ. ನೈತಿಕತೆಯನ್ನು ಧಿಕ್ಕರಿಸಿ ಅಮಾನುಷ ಕಾರ್ಯಗಳನ್ನು ನಡೆಸುವ ಅಪರಾಧಿಗಳು ಅಂತಿಮವಾಗಿ ಕಠೋರ ಶಿಕ್ಷೆಗೆ ಗುರಿಯಾಗಲೇಬೇಕು ಎಂಬುದನ್ನು ದೊಸ್ತೊವಸ್ಕಿಯ ದುಷ್ಟ ಪಾತ್ರಗಳು ಕೊನೆಯಲ್ಲಿ ಅನುಭವಿಸುವ ಶಿಕ್ಷೆಯಿಂದ ಸ್ಪಷ್ಟ

ವಾಗುತ್ತದೆ. "ಅಪರಾಧ ಮತ್ತು ಶಿಕ್ಷೆ" ಕಾದಂಬರಿಯ ರಾಪೊಲ್ನಿಕೋವ್, 'ಕರಮಜೋವ್ ಸಹೋದರರು' ಕೃತಿಯ ಮಿತ್ಯಾ ಕರಮಜೋವ್-ಇಬ್ಬರಿಗೂ ಅವರು ಎಸಗಿದ ಕ್ರೂರ ಕೃತ್ಯಗಳಿಗಾಗಿ ಸೈಬೀರಿಯಾದ ಕೈದಿ ಶಿಬಿರಗಳಲ್ಲಿ ಕಠಿಣ ದುಡಿಮೆಯ ಶಿಕ್ಷೆ ಲಭಿಸುತ್ತದೆ. ಕರಮಜೋವ್ ಸಹೋದರರು ಕೃತಿಯ ಸ್ಮೆರ್ಡ್ಯಕೋವ್ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಐವಾನ್ ಕರಮಜೋಗೆ ಹುಚ್ಚು ಹಿಡಿಯುತ್ತದೆ. ಹೀಗೆ ಪ್ರತಿಯೊಂದು ದುಷ್ಟರ ಪಾತ್ರಗಳೂ ತಾವು ಎಸಗಿದ ಕ್ರೂರ ಕರ್ಮಗಳಿಗೆ ಪರಮಾವಧಿ ಪ್ರಾಯಶ್ಚಿತ್ತ ಅನುಭವಿಸುತ್ತಾರೆ. ಸಮಕಾಲೀನ ಸಮಾಜವನ್ನು ಕಾಡುತ್ತಿದ್ದ ಸಮಸ್ಯೆಗಳನ್ನು ವ್ಯಕ್ತಿಗಳ ರೋಗಗ್ರಸ್ತ ಮನಸ್ಸನ್ನು ತನ್ನ ಸಮಕಾಲೀನ ಲೇಖಕರಿಗಿಂತ ಹೆಚ್ಚು ಅರ್ಥಪೂರ್ಣವಾಗಿ ಡೊಸ್ಟೊವಸ್ಕಿ ತನ್ನ ಕೃತಿಗಳಲ್ಲಿ ವಿಶ್ಲೇಷಿಸಿದ್ದಾನೆ. ಡೊಸ್ಟೊವಸ್ಕಿಯ ಕೃತಿಗಳಲ್ಲಿ ಪಾತ್ರ ಚಿತ್ರಣ ಹಾಗೂ ದ್ವಂದ್ವ ವ್ಯಕ್ತಿತ್ವ (Double Personality)ಗಳ ನಿರೂಪಣೆಯಲ್ಲಿ, ಬಿಡಿಬಿಡಿಯಾದ ಕಲಾತ್ಮಕ ವಿವರಗಳಲ್ಲಿ ಆ ಕಾಲದ ಸಾಮಾಜಿಕ, ತಾತ್ವಿಕ, ನೈತಿಕ ತತ್ವಗಳ ಅನ್ವೇಷಣೆಯ ಪ್ರಭಾವ ಕಂಡು ಬರುತ್ತದೆ. ಅವನ ಕೃತಿಗಳಲ್ಲಿ ಕಿಕ್ಕಿರಿದು ತುಂಬಿರುವ ಕೊಲೆ, ಅತ್ಯಾಚಾರ, ಆತ್ಮಹತ್ಯೆಯ ಘಟನೆಗಳು ಓದುಗರನ್ನು ರೋಮಾಂಚನಗೊಳಿಸಲು ಅಥವಾ ಅವರ ಅನುಕಂಪವನ್ನು ಪಡೆಯಲು ಅವನ ಕಲ್ಪನೆಯ ಜೋಳಿಗೆಯಿಂದ ಸಿಡಿದ ಸರಕುಗಳಲ್ಲ. ಒಂದು ನರಳುವ ಆತ್ಮದಿಂದ ಹೊರಹೊಮ್ಮಿದ ಸತ್ಯಗಳು. ತನ್ನ ಕುದಿಯುವ ಹೃದಯವನ್ನೇ ತನ್ನ ಕೃತಿಗಳಲ್ಲಿ ಎರಕಹೊಯ್ದ ಅಪೂರ್ವ ಕಲಾವಿದ ಆತ.

ಸ್ಪೇನ್ ಸಾಹಿತಿ ಸರ್ವಾಂಟಿಸ್‌ನ ಡಾನ್ ಕ್ವೀಹೋ (Don Quixote) ಕೃತಿಯ ನಾಯಕ, ಶಿಲು ಮೀರ ಡಾನ್ ಕ್ವೀಹೋನ ನೆನಪು ತರುವ ಡಾಸ್ಟೊವಸ್ಕಿಯ 'ಈಡಿಯಟ್' ಕಾದಂಬರಿಯ ಪ್ರಿನ್ಸ್ ಮಿಷ್ಕಿನ್ ನೈತಿಕ ಪಾವಿತ್ರ್ಯದ ಸಾಕಾರ ರೂಪ. ಒಳಿತಿನಲ್ಲಿ ತಮಗಿರುವ ಅಚಲ ಶ್ರದ್ಧೆಯನ್ನು ಕಾಪಾಡಿಕೊಳ್ಳಲು ಹೋರಾಡುವ ಒಬ್ಬ ವ್ಯಕ್ತಿ ಲೋಕದ ಜನರ ದೃಷ್ಟಿಯಲ್ಲಿ ಹುಚ್ಚನೆನಿಸುತ್ತಾನೆ. ಅದು ಅನಿವಾರ್ಯ. ಆದರೂ ಸ್ವಾರ್ಥಮಯವಾದ ಈ 'ಜನ-ಅರಣ್ಯ'ದ ಜಗತ್ತಿನಲ್ಲಿ ಮನುಷ್ಯತ್ವವನ್ನು ಕಳೆದುಕೊಳ್ಳದೆ ಬದುಕುವುದು ಅದೇ ಜೀವಿತದ ಸಾರ್ಥಕ ಉದ್ದೇಶ. ಡೊಸ್ಟೊವಸ್ಕಿಯ 'ಈಡಿಯಟ್' ಅಂಥವನು. 'ಫಿಟ್ಸ್' ಕಾಯಿಲೆಯಿಂದ ಆಗಾಗ ನರಳಿ ಬುದ್ಧಿ ಸ್ತಿಮಿತವನ್ನು ಕಳೆದುಕೊಳ್ಳುತ್ತಿದ್ದ ಈಡಿಯಟ್‌ನ 'ಪ್ರಿನ್ಸ್ ಮಿಷ್ಕಿನ್' ಡೊಸ್ಟೊವಸ್ಕಿಯ ಆಕರ್ಷಣೀಯ ಪಾತ್ರ.

ಡೊಸ್ಟೊವಸ್ಕಿಯ ಹೃದಯ, ಮನಸ್ಸು, ಹೋರಾಟದ ರಣರಂಗವಾಗಿತ್ತು. ಅಲ್ಲಿ ಧರ್ಮ ಮತ್ತು ನಾಸ್ತಿಕತೆಗೆ, ಭಾವುಕತೆ ಮತ್ತು ವಾಸ್ತವಿಕತೆಗೆ ನಿರಂತರ ಹೋರಾಟ ನಡೆದಿರುತ್ತಿತ್ತು. ಆತ್ಮಹತ್ಯೆ ಬದುಕಿನ ತೀರ ಗಂಭೀರ ಸಮಸ್ಯೆ ಎಂದ ಡೊಸ್ಟೊವಸ್ಕಿ, ಬದುಕನ್ನು ಹಿಂಡಿಹಿಪ್ಪೆ ಮಾಡುವ, ವ್ಯಕ್ತಿತ್ವವನ್ನು ಛಿದ್ರ ಛಿದ್ರಗೊಳಿಸುವ ಸಮಸ್ಯೆಗಳಿಂದ ಪಾರಾಗಲು ಇರುವ ಅಂತಿಮ ಉಪಾಯವೆಂದರೆ ಆತ್ಮಹತ್ಯೆಯೊಂದೇ ಎಂದು ಆತ ತನ್ನ ಕೆಲವು ಕೃತಿಗಳಲ್ಲಿ ಪ್ರತಿಪಾದಿಸಿದ.

ಜೀವನ ಯಾತನೆಯನ್ನು ನಮ್ಮೆಲ್ಲರಿಗಿಂತ ಹೆಚ್ಚು ತೀವ್ರವಾಗಿ ಅನುಭವಿಸಿದ ಡೊಸ್ಟೊವಸ್ಕಿ ಮನುಷ್ಯನ ಸ್ವಭಾವದ ಆಳಕ್ಕಿಳಿದು ಅಲ್ಲಿನ ದೌರ್ಬಲ್ಯಗಳನ್ನು ಹೆಚ್ಚು ಗಾಢವಾಗಿ ಅರ್ಥಮಾಡಿಕೊಂಡ. ಹೇಗೆ ಬದುಕಿದರೆ ನಮ್ಮ ಜನ್ಮ ಸಾರ್ಥಕ ಎಂಬುದನ್ನು ಆತ ತಿಳಿಸಿದ. ಅದು ನಿಜಕ್ಕೂ ಹೃದಯದ ಬುದ್ಧಿವಂತಿಕೆ. ನಾವು ಕಲಿತುಕೊಳ್ಳಬೇಕಾದದ್ದು ಅದನ್ನೇ.



ಕಳೆದುಕೊಂಡದ್ದು

ಪ್ರೇಮಾ ಭಟ್

ನನಗೆ ಈಗ ಸರಿಯಾಗಿ ೬೦ ವರ್ಷ. ಕಳೆದು ಕೊಂಡ ನನ್ನ ಆಯುಸ್ಸಿನ ಬಗ್ಗೆ ಕಳವಳ ಪಡುತ್ತೇನೆ. ಯಾಕೆ? ಎಂದು ಯೋಚಿಸುವಾಗೆಲ್ಲ ನನ್ನ ಮನಸ್ಸಿನಲ್ಲಿ ಹುಟ್ಟುವ ವಿಚಾರಗಳು ಅನಂತ. ಅದರ ವ್ಯಾಪ್ತಿಯ ಅರಿವು ನನಗಿನ್ನೂ ಅರಿವಾಗದೆ ಹೋದರೂ ನನ್ನಷ್ಟಕ್ಕೆ ನಾನು ವಿಚಾರದ ಮಂಥನಕ್ಕೆ ತೊಡಗಿದಾಗ ಅಥವಾ ಕಳೆದು ಹೋದ ದಿವಸಗಳನ್ನು ಎಣಿಸುವಾಗ, ನನ್ನ ಕಳೆದುಕೊಂಡ ಆಯುಸ್ಸಿನ ಬೆಲೆ ಹಿರಿದು ಎನಿಸುತ್ತದೆ. ವಿಚಾರದ ತಳಮಳ ಹೆಚ್ಚುತ್ತದೆ. ಈ ೫೯ ವರ್ಷದಲ್ಲಿ ನಾನು ಸಾಧಿಸಿದ್ದೇನೂ ಇಲ್ಲವಾದರೂ ಆಗಿನ ನನ್ನ ಬದುಕು ಅದೊಂದು ಸುವ್ಯವಸ್ಥಿತವಾಗಿತ್ತು. ಭದ್ರವಾದ ಪರಿಸರ ಪ್ರಾಮಾಣಿಕ ನೆಲೆಯಲ್ಲಿ ಕಳೆದ ದಿನಗಳು ಇನ್ನು ಬರಲಾರವು. ಆಗಲೇ ತಿಳಿಸಿದಂತೆ ನನಗೆ ಈಗ ೬೦ ವರ್ಷ. ನನ್ನ ತಲೆಗೂದಲು ಅಲ್ಲೊಂದು ಇಲ್ಲೊಂದು ಹಣ್ಣಾಗಿವೆ ಅಷ್ಟೆ; ಅರವತ್ತು ವರ್ಷದ ಮುದುಕಿಯಂತೆ ನಾನು ಕಾಣುವುದಿಲ್ಲವಂತೆ. ನಿಜ. ರೇಷಿಮೆಯಂತೆ ನಯವಾಗಿ ಇಳಿ ಬಿದ್ದಿರುವ ನನ್ನ ಕೂದಲನ್ನು ನೋಡಿ ನೋಡಿ ಮರುಗುವವರಿಗೆಲ್ಲ ಹೇಳಿದ್ದೇನೆ. ನೀವು ಆ ತೈಲ ಈ ತೈಲ ಅಂತ ನೂರೆಂಟು ಬಗೆಯ ಎಣ್ಣೆ ಹಾಕುತ್ತೀರಿ. ನಾನು ತೆಂಗಿನೆಣ್ಣೆಯ ವಿನಾ ಬೇರೆ ಎಣ್ಣೆ ಉಪಯೋಗಿಸುತ್ತಿರಲಿಲ್ಲವೆಂದರೆ ಕೇಳುವುದಿಲ್ಲ. ನಿಮ್ಮ ಕಾಲದವರು ಗಟ್ಟಿ ಎಂದು ಹಂಗಿಸುವ ಸೀತಾ, ಬಟ್ಟಲು ತುಂಬ ಅನ್ನವನ್ನೆಂದು ಉಂಡಿದ್ದಾಳೆ? ಬೆಳಗ್ಗೆದ್ದರೆ ಪೂರಿ. ದೋಸೆ ಇಲ್ಲ ಬ್ರೆಡ್ಡು ತಿನ್ನುವ ಇವರ ಹಾಗೆ ನಾವಿರಲಿಲ್ಲ. ಒಂದು ಬಟ್ಟಲು ತಂಗಳು, ಅದರ ಮೇಲೊಂದಿಷ್ಟು ಉಪ್ಪಿನಕಾಯಿ, ನೀರು ಮಜ್ಜಿಗೆ, ಇಲ್ಲ ಒಂದು ಬಟ್ಟಲು ಗಂಜಿ, ಎರಡು ಮಿಳಿ ತೆಂಗಿನ ಎಣ್ಣೆ, ಮಿಡಿ ಉಪ್ಪಿನಕಾಯಿ ಇದು ನಮ್ಮ ಬೆಳಗಿನ ಫಲಾಹಾರ. ಆ ತಂಪಿಗೆ ನಾನು ಮಾಡುತ್ತಿದ್ದ ಕೆಲಸ ಈ ಸೀತಾಳಾಗಲಿ ಅವಳ

ಮಕ್ಕಳೇ ಆಗಲಿ ಅಥವಾ ನಾನು ಈಗಿನ ದಿವಸಗಳಲ್ಲಿ ಕಾಣುತ್ತಿರುವ ಇನ್ನಾರೇ ಆಗಲಿ ಮಾಡಲಾರರು. ತಿನ್ನುವ ಆಹಾರ ಅಪಥ್ಯವಾಗಿರದಿದ್ದರೆ ದೇಹಾರೋಗ್ಯದ ಜೊತೆಗೆ ಬೇರೆಲ್ಲ ಲಕ್ಷಣಗಳೂ ಕೂಡಿಕೊಳ್ಳುತ್ತವೆ. ನಾನು ನನ್ನ ಬದುಕಿನಲ್ಲಿ ಕಳೆದ ದಿನಗಳನ್ನು ಬಹಳವಾಗಿ ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ಯಾಕೆ? ಆಗಿನ ದಿವಸಗಳಲ್ಲಿ ಹೇಳುವುದಾದರೆ ಹೆಣ್ಣು ಒಂದು ರೀತಿಯಲ್ಲಿ ಸಮನ್ವಯ ಬದುಕಿನ ಪ್ರತೀಕವಾಗಿದ್ದಳು. ಪ್ರಾಮಾಣಿಕವಾಗಿ ಒಟ್ಟು ಕುಟುಂಬದ ಕೇಂದ್ರಬಿಂದುವಾಗಿ ಬದುಕುತ್ತಿದ್ದಳು. ನಾನು ಹೇಳುವುದಾದರೆ ನನ್ನ ಕುಟುಂಬದಲ್ಲಿ ಒಟ್ಟು ಇಪ್ಪತ್ತು ಜನರಿದ್ದೆವು. ನಾವಿಬ್ಬರು ಪತಿ ಪತ್ನಿಯರು, ಅತ್ತೆ ಮಾವರಲ್ಲದೆ ಅತ್ತಿಗೆ ನಾದಿನಿಯರು. ಮೈದುನಂದಿರು. ಅವರೆಲ್ಲರ ಮಕ್ಕಳು ಹೀಗೆ ಇಪ್ಪತ್ತು ಜನರಿರುವ ಆ ಮನೆಗೆ ನಾನೇ ಹಿರಿಸೊಸೆ. ಜವಾಬ್ದಾರಿಯೂ ಹೆಚ್ಚು, ಕೆಲಸವೂ ಹೆಚ್ಚು. ನನ್ನ ಪಾಲಿಗೆ ಕೆಲವೊಮ್ಮೆ ಬೇಸರವಾದರೂ ಸಹಿಸಬೇಕಾಗಿತ್ತು. ಶಾಂತ ವಾತಾವರಣವನ್ನು ಕಲಕಿಸುವ ಎದೆಗಾರಿಕೆಯೂ ಇರಲಿಲ್ಲ. ಗಂಡಸರು ಪ್ರಬಲರಾಗಿದ್ದು ಜವಾಬ್ದಾರಿಯಿಂದ ಮನೆವಾಳಿಕೆಯನ್ನು ನೋಡುತ್ತಿದ್ದುದರಿಂದ ನಾವಾರೂ ಪರಸ್ಪರ ಕಲಹವಾಡುತ್ತಿರಲಿಲ್ಲ. ಕೆಲವೊಮ್ಮೆ ಭೇದ ಭಾವಗಳು ಕಂಡು ಬಂದರೂ ಸ್ವಲ್ಪದರಲ್ಲೇ ಉಪಶಮನವಾಗಿ ನಾವು ಹೇಗೋ ಹೊಂದಿಕೊಳ್ಳುತ್ತಿದ್ದೆವು. ನನ್ನ ಕಳೆದ ಆಯುಸ್ಸಿನ ಆ ದಿವಸಗಳಲ್ಲಿ ಒಂದು ದಿನವೂ ನಾನು ಇವರೊಂದಿಗೆ ಜಗಳಾಡಿದ ನೆನಪು ಇಲ್ಲ. ಯಾವಾಗಲೂ ದರ್ಪದಿಂದಲೇ ತನ್ನ ಗಂಡಸುತನವನ್ನು ಪ್ರದರ್ಶಿಸುತ್ತಿದ್ದ ಅವರ ಮುಂದೆ ತಲೆ ಎತ್ತಿ ನಿಲ್ಲುವುದಕ್ಕೂ ನನಗೆ ಅಧೈರ್ಯ. ಆದರೆ ಈ ಸೀತಾ ಆ ನನ್ನ ಸ್ನೇಹಿತೆ ಸೌಭಾಗ್ಯಳ ಸೊಸೆ, ನೆರೆಮನೆಯ ಶೈಲಾ ಎಲ್ಲ ಅವರವರ ಗಂಡಂದಿರ ಎದುರು ವಾದಿಸುವಾಗೆಲ್ಲ ನಾನು ನೊಂದಿದ್ದೇನೆ. ಹೆಣ್ಣಿಗೆ ಮನೆಯಲ್ಲಿ ಸ್ಥಾನಮಾನ ಗೌರವಗಳು ಗಂಡಸಿನಿಂದ ಸಿಗಬೇಕಾದ್ದು ಧರ್ಮ. ಅಂತೆಯೇ ಅವನಿಗೆ ಹೊಂದಿ ನಡೆಯಬೇಕಾದ್ದು ಇವಳ ಧರ್ಮವೂ ಕೂಡ. ಎಷ್ಟೋ ವೇಳೆ ನಾನು ಇದಕ್ಕಿಂತಲೂ ವಿಭಿನ್ನವಾದ ವಿಚಾರಗಳನ್ನು ತೀರ ಇತ್ತೀಚೆಗೆ ಕಾಣುತ್ತಿದ್ದೇನೆ. ಗಂಡ ಹೆಂಡರ ಸಾಮರಸ್ಯವಿಲ್ಲದ ದಾಂಪತ್ಯ ಜೀವನ. ಪರಸ್ಪರ ಹೊಂದಿಕೊಳ್ಳಲಾರದೆ ಕಾನೂನಿನ ರೀತ್ಯ ಜಿಡುಗಡೆ ಹೊಂದುತ್ತಿರುವ ಎಷ್ಟೋ ಜನರನ್ನು ಕಂಡಿದ್ದೇನೆ, ಕಾಣುತ್ತಿದ್ದೇನೆ. ಇದಕ್ಕೆಲ್ಲ ಕಾರಣ ಏನು? ಕಾರಣ ಯಾರು? ಪರಿಸರವೇ? ಬದುಕೇ? ಗಂಡಸಿನ ದೌರ್ಬಲ್ಯವೇ? ಹೆಂಗಸಿನ ಭಾವನೆಗಳೇ? ಯಾವುವು? ಯೋಚಿಸಿದ ಹಾಗೆಲ್ಲ ಸಮಸ್ಯೆ ಬಿಗಿಯಾಗುತ್ತದೆ. ಜಟಿಲವಾಗುತ್ತದೆ. ಇದಕ್ಕಾಗಿಯೇ ನಾನು ನನ್ನ ಕಳೆದು ಹೋದ ಆಯುಸ್ಸಿನ ಬಗ್ಗೆ ಮರುಗುತ್ತೇನೆ. ಮತ್ತೆಂದೂ ಬರಲಾರದ ಆ ದಿವಸಗಳನ್ನು ನೆನೆಯುತ್ತೇನೆ. ಪ್ರೀತಿಸುತ್ತೇನೆ. ಸೀತಾ, ವೆಂಕಟರಮಣನಿಗೆ ಎದುರು ನಿಲ್ಲುವಾಗ ಉಸಿರು ಕಟ್ಟಿದ ಹಾಗೆ ಹಿಂಸೆಯಾಗುತ್ತದೆ. ಹೇಸುತ್ತೇನೆ. ಇದು ಸರಿಯೇ ಎಂದು ಕೇಳುವುದಿಲ್ಲ. ವಾದ ಮಾಡುವುದಿಲ್ಲ. ಯಾಕೆ? ಪ್ರಯೋಜನವಿಲ್ಲವೆಂದು. ಆದರೆ ನನ್ನ ಆಯುಸ್ಸಿನ ಈ ದಿವಸಗಳಲ್ಲಿ ಇವನ್ನೆಲ್ಲ ನೋಡಬೇಕೆ ನಾನು? ಎನ್ನುವ ವಿಚಾರದಲ್ಲಿ ಮನಸ್ಸು ಸಂಕಟಪಡುತ್ತದೆ. ವೆಂಕಟರಮಣ ಹೆಂಡತಿಯನ್ನು ಅಂಕೆಯಲ್ಲಿಟ್ಟುಕೊಂಡಿಲ್ಲ. ಅವಳು ಹೇಳಿದ್ದು, ಕೇಳಿದ್ದು, ಬೇಡಿದ್ದು ಬರುತ್ತದೆ. ಇದೆಲ್ಲ ಏನು? ನನ್ನ ಆಯುಸ್ಸಿನ ಆ ದಿವಸಗಳಲ್ಲಿ ಬೇಡುವ ಹಕ್ಕು ನಮಗಿತ್ತೇ? ಗಂಡಸಿನ ಅಂಕೆಯಲ್ಲಿ ನಾವು ಧನ್ಯತೆಯನ್ನು ಪಡೆಯುತ್ತಿದ್ದೆವು. ಕೇಳುವ ಹಕ್ಕನ್ನು ಪಡೆದಿರಲಿಲ್ಲ. ಅವರು ತಂದುಕೊಟ್ಟದ್ದನ್ನು ಸ್ವೀಕರಿಸುವುದು. ತಂದು ಹಾಕಿದ್ದನ್ನು ನೋಡಿ ಸಂತೋಷಪಡುವುದು, ಹಾಗಂತ ಆನಂದವಾಗಿರಲಿಲ್ಲವೇ? ಪತಿಯ ಬಗ್ಗೆ ಅಗಾಧ ಪವಿತ್ರಭಾವನೆ ಇತ್ತು. ನಾವು ಬದುಕಿದೆವು. ಬಾಳಿದೆವು. ಪ್ರೀತಿಸಿದೆವು, ಗೌರವಿಸಿದೆವು, ಆದರೆ ಹೇಗೆ? ಇಬ್ಬರಲ್ಲಿ ಅನಾವಶ್ಯಕ ಮಾತುಕತೆಗಳಿಲ್ಲ. ಒಟ್ಟಿಗೆ ಹಿರಿಯರ ಮುಂದೆ ಕೂಡುವುದು ಮನೆಯಲ್ಲಿ ನಡೆಯುವ ಮಂಗಳ ಸಮಾರಂಭದಂದು ಮಾತ್ರ. ಅದೂ ಪುರೋಹಿತರು ಕರೆದ ಹೊತ್ತಿಗೆ ಮಾತ್ರ. ಅದೆಲ್ಲ ಹೋಯಿತು. ಅಂತಹ ವಾತಾವರಣ ಇನ್ನು ಹುಟ್ಟುವುದಿಲ್ಲ ಎಂದು ಸೌಭಾಗ್ಯ ಹೇಳುವಾಗಲೆಲ್ಲ ಕಸಿವಿಸಿಯಾಗುತ್ತದೆ.

ಕಳೆದು ಹೋದ ನನ್ನ ಆಯುಸ್ಸಿನ ಸವಿ

ನೆನಪುಗಳು ಅಷ್ಟೊಂದು ಮಧುರ. ನನ್ನ ನೆನಪಿನ ದೋಣಿಯಲ್ಲಿರುವ ಸಾಮಗ್ರಿಗಳು ಶಿಥಿಲವಲ್ಲ. ಕಲಬೆರಕೆಯವಲ್ಲ. ಒಳ್ಳೆಯ ಮಾಲುಗಳು. ಗಟ್ಟಿ ಕಾಳುಗಳು. ಆದುದರಿಂದಲೇ ನನ್ನ ಆಯುಸ್ಸಿನ ಹಿಂದೆ ಇರುವ ಆ ದಿವಸಗಳ ಬಗ್ಗೆ ನನಗೆ ಅತೀವ ಗೌರವ, ಪ್ರೀತ್ಯಾಭಿಮಾನ. ಹಬ್ಬ ಹರಿದಿನಗಳಲ್ಲಿ ಅತ್ತಿಗೆ ನಾದಿನಿಯರೆಲ್ಲ ಮನೆ ತುಂಬಿಕೊಳ್ಳುತ್ತಿದ್ದರು. ಅವರ ಮಕ್ಕಳು, ಮೈದುನರ ಮಕ್ಕಳು ನನ್ನ ಮಗ ವೆಂಕಟರಮಣ ಎಲ್ಲ ಬಂದು ನನ್ನ ಕಾಲಿಗೆರಗಿ ಏಳುವಾಗಲೆಲ್ಲ ಧನ್ಯತೆಯ ಭಾವದಿಂದ ನಾನು ಪುಳಕಿತನಾಗುತ್ತಿದ್ದೆ. ಈವತ್ತು ಸೀತಾಳ ಮಕ್ಕಳಲ್ಲಿ ಒಬ್ಬ ಮಿಲಿಟ್ರಿ ಸೇರಿಕೊಂಡ. ಇನ್ನೊಬ್ಬ ಡಾಕ್ಟರನಂತೆ. ಮೂರನೆಯ ಮಗಳು ಗಂಡನ ಜೊತೆಗೆ ಬೊಂಬಾಯಿಯಲ್ಲಿದ್ದಾಳೆ. ವರ್ಷಕ್ಕೊಮ್ಮೆ ಮಗಳು ಬಂದರೂ ಸಹಿಸಳು ಸೀತಾ. ಇದೆಂತಹ ವಿಚಿತ್ರ ಭಾವನೆಗಳು. ತಾಯಿಗೆ ಮಗಳೂ, ಮಗಳಿಗೆ ತಾಯಿಯೂ ಬೇಡವಾದ ಈ ದಿವಸಗಳು ಅದೆಷ್ಟೊಂದು ಹಗುರ. ಆದರೂ ರಾಧೆ ಗಂಡ ಮಕ್ಕಳೊಂದಿಗೆ ಬರುವುದುಂಟು. ಇವರೆಲ್ಲ ಸೇರಿದಾಗ 'ಟುಸ್‌ಪುಸ್' ಎಂದು ಇಂಗ್ಲೀಷಿನಲ್ಲೇ ಮಾತನಾಡುವ ಹವ್ಯಾಸ. ಅದಾವ ದೇವರಿಗೆ ಪ್ರೀತಿಯೋ! ಒಂದು ದಿನ ನೇಮವಾಗಿದ್ದು ಪೂಜೆ ಪುರಸ್ಕಾರ ಅಂತ ಹಚ್ಚಿಕೊಳ್ಳಲಾರಳು ಸೀತಾ. ಏಕಾದಶಿ ದ್ವಾದಶಿ ಪಾಲನೆ ಮಾಡಿದವಳಲ್ಲ. ಆ ಸೌಭಾಗ್ಯ ಕೂಡ ಹಾಗೇ ಹೇಳುತ್ತಾಳೆ. ಉಷಾ ಕೂಡ ಸೀತಾಳ ತದ್ರೂಪದಂತೆ.. ಇನ್ನು ಇವರ ಮಕ್ಕಳು ಹೇಗೋ ಎನ್ನುತ್ತಾಳೆ. ಕಂಡಿದ್ದೇನಲ್ಲ ನಾನು. ಒಂದು ದಿನ ಕಾಲಿಗೆ ಮಣಿಯಲಿಲ್ಲ ಸೀತಾಳ ಮಿಲಿಟ್ರಿ ಮಗ.

ಎರಡನೆಯ ಮಗ ರಘು. ಡಾಕ್ಟರು ಓದಿದವನು. ಹೇಳುವುದೇ ಬೇಡ. ಮಾತನಾಡುವ ಹಾಗೇ ಇಲ್ಲ ಅವನ ಮುಂದೆ. ಅಜ್ಜಗೆ ವ್ಯಾಸಂಗವಾಗಿಲ್ಲ ಅಂತ ತಂದೇ ಬಿಡ್ತಾನೆ ಆ ರಬ್ಬರ್ ಕೊಳವೆಯನ್ನ (ಸ್ಟೆತಾಸ್ಕೋಪ್) ಇವನ್ನೆಲ್ಲ ಯೋಚಿಸುವಾಗ ನನ್ನ ಹಿಂದಿನ ಆಯುಸ್ಸನ್ನು ಮರೆಯುವುದು ನನ್ನಿಂದ ಸಾಧ್ಯವಾಗುವುದಿಲ್ಲ. ಖಚಿತ ಆ ದಿವಸಗಳು ಅದೆಷ್ಟೊಂದು ಪ್ರಿಯವಾಗಿದ್ದವು. ಎಷ್ಟೊಂದು ಮಧುರವಾಗಿದ್ದವು. ಮಕ್ಕಳೆಲ್ಲ ಒಟ್ಟಿಗೆ ಬಟ್ಟಲಿಟ್ಟು ಸಾಲಾಗಿ ಕುಳಿತುಕೊಳ್ಳಬೇಕು. ಅವಕ್ಕೆಲ್ಲ ಮಾಡಿ ಬಡಿಸುವಾಗ ಅದೆಂತಹ ಸಂತೃಪ್ತಿ. ಆಗಿನ ಮಕ್ಕಳು ಸಹ ಹಾಗೆ ಚೆನ್ನಾಗಿ ಉಂಡವು. ಈವತ್ತಿನ ಈ ಮಕ್ಕಳಿಗೆ ಹಬ್ಬ ಹರಿದಿನಗಳಲ್ಲಿ ಮಾಡುವ ಪಾಯಸ ಸೇರದು. ಹಿತ್ತಲಲ್ಲಿ ಬೆಳೆದ ಕೇಸು, ಹರಿವೆ, ಗುಳ್ಳ ಇವರಿಗೆ ಬೇಡ. ಬೆಲೆಕೊಟ್ಟು ತರುವ ತಿಂಡಿಗಳಲ್ಲಿ ಸ್ವಾದವಿಲ್ಲದಿದ್ದರೂ ಅದೇ ರುಚಿ ಎನ್ನುತ್ತಾರೆ. ಇದೆಲ್ಲ ಏನು? ವಿದ್ಯಾವಂತರಾದ ಹಾಗೆ ಜನ ಏಕೆ ಹೀಗೆ ಹಗುರಾಗಿ ಯಾವ ಭಾವನೆಗೂ ಕಟ್ಟಿಕೊಳ್ಳದೆ ಹೋಗುತ್ತಿದ್ದಾರೆ. ಈ ಮೌಢ್ಯಕ್ಕೆ ಕಾರಣ ಯಾರು? ಕಾರಣವೇನು? ಯೋಚಿಸಿದ ಹಾಗೆಲ್ಲ ಸಮಸ್ಯೆಗಳು ಜಟಿಲವಾಗುತ್ತವೆಯೇ ವಿನಾ ದಿಕ್ಕು ಗೋಚರಿಸುವುದಿಲ್ಲ. ಇದಕ್ಕಾಗಿಯೇ ಇರಬಹುದು, ನನಗೆ ನನ್ನ ಕಳೆದುಕೊಂಡ ಆಯುಸ್ಸಿನ ಬಗ್ಗೆ ತೀವ್ರತರವಾದ ಕಳವಳ. ಆ ದಿವಸದ ಬಗ್ಗೆ ಅತೀವ ತೃಪ್ತಿ. ಅದಾವುದೋ ಹೇಳಲರಿಯದ ಗಾಢತರವಾದ ಅಭೇದ್ಯ ವಿಶ್ವಾಸ. ನನ್ನ ಹಲ್ಲು ಕಂಡಾಗಲೆಲ್ಲ ವ್ಯಥೆಪಡುವ ಸೀತಾಗೆ ನಾನೆಷ್ಟೋ ಬಾರಿ ಹೇಳಿದ್ದೇನೆ. ಬೇವಿನ ಕಡ್ಡಿಯಲ್ಲಿ ಹಲ್ಲುಜ್ಜು. ಮಾವಿನೆಲೆಯ ಸುರುಳಿಯಿಂದ ತಿಕ್ಕು ಶುಚಿಯಾಗುತ್ತದೆ, ಒಸಡುಗಳಿಗೂ ಪೆಟ್ಟಾಗುವುದಿಲ್ಲ. ಬ್ರೆಶ್‌ನಿಂದ ಉಜ್ಜಿದಾಗ ಒಸಡುಗಳಿಗೆ ಅಪಾಯ. ಹಲ್ಲುಗಳು ಬೇಗ ಬಿದ್ದು ಹೋಗಬಹುದು. ನನ್ನ ಹಲ್ಲುಗಳು ಉಳಿದುದು ಹೀಗೆ ಎಂದರೆ ಸೀತ ನಂಬಲಾರಳು.. ಹಳೆ ಕಾಲದ ಅಜ್ಜಿ ಪುರಾಣವಂತೆ, ಈ ಮಕ್ಕಳಿಗೆ ಯಾವುದರಲ್ಲೂ ನಂಬಿಕೆ ಕಮ್ಮಿ. ಎಲ್ಲ ಹೋಯ್ತು ನಿರ್ನಾಮವಾಗಿ. ವಿಶ್ವಾಸ ಬೆಳೆಸಿಕೊಳ್ಳದ ಜನ ಎಂದುಕೊಳ್ಳುವಾಗ ಇನ್ನೇನೋ ನೆನಪಿಗೆ ಬರುತ್ತದೆ. ನನ್ನ ಆಯುಸ್ಸಿನಲ್ಲಿ ಒಂದು ದಿನ ಕುಪ್ಪಿ ಹಿಡಿದು ಮದ್ದಿಗೆ ಹೋದದ್ದಿಲ್ಲ. ಪಂಡಿತರು ಮನೆ ಹತ್ತಿರವಿದ್ದರೂ ಹೋಗಬೇಕೆಂದು ಅನಿಸಿರಲಿಲ್ಲ. ಹೊಟ್ಟೆನೋವಾಯ್ತೋ ಜೀರಿಗೆ ಕಷಾಯ, ವಾಂತಿಯಾಯ್ತೋ ಮಜ್ಜಿಗೆ ಸೊಪ್ಪು. ಸೊಪ್ಪು ಸದೆ ತಿಂದೇ ಕಾಹಿಲೆ ನುಂಗಿದೆವು. ಈವತ್ತು ಈ ಸೀತಾ ಅವಳ ಮಕ್ಕಳು ಸಣ್ಣ ನೆಗಡಿ ಜ್ವರಕ್ಕೂ ಅಂಜುತ್ತಾರೆ. ಯಾಕೆ? ಅವರಲ್ಲಿ ಸ್ವಯಂನಿಷ್ಠೆಯಿಲ್ಲದುದೇ ಮಹಾಪರಾಧವಾಗಿದೆ. ಮೈದುನನ ಮಗು ಬಿದ್ದು ಮೂಳೆ ಮುರಿದುಕೊಂಡಾಗ ನಾನು

ಮಾಡಿದ ಮದ್ದು ನಾರು ಬೇರಿನ ಲೇಪನ ಅದರಲ್ಲೇ ವಾಸಿ. ಈವತ್ತಿನ ದಿವಸದಲ್ಲಿ ಇನ್ನೊಬ್ಬರ ವಿಚಾರಕ್ಕೆ ಒಂದಿಷ್ಟು ಬೆಲೆಯಿಲ್ಲ. ಅದೂ ಇದೂ ಇಲ್ಲ. ಬೂಟಾಟಿಕೆ ಹೇಳಿಕೊಳ್ಳುವುದರಲ್ಲಿ ಬಡತನ ಬಂದು ಹೋದ್ರು ತಿಳಿಯೋದಿಲ್ಲ. ಅಂತಹ ಪರಿಸ್ಥಿತಿ. ಇದೆಂತಹ ಅನ್ಯಾಯ ಆ ಸೀತಾಳ ಕಡೆ ಹುಡುಗಿ ಮೀನಾ... ಅದರ ವೇಷವೋ? `ನೋಡುವುದಕ್ಕೆ ಅಪ್ಸರೆಯ ಹಾಗಿದೆಯೋ? ಅದೂ ಇಲ್ಲ. ನನಗಿರುವವನು ಒಬ್ಬ ಮಗ. ವೆಂಕಟರಮಣ. ಅವನ ಹಿಂದೆ ಹತ್ತು ಗಂಡು ಹುಟ್ಟಿ ಒಂದು ಹೆಣ್ಣಾಗಿದ್ದರೂ ನಾನು ಸೀತಾ, ಮೀನಾಳನ್ನು ಕಂಡಂತೆ ಕಾಣುತ್ತಿರಲಿಲ್ಲ. ಅದೇನು ಅಸಹ್ಯ ಉಡುಗೆಗಳು. ಮೈಪೂರ್ತಿ ಮುಚ್ಚಬಾರದೇ? ಗಂಡಸಿನಂತೆ ಆ ಪಾಯಜಾಮವೇಕೆ? ಅಬ್ಬಾ! ಅದಕ್ಕೆ ಬೇರೆ ಎಷ್ಟು ಜಂಬ. ಚೋಟುದ್ದ ಇದೆ. ಅಜ್ಜಿ ಅನ್ನೋಕೆ ಸಂಕಟ. ಈ ವಯಸ್ಸಿನ ಹುಡುಗಿಯರು ಸೀರೆ ಉಟ್ಟರೆ ಅದರ ಸೊಗಸೇ ಬೇರೆ. ಸೀತಾ ಯಾಕೆ ಹೇಳಬಾರದು. ಮೀನಾ ಏನು ಇನ್ನು ಚಿಕ್ಕವಳೇ? ಆ ಸೀತಾನ ಬೊಂಬಾಯಿ ಮಗಳ ಮಕ್ಕಳೂ ಹೀಗೆ. ಅವಳ ಸ್ನೇಹಿತೆಯ ಮಕ್ಕಳಿನ್ನೇನು? ಎಲ್ಲಾ ಒಂದೇ ಬಗೆಯವು. ಆ ಉಡುಪಾದರು ಯಾಕೆ ಬೇಕು? ಆ ವ್ಯಾಸ ಮೀನಾಳ ಹತ್ತಿರ ಮೂರು ಹೊತ್ತು ಹರಟುತ್ತಿದ್ದರೆ ಏನು ಚೆನ್ನ! ಮದುವೆ ವಯಸ್ಸು ಆಗಿಲ್ಲವೇ ಮೀನಾಗೆ? ಮೈನೆರೆದು ಆಗಲೇ ಎರಡು ವರ್ಷ ಆಗಿರಬಹುದು. ನಮ್ಮ ಕಾಲದಲ್ಲಿ ಹೀಗೆಲ್ಲ ಇರಲಿಲ್ಲ. ಪರಿಚಯಸ್ತರಲ್ಲದ ಗಂಡಸರೊಂದಿಗೆ ಮಾತನಾಡುವುದು ಒಂದು ಅಪರಾಧ. ಪರಿಚಯದವರೊಂದಿಗೆ ಮುಖ ನೋಡಿ ಮಾತನಾಡುವ ಅಭ್ಯಾಸವೇ ಆ ದಿವಸಗಳಲ್ಲಿರಲಿಲ್ಲ. ಅದಕ್ಕೇ ಮಾನ ಮರ್ಯಾದೆ ಉಳಿದಿತ್ತು. ಈಗಂತೂ ಅದು ದಿಕ್ಕಾಪಾಲಾಗಿದೆ. ಇದರಿಂದಲೇ ಆಗಬಾರದ ಎಷ್ಟೋ ವಿಷಯಗಳು ನಡೆಯುತ್ತಿವೆ. ಅವರವರೇ ನೋಡಿಕೊಂಡು ಮದುವೆ ಆಗ್ತಾರಂತೆ. ನಾಳೆ ಸರಿ ಬರದಿದ್ದರೆ ಸುಲಭವಾಗಿ ಬಿಡುಗಡೆ ಹೊಂದುತ್ತಾರಂತೆ. ಇದೆಲ್ಲ ಏನು ಚೆನ್ನ? ಆ ಕಾಲದಲ್ಲಿ ನಾವು ಯಾರು ವಿದ್ಯೆ ಕಲೀಲಿಲ್ಲ. ಸಂಸಾರ ತೂಗಿಸಿದ್ದು, ಈ ದಿವಸಗಳಲ್ಲಿ ವಿದ್ಯೆ ಕಲಿತು ಸರಿಯಾಗಿ ಸಂಸಾರ ನಡೆಸೋದಿಲ್ಲ. ಇದೆಲ್ಲ ಏನು? ನನ್ನ ವಿಚಾರದ ತಾಕಲಾಟ ತಳಮಳ ಮುಂದುವರಿಯುತ್ತಿದ್ದಂತೆ. ಸೀತಾ ಎಂದು ಕೂಗಿದ ಸದ್ದಿಗೆ ಎಚ್ಚತ್ತು ಆ ಕಡೆಗೆ ನೋಡುತ್ತೇನೆ. ಶೈಲ, ನಾಲ್ಕಾರು ದಿನದಿಂದ ಆ ವ್ಯಾಸ. ಅವಳು ಈ ಕಡೆಗೆ ಬಂದ ಹಾಗೆ ಕಾಣಲಿಲ್ಲ. "ಏನಮ್ಮ ಶೈಲ ನಾಲ್ಕಾರು ದಿನದಿಂದ ಮನೇಲಿರ್ಲಿಲ್ವೆ? ಆ ನಿಮ್ಮ ವ್ಯಾಸನಿಗೆ ಹೆಣ್ಣು ನೋಡೋಕೆ ಹೋಗಿದ್ರಾ! ಎಲ್ಲಾದರು ಸಂಬಂಧ ಕುದುರಿತೆ?" ಎಂಬ ನನ್ನ ಮಾತಿಗೆ ಉತ್ತರಿಸದೆ ಮುಖ ತಿರುಗಿಸಿಕೊಂಡು ಹೋದ ಅವಳ ಬಗ್ಗೆ ರೇಗುತ್ತದೆ ಮನಸ್ಸು. ಈ ದಿವಸದಲ್ಲಿ ದೇವರು ದಿಂಡರು ಹಿರಿಯರು ಅನ್ನೋ ಭಯ-ಭಕ್ತಿಯೇ ಇಲ್ಲದೆ ಹೋಯ್ತು. ಊರಲ್ಲಿಲ್ಲದೆ ಇರೋ ಪುರಾಣವನ್ನೆಲ್ಲ ಸೀತಾಳ ಮುಂದೆ ಹೇಳಬಹುದು, ನನ್ನ ಮುಂದೆ ಹೇಳಬಾರದೆ? ಆ ಮೀನಾ ಮಾತು ಮಾತಿಗೂ ನನ್ನನ್ನ ತಿವಿಯೋದು.

"ಅಲ್ಲಜ್ಜಿ, ನಿನಗೆ ಯಾಕೆ ಬೇಕು ಊರವರ ಪಂಚಾತಿಕೆ ಎಲ್ಲ? ಸುಮ್ಮನೆ ಕೂರೂಕೆ ಬೇಜಾರಾದ್ರೆ. ರಾಮಕೃಷ್ಣ ಅಂತ ಜಪಮಾಡು." ಅನ್ನೋ ಮೀನಾಗೆ ಏನು ಹೇಳಬೇಕು?

ಸೀತಾ, ಆ ಮುದುಕಿಗೆ ಬೇರೆ ವಿಷಯವೇ ಇಲ್ವೆ ಮಾತಿಗೆ ಯಾವಾಗ ಬಂದ್ರೂ. ಸತ್ಯನ ಮದುವೆ ವಿಚಾರನೇ ಬೇಕು ಮುದುಕಿಗೆ. ಈ ಮಾತಿಗೆ ಸೀತಾ ಏನು ಹೇಳಬಹುದು. ನನ್ನ ಕಿವಿ ನೆಟ್ಟಗಾಗುತ್ತಿದೆ. ಬೇಡವೆಂದರೂ ಮನಸ್ಸು ಆ ಕಡೆಗೆ ಹರಿಯುತ್ತದೆ. ಸೀತಾ ಹೇಳುತ್ತಾಳೆ.

"ಅದೊಂದು ಪ್ರಾರಬ್ಧ, ಯಾವಾಗಲು ಪಿರಿಪಿರಿ ಇಟ್ಟದ್ದೇ ಅವರದ್ದು" ಸೀತಾ ಹೀಗೆ ಹೇಳಬಹುದೇ? ನಾಳೆ ಅವಳ ಮಿಲಿಟ್ರಿ ಮಗ, ಡಾಕ್ಟರ್ ರಘುವೀರನ ಹೆಂಡಂದಿರು ಹೀಗೇ ಮಾಡ್ತಿ. ಗೊತ್ತಾಗೋ ದಿನ ದೂರವಿಲ್ಲ ಎನಿಸಿ ನಾನು ನನ್ನ ಆಯುಸ್ಸಿನಲ್ಲಿ ಕಳೆದ ಆ ದಿವಸಗಳ ಬಗ್ಗೆ ವಿಚಾರ ಮಾಡುತ್ತೇನೆ. ಮನೆಯೊಳಗೆ ಎಷ್ಟು ವೈಮನಸ್ಸು ಇದ್ದರೂ ಹೊರಗೆ ಬರಲು ಬಿಡುತ್ತಿರಲಿಲ್ಲ. ಮನೆ ಮರ್ಯಾದೆ ಕಾಪಾಡುವುದರಲ್ಲಿ ಯಾರೂ ಕಡಿಮೆಯವರಲ್ಲ. ಗೌರವದ ಬದುಕಿಗಾಗಿ ಬಂದದ್ದನ್ನು ಸಹಿಸುವ ಧೀರೋದ್ದಾತ್ತ ಮನಸ್ಸು. ಈಗಿನ ದಿವಸಗಳಲ್ಲಿ


ಬೋರ್ನ್‌ವಿಟಾದಲ್ಲಿ ಈಗ ಅಧಿಕ
ಕೋಕೋ ಇರುವುದರಿಂದ ಅದು
ಅಧಿಕ ರುಚಿಕರ ಹಾಗೂ ಅಧಿಕ
ಆರೋಗ್ಯಪೂರ್ಣವಾಗಿದೆ.
ಮಾತ್ರವಲ್ಲ, ಬೋರ್ನ್‌ವಿಟಾ ಮಾಲ್ಟ್,
ಹಾಲು ಮತ್ತು ಸಕ್ಕರೆಗಳ ಎಲ್ಲಾ ಪೌಷ್ಟಿಕ
ಉತ್ತಮಿಕೆಯಿಂದ ತುಂಬಿದೆ.
ಎರಡು ಟೀ ಚಮಚ ಬೋರ್ನ್‌ವಿಟಾವನ್ನು ಒಂದು
ಕಪ್ ಬಿಸಿ ಹಾಲಿಗೆ
ರುಚಿಕರವಾದ,
ನಿಮ್ಮ ಮಕ್ಕಳಿಗೆ ಬೋರ್ನ್‌ವಿಟಾವನ್ನು
ಎರಡಾವರ್ತಿ ಕೊಡಿರಿ. ಅದು ಅವರ ಶಾರೀರಿಕ
ಒದಗಿಸಲು ನೆರವಾಗುತ್ತದೆ.
ಅದು ಬೇಕು...ಅವರೊಂದಿಗೆ ಅವರಂತೆ
ಇರುವುದಕ್ಕಾಗಿ!
ಕ್ಯಾಡ್‌ಬರೀಸ್
ಬೋರ್ನ್‌ವಿಟಾ
ಅಧಿಕ ಕೋಕೋ ಯುಕ್ತ! ಅಧಿಕ ರುಚಿಕರ,
ಅಧಿಕ ಆರೋಗ್ಯ ಪೂರ್ಣ!
Cadbury's
Bournvita
75
ಮುಖ್ಯ ಸಂಗತಿ:
ಈ ಪ್ಯಾಕನ್ನು ತೆರೆದ ಕೂಡಲೇ
ಅದರಲ್ಲಿರುವ ಪುಡಿಯನ್ನು
ಬೋರ್ನ್‌ವಿಟಾದ ಡಬ್ಬಿಯಲ್ಲಿ
ಹಾಕಿಡಿರಿ. ಅದರಿಂದ ಅದರ
ತಾಜಾ ಗುಣ ಉಳಿಯುತ್ತದೆ
OBM-8376 B/KN

ಅವಾವುದೂ ಉಳಿದಿಲ್ಲ. ಉಳಿಸಿಕೊಳ್ಳುವ ಗೋಜು ಗೊಂದಲ ಬೇಕಿಲ್ಲ. ಯಾಕೆ ಹೀಗೆ! ಎನ್ನುವ ವಿಚಾರದಲ್ಲಿ ತೊಡಗಿದ್ದಾಗಲೇ ಶೈಲ ಹೇಳಿದಳು. "ಸೀತಾ, ನಮ್ಮ ಮನೆಯಲ್ಲಿ ಕಳ ತನವಾಗಿದೆ. ಇದು ನಡೆದಿರುವುದು ನಿನ್ನೆ ರಾತ್ರಿ ಇರಬಹುದು."

"ಇರಬಹುದು. ನಿನ್ನೆ ಮಧ್ಯೆ ರಾತ್ರಿ ಏನೋ ಸದ್ದು ಕೇಳಿದ ಹಾಗಾಯಿತು. ಆದರೆ ನಿದ್ರೆಯ ಮಂಪರು. ಕನಸಿರಬಹುದೆಂದುಕೊಂಡೆ."

"ಹೀಗೆ ಹೇಳಿದರೆ ಹೇಗೆ? ನೆರೆಯುವರೆಂದು ಸ್ವಲ್ಪ ನಿಗ ಕೊಡಬೇಡವೆ? ನೀವಿದ್ದೀರಿ ಅನ್ನೋ ಧೈರ್ಯದ ಮೇಲೆ [illegible]ಗೆ ಹೋಗಿದ್ದು [illegible]."

"ನಾವು ನೀವು ಹೀಗೆ ಅಂತ ತಿಳಿದಿರಲಿಲ್ಲ ಬಿಡಿ. ನೆರೆ ಹೊರೆ ಅಂತ ಸದರ ಕೊಟ್ಟದ್ದು ಹೆಚ್ಚಾಯಿತು. ಮಗಳಿಲ್ಲ ಸಾಲ ಕೊಟ್ಟು, ಈಗ ನಾವೇ ಕೆಟ್ಟವ ರಾದೆವು. ನಿಮ್ಮ ಮನೆಯ [illegible]ನ್ನು ನಮಗೆ ವಹಿಸಿಹೋಗಿದ್ದರೆ ನೀವು ಕೇಳುವುದರಲ್ಲಿ ಅರ್ಥವಿತ್ತು. ಈಗ ಅನ್ಯಾಯವಾಗಿ ಆರೋಪ ನಮ್ಮ ಮೇಲೆ ಹೊರಿಸಬೇಡಿ" ಎಂದಳು ಸೀತಾ ಗಡುಸಾಗಿ. "ಅಯ್ಯೋ! ಉಂಟೆ? ಕಳಕೊಂಡ ವ್ಯಥೆಗೆ ಏನೇನೋ ಒದರಿದೆ. ಕ್ಷಮಿಸಿ," ಎಂದಳು ಶೈಲ.

"ನೀವೇನೋ ಹೇಳಿದಿರಿ ಅಂತ, ನಾನು ಏನೋ ಹೇಳಿದೆ. ಅಲ್ಲಿಗಲ್ಲಿಗೆ ಸರಿಹೋಯಿತು ಬಿಡಿ" ಎಂದ ಸೀತಾಳ ಮಾತುಕತೆ ಮತ್ತೆ ಮೊದಲಿನಂತೆ ಲೀಲಾ ಜಾಲ. ಪರಸ್ಪರರು ಅವಹೇಳನ ಮಾಡಿಕೊಂಡದ್ದು ಇದೂ ಕೂಡ ಎಷ್ಟನೆಯ ಬಾರಿಯೋ? ಮುಂದೆ ನಕಲಿ ಮಾತುಗಳನ್ನಾಡುವ ಅವರಿಬ್ಬರು ಹಿಂದಿನಿಂದ ಒಬ್ಬರನ್ನೊಬ್ಬರು ದೂಷಿಸಿಕೊಳ್ಳುತ್ತಾರೆ.

ಇದರ ನೆನಪಿನ ಹಿನ್ನಲೆಯಲ್ಲಿ ಮಾವನ್ನು ನೆರೆಮನೆಯ ಅಜ್ಜಯ್ಯನ ಸಂಗಡ ಹೀಗೆ ಸಣ್ಣ ವಿಷಯಕ್ಕೆ ವ್ಯಾಜ್ಯ ಮಾಡಿ ಸಾಯುವ ವರೆಗೂ ಮತ್ತೆ ಮಾತು ಬಿಟ್ಟದ್ದು ನೆನಪಿಗೆ ಬರುತ್ತದೆ. ಈ ದಿವಸದಲ್ಲಿ ಕ್ಷಣ-ಕ್ಷಣಕ್ಕೂ ಬಣ್ಣದ ಬದಲಾಯಿಸುವ ಜನರೇ ಮಂದಿ. ಅಷ್ಟರಲ್ಲಿ ಸೀತಾ ಕಳೆದುಕೊಂಡ ವಸ್ತು ಗಳ ವಿವರ ಕೇಳಿದ[illegible] ನನ್ನ [illegible] ಅಲ್ಲಿಗೆ ಕಡಿಯುತ್ತದೆ. ಶೈಲ ಹೇಳುತ್ತಾಳೆ.

"ಬೆಳ್ಳಿ ಬಂಗಾರ ನಮ್ಮಲ್ಲಿದ್ರೆ ತಾನೆ? ಕಳ್ಳ ಕೊಂಡ್ಹೋಗೋದು? ಪಾತ್ರೆ ಪರಡಿ, ಇರೋ ಬಟ್ಟೆಬರೆ ಎಲ್ಲಾ ಹೋಯ್ತು."

"ಬಟ್ಟೆ ಬರೆ."

"ಹೌದು."

'ನಿಮಗೆಲ್ಲ ಬಟ್ಟೆಬರೆ ಯಾಕೆ ಬೇಕು? ನೀವೆಲ್ಲ ಬೆತ್ತಲೆಯಾಗೇ ಬದುಕೋರು. ಭಾವನೆ ಗಳಿಗೆ ನಿಮ್ಮಲ್ಲಿ ಬೆಲೆಯಿಲ್ಲ.. ವಿಚಾರ ತತ್ವ ಗಳಿಗೆ ನೀವು ಸೋಲುವುದಿಲ್ಲ. ಇನ್ನಾವುದೋ ಅತಂತ್ರವಾದ ಬದುಕಿಗೆ ಜೋತು ಬೀಳುವ ನಿಮಗೆ ಬಟ್ಟೆಬರೆಗಳ ಅವಶ್ಯಕತೆ ಇಲ್ಲ. ನೀವು ಬೆತ್ತಲೆಗಳಲ್ಲದೆ ಮತ್ತೇನು? ಬಟ್ಟೆಬರೆಗಳನ್ನು ತೊಟ್ಟಾಕ್ಷಣಕ್ಕೆ ನಿಮ್ಮ ಬೆತ್ತಲೆ ಸ್ವರೂಪ ಮುಚ್ಚುತ್ತದೆಯೆ!' ಎಂದು [illegible] ಕೊಳ್ಳುವಾಗ ಇದರ ಹಿನ್ನೆಲೆಯಲ್ಲಿ ನನ್ನ ಆ ದಿವಸ ಗಳ ನೆನಪು [illegible]. [illegible]. ನಾನು ಕಳೆದುಕೊಂಡದ್ದು ಬರೆ ನನ್ನ ಆಯುಷ್ಯನ್ನು ಆದರೆ ಅದರ ಬೆನ್ನಿಗಂಟಿದ್ದ ಬದುಕನ್ನು ನೆನೆದು ನಾನಿಂದು ಪರಿತಪಿಸುತ್ತಿದ್ದೇನೆ. ✡

ಅ–ವ–ಕಾ–ಶ

ನಮ್ಮ ತಲೆಮಾರಿಗೆ ಅಂಥ ಅವಕಾಶವೇ ಇರಲಿಲ್ಲ, ಈಗಲೂ ಇಲ್ಲ. ನಮ್ಮ ಚಿಕ್ಕಂದಿನಲ್ಲಿ ಹಿರಿಯರನ್ನು ಗೌರವಿಸಬೇಕೆಂಬ ಪಾಠ ಕಲಿಸಲಾಗುತ್ತಿತ್ತು. ಆದರೀಗ ವಯಸ್ಸು ಕಳೆಯುತ್ತಿದೆ; ಯುವಜನಾಂಗಕ್ಕೆ ಕಿವಿಗೊಡಿ ಎಂಬುದು ನಮಗೀಗ ಸಿಗುತ್ತಿರುವ ಉಪದೇಶ!

—ಮಾರೀ ಸೀಟರ್



ಇಂದಿರಾ ಗಾಂಧಿ ಇಳಿದಮೇಲೆ ಬರುತ್ತೇನೆ

ಹುಟ್ಟಿದ್ದು ಭಾರತದ ಕೆಸರಿನಲ್ಲಿ. ಅದೂ ಭಾರತದ ತಂದೆ ತಾಯಿಗಳಿಗೇ. ಕಲಿತದ್ದೂ ಇಲ್ಲೇ. ನ್ಯಾಶನಲ್ ಹೈಸ್ಕೂಲು, ಸೆಂಟ್ರಲ್ ಕಾಲೇಜು. ಕಸ್ತೂರ್ ಬಾ ಮೇಡಿಕಲ್ ಕಾಲೇಜು. ಎಂ. ಬಿ. ಬಿ. ಎಸ್. ಪದವಿ ಪ್ರದಾನ ಮಾಡಿದ್ದೂ ಕರ್ನಾಟದ ಒಂದು ವಿಶ್ವದ್ಯಾಲಯವೇ.

ಆದರೂ ಇಂಡಿಯಾದ ಸರಕಾರದ ಮೇಲೆ ತಿರಸ್ಕಾರ. ಇಂಡಿಯಾದ ಪ್ರಜೆಗಳ ಮೇಲೆ ತಾತ್ಸಾರ. ಇಲ್ಲಿಟರೇಟ್ ಬ್ರೂಟ್ಸ್ ಅಲೆಮಾರಿಗಳ ದೇಶ. ಭಿಕ್ಷುಕರ ದೇಶ. ತನ್ನಂಥ ಪ್ರತಿಭಾವಂತರಿಗೆ ಇದು ನರಕ. ಇಲ್ಲಿ [illegible] ಎಷ್ಟು ದುಡಿದರೇನು ಸಿಕ್ಕೀತು? ತಿಂಗಳಿಗೆ [illegible] ಮೂರು ಸಾವಿರ ಸಿಕ್ಕೀತೆ? ಅದರಲ್ಲಿ ತೆರಿಗೆ ಎಷ್ಟು ಕೊಡಬೇಕು. ಲಂಚ ಎಷ್ಟು ಕೊಡಬೇಕು?

ಇದ್ದಕ್ಕಿದ್ದ ಹಾಗೆ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಜಾರಿಗೆ ತಂದಿದ್ದಾರೆ. ಈಕೆ ಬಹುವಚನಕ್ಕೂ ಅರ್ಹಳಲ್ಲ. ತಂದಿದ್ದಾಳೆ. ಇವರಿಗೆಲ್ಲಾ ದೇಶದ ಬಗ್ಗೆ ಕಾಳಜಿ ಇಲ್ಲ. ಅಧಿಕಾರದ ಸ್ವಾರ್ಥವೇ ಎಲ್ಲರಿಗೂ. ನೂರಾರು ಜಾತಿಗಳು. ನೂರಾರು ಪಾರ್ಟಿಗಳು. ಪರಸ್ಪರ ಹೊಡೆದಾಟ. ಪರಸ್ಪರ ಕಿತ್ತಾಟ.ಇಂಥ ದೇಶದಲ್ಲಿ ಯಾರು ಬದುಕುತ್ತಾರೆ? ತನ್ನಂಥವರು ಅಮೇರಿಕಾದಲ್ಲೋ ಜರ್ಮನಿಯಲ್ಲೋ ಇದ್ದಿದ್ದರೆ, ಹುಟ್ಟಿದ್ದರೆ ಈ ವೇಳೆಗೆ ಎಷ್ಟು ಹಣ ಮಾಡುತ್ತಿದ್ದೆ? ಎಷ್ಟು ಪ್ರಸಿದ್ಧಿಗೆ ಬರುತ್ತಿದ್ದೆ?

ಅಮೇರಿಕಾದಲ್ಲಿ ಹುಟ್ಟದಿದ್ದರೇನಾಯ್ತು? ಅಮೇರಿಕಾದ ಸ್ವರ್ಗದಲ್ಲಿ ಜೀವಿಸಿ ಅಲ್ಲಿಯೇ ಸತ್ತರೆ ಆತ್ಮಕ್ಕೆ ನೆಮ್ಮದಿ ಸಿಕ್ಕೀತು. ಈ ದೇಶದಲ್ಲಿ ಬದುಕಿರುವಾಗ ನೆಮ್ಮದಿ ಸಿಗುವ ಮಾತಂತಿರಲಿ, ಸತ್ತ ಮೇಲೂ ನೆಮ್ಮದಿ ಸಿಗಲಿಕ್ಕಿಲ್ಲ.

ಹೀಗೆ ಚಿಂತಿಸುತ್ತಾ, ಮಿತ್ರರಲ್ಲಿ ಚರ್ಚಿಸುತ್ತಾ, ಭಾಷಣಗಳಲ್ಲಿ ವ್ಯಕ್ತಪಡಿಸುತ್ತಾ ಇದ್ದ ಡಾಕ್ಟರ್ ಭರತ್‌ಭೂಷಣ್‌ಗೆ ವಿದೇಶಕ್ಕೆ ಹೋಗಿ ನೆಲೆಸುವ

ಒಂದೇ ಹಂಬಲ. ಯಾವಾಗಲೂ ಇಂಗ್ಲಿಷಿನಲ್ಲೇ ಮಾತಾಡುವುದು. ವಿದೇಶಿ ಬಟ್ಟೆಗಳನ್ನೇ ತರಿಸುವುದು ಧರಿಸುವುದು, ವಿದೇಶಿ ಚಿತ್ರಗಳನ್ನೇ ನೋಡುವುದು. ವಿದೇಶಿ ಕಾದಂಬರಿಗಳನ್ನು ಓದುವುದು. ವಿದೇಶೀ ರಿಕಾರ್ಡುಗಳನ್ನು ಪ್ಲೇ ಮಾಡುವುದು......ಹೀಗೇ ವಿದೇಶೀ ಅಮಲಿನಲ್ಲೇ ಭಾರತದೊಳಗೆ ಅಲೆದಾಡುವ ಡಾ. ಭರತ್ ಅಮೇರಿಕಾದ ಮಿನಿಸೋಟಾದಲ್ಲಿರುವ ಕೆಲವು ಭಾರತೀಯರ ಪ್ರಯತ್ನಗಳಿಂದಾಗಿ ಮಿನಿಸೋಟಾದ ಆಸ್ಪತ್ರೆ ಒಂದರಲ್ಲಿ ನೌಕರಿ ಗಿಟ್ಟಿಸುವುದರಲ್ಲಿ ಯಶಸ್ವಿಯಾದ. ಎಂದೋ ಹಾರಬೇಕೆಂದಿದ್ದ ಆಸೆಗಳಿಗೆ ರೆಕ್ಕೆ ಬಂದಂತಾಗಿ ಭರತ್ ನೆಲದಲ್ಲಿ ನಡೆಯುವುದನ್ನೇ ಬಿಟ್ಟ. ಭಾರತೀಯರೆಲ್ಲ ನೆಲದಲ್ಲಿ ನಡೆಯುತ್ತಿದ್ದರೆ, ಇವನು ಗಾಳಿಯಲ್ಲಿ ಎಲ್ಲರಿಗಿಂತಲೂ ಎತ್ತರದಲ್ಲಿ ನಡೆಯಲು ಪ್ರಾರಂಭಿಸಿದ. ಒಂದು ಕಡೆ ಪಾಸುಪೋರ್ಟಿಗೆ ಓಡಾಟ ಪ್ರಾರಂಭವಾದರೆ ಇನ್ನೊಂದು ಕಡೆ ಆಪ್ತೇಷ್ಟರಿಗೆಲ್ಲಾ ಹೇಳಿಕೊಂಡು ಬಂದ. ಬಹಳ ಆತ್ಮೀ

ವಿಶುಕುಮಾರ್

ಯರಾಗಿದ್ದ ಕೆಲವು ಹುಡುಗಿಯರಿಗೆ ಬಟ್ಟೆ ಕಳುಹಿಸಿ ಕೊಡುತ್ತೇನೆ ಎಂದ. ಕೆಲವರಿಗೆ ವಾಚು, ಟೇಪ್ ರೆಕಾರ್ಡರ್ ಕಳುಹಿಸಿಕೊಡುತ್ತೇನೆ ಎಂದ. ಭರತನ ಉತ್ಸಾಹಕ್ಕೆ ಮತ್ತಷ್ಟು ಪೆಟ್ರೋಲು ಹಚ್ಚಲು ಸ್ನೇಹಿತರೆಲ್ಲಾ ಅಲ್ಲಿ ಇಲ್ಲಿ ಸತ್ಕಾರ ಸಮಾರಂಭ, ವಿದಾಯ ಸಮಾರಂಭಗಳನ್ನು ಏರ್ಪಡಿಸಲು ಪ್ರಾರಂಭಿಸಿದರು. ಲಯನ್ಸ್ ಕ್ಲಬ್ಬಿನವರು, ರೋಟರಿಯವರು, ನವ್ಯ ನಾಟಕ ಸಂಸ್ಥೆಯವರು,, ಮೆಡಿಕಲ್ ಅಸೋಸಿಯೇಶನ್‌ನವರು ಡಾ. ಭರತನನ್ನು ಹಾಡಿದ್ದೇ ಹಾಡಿದ್ದು, ಹೊಗಳಿದ್ದೇ ಹೊಗಳಿದ್ದು.

ಶುಕ್ರವಾರ–ಬಹುಶುಭದಿನ. ಭರತ್ ಅಮೇರಿಕಾಕ್ಕೆ ಹೊರಡುವ ದಿನ. ಬೆಂಗಳೂರಿನಿಂದ ಮುಂಬಯಿಗೆ ಹೋಗಿ, ಅಲ್ಲಿಂದ ದಿಲ್ಲಿಗೆ ಹಾರಿ ದಿಲ್ಲಿಯಲ್ಲಿ ತನಗಾಗಿ ಕಾಯುತ್ತಿರುವ ಸ್ನೇಹಿತರ ಕೈ ಕುಲುಕಿ ಹೊರಡುವ ಕಾರ್ಯಕ್ರಮ ಹಾಕಿಕೊಂಡಿದ್ದ.

ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹೊರಡು [illegible] ಹಿಂದೆ ಹಿಂದೆ ಕಾರುಗಳಲ್ಲಿ ಅವನನ್ನು ಹಿಂಬಾಲಿಸಿತ್ತು. ರಸ್ತೆಯಲ್ಲಿ ಕಾರಿನ ಅಡ್ಡಕ್ಕೆ ಭಿಕ್ಷುಕನೊಬ್ಬ ಸರಿದಾಗ ಭರತನಿಗೆ ಅನ್ನಿಸಿತು. "ಬಹುಶಃ ಇದು ಕೊನೆಯ ಭಿಕ್ಷುಕನನ್ನು ನೋಡುವುದು. ಇನ್ನು ಮುಂದೆ ಭಿಕ್ಷುಕರಿಲ್ಲದ ದೇಶಕ್ಕೇ ಹೋಗುತ್ತಿದ್ದೇನೆ."

ಪಾದಚಾರಿಗಳು ರಸ್ತೆಯ ಮಧ್ಯದಲ್ಲೇ ನಡೆದುಕೊಂಡು ಹೋಗುತ್ತಾರೆ. ಎಲ್ಲೆಂದ[illegible] ಉಗುಳುತ್ತಾರೆ. ಈ ಸರಕಾರಿ ಬಸ್ಸುಗಳನ್ನು ನೋಡಬಾರದೇ. ಧೂಳು ತುಂಬಿದ ಗಲೀಜು ಬಸ್ಸುಗಳು ಈ ದೇಶದ ಗಲೀಜಿಗೆ ಸಂಕೇತವಾಗಿದೆ.

ಈಗ ಯಾರಿಗೂ ಧ್ವನಿ ಏರಿಸಿ ಮಾತನಾಡುವ ಹಕ್ಕಿಲ್ಲ. ಮೊದಲು ಮಾತಾಡುತ್ತಿದ್ದರೂ ಕೇಳುವವರಿರಲಿಲ್ಲ. ಈಗ ತುರ್ತುಪರಿಸ್ಥಿತಿಗೆ ಹೆದರಿ ಜನ ಬಾಯಿಗೆ ಬೀಗ ಹಾಕಿದ್ದಾರೆ. ಲೇಖನಿಗಳನ್ನು ತುಂಡರಿಸಿದ್ದಾರೆ. ಪತ್ರಿಕೆಗಳಲ್ಲಿ ಖಾಲಿ ಕಾಲಮುಗಳನ್ನು ಪ್ರಕಟಿಸುತ್ತಿದ್ದಾರೆ. ಎಂಥ ದರಿದ್ರ ದೌರ್ಭಾಗ್ಯದ ದೇಶ.

ಏನೇ ಇರಲಿ, ಇದು ಕೊನೆಯ ದಿನ. ಈ ದಿನವೇ ಎಲ್ಲವನ್ನು ಮರೆತುಬಿಡುತ್ತೇನೆ, ಅಂದುಕೊಂಡ.

ವಿಮಾನ ನಿಲ್ದಾಣದಲ್ಲಿ ಡಾ. ಭರತನ ಸುತ್ತ ಮುತ್ತ ಸ್ನೇಹಿತರ ದಂಡು ಪುಷ್ಪ ಗುಚ್ಛಗಳನ್ನು ಅರ್ಪಿಸುವುದನ್ನೇ ಕಾಣಲು ಇತರ ಪ್ರಯಾಣಿಕರೂ ಕುತೂಹಲದಿಂದ ಇಣುಕಿ ನೋಡುತ್ತಿದ್ದರು. ಒಬ್ಬ ಸಚಿವರ ಸುತ್ತಲೂ ಅಷ್ಟು ಜನ ಸೇರಿರಲಿಲ್ಲ. ನೆರೆದವರಲ್ಲಿ ಒಬ್ಬಿಬ್ಬರು "ಯಾರೀತ?" ಎಂದು ವಿಚಾರಿಸಿದರೆ "ಯಾರೋ ಡಾಕ್ಟರಂತೆ. ಅಮೇರಿಕಾಕ್ಕೆ ಹೋಗ್ತಿದ್ದಾರೆ," ತಾತ್ಸಾರದ ಉತ್ತರ ಬಂತು.

ಧ್ವನಿವರ್ಧಕ ಪ್ರತಿಧ್ವನಿಸತೊಡಗಿತು. ಪ್ರಯಾಣಿಕರೆಲ್ಲಾ ಕಸ್ಟಮ್ಸ್ ಅಧಿಕಾರಿಗೆ ದೇಹ ತೋರಿಸಲು ಕ್ಯೂನಲ್ಲಿ ನಿಂತರು.

ಡಾ. ಭರತ್ ಕೆಲವರನ್ನು ಆಲಿಂಗಿಸಿದ. ಕೆಲವರಿಗೆ ಬೈ ಬೈ ಅಂದ. ವಿದೇಶ ಪ್ರವಾಸಕ್ಕೆ ಶುಭ ಕೋರಿ ಜಾಹೀರಾತು ಹಾಕಿದ್ದ ಪತ್ರಿಕೆಯೊಂದನ್ನು ಕೈಯಲ್ಲೇ ಹಿಡಿದಿದ್ದ. ವಿದಾಯ ಕೋರಲು ಪ್ರತ್ಯಕ್ಷ ಬಂದವರಲ್ಲಿ ಒಬ್ಬ "ಹೇಯ್ ಭರತ್, ಮತ್ತೆ ಇಂಡಿಯಾಕ್ಕೆ ಎಂದು ಬರುವೆ?" ಕೇಳಿದ.

ಭರತ್ ನಕ್ಕ. "ಇಂದಿರಾ ಗಾಂಧಿ ಇಳಿದ ಮೇಲೆ

ಬರುತ್ತಾನೆ."

ಅವನ ಹಗೆಯಿದ್ದ ಧ್ವನಿ ಅಡಗಿತ್ತು. ಧ್ವನಿ ಬಿದ್ದ ಆಸ್ಪ್ರಯತ್ನ.

ಅವನ ಮಾತಿಗೆ ಪ್ರತಿಕ್ರಿಯೆಯೋ ಏನೋ ಗುಂಪಿನ ನಡುವೆ ಯಾರೋ ನಕ್ಕರು.

*

ದೆಹಲಿಯಿಂದ ಭರತನಿದ್ದ ವಿಮಾನ ಅಮೇರಿಕಾಕ್ಕೆ ಹಾರಲು ಭರತನಷ್ಟೇ ತವಕದಿಂದ ಕಾದು ನಿಂತಿತ್ತು. ಇಲಾಖೆಯ ನೌಕರರು ವಿಮಾನಕ್ಕೆ ಇಂಧನ ಪೂರೈಸುತ್ತಿದ್ದರೆ ಭರತ್ ತನ್ನ ಪೈಪಿಗೆ ಇಂಧನ ಸೇರಿಸಿ ಹೊಗೆ ಬಿಡುತ್ತಾ ನಿಂತಿದ್ದ. ಸಹಪ್ರಯಾಣಿಕರ ಜೊತೆ ಹರಟೆಯಲ್ಲಿ ಮಗ್ನನಾಗಿ ನಿಂತಂತೆ ವಿಮಾನದ ಧ್ವನಿವರ್ಧಕ ಕೂಗಲು ಪ್ರಾರಂಭಿಸಿತು: "ಯುವರ್ ಅಟೆಂಶನ್ ಪ್ಲೀಸ್, ಬೆಂಗಳೂರಿಂದ ಬಂದ ಪ್ಯಾಸೆಂಜರ್ ಡಾಕ್ಟರ್ ಭರತ್ ಅವರು ದಯವಿಟ್ಟು ರಿಸೆಪ್ಶನ್ನಿಗೆ ಬಂದು ಕಾಣಬೇಕು..."

"ಡಾ. ಭರತ್" ಎಂಬ ಹೆಸರು ಅವನಿಗೆ ಎಷ್ಟು ಪ್ರಿಯವೋ..."ತಕ್ಷಣ ಕ್ಷಮಿಸಿ" ಎನ್ನುತ್ತ ಸಹ ಪ್ರಯಾಣಿಕರನ್ನು ಅಗಲಿ ರಿಸೆಪ್ಶನ್ನಿಗೆ ಬಂದು, "ಕ್ಷಮಿಸಿ, ನಾನೇ ಡಾಕ್ಟರ್ ಭರತ್" ಎಂದ.

ನಿಲ್ದಾಣದ ಅಧಿಕಾರಿಯ ಪಕ್ಕದಲ್ಲಿದ್ದ ಇಬ್ಬರು ಗಡಸು ಮುಖಗಳವರತ್ತ ನೋಡಿದ. ಅವರಿಬ್ಬರಲ್ಲಿ ಒಬ್ಬ ಕೋಟಿನಿಂದ ಕಿರು ಪತ್ರಕವೊಂದನ್ನು ತೆಗೆದು ಭರತನ ಮುಖಕ್ಕೆ ತೋರಿಸಿದ. ಭಾರತದ ಗೂಢಚರ್ಯೆ ವಿಭಾಗದ ಅಧಿಕಾರಿ ಎಂದು ಅದರಲ್ಲಿ ನಿರೂಪಿಸಿತ್ತು. ಭಯದ ಮಿಂಚೊಂದು ಹೊಟ್ಟೆಯಲ್ಲಿ ಹೊಕ್ಕು ನರನಾಡಿಗಳಲ್ಲಿ ಸಂಚರಿಸಿತು. ನಡುಗುವ ಧ್ವನಿಯಿಂದ "ಏನು?" ಎಂದ.

"ನಿಮ್ಮ ಪಾಸ್‌ಪೋರ್ಟ್ ಕ್ಯಾನ್ಸಲ್ ಆಗಿದೆ. ನೀವು ಇಲ್ಲಿಂದ ನೇರ ಬೆಂಗಳೂರಿಗೆ ಹಿಂತಿರುಗಬಹುದು......"

"ಯ...ಯ...ಯಾಕೆ?"

"ಅದು ನಮಗೆ ತಿಳಿಯದು. ಇದು ಭಾರತ ಸರಕಾರದಿಂದ ಬಂದ ಆಜ್ಞೆ."

"ಆಜ್ಞೆ ಎಲ್ಲಿದೆ?"

"ಬರಹ ಮೂಲಕ ಬಂದಿಲ್ಲ. ವೈರ್‌ಲೆಸ್ ಮೂಲಕ ಬಂದಿದೆ."

ಅಮೇರಿಕಾಕ್ಕೆ ಹೊರಡುವ ವಿಮಾನ ಘೀಳಿಡುತ್ತಾ ಗಗನದಂಚು ಸೇರಿದಾಗ ಡಾ. ಭರತ್ ಇನ್ನೂ ಅಲ್ಲೇ ನಿಂತಿದ್ದ. ಯಾಕೆ ಏನು ಎತ್ತ ಒಂದೂ ಗೊತ್ತಾಗದಿದ್ದರೂ ಬುದ್ಧಿವಂತ ಭರತ್ ಕಾರಣಗಳನ್ನು ಹುಡುಕುತ್ತಿದ್ದ. ಬಹುಶಃ ಬೆಂಗಳೂರು ಬಿಡುವಾಗ "ಇಂದಿರಾ ಗಾಂಧಿ ಇಳಿದ ಮೇಲೆ ಬರುತ್ತೇನೆ" ಎಂದು ಹೇಳಿದ ಮಾತೇ ತನ್ನನ್ನು ವಿಮಾನದಿಂದ ಇಳಿಸಿ ವಾಪಸ್ಸು ಕಳುಹಿಸುತ್ತದೆ ಎಂದು ಗೊತ್ತು ಹಚ್ಚಲು ಅವನಿಗೆ ಹೆಚ್ಚು ಹೊತ್ತು ಬೇಕಾಗಿರಲಿಲ್ಲ.

ಪ್ರತಿಭಟಿಸುವ ಧ್ವನಿ ಧೈರ್ಯ ಒಂದೂ ಇಲ್ಲದ ಡಾ. ಭರತ್ ಈಗಲೂ ಅಂದರೆ ತುರ್ತು ಪರಿಸ್ಥಿತಿ ಹೋದ ಮೇಲೂ. ಇಂದಿರಾ ಅಧಿಕಾರದಿಂದ ಇಳಿದ ಮೇಲೂ ಬೆಂಗಳೂರಿನಲ್ಲೇ ಇದ್ದಾನೆ(ರೆ). ಗಲ್ಲಿಯಲ್ಲಿರುವ ಅವರ ಕ್ಲಿನಿಕ್ಕಿಗೆ ಅದೇ ಬಡವರು ಅದೇ ಭಿಕ್ಷುಕರು. ಅದೇ ಇಲ್ಲಿಟರೇಟ್ ಬ್ರೂಟ್ಸ್ ಬರುತ್ತಿದ್ದಾರೆ.

"ನಮ್ಮಂಥ ಪ್ರತಿಭಾವಂತರು ದೇಶ ಬಿಟ್ಟರೆ ಭಾರತದ ಗತಿಯೇನು? ಪ್ರತಿಭಾಪಲಾಯನಕ್ಕೆ ತಡೆ ಹಾಕಬೇಕು" ಎಂದು ಅಲ್ಲಿ ಇಲ್ಲಿ ಭಾಷಣ ಬಿಗಿಯುತ್ತಾ ಇರುತ್ತಾರೆ.

✡

ಮಗುವೊಂದಕ್ಕೆ, "ನಿನ್ನ ಮನೆ ಎಲ್ಲಿ?" ಎಂದು ಕೇಳಲಾಯಿತು. "ತಾಯಿ ಇರುವಲ್ಲಿ" ಉತ್ತರಿಸಿತು ಮಗು.

—ಜೇನಿ ಗ್ರೀನಫ್

*

ಕಲಿತ ವಧುವಿಗೆ ಮದುವೆಯಾದ ಮೊದಲ ರಾತ್ರಿ ಏನು ಮಾಡಬೇಕೆಂಬುದನ್ನು ತಿಳಿಸುವುದೆಂದರೆ ಮೀನಿಗೆ ಈಜು ಕಲಿಸಿದಂತೆ.

—ಅನಾಮಿಕ

*

ಮದುವೆಯಾಗುವವರೆಗೂ ಗಂಡಸು ಅಪೂರ್ಣನಾಗಿರುತ್ತಾನೆ. ಆದರೆ ಮದುವೆಯ ನಂತರ ಆತ 'ಇಲ್ಲ'ದಂತಾಗುತ್ತಾನೆ.

—ಲಾರ್ಡ್ ರೊಚೆಸ್ಟರ್

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಮುಂದಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ನೀಡಿದೆ

೧. ಉದ್ಭವ

(ಅ) ಹೆದರಿಸುವುದು (ಆ) ರೀತಿ (ಇ) ಮೇಲೇರುವುದು (ಈ) ಹೆಮ್ಮೆ

೨. ಅವ್ಯಾಕೃತ

(ಅ) ಸುಂದರ (ಆ) ವ್ಯಾಕರಣದ ತಪ್ಪುಳ್ಳ (ಇ) ಆಕಾರವಿಲ್ಲದ (ಈ) ಬದಲಾವಣೆಯಿಲ್ಲದ

೩. ಕಾಮುಕ

(ಅ) ಇಚ್ಛೆಯನ್ನು ಪೂರೈಸುವ (ಆ) ಹೆಣ್ಣುಮರುಳ (ಇ) ದುರಹಂಕಾರ

೪. ಉತ್ತಮಶ್ಲೋಕ

(ಅ) ಚೆನ್ನಾಗಿ ಹಾಡುವವ (ಆ) ಪಂಡಿತ (ಇ) ದೊಡ್ಡವರನ್ನು ಹೊಗಳುವ (ಈ) ಹೆಸರುವಾಸಿ

೫. [illegible]

(ಅ) [illegible] (ಆ) [illegible] (ಇ) [illegible] (ಈ) [illegible] ಮನೆ

೬. ಇಕ್ಕೆಲ

(ಅ) [illegible] (ಆ) [illegible] (ಇ) [illegible] (ಈ) ಕದರಿದ

೭. ಪ್ರಭೂತ

(ಅ) [illegible] (ಆ) [illegible] (ಇ) ಅಣು (ಈ) ಹೊಸದಾಗಿ [illegible]

೮. ಉಗಿಬಗಿ

(ಅ) ಉಕ್ಕಿಹರಿವ (ಆ) ಕದಿದ (ಇ) ಎತ್ತರದ (ಈ) ಚೂರುಚೂರಾದ

೯. ಅವ್ಯಂಗ

(ಅ) ಗಂಭೀರ (ಆ) ಇಡಿಯಾದ (ಇ) ವಿಕಾರ (ಈ) ನಿರ್ದೋಷ

೧೦. ದುಸ್ತ್ಯಜ

(ಅ) ಬಿಡಲಾರದ (ಆ) ಸೈರಿಸಲಾರದ (ಇ) ದುಷ್ಟಬುದ್ಧಿಯಿಂದ ಮಾಡಿದ ತ್ಯಾಗ (ಈ) ಲಾಭವಿಲ್ಲದ

೧೧. ಭ್ರೂಭಂಗ

(ಅ) [illegible] (ಆ) ಹುಬ್ಬು ಗಂಟಿಕ್ಕುವುದು (ಇ) ಸಮುದ್ರದ ತೆರೆ (ಈ) ಕೋಪ

೧೨. ಜವಾಹಿರಿ

(ಅ) ನವಣೆಯ ಅನ್ನ (ಆ) ಊರಲ್ಲೇ ಬೆಳೆದದ್ದು (ಇ) ಮುತ್ತು, ವಜ್ರ ಮೊದಲಾದ್ದು (ಈ) ಊಟ

೧. ಒಡ್ಡವ (ಅ) ರೀತಿ, ವಿನ್ಯಾಸ, ರಚನೆಯ ಕ್ರಮ, ಉದಾ.—ಹೆರವರ ಒಡ್ಡವದ ಅನುಕರಣೆ ಮಾಡದೆ ಬರೆಯುತ್ತಾನೆ. [ಕನ್ನಡ. ಒಡ್ಡು = ಹೊಂದಿಸು, ವ್ಯವಸ್ಥೆ ಮಾಡು]

೨. ಅವ್ಯಾಕೃತ (ಇ) ಆಕಾರವಿಲ್ಲದ, ವ್ಯಕ್ತವಾಗದ; ರೂಪಿಲ್ಲದ; ತರ್ಕಿಸಲಾಗದ; ಉದಾ — ಪರಮಾತ್ಮನು ಅವ್ಯಾಕೃತ ಸ್ವರೂಪ; ಅವ್ಯಾಕೃತವಾದ ಆಸೆಗಳು. [[illegible]. ಅ = ಇಲ್ಲ, ವಿ = ಇಂಥದೆಂಬ, [illegible]]

೩. [illegible] (ಅ) [illegible] ಕೊಡುವ. ಉದಾ — ಆಶ್ರಯಿಸಿದವರಿಗೆ ಕಾಮದನಾದ. [ಸಂ. ಕಾಮ = ಬಯಕೆ, ದ = ಕೊಡುವ]

೪. ಉತ್ತಮಶ್ಲೋಕ (ಈ) ಹೆಸರುವಾಸಿ, ಪ್ರಸಿದ್ಧ; ಉದಾ— ಉತ್ತಮಶ್ಲೋಕರಾದ ಮಹಾತ್ಮರು; [ಸಂ. ಉತ್ತಮ = ಶ್ರೇಷ್ಠರಿಂದ, ಶ್ಲೋಕ = ಹೊಗಳಿಕೆ]

೫. ದುರಾಪ (ಅ) ದುರ್ಲಭ, ಸುಲಭವಾಗಿ ಸಿಗದ್ದು; ಉದಾ—ದುರಾಪವಾದ ಹಂಬಲಗಳು; [ಸಂ. ದುರ್ = ಕಷ್ಟದಿಂದ, ಆಪ = ಪಡೆಯುವಂಥಾದ್ದು]

೬. ಇಕ್ಕೆಲ (ಇ) ಎರಡೂ ಬದಿಗೆ; ಉದಾ— ಇಕ್ಕೆಲದಲ್ಲಿಯೂ ಶತ್ರುಗಳಿದ್ದರು. [ಕನ್ನಡ. ಇಕ್ = ಎರಡು, ಕೆಲ = ಬದಿ]

೭. ಪ್ರಭೂತ (ಅ) ತುಂಬಾ, ಸಮೃದ್ಧವಾದ; ಉದಾ–ಪ್ರಭೂತವಾದ ಸಂಪತ್ತು [ಸಂ. ಪ್ರ = ಹೇರಳ, ಭೂತ = ಆದದ್ದು]

೮. ಉಗಿಬಗಿ (ಈ) ಚೂರು ಚೂರು, ಪರಿಹಂಚು. ಉದಾ— ಸೈನ್ಯ ಉಗಿಬಗಿಯಾಯಿತು. [ಕನ್ನಡ. ಉಗಿ = ಕೀಳು, ಬಗಿ = ಸೀಳು]

೯. ಅವ್ಯಂಗ (ಈ) ನಿರ್ದೋಷ, ಕೊಂಕಿಲ್ಲದ. ಉದಾ— ಅವ್ಯಂಗವಾದ ಶರೀರ. [ಸಂ. ಅ = ಅಲ್ಲ, ವಿ + ಅಂಗ = ವಿಕೃತವಾದ ಮೈ]

೧೦. ದುಸ್ತ್ಯಜ (ಅ) ಬಿಡಲಾರದ, ತೊರೆಯಲು ಕಷ್ಟವಾದ. ಉದಾ— ದುಸ್ತ್ಯಜವಾದ ಸಂಪತ್ತನ್ನು ಬಿಟ್ಟುಹೊರಟನು. [ಸಂ. ದುರ್ = ಕಷ್ಟದಿಂದ, ತ್ಯಜ = ಬಿಡುವಂಥಾ]

೧೧. ಭ್ರೂಭಂಗ (ಅ) ಹುಬ್ಬು ಕುಣಿಸುವಿಕೆ, ಹುಬ್ಬಿನ ಸನ್ನೆ. ಉದಾ—ಭ್ರೂಭಂಗದಿಂ[illegible] [ಸಂ. ಭ್ರೂ = ಹುಬ್ಬು, ಭಂಗ = [illegible]]

೧೨. ಜವಾಹಿರಿ (ಇ) ಮುತ್ತು, ವಜ್ರವೊದಲಾದ ಬೆಲೆ ಬಾಳುವ ಮಣಿಗಳು, ಅವು [illegible]ದ ಮಾಡಿದ ಒಡವೆಗಳು. ಉದಾ— [illegible]ವಾಹಿರಿಯ ಅಂಗಡಿ [ಹಿಂದಿ. ಜವಾ[illegible]]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂಬುದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

ಒಂದಾನೊಂದು ಕಾಲಕ್ಕ, ಅಂದ್ರ...

* ಚಂದ್ರಶೇಖರ ಪಾಟೀಲ

ಒಂದಾನೊಂದು ಕಾಲಕ್ಕ, ಅಂದ್ರ
೩೧ ವರಸದ ಹಿಂದ
ಕರೇ ಕತ್ತಲ ರಾತ್ರ್ಯಾಗ
ದಿಲ್ಲೀ ಕೆಂಪ್ಕ್ವಾಟೀ ಮ್ಯಾಲ
ಗುಲಾಬಿ ಮುಟಿಗೊಂಡ ಬಿಟ್ಟ ಮನಸ್ಯಾ
ಹಗ್ಗ ಜಗ್ಗಿದ ಕೂಡಲೇ
ಕೇಸರಿ–ಬಿಳಿ–ಹಸುರು ಬಣ್ಣದ ಒಂದ
ಅರಬೀ ತುಂಡ
ಉಚಿಗೊಂತಂತ.

ಬಣ್ಣ ಬಣ್ಣದ ಹೂವಿನ ಪಕಳಿ
ನೆಲಕ ಬಿದ್ದವಂತ
ಕರೇ ಕಾವಳದ ಮುಗಲ ತುಂಬಾ
ಬಿಳೀ ಹಕ್ಕಿ ಹಾರ್‍ಯಾಡಿದವಂತ…
ಹಿಂಗ. ಅಂತಕ ಅಂತ ಕೂಡಿ ಸಂತಿ ಆಗತ್ತ್ಯಂತ
೩೧ ವರಸದ ಹಿಂದ, ಅಂದ್ರ
ಒಂದಾನೊಂದು ಕಾಲಕ್ಕ.

ಇದ್ದೀತು ಇದ್ದೀತು
ಮುಂಜಾನೆ ಬೆಳಗ ಹರದಮ್ಯಾಲ
ಸೂರ್‍ಯಾನ ಬೆಳಕಿನಾಗ
ಈ ಬಣ್ಣದ ಬಣ್ಣಾ ನೋಡನು,
ನೋಡ್ಯರ ನೋಡನು – ಅಂಬ್ರ

ಬೆಳಗs ಹರೀವಲ್ದು । ಅವನೌನ,
೩೧ ವರಸಾದ್ರೂ ಬೆಳಗs ಹರೀವಲ್ದು.

*

ಮೂಡೋ ಸೂರ್‍ಯಾ ಮೂಡೋ ಟೈಮಿಂಗೆ
ಮೂಡಲಿಲ್ಲಾ ಅಂದ್ರ,
ಬೆಳಗ ಹರೀಲಿಲ್ಲಾ ಅಂದ್ರ…

ನಾವs ಒಂದೊಂದು ಕಿಡೀ ಆಗಿ
ದೀಪದ ಹುಳಾ ಆಗಿ ಕೊಳ್ಳೀ ದೆವ್ವ ಆಗಿ
ಮುಗಿಲಿನ ಹೊಟ್ಟೀ ಚರಕ್ ಅಂತ
ಕೋಲ್‌ಮಿಂಚಾಗಿ ಕೊರದ ಬಿಟ್ರ

ಆ ಸೂರ್‍ಯಾನ ಹಂಗೂ ಹರೀತೇತಿ.
ಬೆಳಗ ತಾನs ಹರೀತೇತಿ.
ಕರೇ ಮುಗಲಾಗ ಕಲ್ಲಾಬಿಲ್ಲಿ
ಆಗಿ ಹೋದ ಬಿಳೀ ಹಕ್ಕಿ
ಮತ್ತ ನೆಲಕ ಬರತಾವು.
ನೆಲಾ ಹಿಡಿದ ಹೂವಿನ ಪಕಳೀ
ಹೊಟ್ಯಾಗಿಂದ ತಾಜಾ ಹೂ
ಮತ್ತ ಅರಳಿ ಬರತಾವು.

ಒಂದಾನೊಂದು ಕಾಲಕ್ಕಲ್ಲ;
ಈ ಇವತ್ತಿನ ಈ ಕ್ಷಣಕ್ಕ.

[illegible]

ರಸ್ತೆಯ ತಿರುವಿನಲ್ಲಿ ತಿರುಗುವಾಗಲೇ ಮನೆಯ ಮುಂದೆ ದೊಡ್ಡ ಗುಂಪುಗೂಡಿರುವುದು ಕಂಡಿತು. ಎದೆ ಡಬ ಡಬ ಹೊಡೆದುಕೊಂಡಿತು. ನಡಿಗೆಯನ್ನು ವೇಗಗೊಳಿಸಿದೆ. ಮುಂಜಾನೆ ಹೆಂಡತಿ ಎದೆನೋವೆಂದು ಹೇಳುತ್ತಿದ್ದರೂ ಅಲಕ್ಷಿಸಿ ನಾನು ಕಾಲೇಜಿಗೆ ಹೊರಟು ಬಂದಿದ್ದು ತಪ್ಪಾಯಿತೆಂದು ಮತ್ತೆ ಮತ್ತೆ ಅಂದುಕೊಳ್ಳುತ್ತ ಕಂಗಾಲಾದಾಗ ನನ್ನ ಕಲ್ಪನೆಯಲ್ಲಿರುವ ದೇವರ ಚಿತ್ರಗಳೆಲ್ಲ ಕಣ್ಣೆದುರು ನಿಂತವು. ದೇವರನ್ನು ಮೊರೆ ಹೋಗಲು ನಾಚುತ್ತ ನನ್ನ ಮನ ಹಿಂಜರಿಯುತ್ತಿದ್ದುದು ಮನೆಯೊಳಗೆ ಮುಕುರುತ್ತಿದ್ದ ಜನರನ್ನು ಕಾಣುತ್ತ ತಲ್ಲಣಿಸಿ ತನ್ನರಿವಿಲ್ಲದೆ ದೇವರನ್ನು ಜಪಿಸಿತು. ಭಾರವಾಗುತ್ತಿದ್ದ ಕಾಲನ್ನು ಎಳೆದಿಡುತ್ತ, ಏದು-ಸಿರನ್ನು ಬಿಡುತ್ತ ಮೆಲ್ಲನೆ ಗುಂಪಿನೊಳಗೆ ನುಸುಳಿ ಮನೆಯ ಒಳಹೊಕ್ಕೆ. ನನ್ನ ನಿರೀಕ್ಷೆಯ ದೃಶ್ಯಕ್ಕೆ ವಿರುದ್ಧವಾಗಿ ನನ್ನವಳು ಲವಲವಿಕೆಯಿಂದ



ವೈ.ಕೆ. ಸಂಧ್ಯಾಶರ್ಮ

ಹರಿಯುತ್ತ ಕುಳಿತಿದ್ದಾಳೆ. ಸುತ್ತ ಮುಗಿದ ಕೈಗಳು. ನಾನು ಪ್ರಶ್ನಾರ್ಥಕವಾಗಿ ದಿಟ್ಟಿಸಿದೆ. ನಡುವೆ ಬಿಡಿ ಸಣ್ಣ ಹೂವಿನ ಗೋಪುರ. ಎಲ್ಲರ ಮುಖಗಳಲ್ಲೂ ಭಕ್ತಿಭಾವ ಕೆನೆಗಟ್ಟಿರುವುದನ್ನು ಕಂಡು ದಿಗ್ಭ್ರಮೆಯಾಯ್ತು.

ಅಮ್ಮ ನನ್ನನ್ನು ಕಾಣುತ್ತಲೆ, "ನೋಡಪ್ಪ ರಾಜಣ್ಣ, ನಿಂಗೆ ಬುದ್ಧಿ ಕಲಿಸಲಿಕ್ಕೆ ನಾಗಪ್ಪನೇ ನಮ್ಮ ಮನೆಗೆ ಬಂದಿದ್ದಾನೆ" ಎಂದು ಆಶ್ಚರ್ಯ ತುಳುಕಿಸುತ್ತ ಹೇಳಿದ ಮಾತು ಅರ್ಥವಾಗದೆ ನೆಲದ ಮೇಲೆ ಅರಳಿದ್ದ ಹೂವಿನ ಗುಪ್ಪೆಯನ್ನೇ ಮಿಕಿಮಿಕಿ ನೋಡಿದೆ. "ತಮಾಷೆ ನೋಡಣ್ಣ ಇಲ್ಲಿ...ಮಹಾ ನಾಸ್ತಿಕನ ಮನೆಯಲ್ಲೇ ದೇವ್ರು ಹುಟ್ಟಿದ್ದಾನೆ." ನನ್ನ ಹಿರಿಯ ಮಗಳು ಲೇವಡಿ ಮಾಡಿದಾಗ ನಾನು ಮತ್ತಷ್ಟು ಸಂದಿಗ್ಧಕ್ಕೆ ಸಿಲುಕಿ ಗಲಿಬಿಲಿಗೊಂಡೆ. ಸುತ್ತ ನೆರೆದಿದ್ದವರು, "ಕಲಿಯುಗದಲ್ಲಿ ಪರಮಾತ್ಮ ಭಕ್ತರ ಕಣ್ಣಿಗೆ ಕಾಣಿಸ್ಕೊಳಲ್ಲ. ಹಾಗೆ ಹೀಗೆ ಅಂತಾರಲ್ಲ...ಉಂಟೆ?...ಈ ಜೋದ್ಯಕ್ಕೇನು ಹೇಳ್ತಿರಾ? ...ಸರ್ರಾಗಿ ಷಣ್ಮುಖನ ದೇವಸ್ಥಾನದ ಎದುರು ಮನೆಯಲ್ಲೇ ನಾಗಪ್ಪ ಕಾಣಿಸ್ಕೊಂಡಿದ್ದಾನಲ್ಲಾ!?" ಎನ್ನುತ್ತ ಮೂಗಿನ ಮೇಲೆ ಬೆರಳು ಇರಿಸಿಕೊಂಡರು. ಉಹುಂ



…ಇಷ್ಟಾದರೂ ನನಗೆ ನಡೆದ ಸಂಗತಿಯ ತಲೆ ಬುಡ ಅರ್ಥವಾಗಲಿಲ್ಲ. ಎಲ್ಲರಿಗೂ ಹುಚ್ಚು ಹಿಡಿಯಿತೇ ಎಂದು ಆಶ್ಚರ್ಯವಾಯಿತು. ಪಕ್ಕದ್ಮನೆ ಮಡಿಹೆಂಗಸು ಅಂಬಕ್ಕನ ಮಾತು ಒಗಟಿನ ಗುಂಪಿಗೇ ಸೇರಿತು. "ನಿನ್ನೆಯೆಲ್ಲಾ ನಾವು ನಾಗಪ್ಪನ ಬಗ್ಗೆಯೇ ಮಾತ್ನಾಡ್ತಿದ್ವು ನೋಡಿ ಸೀತಮ್ಮ."

ಅಮ್ಮ ಮುಖದಲ್ಲಿ ವಿಸ್ಮಯ ಬೆರೆಸಿ ಹೌದೆನ್ನುತ್ತ ಭಕ್ತಿಯಿಂದ ಅರೆಗಣ್ಣು ಮುಚ್ಚಿ ಪಟಪಟ ಕೆನ್ನೆ ಬಡಿದುಕೊಂಡು, ಬಾಯಲ್ಲಿ ಪಿಟಿಪಿಟಿಸುತ್ತ ಹೂವಿನ ಗುಪ್ಪೆಗೆ ಮೂರು ಪ್ರದಕ್ಷಿಣೆ ಬಂದು ಅಡ್ಡ ಬಿದ್ದಾಗ ನನಗೆ ನಗು ತಡೆಯಲಾಗಲಿಲ್ಲ. ಅಷ್ಟರಲ್ಲಿ ಜನ ಒಬ್ಬರ ಮೇಲೊಬ್ಬರು ಬಿದ್ದು ನುಗ್ಗಲಾರಂಭಿಸಿದರು. ನಮಸ್ಕಾರ ಸೇವೆಗೆ ಸ್ವಲ್ಪ ಗಲಾಟೆಯೇ ಶುರುವಾಯಿತು. "ಚೆನ್ನಾಗಿದೆ ತಮಾಷೆ" ಎಂದುಕೊಳ್ಳುತ್ತ ಮನದೊಳಗೆ ನಗುತ್ತ ನಡೆಯುತ್ತಿದ್ದ ನಾಟಕವನ್ನು ವೀಕ್ಷಿಸತೊಡಗಿದೆ. ಗುಂಪನ್ನು ತಡೆಗಟ್ಟಲು ಆಚೆ ಮನೆಯ ರಾಮು-ನಾಣಿ ಸ್ವಯಂಸೇವಕರಾಗಿ ನಿಂತು, "ಸದ್ದು…ಸದ್ದು…ಎಲ್ಲಾ ಸಾಲಾಗಿ ಸಾವಕಾಶವಾಗಿ ಬಂದು ಪರಮಾತ್ಮನ ದರ್ಶನ ಪಡೆಯಿರಿ" ಎಂದು. ವೈಕುಂಠದಂತೆ ಧ್ವನಿಯೇರಿಸಿ ಕೂಗುತ್ತ ನೆರೆದವರನ್ನು ಶಿಸ್ತುಗೊಳಿಸಲು ಪ್ರಯತ್ನಿಸುತ್ತಿದ್ದರು. ಕೋಣೆಯ ತುಂಬಾ ಜನ ಸೇರಿಬಿಟ್ಟಿದ್ದರು. ನಡುವೆ ಹೂವಿನ ಗುಪ್ಪೆಯ ಸುತ್ತ ಮಾತ್ರ ಒಂದು ಮಾರು ಸ್ಥಳ ಖಾಲಿ ಬಿಟ್ಟಿದ್ದರು. ಯಾರೋ ಆದಿಶೇಷನ ಮೇಲೊಂದು ಕೀರ್ತನೆ ಹಾಡಲಾರಂಭಿಸಿದರು. ಭಕ್ತಿ ಆವೇಶಗಳಿಂದ ವಿಕಾರವಾಗುವ ಅವರ ಮುಖಭಾವಗಳನ್ನು ನೋಡುವುದು ಮೋಜೆನಿಸಿ ನನ್ನ ಗಂಭೀರ ಸ್ವಭಾವ ಮರೆತು ಆಸಕ್ತಿಯಿಂದ ಗಮನಿಸತೊಡಗಿದೆ. ಉಳಿದವರು ಬಾಯಿಗೆ ಬಂದ ಸ್ತೋತ್ರಗಳನ್ನು ಜಪಿಸಿಕೊಳ್ಳುತ್ತ ಕ್ಯೂನಲ್ಲಿ ಬಂದು ಪ್ರದಕ್ಷಿಣೆ ಹಾಕಿ ತಲೆಯನ್ನು ನೆಲಕ್ಕೆ ಮುಟ್ಟಿಸಿ ದಕ್ಷಿಣೆಯಿಟ್ಟು ಹಿಂತಿರುಗತೊಡಗಿದರು. ಇವತ್ತೆಲ್ಲ ಈ ಸಾಲು ಕರಗುವುದೇ ಇಲ್ಲವೇನೋ ಎನಿಸುವಷ್ಟು ಮುಗಿಯದ ಜನ. ಇಲ್ಲಿ ನಡೆಯುತ್ತಿರುವುದಕ್ಕೂ ನನಗೂ ಸಂಬಂಧವಿಲ್ಲವೆನ್ನುವಂತೆ ದೂರದಲ್ಲಿ ನಿಂತು ಹಾಸ್ಯದಿಂದ ನೋಡುತ್ತಿರುವ ನನಗೆ ಇದು ಕನಸೋ ಎಂಬ ಭ್ರಮೆ.

ಮಳೆ ಸುರಿಯುತ್ತಿದ್ದಂತೆ ಭಕ್ತರ (ಕುತೂಹಲಿ?) ಸಂಖ್ಯೆ ಹೆಚ್ಚಾಯಿತು. ನೆರೆದವರಲ್ಲೇ ಯಾರೋ ಅರ್ಚಕರು ಹುಟ್ಟಿಕೊಂಡರು. ಮಡಿ ಉಟ್ಟುಕೊಂಡು ಬಂದು ಹೂವಿನ ಗುಪ್ಪೆಯನ್ನು ಸಡಿಲ ಮಾಡಿದರು. ಆತುರದಿಂದ ಅದರೊಳಗೆ ಚೂಪುಗಣ್ಣು ತೂರಿಸಿದೆ. ಸುಮಾರು ಎರಡೂವರೆ ಇಂಚಿನ, ದಿಟ್ಟವಾಗಿ ಹೆಡೆ ಬಿಚ್ಚಿ ಕೂತ ಬೆಳ್ಳಿಯ ನಾಗಪ್ಪನ ಪ್ರತಿಮೆ! ಇದೆಲ್ಲಿಂದ ಬಂತು? ನನಗೆ ವಿಸ್ಮಯ. ವಿಚಾರಿಸಲು ಅತ್ತಿತ್ತ ತಿರುಗಿದರೆ ಯಾರೂ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಅರ್ಚಕ ತನ್ನ ಪಾಡಿಗೆ ತಾನು ಎಂಜಲುಗುಳುತ್ತ ಗಟ್ಟಿ ಮಾಡಿದ ಮಂತ್ರಗಳನ್ನು ಕಣ್ಣು ಮುಚ್ಚಿಕೊಂಡು ಒಪ್ಪಿಸುತ್ತಿದ್ದ. ಕಾಣಿಕೆ ಹಣದ ಗಾತ್ರ ನಾಗಪ್ಪನಿಗೂ ಮೀರಿ ಬೆಳೆದಿತ್ತು. ಯಾರೋ ಹೋಗಿ ವಾಲಗದವರನ್ನು ಕರೆತಂದಿದ್ದರು. ಅವರು ಬಾಗಿಲ ಬಳಿ ಲಕ್ಷಣವಾಗಿ ಚಕ್ಕಂಬಕ್ಕಳ ಹಾಕಿ ಕುಳಿತು ನಾಗಸ್ವರ ನುಡಿಸುತ್ತಿದ್ದರು. ಕೆಲವರು ನಾದಕ್ಕೆ ತಕ್ಕಂತೆ ಕೊರಳಲ್ಲಿ ಸ್ಪ್ರಿಂಗ್ ಕೂಡಿಸಿಕೊಂಡವರಂತೆ ತಲೆ ಕುಣಿಸುತ್ತಿದ್ದರೆ ಮತ್ತೆ ಕೆಲವರು ನಾಗಸ್ವರದ ಧ್ವನಿಯನ್ನು ನಾಗಪ್ಪನ ಕಿವಿಮುಟ್ಟುವಂತೆ ಕೈಗಳಿಂದ ತೂರುತ್ತಿದ್ದರು. ನನಗೇಕೋ ಮುಜುಗರವೆನಿಸತೊಡಗಿತು. ನನ್ನ ಮನೆಯಲ್ಲಿ ನಾನೇ ಅಪರಿಚಿತನಂತೆ ಮೂಲೆ ಸೇರಿದ್ದೆ. ಬೆಳಿಗ್ಗೆ ಪ್ರಶಾಂತವಾಗಿದ್ದ ವಾತಾವರಣ ಕೆಲವೇ ಗಂಟೆಗಳಲ್ಲಿ ಗುರುತು ಹತ್ತದಂತೆ ಗಜಿಬಿಜಿಯ ಸಂತೆ, ಸಾರ್ವಜನಿಕ ರಂಗವಾಗಿತ್ತು. ಬಾಗಿಲು ಹಾರು ಹೊಡೆದಿತ್ತು. ಹೊರಗೆ ಚಪ್ಪಲಿಯ ರಾಶಿ. ಬೀದಿಯಲ್ಲಿ ಹೋಗಿ ಬರುವವರೆಲ್ಲ ಮನೆಯೊಳಕ್ಕೆ ಒಮ್ಮೆ ಹಾದು ಹೋಗುವವರೇ. ಕುತೂಹಲದಿಂದ ಹಣಿಕಿಕ್ಕುವ ಗಜಿಬಿಜಿ ಜನ. ಒಮ್ಮೆಲೆ ಅವರ ಮೇಲೆಲ್ಲ ಅಸಹ್ಯ-ವಾಕರಿಕೆ-ಕೋಪ ನುಗ್ಗಿಬಂತು. ಇಡೀ ಬಡಾವಣೆಯ ಜನರೆಲ್ಲ ಸಲೀಸಾಗಿ ಒಳನುಗ್ಗುತ್ತಿದ್ದಾರೆ! ಕೋಣೆಯೊಳಗೆ ಹೇಗೋ ನುಸುಳಿ ನಾಗಪ್ಪನನ್ನು ಬೆಕ್ಕಸಬೆರಗಾಗಿ ಬಾಯ್ಬಿಟ್ಟು ಮತ್ತ ದಿಟ್ಟಿಸಿ, ಗಲ್ಲ, ಕೆನ್ನೆ ಬಡಿ ಬಡಿದು ಕೊಳ್ಳುತ್ತ ಆಚೀಚೆಯವರಲ್ಲಿ ಬಾಯಿ ತೂರಿಸಿ, ಕಿವಿ ಕೊಟ್ಟು ಪವಾಡದ ಬಗ್ಗೆ ತಮಗೆ ತೋಚಿದ್ದನ್ನೆಲ್ಲ ಒದರಿ, ತಾವು ಕಂಡು ಕೇಳಿದ ಇನ್ನಿತರ ಪವಾಡಗಳನ್ನು

ಕುರಿತು ಹರಟೆ ಹೊಡೆಯುತ್ತ, ಹಿಂದಿನವರು ನಿಧಾನವಾಗಿ ನೂಕುಗಟ್ಟಿಕೊಳ್ಳುತ್ತ ಜಾಗ ಖಾಲಿ ಮಾಡುತ್ತಿದ್ದರು. ಕಿವಿ ಗಡಚಿಕ್ಕುವ ಚಟ ಚಟ ಮಾತು. ಪಾಲಾಗದ ಸದ್ದು. ತಿದಿ ಒತ್ತಿದಂತೆ ಉಸಿರಿನ ಪಡೆ. ತುಡಾಯಿಸುತ್ತ ಬಳುಕುತ್ತಿದ್ದ ನನ್ನ ಮುಖದ ಗೆರೆಗಳು ಬಿಗಿದುಕೊಂಡವು. ಏಕೋ ಎಲ್ಲರೂ ನನ್ನನ್ನು ಅಣಕಿಸುತ್ತಿದ್ದಾರೆಂಬ ಭಾವನೆ ಮೂಡತೊಡಗಿತು. ಅಷ್ಟರಲ್ಲಿ ಯಾರೋ ನನ್ನ ಪಕ್ಕೆ ತಿವಿದಾಗ ನನ್ನ ಸಿಟ್ಟು ಭುಗಿಲ್ಲೆಂದಿತು. ಅವ ದುರುಗುಟ್ಟುತ್ತ ಅವಳತ್ತ ತಿರುಗಿದೆ. ಅವಳು ಕೂತ ಜಾಗ ಬಿಟ್ಟು ಕದಲಿರಲಿಲ್ಲ. ಹೊಟ್ಟೆ ತಮಟೆ ಬಡಿಯಲು ಪ್ರಾರಂಭಿಸಿತ್ತು. ಬಹುಶಃ ಯಾರಿಗೂ ಹೊಟ್ಟೆ ಇರುವ ವಿಚಾರವೇ ನೆನಪಿಲ್ಲವೇನೋ! ಅಡಿಗೆ ಮನೆ ಅನಾಥವಾಗಿತ್ತು. ಅಮ್ಮ ಮಡಿ ಉಟ್ಟುಕೊಳ್ಳುವುದನ್ನೂ ಮರೆತು ಬೆಳಗಿನಿಂದ ಒಂದೇ ಸಮನೆ ಟೇಪ್ ರೆಕಾರ್ಡರಂತೆ ಅಶ್ರುಪೂರ್ಣ ಧುಮ್ಮಿಕ್ಕಿಸುತ್ತ ಹೇಳುತ್ತಲೇ ಇದ್ದಾಳೆ: "ನಿಜವಾಗ್ಲೂ ನಮ್ಮಪ್ಪನ ಶಕ್ತಿ ಬಹು ದೊಡ್ಡದಮ್ಮಾ...ಹಿಂದಿನಿಂದ್ಲೂ ನಮ್ಮ ಮನೆತನಕ್ಕೆ ನಾಗದೋಷ ಅಂತಾರೆ...ನಾವು ಆಗಾಗ ತಪ್ಪು ಒಪ್ಪಿಸೋದು. ನಾಗಪ್ರತಿಷ್ಠೆ ಮಾಡೋದು ಸಂಪ್ರದಾಯ...ಆದ್ರೆ ನಮ್ಮ ಗ್ರಾಚಾರ. ಇವನಿಗೆ ಸಂಪ್ರದಾಯದಲ್ಲಿ ನಂಬ್ಕೆಯಿಲ್ಲ...ಹಾಸ್ಯ ಮಾಡ್ತಾನೆ. ಇವನ್ಗೋಸ್ಕರ ಬಾಳ ಹಿಂದೇನೇ ಹರಕೆ ಮಾಡ್ಕೊಂಡಿದ್ದೆ...ಇನ್ನೂ ತೀರಸಕ್ಕಾಗಿಲ್ಲ...... ಯಾರೊ, ಘಾಟಿಗೆ ಹೋಗಿ ಬರೋಣಾಂದ್ರೆ ಕೇಳಲ್ಲ.. ನಂಗೆ ಒಳಗೊಳಗೆ ಭಯವಿದ್ದೇ ಇತ್ತು... ನಾಗಪ್ಪೇ ತನ್ನ ಕಾಣಿಕೆ ತೊಗೊಂಡ್ಹೋಗಕ್ಕೆ ಮನೆ ಬಾಗಿಲಿಗೆ ಬಂದಿದ್ದಾನೆ...ಇದರಿಂದ ಏನು ಕಾದಿದೆಯೋ ಅಂತ ಹೆದರಿಕೆಯಾಗ್ತಿದೆ...ಏನೂ ತೋಚ್ತಿಲ್ಲಮ್ಮ"– ಅಮ್ಮನ ಕಣ್ಣು ತುಂಬ ನೀರು ತುಂಬಿಕೊಂಡಿತು. ಅವಳ ಅಜ್ಞಾನದ ಮಾತುಗಳನ್ನು ಕೇಳಿ ನನ್ನೊಳಗೆ ಕೋಪ ಭುಸುಗುಟ್ಟಿತು. ಪಕ್ಕದವರ್‍ಯಾರೋ ಅವಳಿಗೆ ಸಮಾಧಾನ ಹೇಳುತ್ತಿದ್ದರು: "ಏನೂ ಆಗಲ್ಲ...ಶುಭ ಚಿಹ್ನೆ...ನಿಮ್ಮಗ ಇನ್ಮೇಲೆ ಸರಿ ಹೋಗ್ತಾನೆ." ನನಗೆ ಚುರುಕು ಮುಟ್ಟಿತಾದರೂ "ಶುದ್ಧ ಮೂರ್ಖರ ಸಂತೆ" ಎಂದು ತಾತ್ಸಾರದಿಂದ ಗೊಣಗುಟ್ಟಿಕೊಂಡು ಸುಮ್ಮನಾಗಬೇಕಾಯಿತು.

ಸ್ವಲ್ಪ ಹೊತ್ತಿನಲ್ಲಿ ಹೆಂಗಸರ ಹರಟೆ ಕೇಳುತ್ತ ನಲವತ್ತರ ನಾನು ನಾಲ್ಕು ವರ್ಷದ ಅವಸ್ಥೆಯಂತೆ ಕಕ್ಕಾಬಿಕ್ಕಿಯಾಗಿದ್ದೆ. ಅವರ ಭಾವ ಪ್ರದರ್ಶನ, ಕೈ ಬಾಯಿ ತಿರುಗಿಸುವಾಟ ಎವೆಯಿಕ್ಕದೆ ದಿಟ್ಟಿಸುವಂತೆ ನಿರ್ಬಂಧಿಸಿಕೊಂಡಿತ್ತು. ಹೆಂಗಸರೆಲ್ಲ ಎದ್ದು ನಿಂತು ನಾಗಪ್ಪನನ್ನು ಹಾಲು–ತುಪ್ಪದಲ್ಲಿ ತೊಳೆದರು. ಕರ್ಕಶ ಕೀರಲು ಕಂಠಗಳು ಬೆರೆತು ರಾಗ ಮೂಡಿಸಿದವು. ಹೂವಾಲೆ ಪ್ರತಿಮೆಯನ್ನು ಮುಚ್ಚಿತು. ಕೋಣೆಯ ತುಂಬ ಅಗರಬತ್ತಿಯ ಸುವಾಸನೆ ದಟ್ಟವಾಗಿ ಹರಡಿದಾಗ ನಾನು ಪೇರು ಸಿರು ಚೆಲ್ಲಿದೆ. ಪ್ರತಿಮೆಯ ಮುಂದೆ ಹಣ್ಣುಕಾಯಿಗಳ ಗೋಪುರ. ಹೊರಗೆ ಮೊರೆಯುವ ನಾಗಸ್ವರ. ರೂಪುಗೊಳ್ಳುತ್ತಿದ್ದ ಹೊಸ ದೃಶ್ಯಗಳನ್ನು ವೀಕ್ಷಿಸುತ್ತಿದ್ದಂತೆಯೇ ನನ್ನ ಹೊಟ್ಟೆಯಲ್ಲೇನೋ ವಿಚಿತ್ರ ಸಂಕಟ. ಸಹನೆ ಅವಿಯಾಯಿತು. ಮುಖವನ್ನು ಹಿಂಡುತ್ತ ನೋವು–ಕೋಪಗಳಿಂದ ಭರಭರನೆ ಪಕ್ಕದ ಕೋಣೆಗೆ ನುಗ್ಗಿದೆ. "ಏನಾಯ್ತಣ್ಣ?"– ಹಿಂದೆಯೇ ಓಡಿ ಬಂದ ಕಿರಿ ಮಗಳ ಪ್ರಶ್ನೆಯನ್ನು ಲಕ್ಷಿಸದೆ ಹಾಸಿಗೆಯ ಮೇಲೆ ಜೋರಲು ಬಿದ್ದೆ. ನಿಮಿಷ ಕಳೆಯುವುದರಲ್ಲಿ ನನ್ನ ಸುತ್ತ ಅಮ್ಮ, ನನ್ನವಳು ಮತ್ತು ಮಕ್ಕಳು ಕೋಟೆಯಂತೆ ಆವರಿಸಿಕೊಂಡಿದ್ದರು. ನನ್ನ ಕೈ ಹೊಟ್ಟೆಯ ಮೇಲಿದ್ದುದನ್ನು ಗಮನಿಸಿದ ಅಮ್ಮ, "ಮೊದ್ಲೆದ್ದು ನಾಗಪ್ಪನಿಗೆ ತಪ್ಪು ದಂಡ ಕಟ್ಟಿಟ್ಟು ನಮಸ್ಕಾರ ಹಾಕಪ್ಪ... ಊರೋರೆಲ್ಲ ನೆರೆದಿದ್ದಾರೆ...ಏಳು ಚೆನ್ನಾಗಿರಲ್ಲ... ಇವತ್ತಿಂದಲಾದ್ರೂ ಆಸ್ತಿಕನಾಗುವಂತೆ ಬಾ" ಎನ್ನುತ್ತ ನನ್ನನ್ನು ವಶೀಕರಣವಾಡಿಕೊಂಡವಳಂತೆ ಎಬ್ಬಿಸಿ ನಾಗಪ್ಪನ ಬಳಿ ಆಸ್ತಿಕಾಶ್ರಮ ಕೊಡಿಸುವಂತೆ ಕೂಡಿಸಿದಾಗ ಅಮ್ಮನ ಹುಚ್ಚನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾಯಿತು. ಮೂಲೆಯಲ್ಲಿ ನನ್ನ ವಿದ್ಯಾರ್ಥಿಗಳ ಗುಂಪು ಕಂಡಂತಾಗಿ ನಾನು ತಟ್ಟನೆ ಕೆಂಪಾಗಿ ಧಡಕ್ಕನೆ ಮೇಲೆದ್ದೆ. ಅಮ್ಮನ ಕಣ್ಣು ಕಣ್ಣಂಬಾಡಿಯಾಯಿತು. "ಬೇಡಪ್ಪ, ನಾಗಪ್ಪ ಮುನಿದಾನು." ಕಾಲೇಜಿನ ದೊಡ್ಡ ಪ್ರೊಫೆಸರರನ್ನು ತಾಯಿ ಎಲ್ಲರ ಮುಂದೆ ಆಟಗೆಯಂತೆ ನಡೆಸಿಕೊಳ್ಳುತ್ತಿರುವುದನ್ನು ಕಂಡು ಅಪಮಾನಿತನಾಗಿದ್ದೆ. "ಎಲ್ಲಿತ್ತು ಇದು ?" ಗಡುಸಾಗಿ ಪ್ರಶ್ನಿಸಿದೆ. ಬಹಳ ಹೊತ್ತಿನ ನಂತರ, ಮನೆಯೊಡೆಯನಾಗಿ ನನ್ನ

ಕೇಳದೆ ಅವಾಂತರವೆಬ್ಬಿಸಿದ ಕೋಪವನ್ನು ವ್ಯಕ್ತಪಡಿಸುತ್ತ ಅಧಿಕಾರಯುತವಾಗಿ ಪ್ರಶ್ನಿಸಿ ಪ್ರತಿಮೆಯ ಉಗಮದ ಬಗ್ಗೆ ವಿಷಯ ಮೀಟಿದೆ.

“ಅಲ್ರೀ ಈ ಸುದ್ದಿ ಆಗ್ಲೇ ಊರೆಲ್ಲ ಹರಡಿದೆ... ನಿಮಗಿನ್ನೂ ತಿಳೀದೇ!... ನೀವು ಅತ್ಲಾಗೆ ಕಾಲೇಜಿಗೆ ಹೋಗುತ್ಲು ನಾನು ಕಸ ಬಳಿಯೋಣಾಂತ ಮುಂದಿನ ರೂಂಗೆ ಬಂದು ನೋಡ್ತೀನಿ...ದಂಗು ಬಡಿದು ಹೋದೆ... ಕೋಣೆ ಮಧ್ಯದಲ್ಲಿ ಹೊಸ ನಾಗಪ್ಪನ ಪ್ರತಿಮೆ ! ಸುಮಿ–ಪ್ರೇಮಿ ಬೆಳಿಗ್ಗೆ ಹಾಸಿಗೆ ಸುತ್ತಿಟ್ಟು ಹೋದಾಗ ಏನೂ ಇರ್ಲಿಲ್ವಂತೆ ...ದೇವ್ರು ಉದ್ಭವ ಆಗಿದಾನ್ರಿ...ಜನಗಳಿಗೆ ದೇವರ ಬಗ್ಗೆ ನಂಬಿಕೆ ಕಡ್ಮೆ ಆದ್ರೆ ಹೀಗಾಗೋದು ಉಂಟಂತೆ!”–ನನ್ನವಳು ಅದ್ಭುತ ಕಂಡವಳಂತೆ ಕಣ್ಣರಳಿಸಿ ನನ್ನನ್ನು ನಂಬಿಸುವಂತೆ ನುಡಿದಳು.

“ಯಾಕೆ? ತಮ್ಮ ಅಸ್ತಿತ್ವ ಜ್ಞಾಪಿಸೋದಕ್ಕಾ?” ಕೆಕ್ಕರಿಸಿ ನೋಡಿದೆ.

“ಸಾಕು ನಿಮ್ಮ ತಮಾಷೆ...ಪ್ರತ್ಯಕ್ಷವಾದ್ಮೇಲಾದ್ರೂ ನೀವು ದೇವರಿದ್ದಾನೆ ಅಂತ ನಂಬಬಾರ್ದೆ?” ಏಕೋ ಅವಳ ಮುಖ–ಧ್ವನಿ ದೈನ್ಯವಾಗ್ತಿದೆ ಎನಿಸಿದಾಗ ಮುಜುಗರವಾಗಿ, “ನನ್ನ ಮಣಿಸ್ಬೇಕೊಂತ ನಿಮಗ್ಯಾಕೀ ಹಟ...ಹೊರಟ್ಹೋಗಿ... ನನ್ನ ನಂಬ್ಕೆ ಬದಲಾಗಲ್ಲ...ಬೇಕಾದೋರು ತೊಗೊಂಡ್ಹೋಗಿ ಅದನ್ನಿಟ್ಕೊಳ್ಳಿ...ನನ್ನ ಮನೆಯಲ್ಲಂತೂ ಜಾಗವಿಲ್ಲ.”

—ಹುಚ್ಚನಂತೆ ಕೂಗಾಡಿದೆ.

“ಬಾಯಲ್ಮಾತ್ರ ಏನೂ ಮಾತಾಡ್ಬೇಡ. ನನ್ನಾಣೆ”–ಅಮ್ಮ ಚಂಡಿ ಹಿಡಿದಳು. ನನಗೆ ನಿಜವಾಗಿಯೂ ಪ್ರತಿಮೆಯ ಉದ್ಭವದ ವಿಷಯ ಕೇಳಿ ತುಂಬ ಆಶ್ಚರ್ಯವಾಗಿದ್ದರೂ ಅದನ್ನು ತೋರಗೊಡಲಿಲ್ಲ. ಅದನ್ನೇ ಕುರಿತು ಚಿಂತಿಸಲು ತೊಡಗಿದಂತೆ, ನನ್ನ ಬುದ್ಧಿ–ಭಾವನೆಗಳು ಸಡಿಲಾದಂತೆ ನನ್ನ ಒಳಗೆಲ್ಲ ಕರ ಕರಗಿ ಹೊಟ್ಟೆಯೊಳಗಿಂದ ಸುಳಿ ನೋವು ನೊರೆ ನೊರೆಯಾಗಿ ಮೇಲೆದ್ದಿತು. ನರಳುತ್ತ ನಾನು ಮೌನವಾಗಿ ದಿಂಬು ಕಚ್ಚಿದೆ. ನಿಮಿಷ ನಿಮಿಷಕ್ಕೂ ನೋವು ಪದರ ಪದರವಾಗಿ ಪಸರಿಸಿದಂತೆ ಉರಿಯತೊಡಗಿತು. “ಬಾಯ್ತೆಗಿ... ಪ್ರಶ್ನಿಸದೆ ಗುಟುಕರಿಸು...ಅಭಿಷೇಕದ ಹಾಲು... ನಾಗಪ್ಪನ ಪ್ರಸಾದ ...ಎಲ್ಲಾ ಶಾಂತವಾಗುತ್ತೆ” ಎನ್ನುತ್ತ ಅಮ್ಮ ನನ್ನ ಬಾಯಿ ಬಿಡಿಸಿ ಹಾಲು ಹುಯ್ದಳು. ಪ್ರತಿಭಟಿಸದೆ ಮೆಲ್ಲನೆ ಗುಟುಕರಿಸಿದೆ. ಪವಾಡ! ಕೂಡಲೆ ಹೊಟ್ಟೆ ತಂಪಾಯಿತು...ಮೈ ಹಗುರವಾಯಿತು...ಒಳಗೆ ನಾಚಿಕೆ ಚೆಲ್ಲಾಡಲು ಪ್ರಾರಂಭವಾದರೂ ಒಮ್ಮೆಲೆ ದೇವರ ಮಹಿಮೆಯನ್ನು ನಂಬಿದಂತೆ ವ್ಯಕ್ತಪಡಿಸುವಷ್ಟು ಮೂರ್ಖ ನಾನಾಗಿರಲಿಲ್ಲ. ಬಿಂಕದಿಂದ, ನನ್ನ ಹೊಟ್ಟೆ ಶಾಂತವಾದ ಭಾವವನ್ನು ನಾನು ಪ್ರಕಟಪಡಿಸಲಿಲ್ಲ. “ಏಳು. ಮಡಿಯುಟ್ಟು ದೇವರ ಪೂಜೆ ಮಾಡಪ್ಪ” –ಅಮ್ಮನ ಒತ್ತಾಯ ನನ್ನ ಬುದ್ಧಿ ಶೂನ್ಯಗೊಳಿಸಿ ಎಂದೂ ವಿಗ್ರಹಾರಾಧನೆ ಮಾಡಿರದ ನನ್ನನ್ನು ಅಪ್ಪಟ ಪೂಜಾರಿಯಾಗಿಸಿತು. ಪ್ರಜ್ಞೆಗೆ ಮಂಕು ಅಡರಿಸಿದಂತೆ ಕಾಲೇಜಿನ ಯೋಜನೆ ಮರೆತು ನಾಗಪ್ಪನ ಮುಂದೆ ಪದ್ಮಾಸನ ಹಾಕಿ ಕುಳಿತೆ. ಸಂಜೆ ವೇಳೆಗೆ ಭಕ್ತರ ಪೂರ ಹೊಮ್ಮಿತು. ಪವಾಡದ ಸೋಂಕು ನನ್ನನ್ನೇರಲು ಪ್ರಯತ್ನಿಸುತ್ತಿತ್ತು. ನಾನು ಮರುಳೋ, ಜನ ಮರುಳೋ ಎಂಬುದನ್ನು ಒರೆಗೆ ಹಚ್ಚುತ್ತ ನಾಗಪ್ಪನನ್ನೇ ನೋಡುತ್ತಿದ್ದೆ. ಅಪೂರ್ವ ಕಲಾವಂತಿಕೆಯ ಮೂರ್ತಿ. ಅದರಿಂದ ವಿಶಿಷ್ಟ ಪ್ರಕಾಶ ಹೊರ ಹೊಮ್ಮುತ್ತಿದೆಯೆಂಬ ಭಾಸ. ಭ್ರಮಿತನಂತೆ ಅದನ್ನು ನೋಡುತ್ತಲೇ ಇದ್ದೆ. ಹಸಿವು–ಬಾಯಾರಿಕೆ ಬಾಧಿಸಲಿಲ್ಲ. ರಾತ್ರಿಯಾಗುವವರೆಗೂ ಜನಸಂದಣಿ ಇದ್ದೇ ಇತ್ತು. ರಾತ್ರಿ ಆ ಕೋಣೆಯಲ್ಲಿ ಯಾರೂ ಮಲಗಲಿಲ್ಲ.

ಮರುದಿನ ನಾನು ಕಾಲೇಜಿಗೆ ಹೊರಡಲು ತಯಾರಾಗುವಷ್ಟರಲ್ಲಿ ಹಿರಿ ಮಗಳು ನಾಗಪ್ಪನ ಸುತ್ತ ಅಂದವಾಗಿ ಬಣ್ಣದಲ್ಲಿ ರಂಗೋಲಿ ಬಿಡಿಸುತ್ತಿದ್ದಳು. ಅಮ್ಮ ಬತ್ತಿ ಹೊಸೆದು ಕೊಡುತ್ತಿದ್ದಂತೆ ಇವಳು ಆರತಿ, ದೀಪದ ಕಂಬಗಳಿಗೆ ಹಾಕುತ್ತಿದ್ದಳು. ಆಗಲೇ ಜನದ ನೆರೆ ಪ್ರಾರಂಭ. ಕ್ಲಾಸ್ ರೂಮಿನಲ್ಲಿದ್ದರೂ ಕಣ್ಣ ಮುಂದೆ ಅದೇ ದೃಶ್ಯ. ಭೌತಶಾಸ್ತ್ರವನ್ನು ಬೋಧಿಸುವಾಗ ಮನಸ್ಸು ಅಳುಕಿತು. ದೇವರು ಎನ್ನುವುದು ಬರೀ ಒಂದು ಶಕ್ತಿ ಅಷ್ಟೆ... ಅದಕ್ಕೆ ನಾವು ನಾನಾ ಆಕಾರ ರೂಪಗಳನ್ನು ಕೊಟ್ಟಿದ್ದೇವೆ. ಕೇವಲ ಕಲ್ಪನೆ... ಪ್ರತಿಮಾರಾಧನೆ, ಪೂಜೆ ಇವುಗಳನ್ನು ಮಾಡೋದನ್ನು ನಿಷೇಧಿಸಬೇಕು... ನಮ್ಮ ಕಾಲ–ಬುದ್ಧಿ–ಸಾಮರ್ಥ್ಯಗಳು ಇದರಿಂದ ವ್ಯರ್ಥ. ಆದಷ್ಟೂ ಸೈಂಟಿ


ಟಿಕ್ ಮನೋಭಾವ ಬೆಳೆಸ್ಕೋಬೇಕು... ಹಾಗೆ ಹೀಗೇಂತ... ದಿನನಿತ್ಯ ಭಾಷಣ ಹೊಡೆಯುತ್ತಿದ್ದ ನಾನು ಇಂದೇನಾಗ್ತಿದೇನೆ? ಎಂದು ನೆನೆದಾಗ ಮೈ ಬೆವರಿತು. ವಾಕ್ಯವನ್ನು ಅರ್ಧಕ್ಕೆ ನಿಲ್ಲಿಸಿ ಮನೆಗೆ ಬಂದೆ. ಮುಂದಿನ ಕೋಣೆ ಪುಟ್ಟ ದೇವಸ್ಥಾನವಾಗಿತ್ತು. ಅತ್ತ ಹೊರಳದೆ ನಡುಮನೆಗೆ ಬಂದು ತಲೆಗೆ ಕೈ ಹಚ್ಚಿದೆ. "ನೋಡ್ರಿ, ಇವ್ರು ಪೇಪರ್ನವ್ರಂತೆ..." ಹೆಂಡತಿ ಮುಂದಕ್ಕೆ ಏನು ಹೇಳುತ್ತಿದ್ದಳೋ... "ನೀನೇ ಮಾತಾಡು" ಎಂದು ಅಲ್ಲಿಂದೆದ್ದೆ. ಮನಸ್ಸು ಸ್ಥಿಮಿತಕ್ಕೆ ಬರಲಿಲ್ಲ. ಅರಿಯದ ಜಡಪಡಿಕೆ ಕಳವಳ–ತಪ್ಪಿತಸ್ಥ ಭಾವನೆಗಳು ಹುರಿಗುಟ್ಟುತ್ತಿತ್ತು. ನಾನೇಕೆ ಇದಕ್ಕೆ ಅವಕಾಶ ಕೊಟ್ಟೆ? ಎಂಬ ಪಶ್ಚಾತ್ತಾಪ ಹುಟ್ಟಿದಲ್ಲೇ ಕರಗಿತು. ಈಗಂತೂ ಅದನ್ನ ಕದಲಿಸಲು ಖಂಡಿತ ಯಾರೂ ಬಿಡಲಿಲ್ಲ. ಎಂಬುದು ನಿಶ್ಚಯವೆನಿಸಿದಾಗ ಬಂದುಹೋಗುವವರನ್ನು ತಡೆಯಲಾಗದೆ ಅಸಹನೆಯಿಂದ ಬೆಪ್ಪಾಗಿ ನೋಡುತ್ತ ನಿಂತೆ.

ದಿನಗಳು ಉರುಳುತ್ತಿದ್ದವು. ಹೆಚ್ಚೂ ಕಡಿಮೆ ಎಲ್ಲ ಪೇಪರುಗಳಲ್ಲೂ ಈ ಪವಾಡದ ಸುದ್ದಿ ಅಚ್ಚಾಗಿತ್ತು. ಒಂದೆರಡರಲ್ಲಿ ಅಮ್ಮ– ಇವಳೂ ಸಹ– ಕಾಣಿಸಿಕೊಂಡಿದ್ದರು. ಅವರಿಬ್ಬರೂ ದಿನವಿಡೀ ಇದಕ್ಕಾಗಿಯೇ ಮೀಸಲಾಗಿದ್ದರು. ಒಂಟಿಯಾದ ನನ್ನನ್ನು ಬೇಜಾರು ಮುತ್ತತೊಡಗಿತು. ನಾನು ನಾನಾಗಿಲ್ಲವೆಂಬ ಭಾವನೆ ಕೊರೆಯುತ್ತಿತ್ತು. ಮನೆಯವರೆಲ್ಲ ಇಮ್ಮಡಿ ಆಸ್ತಿಕರಾಗಿ ನಾಗಪ್ಪನ ಉಸ್ತುವಾರಿಕೆ ನೋಡಿಕೊಳ್ಳುವವರೇ. ಅಮ್ಮ ಊರಿನ ಹಿರಿಯರನ್ನೆಲ್ಲ ಕರೆಸಿ ನನಗೆ ಬುದ್ಧಿ ಹೇಳಿಸಿದಳು. ಅಂತೂ ಅದು ಹೇಗೆ ನನ್ನ ಬ್ರೈನ್ ವಾಷಾಗಿ ನಾನು ಅವಳ ಕಲ್ಪನೆಯ ಭಕ್ತಶಿರೋಮಣಿಯಾದೆನೋ ಅದೇ ನನಗೊಂದು ಪವಾಡ! ಅಮ್ಮ ಹೇಳಿದಂತೆ ಚಾಚೂ ತಪ್ಪದೆ ಕೇಳುವ ಗೊಂಬೆಯಾಗಿ ಮಾರ್ಪಾಟು ಹೊಂದಿದ್ದೆ. ನಿತ್ಯ

ಪೂಜೆ–ನೈವೇದ್ಯಗಳು. ದಿನ ಕ್ರಮೇಣ ಭಕ್ತ ಕೋಟಿ ಬೆಳೆದಂತೆ ಕಾಣಿಕೆಯ ಹುಂಡಿಯೂ ಬೆಳೆಯುತ್ತ ಹೋಯಿತು. ಭಾರವಾಗುತ್ತ ಹೋಯಿತು. ಊರಿನ ಮಂಡಳಿ ಕೂಡಿ ನಿರ್ಧರಿಸಿತು. ನಾಗಪ್ಪನಿಗಾಗಿ ಇಲ್ಲೇ ಪ್ರತ್ಯೇಕ ದೇವಾಲಯ ನಿರ್ಮಾಣ–ಪ್ರತಿಷ್ಠಾಪನೆ–ಸತ್ಯಪೂಜೆಯ ವ್ಯವಸ್ಥೆಗಾಗಿ ಹಣ ವಿನಿಯೋಗ ಮಾಡುವ ಯೋಜನೆ ಹಾಕಿ ನನ್ನನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದರು. ನನ್ನ ತಲೆಯನ್ನೀಗ ಹಿಂದಿನ ವಿಚಾರಗಳು ಹಿಂಸಿಸುತ್ತಿರಲಿಲ್ಲ. ಪರಾತ್ಪರ ತತ್ವದಲ್ಲೇನೋ ಅರ್ಥ–ಸತ್ಯತೆಗಳನ್ನು ಕಂಡುಕೊಂಡ ಭಾವುಕ ಭಕ್ತ ಮನಸ್ಸು. ಬುದ್ಧಿ ದುರ್ಬಲಗೊಂಡ ಅನುಭವ. ಸಂಶೋಧನೆ–ಆಲೋಚನೆಗಳ ಕಾವು ಆರಿಹೋಗಿತ್ತು. ಒಟ್ಟಾರೆ ಅಮ್ಮನ ಅರ್ಥದಲ್ಲಿ ನಾನೊಬ್ಬ ಆಸ್ತಿಕನಾಗಿದ್ದೆ. ಆಸ್ತಿಕ ಸಮುದಾಯದ ವೇದಾಂತ ಚರ್ಚೆಯಲ್ಲಿ ಗೋಣು ಹಾಕುವವನಾಗಿದ್ದೆ.

ಅಂದು ಭಾನುವಾರ. ಮುಂದಿನ ಜಗುಲಿಯಲ್ಲಿ ಬಿಡುವಾಗಿ ಕುಳಿತಿದ್ದೆ. ಭಕ್ತರು ಬಂದು ಹೋಗುತ್ತಿದ್ದರು. ಮನಸ್ಸಿಗೆ ಕೊಂಚ ಕಾವು ಮೂಡಿಸುವ ಚುಮುಚುಮು ಬಿಸಿಲಲ್ಲಿ ಮೈ ಕಾಯಿಸಿಕೊಳ್ಳುತ್ತ ಕೂತಿದ್ದೆ. ನನ್ನ ಸ್ಥಿತ್ಯಂತರವನ್ನು ಕುರಿತ ಆಲೋಚನೆ ಮೆಲ್ಲನೆ ಸುಳಿಯುಕೊಳ್ಳುತ್ತಿದ್ದಂತೆ ಎಚ್ಚರಿಸುವಂತೆ ತಲೆಯ ಮೇಲೇನೋ ಟಪ್ಪೆಂದು ಬಿತ್ತು. ಗಾಬರಿಯಾಗಿ ಮೇಲೆದ್ದೆ. ಭುಜದ ಮೇಲಿಂದ ಸತ್ತ ಇಲಿ ಉದುರಿತು. ಮೇಲೆ ಕಾಗೆಯೊಂದು ಶಬ್ದ ಮಾಡುತ್ತ ಹಾರಾಡುತ್ತಿತ್ತು. ಫಕ್ಕನೆ ಮನಸ್ಸಿಗೇನೋ ಮಿಂಚಿದಂತಾಗಿ ಕಾಗೆ ಇಲಿಯನ್ನು ಎತ್ತಿ ಹಾಕಿದ ಜಾಗದಿಂದ ಅಗಲ ಕಿಟಕಿಯ ಕೋಣೆಯ ನಡುವೆ ಮಂಡಿಸಿದ್ದ ನಾಗಪ್ಪನನ್ನು ಅಳೆದೆ. ನಾಗಪ್ಪ ಇಲಿಯನ್ನೇ ಕಬಳಿಸಲು ಸರ್ರನೆ ಹರಿದು ಬಂದಂತೆ ವಿಚಾರಧಾರೆ ಧುಮ್ಮಿಕ್ಕಲು ಮೊದಲಾಯಿತು. ಆಲೋಚಿಸುತ್ತಲೆ ನನ್ನ ಕಾಲು ಎದುರಿಗಿದ್ದ ಹಳ್ಳಿಯ ದೇವಸ್ಥಾನದತ್ತ ನಡೆಯಿತು. ಅಶ್ವತ್ಥ ಕಟ್ಟೆಯ ಸುತ್ತ ಸಂಭ್ರಮ... ಎಂದಿನ ನೋಟ... ಬಹುಶಃ ಮಕ್ಕಳಿಲ್ಲದ ದಂಪತಿಗಳ ನಾಗರ ಪ್ರತಿಷ್ಠೆಯೋ ಏನೋ... ಸದ್ದಿಲ್ಲದೆ ಅಲ್ಲಿ ಸೇರಿದೆ. ಕಣ್ಣು ಕುಕ್ಕಿತು. ಹೊಸ ಹೊಸದಾಗಿ ನೆಟ್ಟ ನಾಗರ ಕಲ್ಲುಗಳು... ಬುಡದಲ್ಲಿ ಚೆಲ್ಲಾಪಿಲ್ಲಿಯಾಗಿ ಅಲ್ಲಲ್ಲಿ ಬೆಳ್ಳಿ ನಾಗಪ್ಪಗಳು ಹಲ್ಲು ಕಳೆದುಕೊಂಡವಂತೆ ಸಪ್ಪಗೆ ಬಿದ್ದಿದ್ದವು. ಪ್ರತಿದಿನ ಎದುರಿಗೆ ಭಕ್ತಿಪರವಶ ತಂಡ. ಹೊಟ್ಟೆಯಲ್ಲೇನೋ ಕಡೆದುಕೊಂಡು ಬಂದಂತೆ ಗರಗರ ನಾಡಿ ಸಂಕಟ ಮೇಲೆದ್ದಿತು. ಕಾಲಿನಿಂದ ತಲೆಯವರೆಗೂ ಕೊಕ್ಕುಗಳು ಕುಟುಕಿದಂತೆ... ತಲೆಯೊಳಗೆ ವಿಕ್ಷಿಪ್ತ ಯೋಚನೆಗಳು ಭಗ್ನನೆದ್ದಾಗ ಸರಸರ ಮನೆಯತ್ತ ನಡೆದೆ. ನಾನೆಂಥ ಮೂಢ–ಪಶ್ಚಾತ್ತಾಪ ಚುಚ್ಚಿ ಚುಚ್ಚಿ ಪರಿಹಾಸ್ಯಗೈದಾಗ ನಾಚುತ್ತ ಹೊಸಿಲು ದಾಟಿದೆ. ನನ್ನ ವಿದ್ಯಾರ್ಥಿಗಳು ಲೇವಡಿ ಮಾಡುತ್ತಿದ್ದರು. ನಾನು ತಲೆ ಕಳಚಿಟ್ಟು ಅಮ್ಮ ಮುಂತಾದವರ ಸಾಲಿನಲ್ಲಿ ನಿಂತು ಭಜಿಸಿದ್ದೇ ಭಜಿಸಿದ್ದು. ಕಾಲು ತಡೆಯಿತು. ಕೋಣೆಯ ನಡುವೆ ಹೂಹಾರಗಳ ಮಧ್ಯೆ ಕುಳಿತ ಉದ್ಭವ(!)ನಾಗಪ್ಪ ಹೆಡೆಯಾಡಿಸಿದ. ಪಕ್ಕದಲ್ಲಿ ಭೂತಾಕಾರದ ಹಣದ ಹುಂಡಿ. ನೋಡುನೋಡುತ್ತಿದ್ದಂತೆ ನಾಗಪ್ಪ ಕರಕರಗಿ ಕುಬ್ಜನಾಗುತ್ತ ನೆಲದೊಳಗೆ ಅಡಗಿ ಹೋಗುತ್ತಿದ್ದ. ಪಕ್ಕದಲ್ಲಿದ್ದ ಹಣದ ಹುಂಡಿ ಇನ್ನೂ ದೊಡ್ಡ ದೊಡ್ಡದಾಗಿ ಊದಿಕೊಳ್ಳುತ್ತಾ ಎತ್ತರ ಗಾತ್ರಕ್ಕೆ ಭೂಮ್ಯಾಕಾಶ ವ್ಯಾಪಿಸುವಂತೆ ಬೃಹತ್ತಾಗಿ ಬೆಳೆಯುತೊಡಗಿದಂತೆ ಭಾಸವಾಗುತ್ತಲೆ ನಾನು ತಲೆಯನ್ನು ಕೊರೆಯಲಾರಂಭಿಸಿದ ವಿಚಾರಗಳನ್ನು ಬಲವಾಗಿ ಝಾಡಿಸಿ, ಮಡಿಯುಟ್ಟುಕೊಳ್ಳಲು ದೇವರ ಮನೆಯತ್ತ ಲಗುಬಗೆಯಿಂದ ಹೆಜ್ಜೆ ಹಾಕಿದೆ. ✡

ಏನೇ ಗೌರಿ! ನಾನು ತೌರು ಮನೆಗೆ ಹೋದಾಗ ಈ ಒಂದು ತಿಂಗಳಲ್ಲಿ ನನ್ನ ಯಜಮಾನ್ರು ತುಂಬಾ ಬೇಜಾರದಲ್ಲಿದ್ದರೆ? ಕೆಲಸದವಳು:- ಅವರು ಮೊದ ಮೊದಲು ತುಂಬಾ ಹುರುಪಿನಲ್ಲಿದ್ದರು. ಕಡೆಕಡೆಗೆ ಜೊತೆ ಮಾಡುವವರಂತೆ ಕಂಡರು; ನಿನ್ನೆಯಂತೂ ತುಂಬಾ ದುಃಖದಲ್ಲಿದ್ದಂತೆ ಇದ್ದರು.



ಸಾವಿರದ ಶರಣವ್ವ ಕರಿಮಾಯಿ ತಾಯೇ

* ಚಂದ್ರಶೇಖರ ಕಂಬಾರ

ಮುಂಗೋಳಿ ಕೂಗ್ಯಾವು ಮೂಡsಣ ಬೆಳಗಿ
ತಂಗಾಳಿ ಬೀಸ್ಯಾವು ತವರೀ ಹೂವರಳಿ
ಹೂ ಹೂವಿನೊಳಗೊಂದು ಕೈಲಾಸವರಳ್ಯಾವು
ಕೈಲಾಸ ಕೈಮುಗಿದು ಭೂಲೋಕಕಿಳಿದಾವು
ಸಾವಿರದ ಶರಣವ್ವ ಕರಿಮಾಯಿ ತಾಯೇ॥

ಬಂಡಾರ ಮೈಯವಳೆ ಬಂಗಾರ ಮುಖದವಳೆ
ಸೂಸುನಗೆಯಲಿ ಜಗದ ಲೇಸ ತುಳುಕಿಸಿದವಳೆ
ಒಲಿದ ಕೂಡಿದಿ ತಾಯಿ ಕುಲದಾಚೆಯವನ
ಬಸರಾಗಿ ಎದುರಿಸಿದಿ ದೇವದಾನವರನ್ನ
ಈರೇಳು ಭುಜದವರ ಏಳೇಳು ಶಿರ ತರಿದು
ಕೊರಳೀಗಿ ಹೂಹಾರ ಧರಿಸಿಕೊಂಡವಳೇ
ಸಾವಿರದ ಶರಣವ್ವ ಕರಿಮಾಯಿ ತಾಯೇ ॥

ಮೂರೂ ಲೋಕಕ ಅಧಿಕ ನಿನ್ನ ಕಾರಣಿಕ
ಮುಪ್ಪುರ ಶಿರ ಹಿಡಿದು ಹಾಕೀದಿ ನೆಲಕ
ಗುಂಡ ತೇಲಿಸಿದವ್ವ ಬೆಂಡ ಮುಳುಗಿಸಿದಿ
ಗಂಡಗಂಡರನೆಲ್ಲ ಹೆಂಡೀರ ಮಾಡಿ
ಹೆಂಡೀರ ಭಂಡಾಟಕೆದುರಾಗಿ ನಿಲ್ಲsದೆ
ರಂಡೀ ಹುಣವೀ ದಿನ ದಿಂಡ್ಯಾದೆ ತಾಯೇ
ಸಾವಿರದ ಶರಣವ್ವ ಕರಿಮಾಯಿ ತಾಯೇ॥

ಬಾಗೀದ ಭಕ್ತರಿಗೆ ಬೇಡಿದ್ದ ಕೊಟ್ಟವಳೆ
ಗೆಜ್ಜೀ ಕಾಲಿನ ಮಗನ ಬಂಜೇ ಉಡಿಗಿಟ್ಟವಳೆ
ಕಲ್ಲೀನ ಬಂಡಿಯೊಳಗ ಹುಲ್ಲ ಚಿಗರಿಸಿದವಳೆ
ಜಾಲೀದು ಮುಳ್ಳೀಗೆ ನೀಲೀ ಹೂ ಕೊಟ್ಟವಳೆ
ಚಿನ್ನ ಸುಣ್ಣದ ಗುರುತ ತೋರೀಸಿ ಕೊಟ್ಟವಳೆ
ಸುಣ್ಣsದ ನೀರಾಗ ಜೀವಾ ಕೊಟ್ಟವಳೆ
ಸಾವಿರದ ಶರಣವ್ವ ಕರಿಮಾಯಿ ತಾಯೇ ॥

ಮರಳಿ ಯತ್ನವ ಮಾಡು

ಡಾ॥ ವ್ಯ. ಶ್ರೀ. ನಟರಾಜ



.... ರೇಡಿಯೋ ನಾಟಕ

ಇದು ಭಾರತದ ಹೊರಗಡೆ ಆಕಾಶವಾಣಿಯಲ್ಲಿ ಪ್ರಸಾರವಾದ ಪ್ರಪ್ರಥಮ ಕನ್ನಡ ರೇಡಿಯೋ ನಾಟಕ. ಕೊಲಂಬಿಯಾ ವಿಶ್ವವಿದ್ಯಾಲಯದ ಆಕಾಶವಾಣಿ ಕೇಂದ್ರ ಕಳೆದ ವರ್ಷ ಇದನ್ನು ಅಮೇರಿಕದಲ್ಲಿರುವ ಕನ್ನಡಿಗರಿಗಾಗಿ ಪ್ರಸಾರಮಾಡಿತು.



ಪಾತ್ರಗಳು :

(೧) **ಡಾ. ಮೂರ್ತಿ:** ಸುಮಾರು ನಲವತ್ತರ ಪ್ರಾಯ; ಮೂರು ಗಂಡು ಮಕ್ಕಳ ತಂದೆ, 'ಕನ್ಯಾದಾನ'ವನ್ನು ಮಾಡಿಯೇ ತೀರಬೇಕೆಂಬ ಚಪಲ ಇತ್ತೀಚೆಗೆ ಅತಿಯಾಗಿ, ಚಡಪಡಿಸುತ್ತಾ ಇರುವ ವ್ಯಕ್ತಿ.

(೨) **ವಿಜಯ:** ಮೂರ್ತಿಯ ಅರ್ಧಾಂಗಿ. ಗಂಡನಿಗೆ ಬಡಿದಿರುವ ಕನ್ಯಾದಾನದ ಆಸೆಯನ್ನು ಈಡೇರಿಸಲೋಸುಗ ಒಂದು ಕನ್ಯೆಯ ತಾಯಿಯಾಗಲು ತಾಳ್ಮೆ ಇಲ್ಲದವಳು.

(೩) **ಮಾಲತಿ:** ಎರಡು ಕನ್ಯಾಮಣಿಗಳ ತಾಯಿ. ಮೂರನೆಯದನ್ನು ನಿರೀಕ್ಷಿಸುತ್ತಾ, ಪಿಟ್ಸ್‌ಬರ್ಗ್ ವೆಂಕಟರಮಣನ ದಯೆಯಿಂದ, "ಈ ಮೂರನೇದಾದರೂ, ಗಂಡಾದೀತೆ" ಎಂದು ತವಕ ಪಡುತ್ತಿರುವ ತಾಯಿ.

(೪) **ರಾವ್:** ಮಾಲತಿಯ ಅರ್ಧಾಂಗ, "ಪಿಟ್ಸ್‌ಬರ್ಗ್ ವೆಂಕಟರಮಣನ ಬದಲು, ನ್ಯೂಯಾರ್ಕ್ ಮಹಾಲಕ್ಷ್ಮಿಯ ಕಟಾಕ್ಷವೇ ಪ್ರಬಲವಾಗಿರಬಹುದೇನೋ" ಎಂದು ಶಂಕಿಸುತ್ತಿರುವ ತ್ರಿಶಂಕು.

(ಮೂರ್ತಿ ಮನೆ. ಭಾನುವಾರದ ವಾತಾವರಣ. ಬೇಸಿಗೆ ಕಾಲ. ಎಂ. ಎಸ್. ಸುಬ್ಬುಲಕ್ಷ್ಮಿ ವೆಂಕಟೇಶ್ವರ ಸುಪ್ರಭಾತದ ರೆಕಾರ್ಡಿನ ಕೊನೆಯ ಒಂದು ನಿಮಿಷ. ಕ್ರಮೇಣ ಸಂಗೀತದ ಸ್ವರ ಪ್ರಮಾಣ ಕಮ್ಮಿ ಆಗುತ್ತಾ ಕರಗುತ್ತದೆ.)

ವಿಜಯ: (ಸ್ವಗತ) ಪ್ರತಿ ಭಾನುವಾರ ಈ ಪ್ರೆಜಿಲಿಯನ್ ಕಾಫಿ ಪರಿಮಳ ಪರ್ಕೊಲೇಟರ್‌ನಿಂದ ಘಂ ಅಂತ ಬಂದ ತಕ್ಷಣ, ಛಂಗ್ ಅಂತ ಹಾಸಿಗೆಯಿಂದ ಹಾರಿ, ಅರ್ಧಂಬರ್ಧ ಹಲ್ಲುಜ್ಜಿದ ಶಾಸ್ತ್ರ ಮಾಡಿ, ಹಲ್ಕಿರೀತಾ ಹಾಜರಾಗೋ ಹಾರುವಯ್ಯ......ಇವತ್ತು ನೋಡಿದ್ರೆ, ವೆಂಕಟೇಶ್ವರ ಸುಪ್ರಭಾತ ಮುಗೀತು... ಬಿಟ್ಟಿ ಬಾಯಿ ಏನೇನೂ ಆಯ್ತು......ಕಾಫಿ ಕುದ್ದೂ ಕುದ್ದೂ ತಳ ಮುಟ್ಟಿದ್ರೂ ಏಳ್ತಾ ಇಲ್ವಲ್ಲ......ಛೆ! (ಗಂಡನನ್ನು ಕುರಿತು) ಏನೂಂದ್ರೆ, ಹೀಗಾದ್ರೆ ಹೇಗೇಂತೀನಿ. ಮನೆ ಮುಂದೆ ಹುಲ್ಲು ಆಳೆತ್ತರ ಬೆಳೆದು ನಿಂತಿದೆ. ಈ ಭಾನುವಾರನೂ, ಲಾನ್ ಮೋ ಮಾಡ್ದೇ ಇದ್ರೆ, ಅಕ್ಕ ಪಕ್ಕದ ಜನ ಏನೆಂದುಕೊಂಡಾರು...... ಈ ದರಿದ್ರ ಇಂಡಿಯನ್ಸು ಅಂತ ಬಯ್ಕೊಳಲ್ವೇನು ? ಒಂಭತ್ತಾದ್ರೂ ಇನ್ನೂ ಎದ್ದಿಲ್ವಲ್ಲ...... ಬಿಸಿಲ್ಹತ್ತಿದ ಮೇಲೆ ಕಷ್ಟ ಆಗೊಲ್ವೆ ಲಾನ್ ಮೋ ಮಾಡೋಕೆ?... ಕಾಫಿ ಕುದ್ದೂ ಕುದ್ದೂ ರುಚಿ ಕೆಟ್ಟೋಗ್ತಾ ಇದೆ, ಏಳ್ರೀ.

ಮೂರ್ತಿ: (ಆಕಳಿಸುತ್ತಾ) ಏನೇ ಬೆಳಗಾಗೆದ್ದು ನಿನ್ನ ರಂಪಾ, ವಾರದಲ್ಲೊಂದು ದಿವ್ಸ, ಸ್ವಲ್ಪ ನೆಮ್ಮದಿಯಿಂದ ನಿದ್ದೆ ಮಾಡಿ, ನಿಧಾನವಾಗಿ ಏಳೋಣಾಂದ್ರೆ, ಬೆಳಗಾಗೆದ್ದು ಅಲಾರಂ ಹೊಡೆದ ಹಾಗೆ ಗಡಿಬಿಡಿ ಮಾಡ್ತಾ ಇದ್ದೀ.

ವಿಜಯ: ಸಾಕ್ರಿ ನಿಂ ನಿದ್ದೆ. ಏಳ್ರೀ ಸ್ವಲ್ಪ ಬೇಗ ಎದ್ದು ಜಾಣ ಮರೀ ಥರಾ, ಹಲ್ಲುಜ್ಜಿ ನೋಡೋಣ. ಬಿಸಿ ಬಿಸಿ ಕಾಫಿ ಕೊಡ್ತೀನಿ.

ಮೂರ್ತಿ: ಆ ನಿನ್ನ ಕಾಫಿಗೋಸ್ಕರ ಹಲ್ಲು ಬೇರೆ ಉಜ್ಜಬೇಕೇನೆ ?

ವಿಜಯ: ಇನ್ನೊಂದೆರಡು ವರ್ಷ ಕಾಯ್ರಿ.ಈಗ ಅಲ್ಲಾಡ್ತಾ ಇರೋ ಹಲ್ಲುಗಳೆಲ್ಲಾ ಉದುರ್ತವೆ. ಆ ಮೇಲೆ ಉಜ್ಜಬೇಕೂಂದ್ರೂ ಇರೊಲ್ಲಾ ನಿಮ್ಮ ಹಲ್ಲುಗಳು !

ಮೂರ್ತಿ: ಹ್ಞು......, ಭಾರತೀಯ ನಾರಿ ಬೆಳಗಾಗೆದ್ದು ಗಂಡನ ಕಾಲುಗಳನ್ನು ಮುಟ್ಟಿ ಪುನೀತಳಾಗೋದಿರಲಿ, ಗಂಡನ ಹಲ್ಲುಗಳನ್ನೇ ಉದುರಿಸಿ ಉಪಕಾರ ಮಾಡೋ ಕಾಲ ಬಂತು. ಇದೆಲ್ಲಾ ಅಮೇರಿಕಾಕ್ಕೆ ಬಂದು ನೆಲಸಿದ್ದರ ಫಲ. ಬಿಡ್ತೀನ್ ನಡಿ. ಹೇಗಿದ್ರೂ ನನ್ನ ನಿದ್ರೆ ಕೆಡಿಸಾಯ್ತು ನೀನು.

(ಸ್ವಲ್ಪ ತಡೆದು) ಹುಡುಗ್ರೆಲ್ಲಾ ಎದ್ದಾಯ್ತೇನೆ?

ವಿಜಯ: ಚಿಕ್ಕದೊಂದನ್ನು ಬಿಟ್ಟು. ಮಿಕ್ಕಿರೋರೂ ಎದ್ದು ತಂ ಪಾಡಿಗೆ ತಾವು ಆಡ್ಕೊಳ್ತಾ ಇವೆ.

ಮೂರ್ತಿ: ಸರಿ, ರಾಜೂನ ಕಳ್ಸಿ ಒಂದು NYT* ತರ್ಸು.

ವಿಜಯ: ರಾಜೂ...ರಾಜೂ... (ಏರುತ್ತಿರುವ ವೀಣೆಯ ಧ್ವನಿಯಲ್ಲಿ ವಿಜಯಳ ಧ್ವನಿ ಕರಗಿ ಹೋಗುತ್ತದೆ. ಒಂದು ನಿಮಿಷ ವೀಣೆಯ ಧ್ವನಿ ಹೊರಟು ಕ್ರಮೇಣವಾಗಿ ಕುಗ್ಗುತ್ತಾ ಹೋಗುತ್ತದೆ.)

ಮೂರ್ತಿ: (NYT ಕೈಯಲ್ಲಿಟ್ಟು ಬಿಸಿಯ ಕಾಫಿ ಸುರಿಯುತ್ತಾ) ಲೇ ಯಾಕೇ ಈ ಕಾಫಿ ಇಷ್ಟು ಒಗಚು?

ವಿಜಯ: ಅಲ್ರೀ. ಇಪ್ಪತ್ಸಾರಿ ಕಾಫಿ ಪುಡಿ ಬದ್ಲಾಯಿಸಿದ್ದಾಯ್ತು; ಇಂಡಿಯಾದಿಂದ ಕಾಫಿ ಫಿಲ್ಟರ್‌ನೂ ತರ್ಸಿದ್ದಾಯ್ತು–ಇನ್ನು ಚಿಕ್ಕಮಗಳೂರಿಂದ ಕಾಫಿ ಪುಡಿ ಇಂಪೋರ್ಟ್ ಮಾಡ್ಕೊಳ್ಳೋದೊಂದೇ ಬಾಕಿ ನೋಡಿ......ನನ್ನ ಕೈಲಾಗಲ್ಲಪ್ಪ, ನಾನೆಷ್ಟೇ ಚೆನ್ನಾಗಿ ಮಾಡಿದ್ರೂ ನಿಮ್ಮ ಕ್ರಿಟಿಸಿಸಂ ಮಾತ್ರ ತಪ್ಪಲಿಲ್ಲ.

ಮೂರ್ತಿ: ಆ ಐಯ್ಯರ್ ಮನೇ ಕಾಫಿ ಕುಡಿದು ನೋಡಿದೀಯೇನೆ? ಅವರೂ ಇದೇ ಪುಡೀನೇ ತರೋದು–ಚಿಕ್ಕಮಗಳೂರಿಂದೇನು ಇಂಪೋರ್ಟ್ ಮಾಡ್ಕೊಳ್ಳಲ್ವಲ್ಲಾ......

ವಿಜಯ: ಒಂದು ಕೆಲ್ಸಮಾಡಿ. ಐಯ್ಯರ್ ಮನೇ ದೂರ ಏನಿಲ್ಲ. ಅಲ್ಲೇ ಹೋಗಿ ಒಂದು ಲೋಟ ಕಾಫಿ ಕುಡ್ಕೊಂಡು ಬನ್ನಿ.

ಮೂರ್ತಿ: ಯಾಕೆ ಅಷ್ಟೊಂದು ಕೋಪ ಮಾಡ್ಕೊಂತೀ? (ಸ್ವಲ್ಪ ತಡೆದು) ಹ್ಞೂ...ಒಟ್ನಲ್ಲಿ, ಬೆಳ್ಗಾಗೆದ್ದು ಒಂದು ಲೋಟ ಒಳ್ಳೇ ಕಾಫಿ ಕುಡಿಯೋಕು ಪಡ್ಕೊಂಡುಬಂದಿರ್ಬೇಕು. (ಗೊಣಗುತ್ತಾ) ಈ ಹಾಳಾದ ರಸ್ಸೆಲ್ ಬೇಕರ್ರಾದ್ರೂ ಒಂದು ಸ್ವಾರಸ್ಯಕರವಾದ ಲೇಖನ ಬರೀಬೇಡ್ವೆ? ಯಾವುದೊ ದರಿದ್ರ topic ಮೇಲೆ ಕೆಟ್ಟದಾಗಿ ಬರ್ದಿಟ್ಟದಾನೆ. (ಪುಟಗಳನ್ನು ತಿರುಪುತ್ತಾ) ಇನ್ನು week in review sectionಉ disappointingಉ. ಬಿಸಾಡೇ ಈ ದರಿದ್ರ ಪೇಪರ್ನ (ರೋಯ್ ಎಂದು ಬೀಸುವನು).

ವಿಜಯ: ಯಾಕ್ರೀ ಇವತ್ತು ಒಂದು ಥರಾ ಆಡ್ತಾ ಇದ್ದೀರಿ? ಮೂರು ನಿಮಿಷವೂ ಆಗಿಲ್ಲ ಆಗ್ಲೇ ಬಿಸಾಡ್ತಾ ಇದೀರಲ್ಲ–ಸಂಡೇ ಪೇಪರ್ನ ?

ಮೂರ್ತಿ: ನಾನ್ಯಾವತ್ತಾದ್ರೂ ಮನಸ್ಸಿಟ್ಟು ಒಂದು ಹತ್ತು ನಿಮಿಷ ಓದೋಕೆ ಶುರೂ ಮಾಡಿದ್ನೋ... ಮುಗೀತು...(ಹೆಂಡತಿಯನ್ನು ಅಣಕಿಸುತ್ತಾ) 'ಏನ್ರಿ ಆ ದರಿದ್ರ ನ್ಯೂಯಾರ್ಕ್ ಟೈಂಸಲ್ಲರೋ ನಾನೂರು ಪುಟಾನೂ ಒಂದಕ್ಷರಾನೂ ಬಿಡ್ದೆ ಓದಕ್ಕೊತ್ತಿಬಿಟ್ರಲ್ಲಾ......... ರಿಟೈರ್ಡ್ ಹೆಡ್ಮಾಸ್ಟರ ಥರಾ. ಮನೇ ಕೆಲ್ಸದ್ಕಡೇ ಪರಿವೇನೇ ಇಲ್ವೆ?' ಅಂತ ಕೂಕ್ಕೊಳ್ಳೋಳು, ಇವತ್ನೋಡಿದ್ರೆ, ಯಾಕೆ ಮೂರೆ ನಿಮಿಷಕ್ಕೆ ಪೇಪರ್ನ ಬಿಸಾಡ್ತಾ ಇದೀರೀಂತ ಆಕ್ಷೇಪಿಸುತ್ತಾ ಇದ್ದೀಯಲ್ಲ......ಓದಿದ್ರೂ ಹಿಂಸೆ......ಓದ್ದೇ ಇದ್ರೂ ಹಿಂಸೆ !

ವಿಜಯ: ಇವತ್ತೇನೋ ಒಂಥರಾ ವಿಚಿತ್ರವಾಗಾಡ್ತಾ ಇದ್ದೀರಿ ಕಣ್ರೀ. ಏನಾಯ್ತು? ಸರಿಯಾಗಿ ನಿದ್ರೆ ಬರ್ಲಿಲ್ವೇನು? ರಾತ್ರಿ ಎಲ್ಲಾ ಹೊರಳಾಡ್ತಾ ಇದ್ರಿ, ಹುಷಾರಾಗಿದ್ದೀರೋ ಇಲ್ವೋ?

ಮೂರ್ತಿ: ನಿನ್ನೆ ರಾತ್ರೀನೆ ಈ ಪ್ರಶ್ನೆಗಳ್ನೆಲ್ಲಾ ನೀನು ಕೇಳ್ದೆ, ಯಾಕೆ ಅರ್ಧ ರಾತ್ರೀಲಿ ಡಿಸ್ಟರ್ಬ್ ಮಾಡ್ಬೇಕೂಂತ ಹೇಳಲಿಲ್ಲ– ಈಗ್ಹೇಳ್ತೀನಿ ಕೇಳು......

ವಿಜಯ: ಹ್ಞೂ ಹೇಳಿ ಹೇಳಿ......

ಮೂರ್ತಿ: ರಾತ್ರೆ ನಾನು ಯೋಚಿಸ್ತಾ ಇದ್ದೆ ನೋಡು......ನಮ್ಮ ಮಕ್ಕಳು......ಒಂದಾಗುತ್ಲು ಒಂದು ಮೂರೂ ಗಂಡುಗಳೇ ಆಗಿವೆಯಲ್ಲಾ.

ವಿಜಯ: (ಮಧ್ಯೆ ಬಾಯಿ ಹಾಕಿ) ಏನಾಯ್ತು, ಮೂರೂ ಗಂಡೇ ಆದ್ರೆ......

ಮೂರ್ತಿ: ತಾಳೆ ಸ್ವಲ್ಪ, ಮಾತಿನ ಮಧ್ಯೆ ಇಂಟರಪ್ಟ್ ಮಾಡ್ಬೇಡ್ವೇ...ಮೂರೂ ಗಂಡುಗಳೇ ಆಗ್ಹೋದ್ವಲ್ಲಾ......ಕನ್ಯಾದಾನ ಮಾಡೋಕೆ ಒಂದು ಹೆಣ್ಣು ಬೇಡ್ವೇನೆ......?

ವಿಜಯ: ಓಹೋ...ಇದೋ ನಿಮ್ಮ restlessnessಗೆ reason ಉ... ಏನ್ಬಂತ್ರೀ

---
* New York Times

[illegible]?

ಮೂರ್ತಿ: [illegible] ಬಿಟ್ಟೆ ಮತ್ತೇ [illegible].

ವಿಜಯ: ಮದ್ವೇನೇ ಆಗಿಲ್ವೇ ಇರೋರ ಪಿಷ್ಯ ಹಾಗಿಲ್ಲಿ, ನೀವು......ಇಪ್ಪತ್ತಕ್ಕೇ ಮದುವೇ ಆಗಿ, ಇಪ್ಪತ್ತೊಂದಕ್ಕೆ ತಂದೆ ಆಗಿ, ಒಂದರ ಮೇಲೊಂದು...... ಒಂದಲ್ಲ...... ಎರಡಲ್ಲಾ.. ಮೂರು, ಹ್ಞೂ ಮೂರು ಪುತ್ರರತ್ನಗಳನ ಐದೇ ವರ್ಷದೋಳಗೇ ದಯಪಾಲ್ಸಿ, ಮೂರ್ತಿ ಹೆಂಡ್ತಿ ಇಲ್ಲಾ ಬಸ್ರೀ, ಅಥವಾ ಬಾಣಂತಿ, ಅಂತ ಕೀರ್ತಿ ನಂಗೆ ತಂದುಕೊಟ್ಟಿದ್ದೂ ಅಲ್ದೇ ಇಪ್ಪೊಂದು ವರ್ಷ ಕಳೆದು, ಸಧ ನನ್ನಷ್ಟಕ್ಕೆ ನಾನು ಬಿಡು ಮನ್ನಿ ಆಗಿ ಹಾಯಾಗಿರೋದು ನಿಮಗೆ ಸಹಿಸೊಲ್ವೇನೋ?

ಮೂರ್ತಿ: (ಸಮಾಧಾನಪಡಿಸುತ್ತಾ) ಹಾಗಲ್ಲ [illegible] ಅದು, ನೋಡು...... [illegible] ಹಾಗೆ.

ವಿಜಯ: [illegible] ಕಿರುಸಗೆಗೋಸ್ಕರ..... [illegible] ಕೌಂಪೌಂಡು ಹಾರಿ ನಮ್ಮನೇ [illegible] ಇದ್ದಿದ್ದು ಜ್ಞಾಪಕ [illegible] ನಾನು ಕಾಲೇಜಿಗೆ [illegible] ನಿಂತು [illegible] diffe-rence ಕಮ್ಮೀಂತ ನಿಮಗೆ ನನ್ನ ಕೊಡೊಲ್ಲಾಂತ ಅಪ್ಪ ಅಡ್ಡೀ ಬಂದಾಗ, ಈ ಹುಡುಗೀನ ನಂಗೆ ಕೊಡ್ಡೇ ಹೋದ್ರೆ ಸಂನ್ಯಾಸಿ ಆಗ್ಬಿಡ್ತೀನಿಂತ ಹೆದ್ರಿಸಿ ಒಂದೇ ಸಮ ಗೋಳು ಹುಯ್ಕೊಂಡಿದ್ದು ಜ್ಞಾಪಕ ಇದ್ಯೋ—ಅಥ್ವಾ ಅದೂ ಮರ್ತ್ಹೋಯ್ತೊ? ದಾನಾಂತೆ ದಾನ! ಏನ್ರಿ, ದಾನ ಕೊಡೋಕೆ ನಾನೇನು ಹಸೂನೋ ಅಥ್ವಾ ಒಂದು ತೆಂಗಿನ್‌ಕಾಯೋ?

ಮೂರ್ತಿ: Stop stop stop. ಒಳ್ಳೇ ಜ್ವಾಲಾಮುಖೀನೇ ಕಣೆ. ನೋಡು ನಮ್ಮ ಹಿಂದೂ ಧರ್ಮದ ಪ್ರಕಾರ ಹೆಣ್ಣು ಅಂದ್ರೆ [illegible] ಅಂಥ ಒಂದು ವಸ್ತು, I mean, ಒಂದು ಪ್ರಾಣಿ...or whatever ...ಅಂತಾನೇ ಇರೋದು. ಅದಕ್ಕೆ ನನ್ನ ಮೇಲೆ [illegible]? [illegible] ಲ್ವಲ್ಲ. ರೂಲ್ಸ್‌ನ! ಕೇಸೇನಾದ್ರೋ ಹಾಕೋ ಹಾಗಿದ್ರೆ ಮನುಧರ್ಮಶಾಸ್ತ್ರ ಬರೆದೋರ್‍ಮೇಲೆ ಹಾಕು.

ಶಾಸ್ತ್ರ ರೀತ್ಯಾ, ಭೂದಾನ, ಗೋದಾನ, ಸುವರ್ಣದಾನ, ಅನ್ನದಾನ, ಕನ್ಯಾದಾನ...... ಹೀಗೆ ನಾನಾ ವಿಧಾನ. ಈಗ ನೋಡು, ನನ್ನ ಪಾಲಿಗೆ ಬಂದ ಭೂಮಿ ಕಾಣಿ ತೋಟ ಗದ್ದೆ ಎಲ್ಲಾನೂ ನನ್ನ ಅಣ್ಣ ತಮ್ಮಂದಿರಿಗೇ ಬಿಟ್ಟುಕೊಟ್ನೋ ಇಲ್ವೊ? ಸರಿ, this takes care of ಭೂದಾನ. ಇನ್ನು, ಹೋದ ಸಾರ್ತಿ ಇಂಡಿಯಾಕ್ಕೆ ಹೋಗಿದ್ದಾಗ ಕಾಶೀಗೆ [illegible]? ಅಲ್ಲಿ [illegible] ಒಂದು [illegible] ರೂಪಾಯಿಗೆ ಕೊಂಡುಕೊಂಡು [illegible] That takes care of ಗೋದಾನ. ಇನ್ನು ಸುವರ್ಣದಾನ, of course ಪ್ರತಿ ವರ್ಷ ನಿನಗೆ ಮಾಡಿಸ್ಕೊಡೋ ಲೆಕ್ಕವಿಲ್ಲದಷ್ಟು ಒಡವೆ ವಸ್ತು should amply cover ಸುವರ್ಣದಾನ. As far as ಅನ್ನದಾನ goes, ಇವೆಯಲ್ಲಾ ನಮ್ಮ ಅನಾಹ್ವಾನಿತ ಅತಿಥಿವೃಂದ and our [illegible] ಗಳು......ಇನ್ನು ಮಿಕ್ಕಿರೋದೇನು ಹೇಳು?

(ಇಬ್ಬರೂ ಒಟ್ಟಿಗೇ): ಕನ್ಯಾದಾನ

ಮೂರ್ತಿ: [illegible]! [illegible] ಕನ್ಯಾದಾನ [illegible] ಸಮಾಧಾನ ಕೊಡೋ ಅಂಥ, ಒಂದು [illegible]!!

ವಿಜಯ: ಸ್ವಲ್ಪ ನಿಧಾನ my dear ಯಜಮಾನ್ರೆ! [illegible] ಅಮೇರಿಕಾಕ್ಕೆ ವಲಸೆ ಬಂದು, ಇಲ್ಲೇ ನೆಲ್ಸಿದ ಮೇಲೆ ನಿಮ್ಮ ಭೂಮಿ ಕಾಣೀನ ಹೊತ್ತು

ಕೊಡು ಬರುತ್ತಾಗುತ್ತೇನು? ಅಥ್ವಾ, ಇಲ್ಲೇ ಇದ್ಕೊಂಡು ನಿಮ್ಮ ತೋಟ ಗದ್ದೇನ ನೋಡ್ಕೊ ಳ್ಳೋಕ್ಕಾದ್ರೂ ಆಗುತ್ತೇನು? ಆ ತಲೆನೋವು ನಾಗೆ ಬೇಕೂಂತ ತಾನೆ ಎಲ್ಲಾನೂ ನಿಮ್ಮ ಅಣ್ಣ ತಮ್ಮಂದ್ರಿಗೇ ಬಿಟ್ಕೊಟ್ಬಂದಿದ್ದು—ಇದನ್ನ ದಾನ ಅಂತಾರ್ಯೇ ಯಾರಾದ್ರು? ಇನ್ನು, ನೀವೇ ಹೇಳಿದ್ಹಾಗೆ, ೫೦ ರೂಪಾಯಿಗೆ ಹಸು ಬರುತ್ತೇ ಎಲ್ಲಾದ್ರೂ? ಅದೂ ಅಲ್ದೇ, ಆ ಕಾಶೀಲಿರೋ ಕೊಳಕು ಪಂಡೆಗಳ್ಹತ್ರ ಯಾವ ವ್ಯವಹಾರ ನಡೆಸಿದ್ರೂ ಅದನ್ನ ದಾನಾಂತ ಕರೆಯೋಕಾ ಗಲ್ಲ ನೋಡಿ. ಆಮೇಲೆ, ನಿಮ್ಮ ಚಿನ್ನದ ಒಡವೆಗಳು…ಶುದ್ಧ ಹಾಸ್ಯಾಸ್ಪದಾರೀ. ನೋಡಿ, ದಯುಪಿಟ್ಟು ಈ ದಾನ ಅನ್ನೋ concept ನ ridicule [illegible] ಮನೇಲಿ ಹೋಗಿ ತಿಂದುಕೊಂಡ್ಬಂದು, ಮಧ್ಯೆ ಮಧ್ಯೆ ಒಂದೊಂದ್ಸಾರಿ ಊಟ return ಮಾಡಿದ್ರೆ, ಅದೇನು ಸಂತರ್ಪಣೇನೇ, ಅನ್ನದಾನ ಅನ್ನೋಕೆ. ಒಟ್ನಲ್ಲಿ, ಇಲ್ಲೀವರ್ಗೂ ನೀವು ಮಾಡಿರೋ ದಾನ ಎಲ್ಲಿ, ಶುದ್ಧ ಅವಮಾನ! ಇನ್ನು ಇದ್ದಕ್ಕಿದ್ದ ಹಾಗೆ ಕನ್ಯಾದಾನದ ಚಟ ಯಾಕಪ್ಪಾ ಬಂತು ನಿಮಗೆ?

ಮೂರ್ತಿ: ಯಾಕೇಂತೀಯಾ? ಕೇಳು. ಒಂದು ಒಳ್ಳೇ ಸುಂದರವಾಗಿರೋ ಹೆಣ್ಣು ಮಗಳು, ಕಾಲಿಗೆ ಗೆಜ್ಜೆ ಕಟ್ಕೊಂಡು, ಒಳ್ಳೇ ಜರೀ ಲಂಗಾ ಹಾಕ್ಕೊಂಡು, ಒಳ್ಳೇ ಬಟ್ಟು ಕಣ್ಣನ್ನ [illegible] ಮನೇಲಿ, ಈ ಕಡೇಯಿಂದ ಆ ಕಡೆ, ಆ ಕಡೆ [illegible] ಎಂದು ಶೋಭೆ ಬರಲ್ವೇನೆ? ಹೇಳೆ. ಆರತಿ ಗೊಬ್ಬಳು ಮಗಳು ಬೇಡ್ವೇನೆ ಹಾಗಾರೆ?

ವಿಜಯ: ಬೇಕು ಬೇಕು. ಕೀರ್ತಿಗೊಬ್ಬನೇ ಮಗಾ ಅನ್ನಿಸ್ತಿದ್ರೆ ಹಠ್ಯಾಗಿಲ್ಲ. ಮೂರು ಮೂರು, ಬಂದಲ್ಲ. ಎರಡಲ್ಲಾ ಮೂರು ಮೂರು ಗಂಡೋ ಕಾರಕರು ಕೀರ್ತಿ ತರ್ತಾ ಇರೋವಾಗ ಇನ್ನು ಆರ್ತೀ ಎಲ್ಬಂತ್ರೀ ಮೂರ್ತಿ?

ಮೂರ್ತಿ: ಯಾಕೆ, ಮಕ್ಕಳು ಅಂದ ತಕ್ಷಣ ಇಷ್ಟೊಂದು Repulsion ತೋರಿಸ್ತೀ?

ವಿಜಯ: Repulsion ಎಲ್ಲಿಂದ ಬಂತು ಯಜಮಾನ್ರೇ, ಈ ಮೂರು ಜನ ಕುಮಾರ ಕಂಠೀರವರು ಕಟ್ಕೊಂಡು ಬರೋಲ್ವೇ, ವಾರಾಂ ಗನೇರನ. ಅವ್ರುಗಳನ್ನೇ ಉಪಯೋಗಿಸ್ಕೊಂ ಡ್ರಾಯ್ತು ಆರ್ತೀಗೆ.

ಮೂರ್ತಿ: ಅಂಕೇ ಇಲ್ದೇ ಈ ದೇಶದಲ್ಲಿ ಬೆಳ್ದಿರೋ ಈ ವಾನರ್ಗಳು, ಯಾವ್ದೋ ಇಟ್ಯಾಲಿಯನ್ನೋ, ಜ್ಯೂಯಿಷೋ, ಅಥ್ವಾ ಬಿಳಿ ಯವು ಯಾವ್ದೋ ಸಿಕ್ಕೋ ಕಟ್ಕೊಂಬಂದ್ರೆ ಚೆನ್ನಾಗಿ ಆರ್ತಿ ಆಗತ್ತೆ, ಮಹಾ ಮಂಗಳಾರ್ತೀನೇ ಆಗತ್ತೆ.

ಆದಿರ್ಲಿ, ಸೊಸೇರು ನಿನ್ಮನೇಗ್ಬಂದ್ರೆ, ನೀನು ಕನ್ಯಾದಾನ ಮಾಡಿದ್ದರ ಫಲ ಬರುತ್ಯೇನೆ? [illegible] ಒಂದು ಒಳ್ಳೇ ಜರೀ ಸೀರೆ ಉಟ್ಕೊಂಡು, ಡ್ಲಿ, ಉದ್ದಾನೆ ಜಡೆ ಹಾಕ್ಕೊಂಡು, ತಲೇ ತುಂಬ ಮಲ್ಲಿಗೇ ಹೂವು ಮುಡ್ಕೊಂಡು, ನಾಲ್ಕು ಒಳ್ಳೇ ಒಡವೆಗಳನ್ನ ಹಾಕ್ಕೊಂಡು, ಅವಲಕ್ಕೀ ಸರ, ಚಳತಂಬು ಇತ್ಯಾದಿ, ವಸಂತಿ, ಹಣೇ ತುಂಬ ಕುಂಕುಮ ಹಾಕ್ಕೊಂಡು, ನಾನಾಕಡೆ, ನೀನೀ ಕಡೆ, ಮಧ್ಯೆ ಹಸೇ ಮಣೇಲಿ, ನಿನ್ನ ದುಂಡು ಮುಖದ ಮುದ್ದು ಮಗಳು ಮಂತ್ರಘೋಷ, ಓಲಗಾ, ಪ್ರವರಾ, ಏನು, ನೆಂಟರು, ಇಷ್ಟರು, ಧಾರೆ, ನಾಗೋಲೀ… ಆ ಮೇಲೆ…

(ಹಿಂಬದಿಯಲ್ಲಿ ಮಂತ್ರಘೋಷ ಮತ್ತು ಓಲಗ)

ವಿಜಯ: Please, please, ನಿಮ್ಮ ದಮ್ಮಯ್ಯ, ವರ್ಣನೇ ಸಾಕ್ಮಾಡಿ. ನಿಮ್ಮ ಮಾತುಗಳ್ನ ಕೇಳ್ತಾ ಕೇಳ್ತಾ, ನಾನೂ ಒಂದು ರೀತಿ emotional ಆಗ್ಬಿಟ್ಟಾ ಇದೀನಿ. ಹೆಣ್ಮಕ್ಕಳ್ದೇ ಇರೋದು ಒಂದು ರೀತಿ ಕೊರ್ತೆ ಅಂತ್ಲೆ ಅನ್ನಿಸ್ಬಿಟ್ಟಾ ಇದೆ ನಂಗೆ. (ಸ್ವಲ್ಪ ತಡೆದು) ನೋಡಿ, ಈಗೊಂದು ಕೆಲವು ದಿನಗಳಿಂದ, ನಿಮಗ್ಯಾಕೊ ಒಂದು ಥರಾ ಆಗ್ಹೋಗಿದೆ. ಮಾಡೋ ಪರೀಕ್ಷೆಗಳೆಲ್ಲಾ pass ಮಾಡ್ಬಿಟ್ರಿ. ಸಿಕ್ಕೋ ಪ್ರಮೋಷನ್‌ಗಳೆಲ್ಲಾ ಸಿಕ್ಕಾಯ್ತು. ಮನೇ ಕೊಂಡ್ಕೊಂಡಾಯ್ತು, ಎರಡು ಕಾರು—ಅದರಲ್ಲೊಂದು ಸ್ಟೇಷನ್ ವ್ಯಾಗನ್ನು ಇತ್ಯಾದಿ

ಗಳೆಲ್ಲಾ ಆಗಾಯ್ತು. ಅದಕ್ಕೇಂತ ಕಾಣುತ್ತೆ, ನಿಮಗೆ ಇತ್ತೀಚೆಗೆ ದೇವ್ರೂ ದಿಂಡ್ರು, ಕನ್ಯಾದಾನ ಇಹಪರಾಂತೆಲ್ಲಾ ಮಾತಾಡೋಕೆ ಶುರು ಮಾಡ್ಬಿಟ್ಟಿದ್ದೀರಿ. ಒಂದು ಕೆಲ್ಸಾ ಮಾಡಿ, ನಿಮಗೆ ಅಷ್ಟೊಂದು, ಕೈಕಡಿತಾ ಇದ್ರೆ, ಒಂದು Speed Reading course ತೊಗೊಳ್ಳಿ, ಅಥ್ವಾ, ಗಾಲ್ಫೋ, ಟೆನಿಸ್ಸೋ ಶುರುಮಾಡ್ಕೊಳ್ಳಿ, ಏನ್ಬೇಕಾದ್ರೂ ಮಾಡ್ಕೊಳ್ಳಿ, ಮಾತ್ರ ಹೊಸದಾಗಿ ಮಕ್ಕಳ project ಮಾತ್ರ ಬೇಡ.

ಮೂರ್ತಿ: ಹ್ಞೂ, ಹೋಗ್ಲಿ ಬಿಡು, ನೀನಂತೂ ಮನಸ್ಸಿಗೆ ಒಂದು ದೊಡ್ಡ ಬೀಗ ಹಾಕ್ಕೊಂಡಿರೋ ಹಾಗಿದೆ. ನಾನ್ಹೇಳಿದ್ದೇನೂ ಹಿಡಿಸೋ ಹಾಗಿಲ್ಲ. ಕೊನೇ ಪಕ್ಷ, ಆ ನಿನ್ನ ಸ್ಪೆಷಲ್ ಒಗಚು ಕಾಫೀನಾದ್ರೋ ಇನ್ನೊಂದರ್ಧ ಲೋಟ ಸುರಿ, ಬಸ್ಕೋತೇನೆ.

ವಿಜಯಾ: ಪರ್ವಾಗಿಲ್ಲಾರೀ, ಒಗಚು, ಒಗಚು ಅಂದ್ಕೊಂಡೇ, ಬಸ್ಕೋತಾನೇ ಇರ್ತೀರಲ್ಲಾ. ಬೇಗ್ಬೇಗ ಏಳಿ, ಇವತ್ತು ಲಂಚಿಗೆ ರಾವ್ ಮನೇಯವರು ಬರ್‍ತಾ ಇದಾರೆ. ಬೇಗ್ಬೇಗ ಲಾನ್ ಮೋ ಮಾಡ್ಬಿಟ್ಟು, ಒಳ್ಳೇ ಜಾಣನ ಥರಾ ಸ್ನಾನ ಮಾಡಿ ಮುಗ್ಸಿ. ಇವತ್ತು, ಬಿಸಿಬೇಳೇ ಭಾತ್ ಮಾಡೋಣಾಂತ ಇದೀನಿ. ಪಾಪ, ರಾವ್ ಹೆಂಡ್ತಿ ಬಸ್ರೀ, ನನ್ನ ಕೈಯ್ಯಿನ್ ಬಿಸಿಬೇಳೇ ಭಾತ್ ತಿನ್ಬೇಕೂಂತ ಬಯುಸೀ ಬಯುಸೀ ಬರ್‍ತಾ ಇದ್ದಾರೆ.

ಮೂರ್ತಿ: ಸರಿ ಸರಿ, ಕನ್ಯಾದಾನ ಫಲವಂತೂ ಸಿಕ್ಕೋ ಹಾಗಿಲ್ಲ, ಬಿಸಿಬೇಳೇ ಅನ್ನದಾನಾನಾದ್ರು ಮಾಡು,

(ನಗುವಿನಲ್ಲೇ ದೃಶ್ಯ ಬದಲಾಯಿಸುತ್ತದೆ.)

(ರಾವ್ ಮನೆ. ಹಿಂಬದಿಯಲ್ಲಿ ಪಾಶ್ಚಿಮಾತ್ಯ ಸಂಗೀತ. ಸಂಭಾಷಣೆ ಶುರು ಆಗುತ್ತಿದ್ದಂತೆಯೇ ಸಂಗೀತ ಕಡಿಮೆಯಾಗಿಬಿಡುತ್ತದೆ.)

ರಾವ್: ಡಾರ್ಲಿಂಗ್, ಹನೀ,... ಡಿಯರ್, ಏಳೂ ಬೇಗ, ಎಷ್ಟೊತ್ತಾದ್ರೂ ಏಳ್ತಾನೇ ಇಲ್ವಲ್ಲ. ಇವತ್ತು ಮೂರ್ತಿ ಮನೇಗೆ ಲಂಚಿಗೆ ಹೋಗ್ಬೇಕು ಜ್ಞಾಪಕ ಇದೇ ತಾನೆ? ನಾನಾಗ್ಲೇ ಎದ್ದು ಎರಡು ಸಾರ್ತಿ ಕಾಫಿ ಮಾಡ್ಕೊಂಡು ಕುಡಿದಾಯ್ತು ಡಿಯರ್.

ಮಾಲ್ತಿ. ಯಾಕೋ ತಲೆ ಎಲ್ಲ ನೋವು. ಮೈಯ್ಯೆಲ್ಲಾ ಭಾರ. ಹಾಗೇ ಒಂದು ಸ್ವಲ್ಪ ಉಪ್ಪಿಟ್ಟಿಗೆ ರವೆ ಹುರೀತೀರಾ? ನಾನು brush ಮಾಡ್ಕೊಂಡ್ಬರ್‍ತೀನಿ.

ರಾವ್: ಸಧ್ಯ. ನೀನ್ ಬಸ್ರೀ ಆಗಿರೋದು ನನ್ನ ಪ್ರಾಣಕ್ಕೆ ಬಂದಿದೆ ಡಿಯರ್. ಇನ್ನೂ ಏನೇನ್ಮಾಡ್ಬೇಕೋ ಎಲ್ಲಾ ಲಿಸ್ಟ್ ಒಟ್ಟಿಗೇ ಕೊಟ್ಬಿಡು. ದೇವರ ದಯದಿಂದ ಮೂರ್ತಿ ಮನೇಲಿ ಲಂಚಿಗೆ ಕರ್‍ದಿದಾರೆ. ಇಲ್ದೇ ಇದ್ದಿದ್ರೆ, ಲಂಚ್ ತಯಾರ್‍ಸೋ ಜವಾಬ್ದಾರೀನೂ, ನನ್ನ ತಲೇಗೇ ಕಟ್ತಾ ಇದ್ದೇ ಅಂತ ಕಾಣಿಸತ್ತೆ.

ಮಾಲ್ತಿ: ಬಸ್ರೀ. ಜೀವನ್ದಲ್ಲಿ ಮೊದಲ್ನೇ ಸಲ ಸ್ವಲ್ಪ ಸೇವೆ ಮಾಡಿಸ್ಕೋತಾ ಇದೀನಿ. ಇಷ್ಟಕ್ಕೇ ಇಷ್ಟೊಂದು ಬೇಜಾರು ಮಾಡ್ಕೊಂಬಿಟ್ರೆ ಹೇಗೆ? (ಗೊಣಗುತ್ತಾ) ನನ್ನ ಗ್ರಹಚಾರ...

ರಾವ್: ಇದೇನು ಡಾರ್ಲಿಂಗ್, ಇಷ್ಟೊಂದು ಸಣ್ಣ ವಿಚಾರಕ್ಕೆ, ಗ್ರಹಚಾರ, ಮಣ್ಣು ಮಸೀಂತ ನಿಟ್ಟುಸಿರು ಬಿಡ್ತೀ. ಏನಾಯ್ತು? ಹುಷಾರಾಗಿದ್ದೀ ತಾನೆ? ನಿದ್ರೆ ಸರಿಯಾಗಿ ಮಾಡಿದ್ಯೋ ಇಲ್ವೋ? ರಾತ್ರಿ ಎಲ್ಲಾ ಒಂದೇ ಸಮ ಹೊರಳಾಡ್ತಾ ಇದ್ದೆ...

ಮಾಲ್ತಿ: ಹುಷಾರಾಗಿಲ್ದೇ ಏನು ಧಾಡಿ ನನಗೆ. ಆದ್ರೆ ಈಗ್ಯಾಕೋ ಒಂದೆರಡು ಮೂರು ದಿವ್ಸಗಳಿಂದ ಸರಿಯಾಗಿ ನಿದ್ರೆ ಮಾಡೋಕೆ ಆಗ್ತಾ ಇಲ್ಲಾರೀ. ಬಲೇ ಹಿಂಸೆ ಆಗ್ಹೋಗಿದೆ.

ರಾವ್: ಇದ್ಯಾಕೆ ಡಿಯರ್? ಅಷ್ಟೊಂದು ಚೆನ್ನಾಗಿ ನೋಡ್ಕೋತಾ ಇದೀನಿ. ಕೇಳಿ ಕೇಳ್ದಾಗ ಹಣ್ಣು, ಕೇಳ್ದೇ ಇದ್ರೂ ಹಾಲು, ಹುಟ್ಟೋ ಮಗು ದಷ್ಟಪುಷ್ಟವಾಗಿರ್‍ಲೀಂತ ಬಾದಾಮಿ, ದ್ರಾಕ್ಷಿ, ಗೋಡಂಬಿ ಇತ್ಯಾದೀನ ಗಂಟ್ಗೊಳಕ್ಕೆ ಗಿಡೀತಾ ಇದೀನಿ. ಇಷ್ಟಾದ್ರೂ ಏನು ಚಿಂತೆ ನಿಂಗೆ ನಿದ್ರೆ ಬರ್‍ದೇ ಇರೋಕೆ?

ಮಾಲ್ತಿ: ರಾತ್ರಿ ಎಲ್ಲಾ ಬರೀ ಕನಸುಗಳಪ್ಪ- ಅದಕ್ಕೇ ನಿದ್ರೆ ಇಲ್ಲ.

ರಾವ್: ಏನೇನೋ ಹಾಳೂ ಮೂಳೂ ಯೋಚಿಸ್ಕೊಂಡು ವರೀ ಮಾಡ್ಕೋತೀಯ ಅಂತ ಕಾಣತ್ತೆ, ಅದಕ್ಕೇ ಅಷ್ಟೊಂದು ಕನಸುಗಳು. ಹೋಗ್ಲಿ, ಏನು ಕನಸಲ್ಲಿ ಇಂಡಿಯಾಕ್ಕೆ ಹೋಗಿ-[illegible] ?

ಮಾಲ್ತೀ: ಮತ್ತೆ, ನೀವು ಕೋಪ ಮಾಡಿಕೊ-ಳೋಲ್ಲಾಂದ್ರೆ ಹೇಳ್ತೀನಿ.

ರಾವ್: ಹೇಳು ಡಿಯರ್, ನಾನು, ನಿನ್ಮೇಲೆ, ಯಾವತ್ತಾದ್ರೂ ಕೋಪ ಮಾಡ್ಕೊಂಡಿದ್ದೇನ್ಯೇ?

ಮಾಲ್ತೀ: ಮತ್ತೇ, ಮತ್ತೇ, ನಂಗೆ…ನಂಗೆ… ಈ ಸಾರೀನೂವೆ…

ರಾವ್: ಈ ಸಾರೀನೂವೆ…?

ಮಾಲ್ತೀ: ಈ ಸಾರೀನೂ ಹೆಣ್ಮಗೂನೇ ಆದ್ಹಂಗೆ ಕನಸು ಬಿತ್ತೂರಿ. ನನಗ್ಯಾಕೋ ತುಂಬ ಭಯವಾಗ್ತಾ ಇದೆ.

ರಾವ್: (ನಗುತ್ತಾ) ಓ… ಅಷ್ಟೇ ತಾನೇ [illegible] ಹೆಚ್ಚೇ? ನೀನ್ಯಾ-[illegible]?

ಮಾಲ್ತೀ: "ನನ್ನಪ್ಪ ಅಮ್ಮಂಗೆ ನಾನೊಬ್ಬನೇ [illegible] ಇದ್ರೆ ನಮ್ಮ ವಂಶ ಮುಂದಕ್ಹೋಗಲ್ಲ" ಅಂತ ನೀವೇ ಹೇಳ್ತಾ [illegible]

ರಾವ್: [illegible] ಡಾರ್ಲಿಂಗ್, ಅದೆಲ್ಲಾ [illegible] "ಹೆಣ್ಣು ಹೆಣ್ಣೆಂದೇಕೆ ಬೀಳುಗರೆವರು ಜನರು, ಕಣ್ಣು ಕಾಣದ ಗಾವಿಲರು, ಕುವರಿಯಾದೊಡೆ ಕುಂದೇನು? ಕುವರನಾದೊಡೆ ಹಿರಿದೇನು ?"

ಮಾಲ್ತೀ: ಹೌದೂರಿ, ಇವಾಗ ಜ್ಞಾಪಕ ಬಂತು ಮಿಡ್ಲಿಸ್ಕೂಲಿನ ಪದ್ಯ.

"ಹೆಣ್ಣಲ್ಲವೇ ಪೆತ್ತವಳು ಹೆಣ್ಣಲ್ಲವೇ
ಪೊರೆದವಳು?.."

ರಾವ್: (ಮಧ್ಯೆ ಬಾಯಿ ಹಾಕಿ) ಹ್ಞೂ ಹೆಣ್ಣಲ್ಲವೇ Emergency declare ಮಾಡಿದ್ದವಳು? (ಸ್ವಲ್ಪ ತಡೆದು) ನೋಡು ನಮ್ಮ poor ಇಂದಿರೆಗೆ, ಸಂಜಯನಂತಹ liability ಬಿಟ್ಟು ಅವಳ ಘರಾನೇ ಜೋಡಿಯಾಗಿರೋ ಒಂದು ಮಗಳಿದ್ದಿದ್ರೆ, ಇವತ್ತಿನ ದಿನ ಕೋರ್ಟ್ಗಳಿಗೇಕೆ ಹೋಗ್ಬೇಕಾಗಿತ್ತೇ ಅವರುಗಳು. ಮೂರನೇ ಪೀಳಿಗೆಗೂ ನೆಹರೂ ಸಂತತಿ ಮುಂದು ವರೀತಾ ಇದ್ದಿಲ್ವೆ ಡಿಯರ್ ?

ಮಾಲ್ತೀ: ಹ್ಞೂರೀ, ಏನೋ ತಾಯಿ ಮಗ ಇಬ್ರೂ ಸೋತು ಕೂತಿದಾರೇಂತ ಎಷ್ಟು ತಮಾಷೆ ಮಾಡ್ತಿದೀರಿ. ಕೆಲವೇ ದಿನಗಳ ಹಿಂದೆ, ಸ್ವಲ ಹೆಚ್ಚುಕಮ್ಮಿ ಮಾತಾಡಿದ್ರೆ, passport-ನೇ impound ಮಾಡ್ಬಿಟ್ಟಾರೂಂತ ಹೆದ-ರ್ಕೊಂಡು, ಬಾಯಿಗೆ ಬೀಗ ಹಾಕ್ಕೊಂಡು ಕೂತಿದ್ರಿ.

ಆ ಸಂಜಯ ಗಾಂಧೀನ ಕುಚೋದ್ಯ ಮಾಡೋದ್ಯಾಗಿರ್ಲಿ, ನೀವೇನಾದ್ರೋ Emergency ಸಮಯದಲ್ಲಿ Indiaಗೆ ಹೋಗಿ [illegible] ಲಕ್ಷಾಂತರ ಮಂದಿ ಅಸಹಾಯಕ ಸ್ತ್ರೀಯರಿಗೆ ದೇವರ ರೂಪದಲ್ಲಿ ಬಂದಿದ್ದ ನಮ್ಮ ಕುಮಾರ ಸಂಜಯ. ಅವನಿಗೋಟು ಕೊಡೋದು ಬಿಟ್ಟು… ನಮ್ಮ ದೇಶದ ಜನಗಳಿಗೆ ಬುದ್ಧಿ ಇದೇಂತ ಯಾರು ಹೇಳ್ತಾರೆ ?

ರಾವ್: ಹೋಗ್ಲೀ ಬಿಡು ಡಿಯರ್, ಯಾರು [illegible]ಟು ಕೊಡದೇ ಇದ್ರೂ ನಮ್ಮ ಕನ್ನಡ ಜಾಂಪವಂತರಿದ್ದಾರಲ್ಲ ಅವರ ದಯದಿಂದ ಇಂದಿರಾ ಮಾತೆಯ ಪುನರಾಗಮನವಾಗತ್ತೆ. ನಿನ್ನ ಮೂರನೇ ಮಗು ಹೆಣ್ಣಾದ್ರೆ ಇಂದಿರಾ ಅಂತ ಹೆಸರಿಟ್ಟುಬಿಡೋಣ—ಒಂದು ವೇಳೆ ಗಂಡಾದ್ರೆ ಸಂಜಯ್ ಅಂತ ಇಟ್ರಾಯ್ತು. ಸಮಾಧಾನ ತಾನೆ?

ಮಾಲ್ತೀ: ನನ್ನನ್ನ ಸಮಾಧಾನ ಪಡಿಸೋಕೆ ಹೀಗೆ ಮಾತಾಡ್ಬಿಟ್ರಾಯ್ತೇನು? ನಾಳೆ ಇನ್ನೊಂದು ಕನ್ಯೆ ಕೈಯಿಗೆ [illegible] ಮಕ್ಕಳನ್ನ ಸಾಕೋದು ಹುಡುಗಾಟಾ ಅಂದು

ಕೊಂಡ್ರಾ? ಆಗ್ಲೇ ಆ ದೊಡ್ಡದು ಬೆಳೆದು ನಿಂತಿರೋದನ್ನ ನೋಡಿದ್ರೇ ಭಯವಾಗುತ್ತೆ. ಸ್ವಲ್ಪ ನಾಚಿಕೆ ಅನ್ನೋದೇ ಇಲ್ವೇ ಅದಕ್ಕೆ, ಒಂದೇ ಸಮ ಕುಣಿದು ಕುಪ್ಪಳಿಸುತ್ತೆ. ನಾಳೆ, ಬೇರೆ ಅಮೆರಿಕನ್ ಹುಡುಗೀರ ಥರಾ ತಾನೂ ಡೇಟೂ ಗೀಟೂ ಮಾಡುಕ್ಕೆ ಶುರು ಮಾಡಿದ್ರೆ ಏನ್ರೀ ನಮ್ಮ ಗತಿ?

ರಾವ್: ಅಲ್ಲಾ ಡಿಯರ್, ಈ ದೇಶದಲ್ಲಿರೋ ಭಾರತೀಯರಿಗೆ ಹೆಣ್ಣು ಮಕ್ಕಳ್ನ ಸಾಕೋಕೆ ಕಷ್ಟಾಂತ. ಬರೀ ಗಂಡಗಳೇ ಹುಟ್ಟೋಕ್ ಸಾಧ್ಯವೆ? ಈ ದೇಶಕ್ಕೆ ಬಂದು, ಇಲ್ಲಿರೋ ಡಾಲರ್‌ಗಳನ್ನೆಲ್ಲಾ ದೋಚ್ಕೊಂಡು, ಹೊಳೇ ನರಸೀಪುರದಲ್ಲೋ, ಸಕಲೇಶಪುರದಲ್ಲೊ ಹಾಯಾಗಿದ್ದುಬಿಡ್ತೀನಿಂದ್ರೆ ಆಗುತ್ತೇ? ಇಲ್ಲೀ ಸುಖ, ಭಾರತದ ಭದ್ರತೆ ಎರಡೂ ಸಿಕ್ಕೋದು ಕಷ್ಟ ನೋಡು. ನೀನು ಕೂಡಿಡೋ ಒಂದೊಂದು ಸಾವಿರ ಡಾಲರಿನಿಂದ ಕೊನೇ ಪಕ್ಷ ಒಂದೊಂದಾದ್ರೂ ಭಾರೀ ಸಮಸ್ಯೆ ಉದ್ಭವಿಸ್ದೇ ಇರಲ್ಲ.

ಮಾಲ್ತೀ: ಬಿಡಿ ಬಿಡಿ ನಿಂ ಲೆಕ್ಚರ್ ಸಾಕು. ನಿಂ ಕೈಲಿ ಸುಖ ದುಃಖ ತೋಡಿಕೊಂಡ್ರೇನೂ ಸುಖವಿಲ್ಲ. ನೋಡಿ ಈ ಸಾರಿ. ನ್ಯೂಯಾರ್ಕ್ ಮಹಾಲಕ್ಷ್ಮಿ ಬದ್ಲು ಪಿಟ್ಸ್‌ಬರ್ಗಿನ ವೆಂಕಟರಮಣ ಕಣ್ಬಿಟ್ರೆ, ಗಂಡಾದ್ರೂ ಆಗಬಹುದು. ಹಾಗೇ ನಾದ್ರೂ ಗಂಡೇ ಆದ್ರೆ. ಮೊದಲ್ನೇ ಸಾರಿ ಮುಡೀನಾ ಪಿಟ್ಸ್‌ಬರ್ಗ್‌ನಲ್ಲೇ ಮಾಡಿಸ್ತೀನೀಂತ ಹರಕೆ ಮಾಡ್ಕೋಂಡಿದೀನಿ.

ರಾವ್: ಇದೇನಿದು ಡಿಯರ್, ಭಾರತದಿಂದ ಹಿಂದೂ ಜನಗಳನ್ನ ಕರಕೊಂಡುಬಂದಾಯ್ತು, ಹಿಂದೂ ಧರ್ಮ ಕರಕೊಂಡುಬಂದಾಯ್ತು. ಹಿಂದೂ ದೇವಾಲಯ ಆಯ್ತು. ಇನ್ನು ಹಿಂದೂ ಧರ್ಮದ ಎಲ್ಲಾ ಮೂಢ ನಂಬಿಕೆಗಳನ್ನೂ ಕರಕೊಂಡು ಬರ್ತೀಕೊಂತೀಯೇನು? ಮುಡಿ ಅಂತೆ ಮುಡಿ! ಕುಡಿ ಹುಟ್ಟಕ್ಕೆ ಮುಂಚೆ ಮುಡಿ ಕೊಟ್ರಂತೆ! ನಡೆ ನಡಿ. ಎದ್ದು ಮುಡಿ ನಾವೂ ಬಿಟ್ಕೋ. ಈ ಗಡಿಬಿಡೀಲಿ ವಿಜಯಾ ಕೈಯ್ಯಿನ ಬಿಸಿಬೇಳೆ ಹುಳಿಯನ್ನ ಮರ್ತೇಬಿಟ್ಟಿರೋ ಹಾಗಿದೆ.

ಮಾಲ್ತೀ: ಹೌದೂರೀ, ಈ ಕನಸಿನ ಗಲಾಟೇಲಿ ಎಲ್ಲಾ ಮರ್ತೇಹೋಗಿತ್ತು. ಘಮಘಮಾದ ಬೇಗ್ಗ ಹೋಕೆ ಬಿಸಿ ಬೇಳೆ ಭಾತ್‌ಗಿಂತ ಇನ್ನೇನಿನ್ಸೆಂಟಿವ್ ಬೇಕು ಹೇಳಿ?

(ಪಾಶ್ಚಿಮಾತ್ಯ ಸಂಗೀತ ಮುಂದುವರಿದು ದೃಶ್ಯ ಬದಲಾಯಿಸುತ್ತದೆ.)

(ಮೂರ್ತಿ ಮನೆ. ಹಿನ್ನೆಲೆಯಲ್ಲಿ ದಾಕ್ಷಿಣಾತ್ಯ ಭಾರತೀಯ ಸಂಗೀತ ಮೆಲ್ಲಗೇ ಕೇಳಿ ಬರುತ್ತದೆ. ರಾವ್ ಮತ್ತು ಮಾಲ್ತೀ ಪ್ರವೇಶ. ವಿಜಯ ಸ್ವಾಗತ ಬಯಸುವಳು. ಗಂಟೆ ಬಾರಿಸಿದ ಮತ್ತು ಬಾಗಿಲ ತೆರೆದ ಸದ್ದು.)

ವಿಜಯ: ಬನ್ನಿ ಬನ್ನಿ ಚೆನ್ನಾಗಿದೀರಾ

ರಾವ್: ನಮಸ್ಕಾರ. ನುಸ್ಕಾರ..., ಚೆನ್ನಾಗಿದೀರಾ? ಎಲ್ಲೀ ರಾಯರು?

ವಿಜಯ: ಒಳಗಡೇ ಇದಾರೆ ಬನ್ನಿ (ಗಂಡನನ್ನು ಕುರಿತು) ಕೇಳಿದ್ರಾ, ಮಾಲ್ತೀ ಅವರು ಬಂದಾಯ್ತು. (ಸ್ವಲ್ಪ ತಡೆದು ಮಾಲ್ತಿ ಕುರಿತು). ಮಾಲ್ತೀ, ಚೆನ್ನಾಗೇ ಕಾಣಿಸ್ತಾ ಇದೀರಿ ಹೊಟ್ಟೆ. ಹೊಟ್ಟೇ shape ನೋಡಿದ್ರೆ ಗಂಡೇ ಇರಬಹುದು ಅನ್ನಿಸತ್ತೆ)

ಮಾಲ್ತೀ: ಹಾಗೇಂತೀರಾ (ಅಚ್ಚರಿ! ನಿಂ ಬಾಯಿಗೆ ಮಿಠಾಯಿ. ಬೆಳಗ್ಗೇ ತಾನೇ ಇವರ ಕೈಲಿ ಹೇಳ್ತಾ ಇದ್ದೆ ಪಿಟ್ಸ್‌ಬರ್ಗ್ ವೆಂಕಟರಮಣ ಕಣ್ಬಿಟ್ರೇಂತ.

ಮೂರ್ತಿ: (ಪ್ರವೇಶ) ನಮಸ್ಕಾರಾ ರಾವ್. Long time no sec! ಎಲ್ಲೀ ಮಕ್ಕಳಿಲ್ಲೀ?

ರಾವ್: ಅವರಿಬ್ರೂ ಗೊತ್ತಲ್ಲ ನಿಮ್ಗೆ. ಏನೋ ತಂ ತಂ ಕೆಲ್ಸದಲ್ಲಿ busy ಆಗಿದ್ರು. ವಿಜಯಾ ಕೈಯ್ಯಿನ ಬಿಸಿಬೇಳೆಭಾತು. ಹಾಗಿರತ್ತೆ ಹೋಗಿ ರತ್ತೀನಿಂತೆಲ್ಲಾ ಏನೇನೋ ಪೂಜಿ ಮಾಡಿದ್ಲು

ಮಾಲ್ತಿ: ಆದ್ರೂ Hamburger ಚಪ್ಪರಿಸ್ಕೊಂಡ್ತಿನ್ನೋ ಈ ಹುಡುಗನ್ನೇ


ನಮ್ಮ ನೆರೆಮನೆಯವರು, ಇಡೀ
ಮನೆಗೆ ಇಮಲ್ಶನ್ ಪೇಂಟ್
ಮಾಡಿಸಿದರು; ನಾವೂ ಮಾಡಿಸಿದೆವು—
ಆದರೆ, ನಾವು ಮಾತ್ರ 20% ಕ್ಕಿಂತ
ಹೆಚ್ಚು ಹಣ ಉಳಿಸಿದೆವು.
ಸುಪರ್ ಡೆಕೋಪ್ಲಾಸ್ಟ್—
ಉತ್ತಮ ಇಮಲ್ಶನ್ ಫಿನಿಶ್
ತರುವ ಜಾಣ ಉಪಾಯ.
DECOPLAST
"ಮೋಜು ಕೇಳಿ. ನಮ್ಮ ಹಾಗೂ ನಮ್ಮ
ನೆರೆಯವರ ಮನೆ ಅಷ್ಟೇ ದೊಡ್ಡವಿವೆ. ಅಷ್ಟೇ ಅಂದರೆ—
120 ಚದುರ ಮೀಟರ್ ಇವೆ. ಅವರು ಯಾರನ್ನೂ ಕೇಳದೇ
ಪೇಂಟ್ ಮಾಡಿಸಿದರು. ನಾವು ಸ್ವಲ್ಪ ಚೌಕಶಿ ಮಾಡಿ
ಪೇಂಟ್ ಮಾಡಿಸಿದೆವು. ಅವರು ಹೆಚ್ಚು ಹಣ ವೆಚ್ಚ
ಮಾಡಿದರು. ನಾವು ಮಾತ್ರ 20% ಕ್ಕಿಂತ ಹೆಚ್ಚು
ಉಳಿತಾಯ ಮಾಡಿದೆವು. ಬಲ್ಲವರಿಂದ ಕೇಳಿದ್ದರಿಂದಲೇ
ನಾವು ಸುಪರ್ ಡೆಕೋಪ್ಲಾಸ್ಟೇ ಬೇಕು ಅಂದದ್ದು."
ಸುಪರ್
ಡೆಕೋಪ್ಲಾಸ್ಟ್
ಏಶಿಯನ್ ಪೇಂಟ್ಸ್

[illegible] ಹೇ! [illegible] ... ಬಟ್ಟೇ [illegible] ನೋಡಿ. [illegible]... ಇನ್ನೇನು ಸಮಾಚಾರ?

ಮೂರ್ತಿ: ನಿಧಾನಕ್ಕೆ ಮಾತಾಡೋಣ ಬನ್ನಿ, ಈವತ್ತು ಲಾನ್ ಮೋ ಮಾಡಿ ಹೊಟ್ಟೇ ಚೆನ್ನಾಗಿ ಕಾದಿದೆ. ನಂಗೆ ಹೊಟ್ಟೇ ಬಂದೀತು ಅಂತ ಸನ್ನಾಕೆ ನಂಗೆ ಬ್ರೆಕ್ ಫಾಸ್ಟ್‌ಗೇ ನಾಮ ಹಾಕಿದಾಳೆ. ಸೀದಾ ಊಟಾನೇ ಶುರೂ ಮಾಡಿದ್ರಾಯ್ತು... ಏನಂತೀ ವಿಜಯಾ?

ವಿಜಯ: OK. Everything is ready. ಹುಡುಗರ್ಗೆಲ್ಲಾ lunch ಆಯ್ತು.

ರಾವ್: ಸರೀ ಮತ್ತೆ ನಡೀರಿ, ನಾವೂ ರೆಡೀನೇ (ಡೈನಿಂಗ್ ಟೇಬಲ್ ಸೆಟ್ ಮಾಡುವ ಸದ್ದು-ಪಾತ್ರೆ ಸೌಟು ಇತ್ಯಾದಿ)

ವಿಜಯ: ಸರಿಯಾಗಿ ತೊಗೊಳ್ಳೀ ಮಾಲ್ತೀ-ಕಾರಾ ಜಾಸ್ತೀ ಇಲ್ಲ ತಾನೇ?

ರಾವ್: ಹೌದೂ dear, ಸರಿಯಾಗಿ ತೊಗೋ. Remember, you have to eat for two!

(ಎಲ್ಲರೂ-ನಗು)

ಮೂರ್ತಿ: ಬಿಸಿ ಬೇಳೆ ಭಾತು ಪೊಗಸದಸ್ತಾ-ಗಿದೆ ವಿಜಯಾ, ಪರ್ವಾಗಿಲ್ಲ...

ರಾವ್: ಈ ಮಜ್ಜಿಗೇ ಹುಳಿ ಅಂಬೋಡೆ ಕಾಂಬೀನೇಷನ್ ತಿಂದು ಬಹಳಾ ದಿನಾ ಆಗಿತ್ತು... ಮಾಲ್ತೀ; ಒಳ್ಳೇ ಪಳಗಿದ ಕೈಯ್ಯಿನ ಅಡಿಗೆ. ಈ ಥರಾ ಊಟ ಸಿಕ್ಕಿದ್ರೆ, ಒಳ್ಳೇ ಜುಟ್ಟ ನಿಗರ್‍ಸ್ಕೊಂಡು ಹೊಡೆ-ಯೋಲ್ವೇ ಜನ? ಇಲ್ಲಿ, ಸ್ವಲ್ಪ ಮಜ್ಜಿಗೇ ಹುಳಿ pass ಮಾಡಿ.

ಮಾಲ್ತೀ: [illegible] ನೀವೇ [illegible] ಥರಾ ಆಡ್ತಾ ಇದೀರಿ? ಮೊನ್ನೇ ತಾನೇ ನ್ಯೂಮಾರ್ಕಿಂದ ಬೂದುಗುಂಬುಳಕಾಯಿ ತಂದು, ನಂಗಿಂತ ಹೆಚ್ಚಾಗಿ ನೀವೇ ಬಾಯಿಕೆ ಸಂಕಟ ತೋರ್‍ಸಿ ಮಜ್ಜಿಗೇ ಹುಳಿ ಮಾಡಿಸ್ಕೊಂಡು



...ಪಾವಳಿ.
...ಹಸ್ರ ದೀಪಗಳ, ಸಹಸ್ರ ಶಬ್ದಗಳ.
...ಮಿತ ಆನಂದೋತ್ಸಾಹಗಳ
...ತ್ಯ ನೂತನ ಹಬ್ಬ.
...ಬವು ಹೊಂಗನಸುಗಳ ಆವಿಷ್ಕಾರ.
...ಬವು ಹಳೆಯ ನೆನಪುಗಳ ಪುನರುತ್ಥಾನ.
...ತ್ಮೀಯ ಕಾಣಿಕೆಗಳಿಗೆ ಇದು ಸಕಾಲ.
...ೀಯ ದೀಪಾವಳಿಯಂದು

ಎಚ್ ಎಮ್ ಟಿ ಕೈಗಡಿಯಾರ ನೀಡಿರಿ.
ಪುರುಷರಿಗೆ, ನಮ್ಮಿಂದ ಇನ್ನಷ್ಟು ಹೊಸ ಮಾದರಿಗಳು.
ಸ್ತ್ರೀಯರಿಗೆ, 17-ಜ್ಯೂಯೆಲ್‌ಗಳ ಅನೇಕ,
ಅನುಪಮ ಕಲಾಕೃತಿಗಳು.
ಎಚ್ ಎಮ್ ಟಿ ಯು ಅತ್ಯುನ್ನತ ಸಂಪ್ರದಾಯಗಳಿಗೆ
ಅನುಗುಣವಾದ ತಯಾರಿಕೆಗಳು.
ನಿಮ್ಮ ಆತ್ಮೀಯರಿಗೆ ತಕ್ಕ ಉಡುಗೊರೆ.



ಮಾರ್ಕೆಟಿಂಗ್ ಡಿವಿಜನ್

hmt

ರಾಷ್ಟ್ರದ
ಸಮಯಪಾಲಕರು.

...ಚ್ ಎಮ್ ಟಿ ಕೈಗಡಿಯಾರ–ಮಿತುಮಾನಕ್ಕೊಪ್ಪುವ ಬಳುವಳಿ.

ತಿಂದಿದೀರಿ! ಎಷ್ಟೋ ದಿವ್ಸದಿಂದ ಮಜ್ಜಿಗೇ ಹುಳೀನೇ ತಿಂದಿಲ್ಲಾ ಅನ್ನೋ ಹಾಗೆ ಆಡ್ತಿದೀರಾ.

ರಾವ್: ನಾನ್ಹೇಳಿದ್ದು ಮಜ್ಜಿಗೇ ಹುಳೀ ಅಂಜೋಡೇ combination ಅಂತ. (ಎಲ್ಲರೂ–ನಗು)

ವಿಜಯಂ: ಹೋಗ್ಲೀ ಬಿಡಿ ಮಾಲ್ತೀ, ಪಾಪ ಪಸಿದ ಹಾರುವ ತೃಪ್ತಿಯಾಗೋ ಹಾಗೆ ಊಟ ಮಾಡ್ಲಿ, ನೀವ್ಯಾಕೆ ಅಡ್ಡಿ ಬರ್ತೀರಿ... (ಸ್ವಲ್ಪ ತಡೆದು) ಅಂದ್ಹಾಗೆ, ಹೆಸರು–ಗಳನ್ನೇನಾದ್ರೂ ಚೂಸ್ ಮಾಡಿದೀರಾ– for the new arrival ?

ಮಾಲ್ತಿ: ಅಯ್ಯೋ ಬಿಡೀ ವಿಜಯಾ, ಇನ್ನೊಂದು ಕಾಳೀನೋ ದುರ್ಗೀನೋ ಹುಟ್ಟುತ್ತೆ, ಅದಕ್ಕೀಗ್ಲಿಂದ್ಲೇ ಹೆಸ್ರು ಹುಡ್ಕೋ-ಕೇನಾತ್ರ?

ಮೂರ್ತಿ: ಇದೇನಮ್ಮ ಹೀಗಂತೀರಿ ಮಾಲ್ತೀ ದೇವಿ ? ಸಾಕ್ಷಾತ್ ಗಾಯತ್ರೀನೋ ಸಾವಿತ್ರೀನೋ ಸರಸ್ವತೀನೋ ಹುಟ್ತಾಳೇನ್ನಿ; ಹೆಣ್ಮಕ್ಕಳ್ನ ಹೆತ್ತು, ಹೊತ್ತು, ಸಾಕಿ, ಸಲಹಿ, ಕನ್ಯಾದಾನ ಮಾಡೋಕೆ ಪಡಕೊಂಬಂದಿರ್ಬೇಕೂಮ್ಮ.

ಮಾಲ್ತೀ: ಒಂದಾದ್ರೆ ಪುಣ್ಯ, ಎರಡಾದ್ರೆ, ಹ್ಞೂ, ಏನೋ ಪರ್ವಾಗಿಲ್ಲ, ಮೂರ್ಮೂರು ಕನ್ಯಾದಾನ! ನಮ್ಕೈಲಾಗಲ್ಲಪ್ಪ.

ವಿಜಯಂ: ಈ ಭಗವಂತ ಅನ್ನಿಸ್ಕೊಳೋನೂ, ಒಂದೇ ಕಡೇ ಬರೀ ಗಂಡುಗಳ ಪಾಳ್ಯ, ಇನ್ನೊಂದ್ಕಡೇ ಬರೀ ಪ್ರಮೀಳಾ ರಾಜ್ಯ ಮಾಡಿ, ಕೊಡಿಸೋ ಬದ್ಲು, ಒಂದದೂ, ಒಂದಿದೂ ಅನ್ನೋ ಹಾಗೆ ಡಿವೈಡ್ ಮಾಡಿ–ಡ್ಬಾರ್ದೇ?

ರಾವ್: ಅದರ್ಬದ್ಲು, ಒಂದು ದೊಡ್ಡ slot machine ಇಟ್ಬು ಬಿಟ್ಬು ಒಂದು ಕಾಯಿನ್ ಹ್ಯಾಂಡಲ್ನ ಒತ್ತಿದ್ರೆ ಒಂದು ಗಂಡು ಉದ–ರ್ಬೇಕು, ಹೆಣ್ಣೂಂತ ಲೇಬಲ್ಲಿರೋ ಹ್ಯಾಂಡಲ್ ಅದ್ಮಿದ್ರೆ ಒಂದು ಹೆಣ್ಣು ಉದರ್ಬೇಕು. ಆವಾಗ ನೋಡಿ, ಯಾವ ತಂಟೇನೂ ಇರಲ್ಲ. ಬಸಿರಿ ಬಾಣಂತೀ ಯಾವ ರಾದ್ಧಾಂತಾನೂ ಇರೊಲ್ಲ, ಬೇಕಾದೋರು–ಬೇಕಾದ್ದನ್ನ–ಬೇಕಾ–ದಷ್ಟು ಅ್ಞ, ಏನಂತೀರಿ?
(ಎಲ್ಲರೂ–ನಗು)

ಮಾಲ್ತೀ: ಹ್ಞ. ಎರಡೂ ಹೇಳ್ದೆ ಇದ್ದೋರು ಯಾವ ಹ್ಯಾಂಡಲ್ನೂ ಅಮುಕ್ದೇ ಎಷ್ಟೊಂದು ಕಾಯ್ನಿನ್ ಸೇವ್ ಮಾಡೋಬ್ಹುದು... ಅಲ್ವೇ?
(ಎಲ್ಲರೂ–ನಗು)

ವಿಜಯಂ: ನಮ್ಮವ್ರಿಗೆ ಇತ್ತೀಚೆಗೆ ಒಂದು ದೊಡ್ಡ ಹುಚ್ಚೇ ಹಿಡಿದುಬಿಟ್ಟಿದೆ ನೋಡಿ. ಅವ್ರು ಕನ್ಯಾದಾನ ಮಾಡ್ಲೇಬೇಕಂತೆ. ಇಲ್ದೇ ಇದ್ರೆ, ಜೀವನಾನೇ ನಿರರ್ಥಕ ಹಾಗೇ ಹೀಗೇಂತ ಶುರೂ ಮಾಡ್ಕೊಂಡಿದಾರೆ.

ರಾವ್: ನಿಮ್ಮವ್ರಿಗೆ ಆ ಚಿಂತೆ, ನನ್ನವಳದ್ದು ಇನ್ನೊಂಥರಾ. ಇರೋ ಎರಡರ ಜತೇಗೆ ಇನೊಂದ್ಕನ್ಯಾಮಣಿ ಕೈಗೆ ಬಂದ್ರೇನ್ಲತೀಂತ!

ಮಾಲ್ತಿ: (ಹಂಗಿಸುತ್ತಾ) – ಪರ್ವಾಗಿಲ್ಲಾರಿ, "ಗಂಡಾಗ್ದೇ ಇದ್ರೆ ನನ್ನ ವಂಶ ಮುಂದಕ್ಹೋಗಲ್ಲಾ", "ಅಪುತ್ರಸ್ಯ ಗತಿರ್ನಾಸ್ತಿ" ಅಂತ ಹೇಳಿ ಹೇಳಿ, "ಬರೀ ಹೆಣ್ಣುಗಳನ್ನೇ ಹೆತ್ಕೊ–ಟ್ಬಿಟ್ಯೋ ಇಲ್ವೊ" ಅಂತ ನನ್ನ ಮೊದಲಿ ಮೊದಲ್ಲೀ, ನಂಗೆ ಒಂಥರಾ complex ಏ develop ಆಗೋ ಹಾಗೆ ಮಾಡಿದ್ದು ಅಲ್ದೇ, ಈಗ ನೋಡಿದ್ರೆ, ಮಹಾ dispa–ssionate ಆಗಿ ಸಂಯಮ ತೋರ್ಸೋದನ್ನ ನೋಡಿದ್ರೆ–ಬೇರೆ ಜನ ನಂಬೇಬಿಡ್ಬೇಕು ನಿಮ್ಮನ್ನ.

ರಾವ್: Come on dear, ಮಾತಾಡೋವಾಗ ಏನೇ ಹೇಳಿದ್ರೂನೆ, I am not a male chauvinist! ಏನೋ ಗಂಡಸ್ರು, ಎಷ್ಟಾದ್ರೂ, ಹೆಂಗಸ್ರಿಗಿಂತ some what superior ಅನ್ನೋ ಸತ್ಯಾಂಶಾನ ಒಂದೊಂದ್ಸಾರಿ ಪ್ರತಿಪಾದಿಸ್ತೀನ್ಯೇ ವಿನಃ, ಹೆಣ್ಣುಗಳನ್ನ ಕಂಡ್ರೆ ನಂಗಿರೋ ಪ್ರೀತಿ... ಪ್ರೇಮ...

ಮಾಲ್ತಿ: ನಂಗೊತ್ತು – ನಿಮ್ಮ ಹೆಣ್ಣುಗಳ ಮೇಲಿನ ಪ್ರೇಮ. ಸರ್ವೇ ಮಾಡೋ ನೆಪದಲ್ಲಿ ಮಹಾರಾಣೀ ಕಾಲೇಜಿನ ಗೇಟಿನ ಆಚ್ಗೇ

ಮಾಡ್ತಾ, ಕಾಲ ಕಳೀತಾ ಇದ್ದದ್ದು ಜ್ಞಾಪಕ ಇಲ್ವೇನು?

ರಾವ್: (ಹಲ್ಕಿರೀತಾ) Come on dear, ಯಾವುದೋ ತಾರುಣ್ಯದ ಚೇಷ್ಟೆಗಳನ್ನೆಲ್ಲಾ ಇವಾಗ ಎತ್ತಾಡೋ ಅಗತ್ಯ ಏನಿದೆ? (ಸ್ವಲ್ಪ ತಡೆದು) ನನಗೇನೋ ಇನ್ನೊಂದು ಹುಡುಗೀ ಆದ್ರೂ ಬೇಸ್ರಾ ಇಲ್ಲಪ್ಪಾ.

ಮೂರ್ತಿ: ಈ ವಯಸ್ಸಿನಲ್ಲಿ ನಿಮಗ್ಯಾರ್ರೀ ಇನ್ನೊಂದು ಹುಡುಗೀ ಕೊಡೋಕೆ ತಯಾರಾಗಿರೋರು?

(ಎಲ್ಲರೂ–ನಗು)

ವಿಜಯ: ನೋಡಿ ಈ ಗಂಡಸರ ಶೈಲೀನೆ ಹೀಗೆ, ಇನ್ನೊಂದ್ಹುಡುಗೀ ಆದ್ರೂ ಬೇಸ್ರಾ ಇಲ್ಲಾಂತಾರೇ ಹೊರ್ತು, ಸಂತೋಷಾ ಆಗತ್ತೇಂತ ಹೇಳಲ್ವಲ್ಲ. ಗಂಡಸ್ ಜಾತಿ egoನ, satisfy ಮಾಡೋಕೋಸ್ಕರ ಹೆಂಗಸರು ಒಂದೊಂದು ಮಗೂಗೂ ಎರಡೆರಡು ವರ್ಷ ಮನೇಲಿ ಕೊಳೀತಾ ಬಿದ್ದಿರ್ಬೇಕೇನೊ? ಈಗ್ನೋಡಿ ನಮ್ಮೆಜಮಾನ್ರು ಕನ್ಯಾದಾನದ crazeಗೋಸ್ಕರ ನಾನು ಎರಡು ವರ್ಷ ಮನೇಲಿ prisnor ಆಗ್ಬೇಕು.

ರಾವ್: ಅರ್ಥವಾಗ್ಲಿಲ್ಲ – ನಿಮ್ಮೆಜಮಾನ್ರು ಕನ್ಯಾದಾನ ಮಾಡೋಕು ನೀವೆರಡು ವರ್ಷ ಮನೇಲ್ಕೂತಕೊಳೊಕ್ಕೂ ಏನು ಸಂಬಂಧ?

ವಿಜಯ: ಇನ್ನೇನ್ಮತ್ತೆ? ಇನ್ನೊಂದು ಸಾರ್ತಿ ನಾನು ಮಗು ಹೊತ್ತು, ಹೆತ್ತು, ಆ ಮಗು ಹೆಣ್ಣಾಗಿ, ಅದು ಬೆಳೆದು ದೊಡ್ಡದಾಗಿ, ಇವರು ಅದಕ್ಕೊಂದು ಮೂಗ್ದಾರಾ ಹಾಕಿ, ಯಾವುದೋ ಒಂದು ಬಡ ಬ್ರಾಹ್ಮಣಂಗೆ ದಾನ ಮಾಡಿ, ಕನ್ಯಾದಾನದ ಫಲ ಪಡಕೊಂಡು...

ಮೂರ್ತಿ: ಲೇ ಲೇ... ಲೇ ಸ್ವಲ್ಪ ಬ್ರೇಕ್ಹಾಗೇ. ಇಷ್ಟಿಷ್ಟುದ್ದನೇ scentence ಗಳನ್ನ construct ಮಾಡ್ತಾ ಹೋದ್ರೆ, ನಿನ್ಮಾತು ಮುಗಿಯೋ ಹೊತ್ತಿಗೆ ಯಾವ ವಿಚಾರ ಹೇಳೋಕೆ ಶುರೂ ಮಾಡಿದೇ ಅನ್ನೋದೇ ಮರ್ತುಹೋಗತ್ತೆ. ನೋಡಿ ರಾವ್, ಮಕ್ಕಳು–ಮರಿ–ಬಸ್ರೀ–ಬಾಣಂತಿ–ಅನ್ನೋ topic ಬಂದ ತಕ್ಷಣ ನನ್ನಾಕೆ ಸ್ವಲ್ಪ nervous ಆಗಿ react ಮಾಡ್ತಾಳೆ.

ರಾವ್: ಅವರು react ಮಾಡಬೇಕಾದ್ದು ನ್ಯಾಯಾ ತಾನೆ. ಎಷ್ಟಾದ್ರೂ ಹೊರೋರು ಹೆರೋರೂ ಅವರೇ ತಾನೆ? (ಸ್ವಲ್ಪ ತಡೆದು) ಅಂದ್ಹಾಗೆ, ಒಂದು ವೇಳೆ, ಈ ಬಸ್ರೀ–ಬಾಣಂತೀ ಇತ್ಯಾದಿ steps ನೆಲ್ಲಾ skip ಮಾಡಿ still, resultsನ achieve ಮಾಡೋಂಥ ಒಂದು ಮಾರ್ಗ suggest ಮಾಡಿದ್ರೆ...

ಮೂರ್ತಿ + ವಿಜಯ: ಏನಪ್ಪಾ ಆ ಮಾರ್ಗ?

ರಾವ್: Very simple–ಒಂದು ಹೆಣ್ಮಗೂನ adopt ಮಾಡ್ಕೊಳ್ಳಿ...

ಮೂರ್ತಿ: ಛೆ ಛೆ, ಅದೆಲ್ಲಾ ಆಗದ ವಿಷಯಾ ರಾವ್.

ರಾವ್: ಯಾಕ್ಹೀಗಂತೀರಾ ಮೂರ್ತಿ? ನನ್ನ ಬಾಸೂ, ಅದೂ ಯೆಹೂದೀ ಬೇರೆ, ಇಂಡಿ



"ದೇಶದ ಪ್ರಗತಿಗಾಗಿ ವಿಧಾನಸಭೆಯಲ್ಲಿ ಹೊಡೆದಾಡಿ ಬಂದೆ ಕಣೇ !!"

ಯಾದಿಂದ ಒಂದು ಅನಾಥ ಮಗೂನ ಕರೆಸ್ಕೊಂಡು adopt ಮಾಡ್ಕೊಂಡಿದಾನೆ. ನೀವ್ಯಾಕೆ ಹೀಂಗತೀರಾ?

ಮೂರ್ತಿ: ಯೆಹೂದೀನೇ ಸರಿ ಬಿಡಿ, ಲೆಕ್ಕ ಹಾಕ್ದಾಂತ ಕಾಣತ್ತೆ, ಬಸರ್ತನ, ಬಾಣಂತನ, ಆಸ್ಪತ್ರೆ, ಡಾಕ್ಟ್ರು, ಖರ್ಚು, ತಲೆಸೋವು ಎಲ್ಲಾ avoid ಮಾಡಿ, cheap ಆಗಿರೋ ಒಂದು ಮಾರ್ಗ ಹುಡುಕಿರಬೇಕು! (ಎಲ್ಲರೂ ನಗು)

ರಾವ್: ಜೋಕ್ ಮಾಡೋದಿರ್ಲಿ ಮೂರ್ತಿ, ಪರಕೀಯರ ಮಕ್ಕಳನ್ನ, ಅದೂ ಪರದೇಶದ ಮಕ್ಕಳನ್ನ ಕರ್ಕೊಂಡು ಸಾಕಿ ಸಲಹಿ ಮಾಡೋ- ರಿರೋವಾಗ, ನಿಮ್ಮ ನೆಂಟರಿಷ್ಟರ ಪೈಕೀ ಒಂದು ಹೆಣ್ಣುಗೂಸ ಕರ್ಕೊಂಡು ಬಂದು ಬೆಳೆಸಿ ಕನ್ಯಾದಾನ ಮಾಡಿ ಪುಣ್ಯ ಕಟ್ಕೋ- ಬಹುದಲ್ಲ !

ಮೂರ್ತಿ: ಉಪದೇಶ ಕೊಡೋದು ಸುಲಭ ಸ್ವಾಮಿ! ನೀವು, ವಂಶೋದ್ಧಾರಕ ಹುಟ್ಟ- ಲ್ಲಾಂತ ಒಂದೇ ಸಮ ಪರಿತಪಿಸುತ್ತಾ ಇದ್ದೀರಲ್ಲಾ, ನೀವ್ಯಾಕೆ ಒಂದು ಗಂಡು ಮಗೂನ adopt ಮಾಡ್ಕೋಬಾರ್ದು ?

ರಾವ್: ಓಹೋ ನಾನೇನೋ ತಯಾರು, ಈ ಸಾರ್ತಿನು ನಮಗೆ ಹುಡುಗೀನೇ ಆದ್ರೆ ನಾವೇನೋ ಒಂದು ಹುಡುಗನ್ನ ಖಂಡಿತಾ adopt ಮಾಡ್ಕೋತೇವೆ, ಏನಂತೀ dear ? Don't you agree ?

ಮಾಲ್ತಿ: You are rushing my dear. Let's cross the bridge when it comes. ಅಷ್ಟಕೂ, ಈ ಸಾರಿ, ಪಿಟ್ಸ್‌ಬರ್ಗ್ ವೆಂಕಟರಮಣ ಕಣ್ಣು ಬಿಟ್ರೆ...

ರಾವ್: What about New york ಮಹಾಲಕ್ಷ್ಮಿ ? She has a big pair of eyes !

ಮಾಲ್ತಿ: ಹ್ಞೂ, ಅದೂ ನಿಜಾನ್ನಿ, ನನ್ನ ಹಣೇ- ಬರಹಾ ಗೊತ್ತೇ ಇದೆ. ಇನ್ನೊಂದು ರಕ್ಕಸೀನೋ ತಣ್ಣೂರೀನೋ ಕೂತಿರ್ಬಹುದು ಒಳಗೆ. (ಸ್ವಲ್ಪ ತಡೆದು)............

ಒಂದು ವೇಳೆ adopt ಮಾಡ್ಕೋಳೋಕೆ ತಯಾರಾಗಿದೀವೀಂತ್ಲೆ ಇಟ್ಕೊಳ್ಳೋಣ- who is prepared to give you a boy ?

ರಾವ್: ಧೂರ ಯಾಕೆ ಹೋಗ್ಬೇಕು? ಇಲ್ಲೇ ಇದಾರಲ್ಲ ಮೂರು ಜನ ಕಂಠೀರವರು! ಒಂದನ್ನ ಕೊಡುವಂತ್ರೆ ಕೊಡೋಕ್ಕಾಗಾಲ್ವೆ ನಮ್ಮ ಮೂರ್ತಿ?

ಮೂರ್ತಿ: ಸರ್ವನಾಶ ಇಷ್ಟು ! ಮದುವೆ ಆಗೋ ಬ್ರಾಹ್ಮಣಾಂದ್ರೆ ನೀನೇ ನನ್ನ ಹೆಂಡ್ತೀ ಅಂದಹಾಗೆ ! ಕೇಳಿದ್ಯಾ ವಿಜಯ... ನಮ್ಮ ಹುಡುಗರ ಪೈಕಿ ಒಂದನ್ನ...

ವಿಜಯ: ಪಾಪ, ರಾವ್ರು, ಮಜ್ಜಿಗೇ ಹುಳಿ- ಅಂಬೋಡೇ ಚೆನ್ನಾಗಿ ತಿಂದು, he must be feeling high- ಒಂದು ಥರಾ-ಏನೋ ಖುಷೀ ಮೂಡ್‌ನಲ್ಲಿರೋವಾಗ ಒಂದೊಳ್ಳೇ ಜೋಕ್ ಮಾಡಿದ್ರೆ ನೀವು ಅದನ್ನೇ ಸೀರಿಯ- ಸ್ಸಾಗಿ ತೊಗೊಂಬಿಟ್ರೆ ಹೇಗೆ ?

ರಾವ್: ಇಲ್ಲಾರಿ ನಾನು ಜೋಕಲ್ಲಾ ಮಾಡಿದ್ದು. I am very serious ! ಯಾಕೆ ನನ್ನ ಮಾತು ಕೇಳಿ ಬೇಜಾರಾಯ್ತೇನು?


ಮಾಲ್ತಿ: ಇವೆಲ್ಲಾ ಮಾತಾಡೋದು ಸುಲ_ ಭಾಂದ್ರೆ- practical ಆಗಿ ಮಾಡಿ ತೋರಿಸೋದೀಗ ಕಷ್ಟ. (ಗಂಡನನ್ನು ಕುರಿತು) ಸುಮ್ಮನೇ ನೀವ್ಯಾಕೆ ವರೀ ಮಾಡ್ಕೋತೀರಿ- ಈ ಸಾರ್ತಿ ಇಲ್ದೇ ಇದ್ರೆ ಮುಂದಿನ ಸಾರ್ತಿ...

ವಿಜಯ: ಮುಂದಿನ ಸಾರ್ತಿ ಇಲ್ದೇ ಇದ್ರೆ ಅದರ ಮುಂದಿನ್ಸಾರ್ತಿ...

ಮೂರ್ತಿ + ರಾವ್: (ಒಟ್ಟಿಗೇ). ಅದರ ಮುಂ- ದಿನ್ಸಾರ್ತಿ ಇಲ್ದೇ ಇದ್ರೆ ಅದರ ಮುಂದಿನ್ಸಾರ್ತಿ..

ಎಲ್ಲರೂ ಒಟ್ಟಿಗೇ: ಮರಳಿ ಯತ್ನವ ಮಾಡು- ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು...

✡



ವಿವಾ
ದಿನವಿಡೀ ಕಸುವನ್ನು ಒದಗಿಸುತ್ತದೆ.
ರಾತ್ರಿ, ಆರಾಮವನ್ನಿತ್ತು ನೀವು ಬೆಳಗ್ಗೆ ಉಲ್ಲಸಿತರಾಗಿ, ಸತ್ವಶಾಲಿಯಾಗಿರುವಂತೆ ಮಾಡುತ್ತದೆ.
ವಿವಾ ದಿನವಿಡೀ ಕಸುವನ್ನು ಒದಗಿಸುತ್ತದೆ!
ವಿವಾದ ಆಧುನಿಕ ಫಾರ್ಮುಲಾದಲ್ಲಿ ಅಧಿಕ ಶಕ್ತಿದಾಯಕ ಮಾಲ್ಟ್ ಹಾಗೂ ಅಧಿಕ ಅಂಗಾಂಶ-ನಿರ್ಮಾಣಕ ಪ್ರೋಟೀನ್‌ಗಳು ಇವೆ. ಇವು
ಆಂತರಿಕ ಬಲವನ್ನು ಹೆಚ್ಚಿಸುತ್ತವೆ.
ವಿವಾ ರಾತ್ರಿಯಲ್ಲಿ ಆರಾಮವನ್ನಿತ್ತು ಹೊಸ ಪ್ರಾಣವನ್ನುಂಟುಮಾಡುತ್ತದೆ!
ರಾತ್ರಿ ಮಲಗುವ ಸಮಯದಲ್ಲಿ ತೆಗೆದುಕೊಂಡ ಒಂದು ಕಪ್ ಬಿಸಿ ವಿವಾ ನಿಮಗೆ ಆರಾಮವನ್ನಿತ್ತು, ಪೋಷಣೆಯನ್ನು ನೀಡುತ್ತದೆ ಮತ್ತು ನೀವು ನಿದ್ದೆಯಿಂದ ಏಳುವಾಗ ಉಲ್ಲಸಿತರಾಗಿ, ಸತ್ವಶಾಲಿಯಾಗಿ ಇರುವಂತೆ ಮಾಡುತ್ತದೆ.
JIL
ಜಗತ್‌ಜಿತ್ ಇಂಡಸ್ಟ್ರೀಸ್ ಲಿಮಿಟೆಡ್,
ಪಿ. ಓ. ಜಗತ್‌ಜಿತ್ ನಗರ್,
ಜಿಲ್ಲಾ ಕಪೂರ್‌ಥಲಾ (ಪಂಜಾಬ್)
ViVA
The Day and Night Health Drink
BUILDS UP STAMINA
ನಿಮಗೆ ಗೊತ್ತಿತ್ತೇ?
ಡಾಕ್ಟರರ ಹೇಳಿಕೆಯ ಪ್ರಕಾರ ನಿದ್ದೆಯು ಹೊಸ ಕಸುವನ್ನು ಪಡೆಯುವ ಅವಧಿಯನ್ನು ಒದಗಿಸುತ್ತದೆ. ಮಾತ್ರವಲ್ಲ ಶರೀರ ನಿರ್ಮಾಣದ ಪ್ರಕ್ರಿಯೆಗಳನ್ನೂ ಶರೀರವನ್ನು ಸರಿಪಡಿಸುವ ಕ್ರಿಯೆಯನ್ನೂ ಹೆಚ್ಚಿಸುತ್ತದೆ.
DEPTH OF SLEEP
Hours
0 1 2 3 4 5 6 7 8
ವಿಜ್ಞಾನವು ನಿದ್ದೆಯನ್ನು ತಿರುವುಗಳ ಸರಣಿಯ ರೂಪದಲ್ಲಿ ತೋರಿಸುತ್ತದೆ. ವಿವಾ ನಿಮಗೆ ಆರಾಮವನ್ನಿತ್ತು ಯೋಗ್ಯ ಹಂತದಲ್ಲಿ ನೀವು ನಿದ್ದೆ ಮಾಡುವಂತೆ ಸಹಾಯ ಮಾಡುತ್ತದೆ. ನಿಮಗೆ ಪೋಷಣೆಯನ್ನಿತ್ತು ನೀವು ಉಲ್ಲಸಿತರಾಗಿ ನಿದ್ದೆಯಿಂದ ಏಳುವಂತೆ ಮಾಡುತ್ತದೆ.
ವಿವಾ
ಹಗಲಿನ ಮತ್ತು ರಾತ್ರಿಯ ಆರೋಗ್ಯ ಪೇಯ.
ASP/JIL/IB/78

ನನ್ನನ್ನು ನಾನು ಕಂಡಂತೆ

ದೇ.ಜವರೇಗೌಡ

ದೇವರನ್ನು ಕುರಿತು ಬರೆಯುವುದು ಸುಲಭ: ತುಸು ಶ್ರಮವಹಿಸಿದರೆ ಸುತ್ತ ಮುತ್ತಣ ಜನವನ್ನೋ ವಸ್ತುಗಳನ್ನೋ ಕುರಿತು ಬರೆಯಬಹುದು. ಹೆಚ್ಚು ಶ್ರಮ ತೆಗೆದುಕೊಂಡರೆ 'ನನ್ನನ್ನು' ಕುರಿತು ಚಿತ್ರಿಸಿಕೊಳ್ಳಬಹುದು; ಆದರೆ ನನ್ನನ್ನು ನಾನು ಕಂಡಂತೆ. ಬರೆಯುವುದು ಸಾಧ್ಯವೆ ? ಎಂದು ಬಹುಕಾಲ ಯೋಚಿಸಿದ್ದೇನೆ. ಸಾಧ್ಯವಿಲ್ಲವೆಂದೇ ನನ್ನ ಅಂತರಾತ್ಮ ಒಮ್ಮೊಮ್ಮೆ ಪಿಸುಗುಟ್ಟುತ್ತದೆ. ಬರೆಯುವುದೇನು ಮಹಾ ಕಷ್ಟವೇ ಎಂದು ನನ್ನ ಅಹಂಕಾರ ಆಗಾಗ್ಗೆ ಹಂಗಿಸುತ್ತದೆ. ಪ್ರಚೋದಿಸುತ್ತದೆ. ಅಬ್ಬರಿಸುತ್ತದೆ. ತನ್ನನ್ನು ತಾನು ಕಂಡುಕೊಳ್ಳುವುದೇ ಸಾಧನೆಯ ಪರಮ ಗುರಿಯೆಂದು ವೇದಾಂತಿಗಳು ನುಡಿಯುತ್ತಾರೆ. ಆದರ ಅರ್ಥ ನನ್ನಂಥ ಲೌಕಿಕರಿಗೆ ತಿಳಿಯುವಂಥದಲ್ಲ. ನನಗೂ ಪಾರಮಾರ್ಥಿಕತೆಗೂ ದೂರ. ನನ್ನ ಮುಖ ನನಗೆ ಕಾಣಿಸುವುದಿಲ್ಲ. ಅದರ ಹುಳುಕು ಪಳುಕುಗಳು ನನಗೆ ತಿಳಿಯುವುದಿಲ್ಲ. ಅವನ್ನು ಕಾಣಬೇಕಾದರೆ ಕನ್ನಡಿ ಬೇಕು. ಅವು ಕಣ್ಣಿಗೆ ಕಾಣಿಸಿದರೂ ಮನಸ್ಸಿಗೆ ಗೋಚರಿಸದಿರಬಹುದು. ಆ ಹುಳುಕು ಅಸರೆ ಬೊಟ್ಟೆಂದು ಸ್ವಾಭಿಮಾನಿ ಕರೆದುಕೊಳ್ಳಬಹುದು.

ಕಣ್ಣನ್ನು ರಾಚುವ ದೈಹಿಕ ದೋಷಗಳೇ ಸುಲಕ್ಷಣಗಳೆಂದು ತೋರುವುದಾದರೆ ಮಾನಸಿಕ ಬೌದ್ಧಿಕ ದೋಷಗಳು ಉಳ್ಳವನಿಗೆ ತೋರುವುದೇ ಇಲ್ಲ. ಅಹಂಕಾರದ ಅಟ್ಟಹಾಸದಿಂದ ಮರೆ

ಯುವವರಿಗೆ ತಮ್ಮ ದೋಷಗಳು ಕಾಣೆಯಾಗುತ್ತವೆ. ಪರರ ಗುಣಗಳು ದೋಷಗಳಾಗುತ್ತವೆ. ಠಕ್ಕರಂತಿರುವ ವಿನಯಶಾಲಿಗಳಂತೂ ಬೆಣ್ಣೆಯ ಮಾತುಗಳಿಂದ ತಮ್ಮ ಕುಂದು ಕೊರತೆಗಳನ್ನು ಮರೆಮಾಡಿ. ಸಜ್ಜನರಂತೆ ನಟಿಸುತ್ತ ದ್ರೋಹ ವೆಸಗುವುದುಂಟು. ಅವರ ಠಕ್ಕು ಇತರರಿಗೆ ಅರ್ಥವಾಗುವುದಿಲ್ಲ. ಸಿಡುಕಿಗಳ ಮತ್ತು ನಿಷ್ಕಪಟಿಗಳ ಹೃದಯ ಗಾಜಿನಂತೆ ಪಾರದರ್ಶಕವಾದ್ದರಿಂದ ಅವರು ತಮ್ಮ ದೋಷ ದೌರ್ಬಲ್ಯಗಳನ್ನು ಮರೆಮಾಡುವ ಪ್ರಯತ್ನ ವಿಫಲವಾಗುತ್ತದೆ. ಆದರೆ ಅವರು ಸಹ ಮಾನ ಮರ್ಯಾದೆ ಅಪ್ರತಿಷ್ಠೆಗಳ ದೃಷ್ಟಿಯಿಂದ ತಮ್ಮ ಕರೆ ಕೊರೆಗಳು ಬಹಿರಂಗವಾಗದಂತೆ ಎಚ್ಚರವಹಿಸುತ್ತಾರೆಂದಮೇಲೆ ಗರ್ವಿಗಳೂ ಠಕ್ಕರೂ ತಮ್ಮ ಒಳಗನ್ನು ಹೊರಗು ಮಾಡಲಾರರು. ನನಗೂ ಸ್ವಾಭಿಮಾನವಿದೆ, ಪ್ರತಿಷ್ಠೆಯಿದೆ. ನಾಲ್ಕು ಜನರ ಮುಂದೆ ತಲೆಯೆತ್ತಿ ನಡೆಯಬೇಕೆಂಬ ಹಂಬಲವಿದೆ, ಯಾರಿಗೂ ಮಣಿಯಬಾರದೆಂಬ ಹಟವಿದೆ. ಹೀಗಿರುವಾಗ ನನ್ನ ಗುಣಗಳ ಜತೆಗೆ ದೋಷಗಳನ್ನು ರಟ್ಟು ಮಾಡುವ ಸತ್ಯನಿಷ್ಠೆಯಾಗಲೀ ತಾಕತ್ತಾಗಲೀ ಇದೆಯೇ ಎಂದು ಪ್ರಶ್ನಿಸಿಕೊಳ್ಳುವಂತಾಗಿದೆ. ಆತ್ಮಶೋಧನೆ ಮಾಡಿಕೊಳ್ಳುವಂತಾಗಿದೆ.

ನನ್ನ ಬಾಳೇ ಒಂದು ಪವಾಡವೆಂದುಕೊಂಡಿದ್ದೇನೆ. ಆ ಮಾತು ಇಂದಿಗೂ ಸುಳ್ಳಾಗಿಲ್ಲ. ನಾನು ಹುಟ್ಟಿದ ಪರಿಸರವನ್ನೂ ಇಂದಿನ ಪರಿಸ್ಥಿತಿಯನ್ನೂ ನೆನೆದಾಗ ಆ ಮಾತಿನ ಯಥಾರ್ಥತೆ ಸಿದ್ಧವಾಗುತ್ತವೆ. ಅರುವತ್ತು ವರ್ಷಗಳ ಹಿಂದಕ್ಕೆ ನೆನಹುಗಳನ್ನು ಸುಳಿಸಿದಾಗ ರಜತ ಪರದೆಯ ಮೇಲೆ ಹರಿದಂತೆ ದೃಶ್ಯಗಳು ಸಾಲು ಸಾಲಾಗಿ ಸಾಗುತ್ತವೆ: ಮಣ್ಣೆಲದ ಕಿಂಡಿ ಚಾವಣಿಯ ಮನೆ: ಕೊಳಕಿಡಿದ ಬಚ್ಚಲ ತೊಟ್ಟಿ; ತಿಗಣೆ ನೊಣ ಇಲಿ ಹಾತೆ ಹಲ್ಲಿಗಳ ಸೈನ್ಯ; ಕುರಿ ದೊಡ್ಡಿ, ದನದಟ್ಟಿ; ತೇಪೆ ಸೀರೆಯನ್ನುಟ್ಟು, ಮಣ್ಣಿನಲ್ಲಿ ಹಣ್ಣಾಗಿ ದುಡಿಯುವ ತಾಯಿ; ತುಂಡು ಪಂಚೆ ಹೊದ್ದು ಮೊಳದ ದಟ್ಟಿಯನ್ನುಟ್ಟು, ಚಿಂದಿ ಪಾಗನ್ನು ಧರಿಸಿ, ದೊಣ್ಣೆಯೂರೆಯಲ್ಲಿ ಊರ್ಧ ತಿರುಗುವ ಕುರುಡು ತಂದೆ; ಪಶುಗಣದೊಳೊಂದಾಗಿ ಬೆಳೆದ ಸೋದರ ಸೋದರಿಯರು; ಮರಕೋಣೆ ತಿಪ್ಪೆಕೊಳ ಕುನ್ನೀರು ಕಟ್ಟೆಗಳು: ತಿಬ್ಬಮ್ಮ ಪಟಲದಮ್ಮ ಬಸವಗುಡಿಗಳು; ಮನೆಯಲ್ಲಿ ಕಳವಾಗೆ, ರೋಗ ರುಜಿನಗಳು ಮುತ್ತೆ, ಮಾರಿ ಮಸಣಿಯರಿಗೆ ದೂರು ಹರಕೆಗಳು; ನೂರಾರು ವರುಷಗಳಿಂದ ರಕ್ತಗತವಾಗಿ ಬಂದ ಮೂಢನಂಬಿಕೆಗಳೇ ವೇದ, ಭೂಸುರರೇ ತ್ರಿಮೂರ್ತಿಗಳು, ಗೌಡ ಶಾನುಭೋಗರೇ ಆಧುನಿಕ ಮನುಗಳು, ಸಾರ್ವಭೌಮರು; ಶಾನುಭೋಗರಿಗೆ ಮೊದಲು ಬಿಟ್ಟ ಕುಂಬಳಕಾಯಿ ಮುಡಿಪು; ಗೌಡ ಕರೆದಾಗ ಮನೆಮಂದಿ ಬಿಟ್ಟಿಗೆಯ್ಮೆ ಮಾಡಲೇಬೇಕು. ಕೆರೆ ಬೇಟೆಯಾದಾಗ ಒಬ್ಬೊಬ್ಬ ಬೇಟೆಗಾರನೂ ಗೌಡನಿಗೆ ಸಮಪಾಲು ಕೊಡಬೇಕು; ಶಾಲೆ ಪಕ್ಕದ ಕಡ್ಡಿ ತೋಟದಲ್ಲಿ ಮೇಕೆಗಳು, ಶಾಲೆಯಲ್ಲಿ ಜತೆಯವರೊಡನೆ ಕೌಪೀನ ಧರಿಸಿದ ಆಡು ಕಾಯುವ ಬಾಲ; ಕೊನೆಗೆ ತೋಟದೊಡೆಯರ ನಿಂದೆಯನ್ನು ಸೈರಿಸದ ತಂದೆ; ಕೈಯ ಬೆತ್ತದ ಸೇವೆಯಿಂದ ತೊಡೆಯಲ್ಲಿ ಬಾಸುಂಡೆಯೆದ್ದಾಗ ಕರ್ತವ್ಯಪ್ರಜ್ಞೆ ವಿಕಸಿತ



ವಾಯ್ತು; ದೇವರೆ ಧರೆಗೆ ಕಳಿಸಿದ ಬೋಧಕರು [illegible].

ಕುರಿದೊಡ್ಡಿಯೊಳಗೆ ಭೂಸ್ಪರ್ಶ ಮಾಡಿದ ನಾನು ತಿಪ್ಪ ತಿಪ್ಪ ಹೆಜ್ಜೆಯಿಡುವಾಗಲೇ ಕುರಿಗಾಹಿ. ಮಠವಿದ್ದಾಗ ಮಠ; ಇಲ್ಲದಾಗ ಕುರಿಗಳೊಡನಾಟ, ಹಸುಕರುಗಳೊಡನೆ ಮುದ್ದಾಟ; ಸಂಜೆ ಬೆಳಗಿನಲಿ ಬೇಸಿಗೆಯ ಸಮಯದಲಿ ನೆರೆ ಹೊರೆಯ ಸರಿವ ಬಾನ ಹಕ್ಕಿಗಳೊಡನೆ ಚಂದ್ರಿಕೆಯ ಓಂದುಗಡೆ ಸಂಸಾರದಾಟ; ಹಬ್ಬ ಹರಿದಿನಗಳಲಿ ತಾಯಿ ತವರೂರಿನಲಿ ನಲಿದಾಟ. ಕಲಿತದ್ದು ನಿರಕ್ಷರಿಗಳ ಮಂತ್ರೋಪದೇಶ: [illegible] ಕೋಶ. [illegible] ದಂತೆ ಏಕಾಂತವೇ ಚಂದ: [illegible] ಹಾದಿ ಬಲು ಅಂದ. ಹಸಿರು ಹೊಲಗದ್ದೆಗಳು, ತೆಂಗಿನ ತೋಟ, ಮಾವಿನತೋಪು; ಜುಳು ಜುಳನೆ ಹರಿದು ನೆರೆಯೇರಿ ಮೊರೆವ ತೊರೆ ಕಾಲ್ವೆ, ಹಳ್ಳ, ಕೊಳ್ಳಗಳು; ಹೊಂಡಗಳೆ ಕನ್ನಂಬಾಡಿ, ಕಾರಂಜಿ ನೀರೆ ಗಂಗಾವಾರಿ,ಒಂಟಿಗನಾಗಿ ದಾರಿ ನಡೆಯುವಾಗ ಅಲ್ಲಸಲ್ಲದ ಹಗಲುಗನಸುಗಳು, ಒಮ್ಮೊಮ್ಮೆ ಅಪ್ಪ ಕಲಿಸಿದ್ದ ದೇವರ ನಾಮಗಳ ಸಂಸ್ಮರಣೆ; ಆದರೆ ಗುಡಿಯೆಂದರಾಗದು. ಜತೆಯಿದ್ದಾಗ ಎಳ ನೀರು ಕಬ್ಬು ನೆಲಗಡಲೆಗಳ ಕದ್ದದ್ದುಂಟು. ರಜೆ ಬಂದಾಗ ಹೊಲಗೆಲಸ, ತಂದೆಗೆ ಊರುಗೋಲು; ಓದು ಬೇಕಾಬಿಟ್ಟಿ. ನನಗೆ ನಾನೆ ಗುರು, ಮಾರ್ಗದರ್ಶಕ, ದೀಪಧಾರಿ ಎಲ್ಲ. ಗೊತ್ತು ಗುರಿಯಂತು ಇಲ್ಲ; ಕೆಲಸ ಕಾರ್ಯಗಳೆಲ್ಲ ಯಂತ್ರದಂತೆ ಜರುಗುತ್ತಿದ್ದುವು. ಪ್ರೌಢಶಾಲೆಯ ಪರೀಕ್ಷೆಯಲ್ಲಿ ಪಾಸಾದದ್ದೇ ನನಗಾಶ್ಚರ್ಯ: ಊರ ಹಿರಿಯರಲ್ಲಿ ಉಕ್ಕದಿರುತ್ತದೆಯೆ ಮಾತ್ಸರ್ಯ ? ನಾನೇಕೊ ನಾಚಿಕೆಯ ಮುಳ್ಳಾದೆ; ತಂದೆ-ತಾಯಿಯರ ಆನಂದಕ್ಕೆ ಪಾರವಿರಲಿಲ್ಲ.

ಪಿತೃಪ್ರೋತ್ಸಾಹ ಅಂತಃಪ್ರೇರಣಗಳು ನನ್ನನ್ನು ಬೆಂಗಳೂರಿಗೊಯ್ದುವು. ಹೆಚ್ಚು ಓದಿದರೆ ಸರ್ಕಾರಿ ನೌಕರಿ ದೊರೆಯಬಹುದೆಂಬ ದುರಾಸೆಯೊಂದೇ ಹುರುಪು ನೀಡಿತು. ವಿದ್ಯಾರ್ಥಿನಿಲಯದಲಿ ಸಿರಿವಂತರೊಂದು ಕಡೆ, ಬಡವರೊಂದು ಕಡೆ. ನನಗಿದ್ದವರು ಮೂರ್‍ನಾಲ್ಕು ಮಂದಿ ಮಿತ್ರರು ಮಾತ್ರ. ಅವರೊಡನೆ ಇಡಿಯಿರುಳು ಇಸ್ಪೀಟಾಟ. ತರಗತಿಯಲ್ಲಿ ಅಧ್ಯಾಪಕರ ಬಾಯಿಯಿಂದ ಕೇಳಿ ಸಂಗ್ರಹಿಸಿದ್ದೇ ಜ್ಞಾನ. ಮನೆಯೋದಂತು ಶೂನ್ಯ. ಪಠ್ಯಪುಸ್ತಕಗಳಿಲ್ಲ, ತರಗತಿಯ ಟಿಪ್ಪಣಿಗಳೇ ಗತಿ. ಮಾಧ್ಯಮಿಕ ತರಗತಿಯಿಂದ ಆಂಗ್ಲಭಾಷೆಯೇ ಮಾಧ್ಯಮವಾಗಿ ಅಧ್ಯಾಪಕರಿಂದ ಗ್ರಹಿಸಿದ್ದು ಸ್ವಲ್ಪ; ಆ ಸ್ವಲ್ಪವೇ ನನ್ನ ಆಸ್ತಿ. ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ಢುಂಕಿ ಹೊಡೆದಾಗ ಅಚ್ಚರಿಯಾಗದಿದ್ದರೂ, ಬಹುದಿನಗಳ ತನಕ ಶೋಕ ದಿನಾಚರಣೆ ನಡೆಸಿದ್ದಾಯಿತು. ಬಡತನದ ತಂದೆತಾಯಿಯರಿಗೆ ದುಃಖವೊದಗಿಸಿದೆನೆಂಬ ಚಿಂತೆ ನನ್ನ ದೋಷ ದೌರ್ಬಲ್ಯಗಳಿಗೆ ಚಿತೆಯಾಯಿತು. ಹಳ್ಳಿಯಲ್ಲೆ ಉಳಿದು, ಹೊಲದಲ್ಲಿ ಗೇದು, ಮನೆಯಲ್ಲಿ ಓದಿ, ಪರೀಕ್ಷೆಗೆ ಸಿದ್ಧನಾದೆ, ನನಗೆ ನಾನೆ ಗುರುವಾಗಿ. ಉತ್ತಮ ರೀತಿಯಲ್ಲಿಯೆ ಪಾಸಾದನೆಂಬ ತೃಪ್ತಿ, ಅವ್ಯಕ್ತ ಗುರು ಕಾರುಣ್ಯಕರ್ಷಣೆ, ಜತೆಗೆ ಜ್ಞಾನಾಸಕ್ತಿ ನನ್ನನ್ನು ಮೈಸೂರಿಗೆ ಕರೆದೊಯ್ದುವು.

ಶ್ರೀರಾಮಕೃಷ್ಣ ವಿದ್ಯಾರ್ಥಿ ನಿಲಯದ ವಾತ್ಸಲ್ಯ ಹಾಗೂ ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯ ವ್ಯಾಸಂಗ ನನ್ನ ಬದುಕಿಗೊಂದು ನೆಲೆಗಟ್ಟನ್ನು [illegible] ಅಣಿಗೊಳಿಸಿದುವಾದರೂ, ಬದುಕಿನ ಗುರಿ ಮಾತ್ರ ಕಣ್ಗಾಣಲಿಲ್ಲ. ಮನಸ್ಸು ಸಂಸಾರ–ಸಂನ್ಯಾಸಗಳ ನಡುವೆ ತೂಗುಯ್ಯಾಲೆಯಾಗಿತ್ತು. ಓದಿನ ಕಡೆಗೆ ಮನವಿಲ್ಲ. ಓದಿನಿಂದ–ಅದರಲ್ಲಿಯೂ ಕನ್ನಡದಿಂದ–ಒದಗಬಹುದಾದ ಪ್ರಯೋಜನದ ಬಗ್ಗೆ ಸಂದೇಹ. ಕನ್ನಡದ ದುರ್ಗತಿಯಿಂದಾಗಿ ಅದರ ಬಗ್ಗೆ ತಾತ್ಸಾರ. ನಡುಗಡಲಿನಲ್ಲಿರುವಾಗ ಅದನ್ನು ಬಿಡುವಂತಿಲ್ಲ. 'ಶ್ರೀ' 'ಕುವೆಂಪು' 'ಶ್ರೀನಿವಾಸ'ರ ಭಾಷಣಗಳನ್ನು ಕೇಳಿದಾಗ ಮಾತ್ರ ಕೆಚ್ಚುನೆಚ್ಚುಗಳು ಮಿಂಚಿ ಮಾಯವಾಗುತ್ತಿದ್ದುದುಂಟು. ವಿವೇಕಾನಂದರ ದಿವ್ಯವಾಣಿ ಮನಸ್ಸಿನಲ್ಲುಳಿದರೂ ರಕ್ತಗತವಾಗಲಿಲ್ಲ, ನಡೆನುಡಿಗಳಲ್ಲಿ ಮೈದೊರಲಿಲ್ಲ.

ಇಂಥ ಚಿತ್ತಚಾಂಚಲ್ಯದ ಸ್ಥಿತಿಯಲ್ಲಿರುವಾಗ ಕಾನೂನು ಪಂಡಿತನಾಗಿ ಕನ್ನಡದ ಸೂತಕವನ್ನು ಕಳೆದುಕೊಳ್ಳುವುದೆಂದು ಕೊಲ್ಹಾಪುರಕ್ಕೆ ಓಡಿದೆ. ನನ್ನ ಬದುಕಿಗೆ ಕಾರಣವಾದ ದೈವ ಕಾನೂನ್ನು ವ್ಯಾಸಂಗಕ್ಕಡ್ಡಿಯಾಗಿ, ನನ್ನನ್ನು ಹಿಂದಕ್ಕೆ ಕಳಿಸಿತು. ಆದರೂ ಆ ದೈವದೊಡನೆ ಸೆಣಸವ ಸಲುವಾಗಿ ಪ್ಲೀಡರ್ ಪರೀಕ್ಷೆ ಪಾಸು ಮಾಡಿದ್ದಾಯಿತು. ವಕೀಲನಾಗಿ, ರಾಜಕೀಯ ಕ್ಷೇತ್ರವನ್ನು

ಪ್ರವೇಶಿಸಬೇಕೆಂಬುದೇ ಆ ಎಲ್ಲ ಪ್ರಯತ್ನದ ಗುರಿ. ರಾಜಕೀಯಾಧಿಕಾರದ ಮೂಲಕ ಮಾತ್ರ ಕನ್ನಡದ ಸ್ವಾಭಿಮಾನ ಹಿತರಕ್ಷಣೆ ಸಾಧ್ಯವೆಂಬ ನಂಬಿಕೆ ನನ್ನಲ್ಲಿದ್ದ ಕಾಲವದು. ಶ್ರೀ ವೀರಣ್ಣಗೌಡರೂ ಶ್ರೀ ಕೆಂಗಲ್ ಹನುಮಂತಯ್ಯನವರೂ ಕೈ ಹಿಡಿದು ತಮ್ಮೊಡನೆ ಒಯ್ಯುವಂತೆ ಕರೆದದ್ದೂ ಉಂಟು. ಆ ಕ್ಷೇತ್ರದ ಅನಾಯಾಸಗಳನ್ನೆದುರಿಸುವ ಸಾಹಸ ಮನೋಭಾವವಾಗಲೀ ಅಲ್ಲಿ ಪ್ರಯೋಗಿಸಬೇಕಾದ ಲಾಗಪಟ್ಟು ಚಾತುರ್ಯಗಳ ಪಾಂಡಿತ್ಯವಾಗಲೀ ಚಾಣಕ್ಯತಂತ್ರದ ಪರಿಜ್ಞಾನವಾಗಲೀ ನನ್ನಲ್ಲಿಲ್ಲದ್ದರಿಂದ ಮನಸ್ಸು ಹಿಂಜರಿಯಿತು. ಸರ್ಕಾರಿ ನೌಕರಿಯ ಬಗ್ಗೆ ತಿರಸ್ಕಾರವಿತ್ತು. ಕೃಷಿ ಕರ್ಮದಲ್ಲಿ ಅಪಾರ ಆಸಕ್ತಿ. ಆದರೆ ಸಾಧನ ಸಂಪತ್ತಿಲ್ಲದವನಿಗೆ ಆ ಕ್ಷೇತ್ರಕ್ಕಿಳಿಯುವಂತಿಲ್ಲ.

ಒಂದು ರೀತಿಯ ನಿರಾಶೆ ಅತೃಪ್ತಿ ಅನಿಶ್ಚಯತೆಗಳ ಇಕ್ಕಟ್ಟಿನಲ್ಲಿರುವಾಗ ಅನಿವಾರ್ಯವಾಗಿ ಗುಮಾಸ್ತೆ ಕೆಲಸಕ್ಕೆ ಸೇರಬೇಕಾಯಿತು. ಕಚೇರಿಯಲ್ಲಿ ನಡೆಯುತ್ತಿದ್ದ ಒಳ ರಾಜಕೀಯತಂತ್ರಗಳೂ ಅಧಿಕಾರಿಗಳ ಕಿರುಕುಳಗಳೂ ಅಧೀನತಾ ಕೈಂಕರ್ಯವೂ ಬಹು ಬೇಗನೇ ಸರ್ಕಾರಿ ನೌಕರಿಯ ಬಗ್ಗೆ ಜುಗುಪ್ಸೆ ಹುಟ್ಟಿಸಿದುವು. ಗುಮಾಸ್ತ ಕೆಲಸಕ್ಕೆ ಸೇರಿದ ಮಾನವ ಬಹು ಬೇಗನೆ ಗುಲಾಮನಾಗುತ್ತಾನೆ, ಪಶುವಾಗುತ್ತಾನೆ, ಕೊನೆಗೆ ಶಿಲೆಯಾಗುಯಾಗುತ್ತಾನೆ, ನಿವೃತ್ತನಾಗುವ ಹೊತ್ತಿಗೆ ಪಿಶಾಚಿಯಾಗುತ್ತಾನೆನ್ನಿಸಿತು. ರಾಮಕೃಷ್ಣಾಶ್ರಮ, ವಿವೇಕಾನಂದ, ಕುವೆಂಪು ಅವರನ್ನು ನೆನೆಯುವಂತಾಯಿತು. ಎಂ. ಎ. ಓದುವಂತೆ ಯಾರೊ ಕನಸಿನಲ್ಲಿ ಎಚ್ಚರಿಸಿದಂತಾಯಿತು. ಕನಸೇ ನನಸೆಂದು ತಿಳಿದು, ನೌಕರಿಗೆ ರಾಜೀನಾಮೆ ಸಹ ಸಲ್ಲಿಸದೆ ಬೆಳಗಿನ ಜಾವದಲ್ಲಿಯೇ ಬೆಂಗಳೂರಿಂದ ಮೈಸೂರಿಗೆ ಹೋಗಿ ಮತ್ತೆ ಕಾಲೇಜು ಸೇರಿದ್ದಾಯಿತು. ಕನ್ನಡದ ಅಧಿದೈವ ನೆರಳಿನಂತೆ ನನ್ನನ್ನು ಹಿಂಬಾಲಿಸಿ, ಬಲ್ಲಿದ ಕೆಲಸಕ್ಕೆ ಹಚ್ಚಿಸಿತು. ಮತ್ತೆ ಕನ್ನಡವೇ ಬೇಕಾಗುವಂತೆ ಮಾಡಿತು. ಸಂನ್ಯಾಸ ನನಗೆ ಹೇಳಿಸಿದ್ದಲ್ಲ, ಸರ್ಕಾರಿ ನೌಕರಿ ನನಗೆ ಸರಿಯಾದುದಲ್ಲವೆಂದು ಆ ದೈವ ನಾನಾ ವಿಧದಲ್ಲಿ ನನಗೆ ಸೂಚನೆ ನೀಡುತ್ತಿತ್ತು. ಆದರೂ ನನ್ನನ್ನು ನಾನರಿಯದೆ ಆ ದೈವದ ಸೂಚನೆಯನ್ನು ಗ್ರಹಿಸಲಾರದೆ ಬದುಕಿನ ತೊಳಲಾಟ ಬೇಕಾಯಿತು.

> **ಕೆಳದಿ**
>
> **ನಿನ್ನೆದೆಯ ಮೇಲೆ ನಾ ಪವಡಿಸಿದಾಗಲೆಲ್ಲ**
> **ಬೆಳಕಿನಲಿ ತೇಲುತ್ತದೆ ಈ ಬದುಕು!**
> **ನೀನಿಲ್ಲದೆ ಈ ಲೋಕದಲಿ ಬೆಳಗಾದುದ**
> **ನಾನು ಇನ್ನೂ ಕಂಡಿಲ್ಲ ಕೆಳದಿ!**
>
> —ಪಂಚಾಕ್ಷರಿ ಹಿರೇಮಠ

ಮಾನವನ ಸಾಹಸಕ್ಕೂ ಮಿತಿಯಿದೆ, ದೈವ ವಿರುದ್ಧವಾದ ಹೋರಾಟಕ್ಕೂ ಎಲ್ಲೆಯಿದೆ; ಕೊನೆಗೆ ಈಶ್ವರಸಂಕಲ್ಪಕ್ಕೇ ಜಯ ಖಚಿತವೆಂಬುದನ್ನರಿಯಲು ಬಹುಕಾಲ ಹಿಡಿಯಲಿಲ್ಲ. ಭಾರತದ ಸ್ವಾತಂತ್ರ್ಯ ಸಮರದಲ್ಲಿ ವಿಜಯ ಚಿಹ್ನೆಗಳು ತಲೆದೋರುವ ವೇಳೆಗೆ, ನನ್ನ ಗುರಿ ಕಾಣುವ ಹೊತ್ತಿಗೆ, ಕನ್ನಡದಿಂದಲೇ ನನಗೆ ಮೋಕ್ಷವೆಂದು ತಿಳಿಯುವ ಕಾಲಕ್ಕೆ ಯೌವನದ ಅಮೂಲ್ಯ ದಿನಗಳು ಹಿಂದು ಹಿಂದಕ್ಕೆ ಸರಿದುಹೋಗಿದ್ದುವು. ತಡವಾದರೂ ಗುರುಮುಖದಿಂದ ಬಂದ ಭುವನೇಶ್ವರಿಯ ಆಜ್ಞೆ ಪಾಲಿಸುವೆಂದು ಬಗೆದು, ಸಬ್ ರಿಜಿಸ್ಟ್ರಾರ್ ಅಥವಾ ಎಕ್ಸೈಜ್ ಇಲಾಖೆಗಳ ವಾತಾವರಣಕ್ಕಿಂತ ವಿಶ್ವವಿದ್ಯಾಲಯದ ಸ್ವತಂತ್ರ ವಾತಾವರಣ ನನ್ನಂಥವನ ಜೀವನಕ್ಕೊಗ್ಗುವುದೆಂದು ತಿಳಿದು, ಶ್ರೀ ಕುವೆಂಪು ಅವರಂಥ ಹಿರಿಯ ಚೇತನಗಳ ಮಾರ್ಗದರ್ಶನದಲ್ಲಿ ಕನ್ನಡದ ಕೈಂಕರ್ಯವನ್ನೆಸಗುವ ಹಂಬಲದಿಂದ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದ್ದಾಯಿತು. ಸೆಂಟ್ರಲ್ ಕಾಲೇಜು ಪ್ರವೇಶಿಸುತ್ತಿದ್ದಂತೆಯೇ ಜಾತೀಯತೆಯಿಂದಾಗಿ ನಾರುತ್ತಿದ್ದ ವಾತಾವರಣ ಮಾಲಿನ್ಯ ಜುಗುಪ್ಸೆಯುಂಟು ಮಾಡುವಂತಿತ್ತು. ಬ್ರಾಹ್ಮಣೇತರರು ಅಧ್ಯಾಪಕ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದ ಕಾಲವದು. ವಿಶ್ವವಿದ್ಯಾಲಯದ ಆಡಳಿತ ಮಂಡಲಿಯಲ್ಲಿ ಆಗಾಗ್ಗೆ ರಾಜಕೀಯ ಕ್ಷೇತ್ರದ ಆಗು ಹೋಗುಗಳು ಪ್ರತಿಫಲಿಸುತ್ತಿದ್ದುದುಂಟು. ಆದ್ದರಿಂದ ಪರಿಸ್ಥಿತಿ ಪ್ರಕ್ಷುಬ್ಧಗೊಂಡು ಅಧ್ಯಾಪಕ ವಿದ್ಯಾರ್ಥಿ ವೃಂದದಲ್ಲಿ ಸಾಮರಸ್ಯದ ಅಭಾವ ಎದ್ದು ಕಾಣುತ್ತಿತ್ತು. ಬ್ರಾಹ್ಮಣ ವಿದ್ಯಾರ್ಥಿಗಳನ್ನು ಫೇಲು ಮಾಡಿಸುವ ಹೇಯಕೃತ್ಯ

ಕ್ಕಿಳಿಯದಿದ್ದರೂ, ಗೊತ್ತಿದ್ದ ಬ್ರಾಹ್ಮಣೇತರ ವಿದ್ಯಾರ್ಥಿಗಳನ್ನು ಪಾಸು ಮಾಡಿಸುವ ಛಲ ಬ್ರಾಹ್ಮಣೇತರ ಅಧ್ಯಾಪಕವೃಂದವನ್ನು ಕಾಡುತ್ತಿತ್ತು. ಆ ವಿಷಯದಲ್ಲಿಯೂ ಬ್ರಾಹ್ಮಣ ಅಧ್ಯಾಪಕರೂ ಆದರ್ಶ ಪಂರಪರೆಯನ್ನು ಸ್ಥಾಪಿಸಿದ್ದರು. ಆ ಕಾಲದಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಕೆಲವು ಹಿರಿಯ ಪ್ರಾಧ್ಯಾಪಕರ ಬಗ್ಗೆ ನಡೆಸಿದ್ದ ತನಿಖೆಯೇ ಇದಕ್ಕೆ ಸಾಕ್ಷಿಯಾಗಿದೆ. ಹಿರಿಯ ಪ್ರಾಧ್ಯಾಪಕರೇ ಮನೆ ಪಾಠ ಹೇಳಿ ಕೊಡುವ ನೆವದಿಂದ ಹುಡುಗರಿಂದ ಹಣ ಸುಲಿದುಕೊಂಡು ಪಾಸು ಮಾಡಿಸುತ್ತಿದ್ದಾಗ ಕಿರಿಯ ಅಧ್ಯಾಪಕರನ್ನು ಸುಮ್ಮನಿರಿಸಲಾದೀತೆ? ದುಡ್ಡಿಗಾಗಿ ಕೈಯೊಡ್ಡದಿದ್ದರೂ ತತ್ಕಾಲೀನ ಪರಿಸರದ ಕಾಲುಷ್ಯಕ್ಕೆ ನಾನು ಅಲ್ಪ ಸ್ವಲ್ಪ ಬೆಂಬಲ ಸೂಚಿಸಿದ್ದುಂಟು. ನಾನು ಗುಂಪು ಸೇರುತ್ತಿರಲಿಲ್ಲವಾಗಿ, ಮಡದಿ ಮಕ್ಕಳೇ ನನ್ನ ಸರ್ವಸ್ವವಾಗಿ ಕಾಲೇಜು ಮುಗಿಯುತ್ತಲೇ ನಾನು ಮನೆ ಸೇರುತ್ತಿದ್ದುದರಿಂದ ಬ್ರಾಹ್ಮಣೇತರ ಚಳುವಳಿಯಲ್ಲಿ ನನ್ನ ಪಾತ್ರ ಮಹತ್ವಪೂರ್ಣವಾದದ್ದಾಗಿರಲಿಲ್ಲ. ಆದರೆ ನಾನು ದೋಷಮುಕ್ತನೆಂದು ಹೇಳಿಕೊಳ್ಳುವಂತಿಲ್ಲ. ಕುವೆಂಪು ಅವರನ್ನು ನೋಡಿದಾಗಲೆಲ್ಲ ನನ್ನ ದೋಷ ದೌರ್ಬಲ್ಯಗಳು ನಾಚಿಕೆಯಿಂದ ಮುರುಟಿಕೊಳ್ಳುತ್ತಿದ್ದುದೂ ಉಂಟು.

ಕೊನೆಗೂ ಗುರುಕೃಪಾರೂಪದ ವಿಧಿಶಕ್ತಿ ತನ್ನ ಸಂಕಲ್ಪವನ್ನು ನೆರವೇರಿಸಿಕೊಂಡಿತು. ಆ ಶಕ್ತಿಗೆ ನಾನು ಶರಣಾಗಬೇಕಾಯಿತು; ನಾನು ಸೋತು ಗೆದ್ದದ್ದೂ ಉಂಟು. ೧೯೪೯ರಲ್ಲಿ ಮಹಾರಾಜಾ ಕಾಲೇಜಿಗೆ ಅಧ್ಯಾಪಕನಾಗಿ ಮರಳಿದ ನಂತರ ನನ್ನ ಗುರಿ ಸ್ಪಷ್ಟವಾಯಿತು. ಬದುಕಿಗೊಂದು ಧ್ಯೇಯದ ನೆಲಗಟ್ಟು ದೊರೆತಂತಾಯಿತು. ಕನ್ನಡ ಕೈಂಕರ್ಯದ ಹಂಬಲ ತೀವ್ರವಾಯಿತು, ನಾನು ಮರುಹುಟ್ಟು ಪಡೆದಂತಾಯಿತು. ನನಗೊಂದು ಆದರ್ಶ ದೊರೆತದ್ದರಿಂದ ದೋಷ ದೌರ್ಬಲ್ಯಗಳ ದಹನ ಕಾರ್ಯವೂ ಪ್ರಾರಂಭವಾಯಿತು; ಪ್ರಾರಂಭವಾಯಿತು, ನಿಜ, ಮುಗಿಯಲಿಲ್ಲ. ನಾನು ಹೊಸದಾಗಿ ವಿದ್ಯಾರ್ಥಿಯಾದೆ. ಸಾಹಿತ್ಯೋಪಾಸಕನಾದೆ. ಲೇಖನಾರಂಭಕ್ಕೆ ತೊಡಗಿದೆ. ಸಾಹಿತ್ಯ ವ್ಯಾಸಂಗ ಹೊರತಾಗಿ, ಸಾಹಿತಿಯಾಗುವ ಹೆಬ್ಬಯಕೆ ನನ್ನ ಮನದಲ್ಲೆಂದೂ ಉದಯಿಸಿರಲಿಲ್ಲ. ಕನ್ನಡ ಪ್ರಚಾರವೊಂದೇ ನನ್ನ ಹಂಬಲ. ಕನ್ನಡದ ಸ್ವಾಭಿಮಾನ ಪ್ರಖರವಾಗದೆ. ಅದರ ಬುಡ ಭದ್ರವಾಗದೆ, ಅದು ಲೋಕದ ಇತರ ಭಾಷೆಗೆ ಹೆಗಲೆಣೆಯಾಗಿ ನಿಲ್ಲಲಾರದೆಂಬ ಶ್ರೇಷ್ಠ ಸಾಹಿತ್ಯ ಪ್ರಸೂನಗಳು ಮೂಡಿ ಬರಲಾರದೆಂಬ ಕಾತರ ನನ್ನದು. ಅದಕ್ಕಾಗಿ ಮನೆ ಮರೆತೆ, ಸುಖ ತೊರೆದೆ, ಆಸೆ ಆಮಿಷಗಳನ್ನು ಹತ್ತಿಕ್ಕಿದೆ, ನಿಂದಾಪಮಾನಗಳ ಸೈರಣೆಗೂ ಸಿದ್ಧನಾದೆ. ಹೊಟ್ಟೆಪಾಡಿಗೆಂದು ಲೇಖನಗಳನ್ನು ಬರೆದೆ, ಪಠ್ಯಕ್ರಮಕ್ಕನುಗುಣವಾಗಿ ಪುಸ್ತಕಗಳನ್ನು ರಚಿಸಿದೆ. ಅವುಗಳ ಮೂಲಕ ದೊರೆತ ಜಯ, ಅಂತೆಯೇ ಮಿತ್ರರ ಮೆಚ್ಚುಗೆ ಲೇಖನ ವ್ಯವಸಾಯದ ಮುಂದುವರಿಕೆಗೆ ಪ್ರೋತ್ಸಾಹವಾಯಿತಲ್ಲದೆ ಆ ಮೂಲಕ ನನ್ನನ್ನು ನಾನು ಕಂಡುಕೊಳ್ಳುವಂತಾಯಿತು. ಆದರೆ ಕನ್ನಡದ ಬೆಳವಣಿಗೆಗೆ ಸಮಗ್ರ ಯೋಜನೆಯನ್ನು ರೂಪಿಸುವಲ್ಲಿ ಲೇಖನ ವ್ಯವಸಾಯ ಕುಂಠಿತಗೊಂಡಿತು; ಕನ್ನಡದ ವಿರೋಧ ಶಕ್ತಿಗಳನ್ನೆದುರಿಸುವಲ್ಲಿ ಕೆಲವು ಜನರ ಹಗೆ ಕಟ್ಟಿಕೊಳ್ಳಬೇಕಾಯಿತು.

ಓದು ಬರಹಕ್ಕೆ ಹಗೆ ಎಂದು ತೀನಂಶ್ರೀ ಹೇಳುತ್ತಿದ್ದುದುಂಟು. ಆ ಮಾತು ತುಸು ಮಟ್ಟಿಗೆ ನಿಜ. ಆದರೆ ಆಡಳಿತ ಬರಹಕ್ಕೆ ದೊಡ್ಡ ಹಗೆಯೆಂಬುದಂತೂ ನೂರಕ್ಕೆನೂರು ಭಾಗ ಸತ್ಯ. ಕನ್ನಡದ ಸರ್ವಾಂಗೀಣಾಭಿವೃದ್ಧಿಯಲ್ಲಿ ತೀವ್ರಾಸಕ್ತರಾಗಿದ್ದ ಕುವೆಂಪು ಅವರು ಪ್ರಸಾರಾಂಗದ ನವೀಕರಣಕ್ಕೆಂದು ನನ್ನನ್ನು ನಿಯೋಜಿಸಿದಾಗ ಅವರ ಆಜ್ಞೆಯೇ ಆಶೀರ್ವಾದವೆಂದು ಕನ್ನಡ ಕೈಂಕರ್ಯಕ್ಕೆ ಸಿದ್ಧನಾದೆ. ಜನ ಜಂಗುಳಿಯನ್ನು ಸೇರದ, ಏಕಾಂತಮೋಹಿಯಾದ ನನಗೆ ಆ ಕಾರ್ಯ ಮೊದ ಮೊದಲು ಕಠಿಣವಾಗಿ ತೋರಿದ್ದುಂಟು. ಕಾಲಕ್ರಮೇಣ ಅದಕ್ಕೆ ಹೊಂದಿಕೊಂಡದ್ದಾಯಿತು. ಆ ಹುದ್ದೆಯಿಂದಾಗಿ ನನ್ನ ಅನುಭವ ಕೋಶ ವಿಸ್ತಾರಗೊಂಡಿತು; ಹೊಸ ಅನುಭವಗಳಿಂದ ಸಂಕೋಚ ಸ್ವಭಾವ ದೂರವಾಯಿತು. ಮಿತ್ರ ಸಂತತಿ ಬೆಳೆಯಿತು; ಎಂದಿಗೂ ಮುಗಿಯದ ಕೆಲಸ ಹೆಗಲ ಮೇಲೇರಿತು. ಪರೀಕ್ಷಾಧಿಕಾರಿಯಾದ ಮೇಲಂತೂ ಸಾಹಿತ್ಯದ ಕೆಲಸಕ್ಕೆ ಎಳ್ಳು ನೀರು ಬಿಟ್ಟತಾಯಿತು. ಮೊದಲಿನಿಂದ ಒಂದೇ ಜಾತಿಯ ಪರಿಸರದಲ್ಲಿ ಬೆಳೆದದ್ದರಿಂದ ರಕ್ತಗತವಾಗಿದ್ದ ಅಲ್ಪತನ ಮಾಯವಾಗಲಿಕ್ಕವಕಾಶವಾಯಿತು. ಕೆಲವು ಆತ್ಮೀಯ ಮಿತ್ರರ ಮತ್ತು ಪ್ರಕಾಶಕರ ಗೆಳೆತನ

ಏನು?

ಕಾಮಿಸಿದ ನಮಗೆ ಲಜ್ಜೆ ಎಂದರೇನು?
ಮಾನ-ಅಪಮಾನಗಳ ಮೀರಿ
ನಿಲ್ಲಬೇಕಾದಾಗ
ನೀನು ಲೋಕದ ರೀತಿ ನೀತಿಗಳ ಹೇಳಿ
ದೂರ ಸರಿಯುವುದು ಏಹಿತವೇ ಕೆಳದಿ?

— ಷಂಚಾಕ್ಷರಿ ಹಿರೇಮಠ

ದಿಂದಾಗಿ ನನ್ನನ್ನು ಬ್ರಾಹ್ಮಣ ಪಕ್ಷಪಾತಿಯೆಂದೂ ಕರೆದದ್ದುಂಟು. ಪರೀಕ್ಷಾಧಿಕಾರಿಯಾಗಿದ್ದಾಗ ಸಮಾಜದ ಹಿರಿಯರ ಮತ್ತು ಕೆಲವು ಗೆಳೆಯರ ಒತ್ತಾಯದ ಪ್ರಸಂಗಾವಳಿಗಳಿಗೆ ಕಟ್ಟುಬಿದ್ದು ಮಾಂಡ್ಯಾಲಿಕ್ಕೆ ಹಾರಿ ತಪ್ಪು ಮಾಡಿದ್ದುಂಟು. ಆದರೆ ಗುರುಕರುಣೆಯ ಸಾನ್ನಿಧ್ಯದಲ್ಲಿ ಪ್ರಭಾವದಿಂದಾಗಿ ಕರ್ತವ್ಯನಿಷ್ಠೆ ಮತ್ತು ಧರ್ಮಶ್ರದ್ಧೆಗಳು ಮೊಳಕೆಗೊಂಡು ನ್ಯಾಯಮಾರ್ಗ ತುಳಿಯಲು ಬಹಳ ದಿನ ಹಿಡಿಯಲಿಲ್ಲ. ನ್ಯಾಯಮಾರ್ಗದಿಂದ ವಿಚಲಿತನಾಗದೆಯೂ ದಾಕ್ಷಿಣ್ಯ ಕಳೆದುಕೊಳ್ಳದಿರಲು ಸುಳ್ಳು ಹೇಳುತ್ತಿದ್ದುದೂ ಉಂಟು. ಇಂಥ ಸಂದರ್ಭದಲ್ಲಿ ಅನೇಕ ಮಿತ್ರರ ಹಾಗೂ ಕೆಲವು ಬಂಧುಗಳ ಕೋಪಕ್ಕೆ ಪಾತ್ರನಾದದ್ದೂ ಉಂಟು. ನನ್ನ ಜೀವನದಲ್ಲಿ ನನಗೆ ಸಮೃದ್ಧವಾಗಿ ವೃತ್ತಿ ತೃಪ್ತಿಯನ್ನು ನೀಡಿದ್ದೆಂದರೆ ಸಮಾಧಿ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆ. ವಿದ್ಯಾರ್ಥಿಗಳೊಡನೆ ಸಲುಗೆಯಿಂದ ಬೆರೆಯುವ, ಅವರನ್ನು ರೂಪಿಸುವ, ಬೆಳೆಸುವ ಅನುಕೂಲಾವಕಾಶಗಳು ಪ್ರಿನ್ಸಿಪಾಲರಿರುವಂತೆ ಬೇರೆ ವಿದ್ಯಾಧಿಕಾರಿಗಳಿಲ್ಲವೆಂದೇ ನನ್ನ ನಂಬುಗೆ.

ಕುವೆಂಪು ಅವರಂತೆ ನನ್ನ ಕ್ಷೇಮಾಭ್ಯುದಯಗಳಿಗೆ ಕಾರಣರಾದ ಮತ್ತೊಬ್ಬ ಗುರು ತೀನಂಶ್ರೀ. ದೂರದಲ್ಲಿದ್ದ ನನ್ನನ್ನು ಹತ್ತಿರಕ್ಕೆ ಕರೆದು, ಸಮಾಸಮಕ್ಕೆ ಕೂರಿಸಿಕೊಂಡು ಊಟ ಮಾಡಿಸಿ ಪ್ರೀತಿಯಿಂದ ಪಾಠ ಹೇಳಿಕೊಟ್ಟು, ಮನದ ಮೂಲೆಯಲ್ಲವಿತಿದ್ದ ದೈನ್ಯವನ್ನು ಹೊಗಲಾಡಿಸಿ ಸಲುಗೆಯಿಂದ ಕಂಡದ್ದುಂಟು. ಪ್ರಾಧ್ಯಾಪಕರ ಹುದ್ದೆಯಿಂದ ನಿವೃತ್ತರಾದಾಗ, ತಾವು ಖಾಲಿ ಮಾಡಿದ ಕುರ್ಚಿಯಲ್ಲಿ ಕೂರಿಸಿ, "ಈ ಸ್ಥಾನ ನಿಮಗೆ ಸ್ಥಿರವಾಗಲಿ" ಎಂದು ಹರಸಿದ ಉದಾರರವರು. ನನಗೆ ಪ್ರಾಧ್ಯಾಪಕ ಹುದ್ದೆ ಸಿಗಬಾರದೆಂದು ಸುತ್ತಮುತ್ತಲಿನವರು ವಿರೋಧಿಸುತ್ತಿದ್ದಾಗ, ಕುಲಪತಿಗಳು ಘೋಷಿಸುತ್ತಿದ್ದಾಗ ನನಗೆ ನೆರವಿತ್ತು ಧೈರ್ಯ ತುಂಬಿದವರು. ಆಡಳಿತ ತೀವ್ರವಾಗಿ ವಿರೋಧಿಸಿದರೂ ಪ್ರಾಧ್ಯಾಪಕ ಸ್ಥಾನಕ್ಕೆ ನಾನು ಅರ್ಹನೆಂದು ಸಾರಿದವರು ಶ್ರೀ ಎಂ. ಮರಿಯಪ್ಪ ಭಟ್ಟ ಮತ್ತು ಶ್ರೀ ಡಿ. ಕೆ. ಭೀಮಸೇನರಾಯರು. ನನ್ನ ಕನಸಿನ ಯೋಜನೆಗಳು ಕಾರ್ಯಗತವಾಗುತ್ತಿದ್ದಂತೆ ನನ್ನಲ್ಲಿ ಆತ್ಮಪ್ರತ್ಯಯ ವಿಕಾಸವಾಗತೊಡಗಿತು. ಅವಕಾಶ ಸಿಕ್ಕಿದರೆ ಹಳ್ಳಿಯ ಹೈದನೂ ಮೇಲಕ್ಕೇರಬಲ್ಲ, ಅಗ್ರಗಾಮಿಗಳಿಗೆ ಹೆಗಲೆಣೆಯಾಗಿ ಅಲ್ಲ, ಹತ್ತಿರ ಹತ್ತಿರವಾಗಿ ನಿಲ್ಲಬಲ್ಲನೆಂಬುವಕ್ಕೆ ನಾನೇ ಸಾಕ್ಷಿಯಾಗಿ ಶ್ರಮ ಜೀವನದ ಹಾಗೂ ಪ್ರಾಮಾಣಿಕತೆಯ ಫಲವನ್ನು ಕಂಡುಕೊಂಡೆ. ಅವರಿವರ ಮಾತು ಕೇಳಿಕೊಂಡು ನನ್ನ ಅರ್ಹತೆಯ ಬಗ್ಗೆ ಶಂಕೆಗೊಂಡಿದ್ದ ನನ್ನನ್ನು ಕುಪರಾಗಿದ್ದ ಕುಲಪತಿಗಳು ಹತ್ತಿರಕ್ಕೆ ಕರೆದು ನನ್ನ ಬಗೆಗಿನ ತಪ್ಪು ತಿಳುವಳಿಕೆಗಾಗಿ ವಿಷಾದ ವ್ಯಕ್ತಪಡಿಸಿದ್ದಲ್ಲದೆ ನನ್ನೆಲ್ಲ ಯೋಜನೆಗಳಿಗೆ ಸರ್ವ ಸಹಕಾರ ನೀಡಿದರು. "ನಿಮ್ಮ ಬಗ್ಗೆ ಕೆಲವರು ಜಾತೀಯತೆಯ ಆರೋಪ ಹೊರಿಸುತ್ತಿದ್ದರು. ಆದರೆ ನಿಮ್ಮ ವರ್ತನೆ ತದ್ವಿರುದ್ಧವಾಗಿದೆ. ನಿಮ್ಮ ಸಂಸ್ಥೆಯಲ್ಲಿ ಬ್ರಾಹ್ಮಣ ಜಾತಿಯ ಜನ ಹೆಚ್ಚಾಗುತ್ತಿದ್ದಾರೆ. ನನ್ನ ಮೇಲೆ ತಪ್ಪು ಬರಬಾರದು" ಎಂದು ಎಚ್ಚರಿಸಿದರು. "ನೀವು ನಿರ್ವಹಿಸುತ್ತಿರುವ ಹೊಣೆಗಾರಿಕೆಗೆ, ನೀವು ಸಲ್ಲಿಸುತ್ತಿರುವ ದುಡಿಮೆಗೆ ಅನುಗುಣವಾಗಿ ನಾವು ಭತ್ಯೆ ನೀಡುತ್ತಿಲ್ಲ. ಹೆಚ್ಚು ಕೇಳಿಕೊಳ್ಳಿ" ಎಂದು ಕಾಡಿದರು. ಕೊನೆಗೆ ಕುಲಪತಿ ಹುದ್ದೆ ಬಿಡುವಾಗ ಏಕಾಂತಕ್ಕೆ ಕರೆದೊಯ್ದು, "ನನ್ನ ಜಾಗದಲ್ಲಿ ನೀವು ಕುಲಪತಿಯಾಗಬೇಕು. ನೀವು ಕೆಲವರ ಬಗ್ಗೆ ಜಾಗರೂಕರಾಗಿರಬೇಕು" ಎಂದು ನನಗೆ ಜಯ ಹಾರೈಸಿದರು. ಸಾಹಿತ್ಯ ವ್ಯವಸಾಯ ಕೆಲವರನೇ ಗುತ್ತಿಗೆಯಿಟ್ಟುಕೊಂಡಿದ್ದ ಪಂಡಿತರು, "ನೀನೂ ಚನ್ನಾಗಿ ಬರೀತೀಯೆ ಕಣಯ್ಯ" ಎಂದು ಪಿಸುಗುಟ್ಟಿದರು. ಇಂಥ ಮಾತುಗಳಿಂದ ನನ್ನ ತಲೆ ತಿರುಗಲಿಲ್ಲ, ಅತಿ ತೃಪ್ತಿಯಿಂದ ದುಡಿಮೆ ಕಡಿಮೆ


anita

ಮಾಡಲಿಲ್ಲ.

ಒಂದು ದಿನ ಮಂಗಳೂರಿನ ಶ್ರೀ ಸೂರ್ಯನಾರಾಯಣ ಅಡಿಗರು ಮನೆಗೆ ಬಂದು "ಕುಲಪತಿ ಹುದ್ದೆಯ, ಬಗ್ಗೆ ವಿದ್ಯಾಸಚಿವರ ಬಳಿ ಮಾತಾಡಿದ್ದೇನೆ. ನೀವು ಬೇಡ ಎನ್ನಬೇಡಿ" ಎಂದು ಒತ್ತಾಯ ಪೂರ್ವಕವಾಗಿ ನುಡಿದರು. "ನೀವು ಶಂಕರಗೌಡರ ಬಳಿ ನನ್ನ ವಿಷಯ ಹೇಳಬಾರದಿತ್ತು. ನನಗೆ ಪ್ರಾಧ್ಯಾಪಕ ಹುದ್ದೆಯೆ ಸಾಕು. ಇಲ್ಲಿಯೇ ಮಾಡುವ ಕೆಲಸ ಹೇರಳವಾಗಿದೆ." ಎಂದು ನಾನವರಿಗೆ ತಿಳಿಸಿದೆ. "ನನ್ನ ಮಾತು ತೆಗೆಯಬೇಡಿ. ಕುಲಪತಿ ಹುದ್ದೆಯ ಹೊಣೆಗಾರಿಕೆಯನ್ನು ನಿರ್ವಹಿಸುವಷ್ಟು ಸಾಮರ್ಥ್ಯ ನಿಮಗಿದೆಯೆ ಎಂದು ಶಂಕರಗೌಡರು ನನ್ನನ್ನು ಪ್ರಶ್ನಿಸಿದರು. ನಾನು ಆ ವಿಷಯ ಕುರಿತು ಸಾಕಷ್ಟು ಹೇಳಿದ್ದಾಗಿದೆ. ನೀವು ತುಟಿ ಪಿಟಕ್ಕೆನ್ನಬೇಡಿ" ಎಂದರು. ವಿದ್ಯಾಸಚಿವ ಶ್ರೀ ಶಂಕರಗೌಡರು ತಮ್ಮನ್ನು ನೋಡುವಂತೆ ಹೇಳಿ ಕಳಿಸಿದರು. ಗಣೇಶನ ಹಬ್ಬದ ದಿನ ನಾನವರ ಮನೆಗೆ ಹೋದೆ. "ಮೇಷ್ಟ್ರೆ,ಒಂದು ಮಾತು ಕೇಳಲಿಕ್ಕಾಗಿ ನಿಮಗೆ ಹೇಳಿ ಕಳಿಸಿದೆ. ಕುಲಪತಿಯಾಗಲಿಷ್ಟವಿದೆಯೆ ?" ಎಂದು ಪ್ರಶ್ನಿಸಿದರು. "ಅಧ್ಯಯನ ಸಂಸ್ಥೆ ಮತ್ತು ಕನ್ನಡ ವಿಶ್ವಕೋಶದ ಮೇಲಿರುವಷ್ಟು ಪ್ರೀತಿ ಕುಲಪತಿ ಹುದ್ದೆಯ ಮೇಲಿಲ್ಲ." "ಏಕೆ?" "ಇಲ್ಲಿ ಸಿಗುವ ಆನಂದ ಅಲ್ಲಿ ಸಿಗುವುದಿಲ್ಲ." "ನೋಡಿ, ಈ ಹುದ್ದೆಗಾಗಿ ಜನರನ್ನು ಹುಡುಕುತ್ತಿದ್ದೇನೆ. ಹೊರಗಿನವರನ್ನು ತರಬಾರದೆಂದುಕೊಂಡಿದ್ದೇನೆ. ನಿಮ್ಮ ವಿಷಯ ನನ್ನೊಡನೆ ಮೊದಲು ಪ್ರಸ್ತಾಪ ಮಾಡಿದವರು ಅಡಿಗರು. ಯಾವುದಾದರೂ ಹೆಸರು, ಸೂಚಿಸುವಂತೆ ಡಾ. ಪಾವಟೆಯವರನ್ನು ಕೇಳಿದೆ. ಅವರು ಸಹ ನಿಮ್ಮ ಹೆಸರನ್ನು ಒತ್ತಿಹೇಳಿದರು. ಅನಂತರ ಕಟ್ಟಿಮನಿ, ನಿರಂಜನ, ಪ. ಸು. ಭಟ್ಟ, ಬಿ. ಜೆ. ಲಿಂಗೇಗೌಡ ಹೀಗೆಯೆ ಇನ್ನೂ ಕೆಲವು ಮಿತ್ರರು ನಿಮ್ಮ ಹೆಸರನ್ನು ಮುಂದಿಟ್ಟರು. ಇಷ್ಟು ದಿನದ ಗೆಳೆತನವಿದ್ದರೂ ನಿಮ್ಮ ಶಕ್ತಿ ಸಾಮರ್ಥ್ಯಗಳ ವಿಷಯ ನನಗೆ ತಿಳಿದಿರಲಿಲ್ಲ. ಜತ್ತಿಯವರು ಸಹ ನಿಮ್ಮ ಬಗ್ಗೆ ಮಾತಾಡಿದ್ದಾರೆ." ಎಂದರು. ನಾನು ತುಸು ಹೊತ್ತು ಅವಾಕ್ಕಾದೆ. "ಇದ್ದಲ್ಲಿಯೇ ನನ್ನನ್ನಿರಿಸಿ. ಕನ್ನಡದ ಕೆಲಸಕ್ಕಾಗಿ ಹೆಚ್ಚು ಹೆಚ್ಚು ದುಡ್ಡು ಕೊಡಿ. ಅಷ್ಟರಿಂದಲೇ ನಾನು ತೃಪ್ತ." "ಕುಲಪತಿಯಾಗಿ ಕನ್ನಡದ ಕೆಲಸವನ್ನು ತೀವ್ರಗೊಳಿಸಬಹುದಲ್ಲವೆ? ನೀವು ಸದ್ದು ಮಾಡದೆ ಒಪ್ಪಿಕೊಳ್ಳಿ."

ಶಂಕರಗೌಡರು ತಿಳಿದುಕೊಂಡಿದ್ದಷ್ಟು ಸುಲಭವಾಗಿ ನಿಯಮನ ಕಾರ್ಯ ಕೈಗೂಡಲಿಲ್ಲ. ಕೊನೆಗೆ ಶ್ರೀ ನಿಜಲಿಂಗಪ್ಪನವರೇ ನನ್ನ ಪರವಾಗಿ ಶಿಫಾರಸು ಮಾಡಲಾಗಿ ತಮ್ಮ ಕಾರ್ಯ ಸಲೀಸಾಯಿತೆಂದು ಶಂಕರಗೌಡರೇ ನುಡಿದರು. "ಕನ್ನಡ ಪ್ರಾಧ್ಯಾಪಕರು ಕುಲಪತಿಯಾಗುವುದೆಂದರೇನು? ಅವರು ಆಡಳಿತ ನಡೆಸಬಲ್ಲರೆ? ಅಂಥ ಭಾರಿ ಹೊಣೆಗಾರಿಕೆಯನ್ನು ಹೊರುವ ಸಾಮರ್ಥ್ಯ ಅವರಲ್ಲಿದೆಯೆ?" ಎಂದು ಒಬ್ಬಿಬ್ಬರು ಕರಾಜಕಾರಣಿಗಳೂ ಕೆಲವು ಪ್ರಾಧ್ಯಾಪಕರು ಪ್ರಶ್ನಿಸಿದ್ದುಂಟು. ಮುಂದೆ ಕುಲಪತಿ ಹುದ್ದೆ ಬಿಡುವಾಗ ದುಃಖಿಸಲಿಲ್ಲ. ಏಕೊ, ಏನೊ. ಅಧ್ಯಯನ ಸಂಸ್ಥೆ ಬಿಡುವಾಗ ಅತ್ತುಬಿಟ್ಟದ್ದುಂಟು. ಆ ರಾತ್ರಿಯೆಲ್ಲ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಶ್ರೀ ವೀರೇಂದ್ರ ಪಾಟೀಲರ ಸಚಿವ ಮಂಡಲಿಯ ಪ್ರತಿಯೊಬ್ಬ ಸದಸ್ಯರೂ ನನ್ನನ್ನು ಚೆನ್ನಾಗಿ ನೋಡಿಕೊಂಡರು. ಸರ್ಕಾರ ಉರುಳಿತು. ರಾಷ್ಟ್ರಪತಿ ಆಡಳಿತ ಬಂತು. ಧರ್ಮವೀರರಂಥ ದಕ್ಷ ಆಡಳಿತಗಾರರನ್ನೂ ಸುಬ್ರಾಡಿಯಾ ಅವರಂಥ ನುರಿತ ಅನುಭವಿಗಳನ್ನೂ ಇನ್ನೂ ಕಾಣಬೇಕಾಗಿದೆ. ದೇವರಾಜ ಅರಸು ಅವರ ಸರಕಾರ ಬಂತು. ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಸಚಿವರನ್ನು ಭೇಟಿ ಮಾಡಿ ಗೌರವಸಲ್ಲಿಸಿದೆ. ಹಿಂದಿನ ಸರ್ಕಾರ ನೇಮಿಸಿದವನೆಂದೋ ತಮ್ಮನ್ನು ಭೇಟಿ ಮಾಡಲಿಲ್ಲವೆಂದೋ ಕೆಲವು ಮಂತ್ರಿಗಳು ನನ್ನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಅವರ ಆ ಅಸಮಾಧಾನ ನನ್ನ ಪುನರ್ನೇಮಕದ ಸಮಯದಲ್ಲಿ ಆಸ್ಫೋಟಗೊಂಡಿತು. ಯಾವುದೋ ಸಂದರ್ಭದಲ್ಲಿ ಮಂತ್ರಿಯೊಬ್ಬರು ಎದುರಾಗಿ, ಪರಿಚಯ ಹೇಳಿಕೊಂಡಾಗ, "ನೀವೇಯೋ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು? ನೀವು ಮಂತ್ರಿಗಳನ್ನು ನೋಡುವ ಪರಿಪಾಠವಿಟ್ಟುಕೊಂಡಂತೆ ಕಾಣುವುದಿಲ್ಲ" ಎಂದು ತಮ್ಮ ನಿಷ್ಕಾಪಟ್ಯವನ್ನು ಬಹಿರಂಗಪಡಿಸಿದರು. "ಕೆಲಸವಿಲ್ಲದೆ ಮಂತ್ರಿಗಳಿಗೇಕೆ ಅನಾವಶ್ಯಕವಾಗಿ ತೊಂದರೆ ಕೊಡಲಿ?" ಎಂದು ನಾನು ವಿನಯದಿಂದಲೇ ಉತ್ತರಿಸಿದೆ. ಸಚಿವ ಮಂಡಲಿಯ ಸಭೆಯಲ್ಲಿ ನನ್ನ ಪುನ

ನೇಮಕದ ಪ್ರಶ್ನೆ ಬಂದಾಗ ಅವರು ನನ್ನ ವಿರುದ್ಧವಾಗಿ ಕೂಗಾಡಿದರೆಂದು ಆ ಮೇಲೆ ತಿಳಿಯಿತು.

ಒಂದು ಉನ್ನತ ಸ್ಥಾನ ಖಾಲಿ ಬಿದ್ದಾಗ ಸ್ಪರ್ಧೆ ಅನಿವಾರ್ಯ. ಆದರೆ ಕುಲಪತಿಯ ಸ್ಥಾನಕ್ಕೆ ಶಕ್ತರನ್ನು ಕುಲಾಧಿಪತಿಗಳು ಆಯ್ಕೆಮಾಡಬೇಕೇ ಹೊರತು, ರಾಜಕೀಯ ಒತ್ತಡಕ್ಕೆ ಮಣಿಯಬಾರದು. ನನ್ನ ಮೊದಲ ಅವಧಿ ಆರು ತಿಂಗಳಿದ್ದಾಗಲೇ ಮೂರ್ನಾಲ್ಕು ಮಂದಿ ಪ್ರಾಧ್ಯಾಪಕರು ನನ್ನ ಬಗ್ಗೆ ಅನೇಕ ಕತೆಗಳನ್ನು ಕಟ್ಟಿ ಅಪಪ್ರಚಾರ ಪ್ರಾರಂಭಿಸಿದರು. ಆದಾಯ ತೆರಿಗೆ ಅಧಿಕಾರಿಗಳು ನನ್ನ ಮನೆಯ ಮೇಲೆ ದಾಳಿ ನಡೆಸಿ ಬಹಳ ಲಕ್ಷ ರೂಪಾಯಿ ವಶಪಡಿಸಿಕೊಂಡರೆಂಬುದೊಂದು ಕತೆ. ನನ್ನ ಒಬ್ಬ ಪ್ರಿಯಶಿಷ್ಯರು ಮನೆಗೆ ಬಂದು "ಏನ್ ಸಾರ್, ನಿಮ್ಮ ಮನೆಯ ಮೇಲೆ ದಾಳಿ ನಡೆಯಿತಂತೆ ಅಹುದೆ?" ಎಂದು ಪ್ರಶ್ನಿಸಿದರು. "ಇರಬಹುದು." "ಚಿನ್ನ ಬೆಳ್ಳಿ ನಗನಾಣ್ಯ ಸಿಕ್ಕಿತಂತೆ." "ಇರಬಹುದು." "ಇರಬಹುದು ಅಂತೀರಿ. ನಿಮ್ಮ ಮಾತು ಒಗಟಿನಂತೆ ಕಾಣಿಸುತ್ತದೆ." "ಈ ಮನೆಯಲ್ಲಿ ಎಷ್ಟೋ ಜನ ಇದ್ದು ಹೋಗಿದ್ದಾರೆ. ಅವರು ಗುಪ್ತ ಸ್ಥಾನಗಳಲ್ಲಿ ಏನೇನು ಬಿಟ್ಟು ಹೋಗಿದ್ದಾರೋ ನನಗೇನು ಗೊತ್ತು? ಹುಡುಕೋಣವೆಂದರೆ ಬಿಡುವಿಲ್ಲ." "ಏನ್ಸಾರ್, ತಮಾಷೆ ಮಾಡ್ತೀರಿ. ಪತ್ರಿಕೆಗಳಲ್ಲೆಲ್ಲ ಗುಲ್ಲೆದ್ದಿದೆ. ಸಂಕಟವಾಯಿತು. ನಿಜ ತಿಳಿಯೋಣ ಎಂದು ಬಂದೆ." "ದೊಡ್ಡ ದೊಡ್ಡ ಅಧಿಕಾರಿಗಳೂ ಅಂತೆಯೇ ಮಾತಾಡಿಕೊಳ್ಳುತ್ತಾರಂತೆ. ನಿಜ ಏನೆಂಬುದು ನನಗೂ ಗೊತ್ತಿಲ್ಲ. ಯಾರಾದರೂ ದಾಳಿ ಮಾಡಿದರೆ ಎಂದು ಮನೆಯವರನ್ನು ಕೇಳಿದೆ. ಅವರಿದ್ದಾಗಲೂ ಯಾರೂ ಬರಲಿಲ್ಲ. ತೋಟದ ಮಾಲಿಗಳನ್ನು ಕೇಳಿದೆ. ಅವರೆಲ್ಲ ಇಲ್ಲ ಎನ್ನುತ್ತಿದ್ದಾರೆ." "ಹಾಗಾದರೆ ಇದೆಲ್ಲ ಕಟ್ಟುಕತೆ ಅನ್ನಿ." "ನನ್ನ ಅವಧಿ ಹತ್ತಿರವಾಗುತ್ತಿದೆ. ಸರ್ಕಾರ ನನಗೆ ಮತ್ತೊಂದು ಅವಧಿಗೆ ನೇಮಿಸಬಾರದೆಂಬ ಭೀತಿಯಿಂದ ಇಷ್ಟೆಲ್ಲ ಅಪಪ್ರಚಾರ ನಡೆಯುತ್ತಿದೆ." ಹಲವು ಅಶ್ಲೀಲ ಕಥೆಗಳನ್ನು ಸಹ ಸೃಷ್ಟಿಸಿದರು. ಮುಖ್ಯಮಂತ್ರಿಗಳು ಹಾಜರಿದ್ದ ಸಭೆಯೊಂದರಲ್ಲಿ ನಾನು ವಿಸ್ತರಣೆ ಬಯಸುತ್ತಿಲ್ಲವೆಂದು ನುಡಿದೆ. ಅವರು ನಗುತ್ತ "ಏಕೆ?" ಎಂದು ಪ್ರಶ್ನಿಸಿದರು. ಪ್ರಾಧ್ಯಾಪಕರೊಬ್ಬರು ನನ್ನ ಕಾಲದಲ್ಲಿ ನೇಮಕಗೊಂಡಿದ್ದ ನೌಕರರ ಮೂರು ಪಟ್ಟಿಗಳನ್ನು ಜಾತಿವಾರಾಗಿ ವಿಂಗಡಿಸಿಕೊಂಡರು. ಒಕ್ಕಲಿಗ ಕೋಮಿಗೆ ಸೇರಿದ ಸಚಿವರ ಬಳಿ ಹೋದಾಗ, "ನೋಡಿ, ಈ ಮನುಷ್ಯ ಅಧಿಕಾರಕ್ಕೆ ಬಂದನಂತರ ಕೆಲಸಗಳನ್ನೆಲ್ಲ ಲಿಂಗಾಯತ ಜಾತ್ಯರಿಗೆ ಮಾಡಿಬಿಟ್ಟ" ಎಂದು ಹೇಳುವುದು. ಲಿಂಗಾಯತ ಸಚಿವರ ಬಳಿ ಹೋದಾಗ "ಈತನಿಗೆ ಲಿಂಗಾಯತರೆಂದರಾಗದು. ನೌಕರಿಗಳೆಲ್ಲ ಒಕ್ಕಲಿಗ ಜಾತ್ಯರಿಗೆ ಮಾತ್ರ ಸಿಕ್ಕಿವೆ" ಎಂದು ಪ್ರಚೋದಿಸುವುದು. ಹೀಗೆ ಏನ ಬೇಕಾದರೆ ಇಲ್ಲದಿರುವ ಕಲಹ ಬಿತ್ತಿ, ಬೆಂಕಿಯಿಡುವುದೇ ಅವರ ಕಾರ್ಯಕ್ರಮವಾಗಿತ್ತು. ನನಗೆ ಈ ವಿಷಯ ತಿಳಿದುದೂ ಮಿತ್ರರಿಂದ.

ಒಂದು ದಿನ 'ಪ್ರಜಾವಾಣಿ'ಯ ಸಂಪಾದಕರು ಶ್ರೀ ಸತ್ಯ ಅವರು ಸಂದರ್ಶನಕ್ಕೆ ನನ್ನ ಮನೆಗೆ ಬಂದರು. ಆ ತನಕ ಅವರನ್ನು ನಾನು ನೋಡಿರಲಿಲ್ಲ. ನನ್ನನ್ನು ನಿಂದಿಸುವ ಲೇಖನಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಪರಸ್ಪರ ಕುಶಲಪ್ರಶ್ನೆ ಮುಗಿದ ನಂತರ ಅವರು ಕೇಳಿದರು! "ಏನ್ಸಾರ್, ಇಷ್ಟು ಶಾಂತ ರೀತಿಯಿಂದ ಮಾತಾಡ್ತೀರಿ. ನನ್ನ ಪತ್ರಿಕೆಯಲ್ಲಿ ನಿಮ್ಮನ್ನು ಬಯ್ದು ಬರೆದಿದ್ದೆ" ಎಂದರು. "ಪತ್ರಿಕೆ ವಿಷಯ ಬೇಡ. ನೀವೀಗ ಅತಿಥಿಯಾಗಿ ನಮ್ಮ ಮನೆಗೆ ಬಂದಿದ್ದೀರಿ. ಪ್ರಾಯಶಃ ಯಾರೋ ಬರೆದು ಕೊಟ್ಟುದನ್ನು ತಪಾಸಣೆ ಮಾಡದೆ ನಿಜ ಅಂತ ತಿಳಿದು ಮುದ್ರಿಸಿದ್ದೀರಿ. ಮೇಲಾಗಿ ನನಗೆ ಬಯ್ಯುವವರು ಬೇಕು. ಮೈಯೆಲ್ಲ ಕಣ್ಣಾಗಿ ಎಚ್ಚರಿಕೆಯಿಂದ ಕೆಲಸ ಮಾಡಲನುಕೂಲವಾಗುತ್ತದೆ. ನೀವೇನು ಬಂದದ್ದು ಹೇಳಿ?" "ನಿಮ್ಮ ವಿರೋಧವಾಗಿ ಬರೆದವರು ನಿಮ್ಮ ಅಧ್ಯಾಪಕರೇ ಹೊರತು ನಾನಲ್ಲ. ನಾನೊಬ್ಬ ಮುದ್ರಕ. ಇನ್ನೂ ಹಲವು ಲೇಖನಗಳಿವೆ" ಎಂದು ನುಡಿದು ಅವನ್ನೆಲ್ಲ ನನ್ನ ಮುಂದಿಟ್ಟರು. ಅಧ್ಯಾಪಕರು ಯಾರೆಂಬುದು ತಿಳಿಯಿತು. "ಇವನ್ನೂ ಅಚ್ಚು ಹಾಕಿ ಬಿಡಿ" ಎಂದೆ. "ಇದೇಕೆ ಸಾರ್? ಕೆಲವು ಪ್ರಾಧ್ಯಾಪಕರೇ ನನ್ನ ಬಳಿ ಬಂದು, 'ಇವು ಪ್ರಕಟಿಸದಿರಿ, ಎಲ್ಲ ಶುದ್ಧ ಸುಳ್ಳು' ಎಂದು ನನ್ನನ್ನೇ ತರಾಟೆಗೆ ತೆಗೆದುಕೊಂಡರು. ನಿಮ್ಮಲ್ಲಿ ಜಾತೀಯತೆಯಿಲ್ಲವೆಂದು ನನಗೆ ಸ್ಪಷ್ಟವಾಯಿತು. ನಿಮಗೆ ಮತ್ತೊಂದು ಅವಧಿ ವಿಸ್ತರಣೆ ಸಿಗಬೇಕಾಗಿದೆ. ನಿಮ್ಮ ಪರ

ಹಾಗೆ ಇದ್ದ ಕೆಲಸ ಪ್ರಾರಂಭಿಸುತ್ತೇನೆ." "ಇದ್ದ ಹಾಗೆ ಹೆಕ್ಕಿತೆ ನನಗೇನೂ ಬೇಸರವಿಲ್ಲ. ನಿಜ ತಿಳಿಯದೆ ಯಾವುದನ್ನೂ ಪ್ರಕಟಿಸಬೇಡಿ. ನನ್ನಲ್ಲಿ ಅವಗುಣಗಳಿದ್ದರೆ ಖಂಡಿತ ಎತ್ತಿ ತೋರಿಸಿ" ಎಂದವರನ್ನು ಕಳಿಸಿಕೊಟ್ಟೆ. ಸೂರ್ಯನಾರಾಯಣ ಅಡಿಗರಂಥ ಪ್ರಮುಖರಾದೊಬ್ಬರು ಸಚಿವರ ಬಳಿ ಮಾತನಾಡುತ್ತಿದ್ದಾಗ ನನ್ನ ವಿಷಯ ಬಂತಂತೆ. "ನಿಮ್ಮ ಗೌಡರು ಜಾತಿವಾದಿಗಳೆಂದು ಕೆಲವರ ಅಭಿಪ್ರಾಯವಿದೆ. ಆದರೆ ಒಕ್ಕಲಿಗರೇ ಅವರನ್ನು ಪ್ರಬಲವಾಗಿ ವಿರೋಧಿಸುತ್ತಿದ್ದಾರೆ. ಏನು ಮಾಡುವುದೋ ಗೊತ್ತಿಲ್ಲ" ಎಂದು ಮಂತ್ರಿಗಳು ಅಡಿಗರ ಮುಂದೆ ನುಡಿದರಂತೆ. "ಅವರಲ್ಲಿ ಜಾತೀಯತೆಯಿಲ್ಲ ಎನ್ನುವುದಕ್ಕೆ ನಿಮ್ಮ ಮಾತೇ ಸಾಕ್ಷಿ. ನಾನವರನ್ನು ನಾಲ್ಕೈದು ವರ್ಷಗಳಿಂದ ನೋಡುತ್ತಿದ್ದೇನೆ. ಅವರು ಯಾರ ಮುಂದೆಯೂ ಬಗ್ಗಿ ಸಲಾಮು ಹೊಡೆಯುವವರಲ್ಲ. ಕಂಡದ್ದನ್ನು ಕಂಡಂತೆ ಹೇಳುವವರು. ನಿರ್ದಾಕ್ಷಿಣ್ಯ ವ್ಯಕ್ತಿ. ಮಾತು ತುಸು ಕಠಿಣ" ಎಂದು ಅಡಿಗರು ಉತ್ತರ ನೀಡಿದರಂತೆ.

ಅಂಥ ವಿರೋಧ ವಾತಾವರಣದಲ್ಲಿ ಮುಂದುವರಿಯುವುದು ತರವಲ್ಲವೆಂದು ನಿರ್ಧರಿಸಿಕೊಂಡೆ. ಕುಲಾಧಿಪತಿಗಳನ್ನು ಭೇಟಿ ಮಾಡಿ, "ನನ್ನ ಅವಧಿ ಮುಗಿಯುತ್ತಿದೆ. ಜಾಗ್ರತೆ ಬೇರೆ ಏರ್ಪಾಡು ಮಾಡಿಕೊಳ್ಳಿ" ಎಂದು ಬಿನ್ನವಿಸಿದೆ. "ಎರಡನೆಯ ಸರದಿಗೆ ಮುಂದುವರಿಸಲು ಕಾನೂನಿನ ಅಡಚಣೆಗಳಿವೆಯೆ?" ಎಂದು ಕೇಳಿದರು. "ಇಲ್ಲ, ಆದರೆ ನನಗೂ ಇಷ್ಟವಿಲ್ಲ." "ಆಗಲಿ ನೋಡೋಣ." ವಿದ್ಯಾಸಚಿವರನ್ನು ಕಂಡು ಮೇಲ್ಕಂಡ ವಿಷಯವನ್ನು ಪುನರುಚ್ಚರಿಸಿದೆ. "ಜವರೇಗೌಡರೇ, ನಿಮ್ಮನ್ನು ಈ ಹುದ್ದೆಯಲ್ಲಿ ಮುಂದುವರಿಸಬೇಕೆಂಬುದೇ ನನ್ನ ಆಸೆ. ಸಚಿವ ಮಂಡಲಿಯಲ್ಲಿ ನಿಮಗೆ ವಿರೋಧವಿದೆ. ಆ ವಿರೋಧಕ್ಕೆ ಕಾರಣ ಇಬ್ಬರು ರಾಜಕಾರಣಿಗಳು, ಒಬ್ಬರು ಹಿರಿಯರು. ಮತ್ತೊಬ್ಬರು ಯುವಕರು" ಎಂದವರು ನುಡಿದರು. "ಮತ್ತೊಂದು ಅವಧಿಗೆ ಮುಂದುವರಿಯಲು ಕೊನೆಗೊಳ್ಳಲು ನಾನು ಬಿಡಲ್ಲ. ಅಧ್ಯಾಪನ ಸ್ಥಾನಕ್ಕೆ ಮರಳಬೇಕೆಂಬುದೇ ನನ್ನ ಆಸೆ. ಬೇಗ ನಿರ್ಧಾರ ತೆಗೆದುಕೊಳ್ಳಿ" ಎಂದು ನಾನು ಖಡಾಖಂಡಿತವಾಗಿ ಹೇಳಿದೆ. ಒಂದು ದಿನ ಮಧ್ಯಾಹ್ನ ಮೂರು ಗಂಟೆಗೆ ಫೋನಿನ ಕರೆ ಬಂತು: "ಅಭಿನಂದನೆ, ನಿಮ್ಮನ್ನು ಮತ್ತೊಂದು ಅವಧಿಗೆ ಈ ಹುದ್ದೆಯಲ್ಲಿ ಮುಂದುವರಿಸಲಾಗಿದೆ" — ಹೇಳಿದವರು ವಿದ್ಯಾಸಚಿವರು. ಮಾರನೇ ದಿನವೇ ಅವರನ್ನು ಭೇಟಿ ಮಾಡಿ, "ನಿಮಗೆ ವಂದನೆ. ನನ್ನನ್ನೇಕೆ ಮುಂದುವರಿಸಿದಿರಿ?" ಎಂದು ಪ್ರಶ್ನಿಸಿದೆ. "ಆ ಕತೆ ಈಗ ಬೇಡ. ಕೊಠಾರಿಯವರು ನಿಮ್ಮ ಪರವಾಗಿ ಕುಲಾಧಿಪತಿಗಳಿಗೊಂದು ದೀರ್ಘ ಪತ್ರ ಬರೆದಿದ್ದಾರೆ. ಶ್ರೀಮಾಲಿ ಬರೆದಿದ್ದಾರೆ. ಇನ್ನೂ ಹಲವಾರು ಗಣ್ಯರಿಂದ ಪತ್ರಗಳು ಬಂದಿವೆ. ನಿಮ್ಮ ಬಗ್ಗೆ ಕುಲಾಧಿಪತಿಗಳಿಗೆ ವಿಶ್ವಾಸವಿದೆ. ಮುಖ್ಯ ಮಂತ್ರಿಗಳು ಆಕ್ಷೇಪವೆತ್ತಲಿಲ್ಲ. ನನ್ನ ಆಸೆಯೂ ಈಡೇರಿತು" ಎಂದರು. ಅವರ ಮಾತು ಕೇಳಿ ನನಗೇ ಆಶ್ಚರ್ಯವಾಯಿತು. ನನ್ನ ಪರವಾಗಿ ಕೊಠಾರಿಯವರೇಕೆ ಪತ್ರ ಬರೆದರು? ಅದಿನ್ನೂ ಬಿಡಿಸದ ರಹಸ್ಯವಾಗುಳಿದಿದೆ. "ಹಣ ಚೆಲ್ಲಿದರೆ ಏನು ಬೇಕಾದರೂ ನಡೆದೀತು?" ಎಂದು ನಿರಾಶೆಗೊಂಡ ಪ್ರಾಧ್ಯಾಪಕರು ಉದ್ಗಾರ ತೆಗೆದರು. ಈಶ್ವರೇಚ್ಛೆಯ ಮುಂದೆ ಬಿನುಗಗಳ ಶಕ್ತಿಪ್ರದರ್ಶನಕ್ಕೆ ಜಯವೆಲ್ಲಿಯದು?

ಸಾಮಾನ್ಯವಾಗಿ ಮಂತ್ರಿಗಳು ವಿಶ್ವವಿದ್ಯಾನಿಲಯದ ವ್ಯವಹಾರಗಳಲ್ಲಿ ತಲೆ ಹಾಕುತ್ತಿರಲಿಲ್ಲವೆಂಬುದು ಸಮಾಧಾನದ ಸಂಗತಿ. ಒಂದೇ ಒಂದು ಸಾರಿ ಮಾತ್ರ ತಮಗೆ ಬೇಕಾದವರೊಬ್ಬರಿಗೆ ಪ್ರಾಧ್ಯಾಪಕ ಹುದ್ದೆ ಕೊಡಿಸಬೇಕೆಂದು ಒಬ್ಬ ಮಂತ್ರಿಗಳು ಸಾಹಸ ಮಾಡಿದ್ದುಂಟು. ಆ ಬಗ್ಗೆ ಕುಲಾಧಿಪತಿಗಳು ಸಹ ಕಾಗದ ಬರೆಸಿ, ನಿರ್ದಿಷ್ಟಾವಧಿಯೊಳಗಾಗಿ ನೇಮಕ ಸಮಿತಿ ಸಭೆ ಕರೆಯುವಂತೆ ಆಜ್ಞಾಪಿಸಿದರು. ನಾನವರಿಗೆ ಪತ್ರ ಬರೆದು, ಸಮಿತಿ ಕರೆಯುವುದು ಸಾಧ್ಯವಿಲ್ಲವೆಂದೂ, ಅನಿವಾರ್ಯವೆಂದು ತೋರಿದರೆ ನಾನು ಹುದ್ದೆ ಬಿಡಲು ಸಿದ್ಧವೆಂದೂ ವಿವರಿಸಿದೆ. ಅವರು ಹೇಳಿ ಕಳಿಸಿದರು. ಹೋದಾಗ ತಿಂಡಿ ಕೊಟ್ಟು ಉಪಚರಿಸಿ, ನಗುನಗುತ್ತಲೆ—"ನಿಮ್ಮ ವಾದವನ್ನೊಪ್ಪಿಕೊಂಡಿದ್ದೇನೆ. ಸಭೆ ಕರೆಯಬೇಡಿ" ಎಂದು ನುಡಿದರು. "ಆದರೆ ಒಂದು ಸಲಹೆ ನೀಡುತ್ತೇನೆ. ನೀವು ವಿದೇಶಕ್ಕೆ ಹೋಗಿದ್ದಾಗ ನಾಲ್ವರು ಹಿರಿಯ ಪ್ರಾಧ್ಯಾಪಕರು ಬಂದಿದ್ದರು. ಒಬ್ಬೊಬ್ಬರು ಅಧಿಕಾರಿಗಳ ಮೇಲೆ ಪುಕಾರು ಹೇಳಿದರು. ಅವರನ್ನು ಒಂದಕ್ಕೆ ಕಳಿಸಿ ಬಿಡಿ" ಎಂದರು. ನಾನು ಹೊ

[illegible] ಉತ್ತರವಿಲ್ಲ. ಮ[illegible] ಮಂತ್ರಿಗಳನ್ನು ನೋಡ[illegible] ಅಧಿಕಾರಿಗಳು [illegible] ಹಾಕುತ್ತಿದ್ದಾರೆ. ಅವರಿಗೆ [illegible] ಪ್ರಾಧ್ಯಾಪಕರೇ [illegible]" ಎಂದರು. "ನಿಮ್ಮ ಪ್ರಾಧ್ಯಾ[illegible] ಪ್ರಶ್ನೆಗಳನ್ನು [illegible] ಉತ್ತರ ಕೊಡುವ [illegible]. ನೀವು [illegible] ಕಂಡು [illegible]" ಎಂದು ಅವರಿಗೆ ಸಮಾ[illegible] ಬರುವ ಅಭಿಪ್ರಾಯ [illegible]. ನಾನು ಕುಲಪತಿಯಾಗಿ ಮೊದ[illegible] ಸ್ವೀಕರಿಸಿಕೊಂಡೆ. ಕೊನೆಗೆ [illegible] ಬರುವ ಪತ್ರ ಸಲ್ಲಿಸಿದೆ. ಆ [illegible] ಮುಖ್ಯಮಂತ್ರಿಗಳು ಕಾರಾ[illegible] ಕರೆಸಿಕೊಂಡು "ರಾಜ[illegible] ಏನು ಸಮಸ್ಯೆಯಿದ್ದರೂ [illegible]" ಎಂದು ಪ್ರೋತ್ಸಾಹಿಸಿದರು. [illegible] ನೊಂದುಕೊಂಡು, "ನೀವಿನ್ನು [illegible] ಹೋಗಬೇಡಿ. ನಾವು ನಾವೇ [illegible] ಬಗೆಹರಿಸಿಕೊಳ್ಳೋಣ" [illegible]. ಇಬ್ಬರು ಸೆನೆಟ್ [illegible] ವಿರುದ್ಧವಾಗಿ ಪತ್ರಿಕೆಗಳಿಗೆ [illegible]. ಆಯಾ ಆರೋಪವನ್ನು [illegible] ಕುಲಾಧಿಪತಿಗಳಿಗೆ ಸಲಹೆ [illegible] "[illegible] ಆಡಳಿತದ ವಿಷಯ ನನಗೆ ಗೊತ್ತಿ[illegible] ಬಗ್ಗೆ ವಿಶ್ವಾಸವಿಲ್ಲದಾಗ ತಿಳಿ[illegible] ಮತ್ತಷ್ಟು ಏನ [illegible]" ಎಂದವರು [illegible] ವ್ಯಕ್ತಪಡಿಸಿದರು. ಆ ಇಬ್ಬರು [illegible] ಘನತೆ, ಇಂಗಿತಜ್ಞತೆ, [illegible] ಅಪೂರ್ವವೆಂದೇ ನನ್ನ ಭಾವನೆ. [illegible] ಅವಧಿ ಮುಗಿದಾಗ ನಾನು [illegible] ನಿರ್ದೇಶಕನಾಗಿ ಬಂದಿರು[illegible] ಅವರು ಅಷ್ಟೇ ಮಾಡಿ[illegible] ಬಂದಿರಬೇಕೆಂಬುದೇ [illegible] ಎಂದು ಕೇಳಿಕೊಂಡೆ. "ಬೇಡ" [illegible] ಮುಖ್ಯಾಧಿಕಾರಿ ನಿವೃತ್ತ[illegible]ನಾಗುವತನಕ ಸ್ಥಿರವಾಗಿರುವರು. ಪ್ರತಿಯೊಬ್ಬರೂ ಪರ್‍ಯಾಯ ಕ್ರಮದಲ್ಲಿ ಬರುವವನ್ನು ಮಾ[illegible]" ಎಂದು ನನ್ನ ಅಭಿಪ್ರಾಯ ತಿಳಿಸಿದೆ. ನನ್ನ ಇರಾದೆಯಂತೆ ಅಷ್ಟೇ ನಡೆಯಿತು. ಆದರೆ ಅವರ ಅನುಭವದ ಮಾತು ಕೇಳಬೇಕಾಗಿತ್ತೇನೋ ಎಂದು ಈಗನ್ನಿಸುತ್ತದೆ. ಅಮೇರಿಕದ ಅಥವಾ ಇಂಗ್ಲಂಡಿನ ಪದ್ಧತಿ ನಮ್ಮ ಭೂಮಿಗೆ ಸರಿಹೊಂದಲಾರದೆಂಬ ಶಂಕೆ ನಿಜವಾಗುತ್ತಿದೆ.

ತುರ್ತುಪರಿಸ್ಥಿತಿಯ ಸಮಯದಲ್ಲೊಮ್ಮೆ ವಿದ್ಯಾರ್ಥಿ ವೃಂದವನ್ನುದ್ದೇಶಿಸಿ ಮಾತಾಡುತ್ತ "ಈಗ ವಿದ್ಯಾರ್ಥಿಗಳ ಶಿಸ್ತು ಹೆಚ್ಚಾಗುತ್ತಿದೆ. ಹುಲಿಗಳಂತೆ ಅರ್ಭಟಿಸುತ್ತಿದ್ದವರು ಇಲಿಗಳಂತೆ ಬಿಲ ಸೇರಿಕೊಂಡಿದ್ದಾರೆ. ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ದೃಷ್ಟಿಯಿಂದ ತುರ್ತು ಪರಿಸ್ಥಿತಿ ಬೇಗ ಹೋಗಬೇಕೆಂದು ತೋರುತ್ತ[illegible]ದೆ" ಎಂಬುದಾಗಿ ವ್ಯಂಗ್ಯವಾಗಿ ಹೇಳಿದೆ. ಪತ್ರಿಕೆಗಳಲ್ಲಿ ಕೊನೆಯ ವಾಕ್ಯ ಮಾತ್ರ ಅಚ್ಚಾಯಿತು. "ಸ್ವಾತಂತ್ರ್ಯತೆಯಿಲ್ಲದ ವಿಶ್ವವಿದ್ಯಾನಿಲಯದ ಅಧಿಕಾರ ನನ್ನ ದೃಷ್ಟಿಯಿಂದ ಕೆಟ್ಟ ಕನಸಾಗಿದೆ" ಎಂದು ಮತ್ತೊಮ್ಮೆ ನುಡಿದೆ. "ಕುಲಪತಿಯ ಹುದ್ದೆ ಕೆಟ್ಟ ಕನಸಿನಂತೆ ಕಳೆದುಹೋಯಿತು" ಎಂದು ಪತ್ರಿಕೆಗಳು ವರದಿ ಮಾಡಿದವು. ನಾನು ಪೂರ್ಣ ನಿರ್ದೋಷಿ ಎಂದು ಹೇಳಿಕೊಳ್ಳಲಾರೆ. ಮೂರ್ನಾಲ್ಕು ನೇಮಕಗಳ ವಿಷಯದಲ್ಲಿ ತಪ್ಪು ಮಾಡಿದ್ದೇನೆಂಬುದು ಈಗ ಅರಿವಾಗುತ್ತಿದೆ. ಆಗ ಹಿತೈಷಿಗಳ ಮಾತು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ನನಗರಿವಿಲ್ಲದಂತೆ ಇನ್ನೂ ಕೆಲವು ನಡೆದಿರಬಹುದು. ತಪ್ಪನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳಲು ಸದಾ ಸಿದ್ಧ. ಸೆನೆಟ್ ಸಿಂಡಿಕೇಟುಗಳ ಮುಂದೆ ತಪ್ಪೊಪ್ಪಿಕೊಂಡದ್ದುಂಟು. ಕಂಡದ್ದನ್ನು ಕಂಡಂತೆ ಹೇಳುವವನಾದರೂ ತಪ್ಪು ಮಾಡಿದಾಗ ಒಪ್ಪಿಕೊಳ್ಳುವಲ್ಲಿ ಹಿಂಜರಿದಿಲ್ಲ. ನಾನು ಯಾವೊಬ್ಬ ಕಂತ್ರಾಟುದಾರನಿಗೂ ಪಕ್ಷಪಾತ ತೋರಿಲ್ಲ. ಗುಮಾಸ್ತೆ ಹುದ್ದೆ ವಿನಾ ಉಳಿದ ನೇಮಕಗಳಿಗಂತು ಕುಲಪತಿ ಪೂರ್ಣ ಜವಾಬ್ದಾರನಲ್ಲ. ಪ್ರತಿಯೊಂದು ನೇಮಕವೂ ಸಮಿತಿಗಳಲ್ಲಿ ನಡೆದು, ಕುಲಾಧಿಪತಿ ಅಥವಾ ಸಿಂಡಿಕೇಟಿನ ಒಪ್ಪಿಗೆ ಪಡೆಯಬೇಕಿತ್ತು. ಪ್ರಾಧ್ಯಾಪಕರ ಮತ್ತು ತಜ್ಞರ ಪೂರ್ಣಾನುಮೋದನೆ

ಯಿಲ್ಲದೆ ಯಾವ ಅಧ್ಯಾಪಕನೂ ನಿಯುಕ್ತಗೊಂಡಿಲ್ಲವೆಂದು ಸ್ಪಷ್ಟವಾಗಿ ಹೇಳಬಲ್ಲೆ. ಆತ್ಮಸಾಕ್ಷಿಯಾಗಿ ಹಾಗೂ ಪ್ರಾಮಾಣಿಕವಾಗಿ ಕರ್ತವ್ಯಪ್ರಜ್ಞೆಯಿಂದ ದುಡಿಯುವತನಕ ಟೀಕೆ ನಿಂದನೆಗಳಿಗೆ ಹೆದರಬೇಕಾಗಿಲ್ಲವೆಂಬುದೇ ನನ್ನ ಸಿದ್ಧಾಂತ. ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರು, ಪ್ರಿನ್ಸಿಪಾಲರು, ಪ್ರಾಧ್ಯಾಪಕರಿಂದ ಮೊದಲಾಗಿ ವಿದ್ಯಾರ್ಥಿಗಳಿಂದ ನಾನು ಪಡೆದ ಸಹಕಾರದಿಂದಾಗಿ ನನ್ನ ಅಧಿಕಾರಾವಧಿ ಯಶಸ್ವಿಯಾಯಿತೆಂಬ ಸಮಾಧಾನದಿಂದಲೇ ಕುಲಪತಿಯ ಸ್ಥಾನದಿಂದ ನಿರ್ಗಮಿಸಿದೆ.

ಪ್ರಾಧ್ಯಾಪಕ ಹುದ್ದೆಗೆ ಮರಳಿದಾಗ ಲೀಲಾ ವಿಹಾರಭವನದ ಒಂದು ಮೂಲೆಯ ಕೋಣೆ ನನ್ನ ಆರಮನೆಯಾಯಿತು. ಕೆಲವು ದಿನವಾದರೂ ಗಂಗೋತ್ರಿಯಲ್ಲಿ ವಾಸಿಸಬೇಕೆಂಬ ಹಂಬಲದಿಂದ ಪ್ರಾಧ್ಯಾಪಕ ಭವನ ಸೇರಿದ್ದಾಯಿತು. ಹಿಂದೆ ಹಾಕಿಕೊಂಡಿದ್ದ ಸಾಹಿತ್ಯ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಸಕಲ ಸಂಬಂಧಗಳನ್ನು ತೊರೆದು ಕುಳಿತೆ. ನನ್ನ ಮಕ್ಕಳು ವಿದೇಶಗಳಿಗೆ. ನಾನು ಮತ್ತು ಮಡದಿ ಇಬ್ಬರೇ ಮನೆಯಲ್ಲಿ! [illegible] ಜೀವನ ಕಠಿಣವಾಯಿತು. ಬರವಣಿಗೆಗೆ ಶರಣಾಗದಿದ್ದರೆ ಬಾಳು ಸಾಗಿಸುವುದೇ ಕಷ್ಟವಾಗುತ್ತಿತ್ತು. ಆಗಾಗ್ಗೆ ಮನೆಗೋ ಕಚೇರಿಗೋ ಬರುತ್ತಿದ್ದ ವಿದ್ಯಾರ್ಥಿಗಳು, "ಏನು ಸಾರ್, ನಿಮ್ಮ ಮನೆ ಮಾಜಿ ಕುಲಪತಿಯ ಮನೆಯಂತಿಲ್ಲವಲ್ಲ? ನೀವು ನಡೆಯಬಾರದು ಸಾರ್, ಕಾರಿನಲ್ಲೇ ಓಡಾಡಬೇಕು. ಕೆಲವು ಜನ ನಿಮ್ಮ ಬಗ್ಗೆ ಆಡಿಕೊಳ್ಳುವುದೂ ಉಂಟು. ಅವರು ನೋಡಿ ಎಷ್ಟು ಜಬರದಸ್ತಾಗಿ ಉಡುಪು ಧರಿಸುತ್ತಾರೆ, ಇವರು ನೋಡಿ ಹೇಗೆ ಮಜ ಮಾಡುತ್ತಿದ್ದಾರೆ!" ಎಂದು ಪ್ರಸ್ತಾಪಿಸುತ್ತಿದ್ದರು. ತಮಾಷೆ ಮಾಡುತ್ತಿದ್ದರೆಂದೇ ಹೇಳಬೇಕು. ಆ ಮಾತುಗಳಲ್ಲಿ ಪ್ರೀತಿ ವಿಶ್ವಾಸಗಳು ತುಂಬಿ ತುಳುಕುತ್ತಿದ್ದವು. "ಮಜ ಎನ್ನುವ ಪದದ ಅರ್ಥವೇ ನನಗೆ ಗೊತ್ತಿಲ್ಲ. [illegible] ನನ್ನ ಸ್ವಭಾವಕ್ಕೆ ಅಥವಾ ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಲಾರೆ. ಬಹುಜನ [illegible] ಬದುಕಿನಲ್ಲಿ ನರಳುತ್ತಿರುವಾಗ ನಾನು ಮೆರೆಯುವುದು ಸರಿಯಲ್ಲ. ಈಗಲೂ ಒಳ್ಳೆಯ ಊಟ ಸವಿಯುವಾಗ, ಕಾರಿನಲ್ಲಿ ಕೂತಾಗ ದಿವಂಗತ ತಂದೆ ತಾಯಿಯರ ನೆನಪಾಗುತ್ತದೆ. [illegible] ದಲ್ಲಿ ಏಕರೂಪತೆ ಸಾಧ್ಯವಿಲ್ಲ. ನನ್ನ ಜೀವನ ವಿಧಾನವೇ ಬೇರೆ" ಎಂದು ನಾನವರಿಗೆ ಉತ್ತರಿಸುತ್ತಿದ್ದೆ. ನನ್ನ ಉತ್ತರದಿಂದ ಅವರಿಗೆ ಸಮಾಧಾನವಾಗಲಿಲ್ಲ.

ನನ್ನ ಮನಸ್ಸಿನ ರಸಾತಲದಲ್ಲಿ ಹುದುಗಿಕೊಂಡಿದ್ದ ಬಯಕೆಯು [illegible] ಯದಲ್ಲಿ ಕೆರಳಲನುವಾಯಿತು. ಕೆಲವು ರಾಜಕೀಯ ಧುರೀಣರು ಪ್ರಶಂಸೆಯ ಹಾಗೂ ಪ್ರೋತ್ಸಾಹದ ಗಾಳಿ ಬೀಸಿದಾಗ ಅದು ಪ್ರಬಲವಾಯಿತು. ಸಾಹಿತ್ಯ ಅಥವಾ ಶೈಕ್ಷಣಿಕ [illegible] ದವರು ರಾಜಕೀಯ ಕ್ಷೇತ್ರಕ್ಕೆ [illegible] ಹಳೆಯ ವೇಷಭೂಷಣಗಳನ್ನು ಕಳಚಿಟ್ಟು, ಹೊಸದನ್ನು ತೊಟ್ಟು, ಮನೋಧರ್ಮ, ಜೀವನ ವಿಧಾನಗಳನ್ನು ಬದಲಿಸಿಕೊಂಡು ರಾಜಕೀಯಕ್ಷೇತ್ರ ಪ್ರವೇಶಿಸಬೇಕಾಗುತ್ತದೆ. [illegible] ನನ್ನ [illegible] ರಾಜಕೀಯ [illegible] ಒಂದೆಯೆಂಬ ಸತ್ಯ ತಿಳಿಯಲು ಬಹುಕಾಲ ಹಿಡಿಯಲಿಲ್ಲ. ಕನ್ನಡದ ಹಿತರಕ್ಷಣೆಗಾಗಿ, ಸಮಾಜಸೇವೆಗಾಗಿ, ಕೈಕಾಲು ಗಟ್ಟಿಯಾಗಿರುವ ತನಕ ದುಡಿಯಬೇಕೆಂಬ ಪ್ರೇರಣೆಯಿಂದ [illegible] ರಿತೇ ಹೊರತು ಸ್ವಾರ್ಥ ಸಾಧನೆಗಲ್ಲ. ದಿನಕ್ಕೊಂದು ಮುದ್ದೆ ಹಿಟ್ಟಿನಿಂದ ತೃಪ್ತಿಪಟ್ಟುಕೊಳ್ಳುವವನಿಗೆ ಯಾವ ಸಿರಿವಂತಿಕೆಯಾಗಲೀ ಸ್ಥಾನಮಾನಗಳಾಗಲೀ ಬೇಕಾಗುವುದಿಲ್ಲ. "ನೀವು ಚೆನ್ನಾಗಿ ಬರೆಯಬಲ್ಲಿರಿ. ನಿಮಗೆ ರಾಜಕೀಯ ಹವ್ಯಾಸ ಬೇಡ" ಎಂದು ಕೆಲವರು ಸಲಹೆಮಾಡಿದುಂಟು. ರಾಜಕೀಯದ ಸಂಪರ್ಕದಿಂದ ಅನುಭವ ವಿಸ್ತಾರವಾಗುತ್ತದೆ; ಲೇಖನಿ ಚುರುಕಾಗುತ್ತದೆಂದು ನಾನವರಿಗೆ ಹೇಳಿದೆ. ಆ ಕ್ಷೇತ್ರದ ಹೊರಗೆ ನಿಂತು ಕಿಟಕಿಯಲ್ಲಿ ಇಣುಕುವಷ್ಟರಿಂದಲೇ ಅಷ್ಟೋ ಇಷ್ಟೋ ಅನುಭವ ಗಳಿಸಿದ ತೃಪ್ತಿ ನನಗಿದೆ.

ಜೀವನದ ಈ ದಡದಲ್ಲಿ ನಿಂತು ದಾಟಿ ಬಂದ ಆ ದಡದ ಕಡೆಗೆ ಕಣ್ಣು ಹೊರಳಿಸಿದಾಗ ಹೋರಾಟವೇ ಜೀವನದ ರಹಸ್ಯ [illegible] ಸ್ಪಷ್ಟವಾಗುತ್ತದೆ. ಸಂಘರ್ಷವಿಲ್ಲದೆ ಪ್ರಗತಿಯಿಲ್ಲ. ಆಂತರಂಗಿಕ ಸಂಘರ್ಷ ನಾನಾ [illegible]

ಸಂಪರ್ಕದ ಪರಿಣಾಮವಾಗಿ ತುಡಿಯುವ ಪ್ರತಿಕ್ರಿಯೆಯಿಂದಾಗಿ ಸಂಘರ್ಷ ಸಂಪ್ರಾಪ್ತವಾಗುತ್ತದೆ. ಪ್ರವಾಹದೊಡನೆ ತೇಲುವ ಗಾಳಿ ಗುಂಟ ತೂರುವ ಲತೆಯಂತೆ ಬಳುಕುವ ಮನುಷ್ಯನಿಗೆ ಜಯ ಪ್ರಾಪ್ತಗಿದಂತೆ, ಹೊಳೆ ಗಾಳಿಗಭಿಮುಖವಾಗಿ ಹಾಯುವ, ಮರದಂತೆ ಸೆಟೆದು ನಿಲ್ಲುವ ಮನುಷ್ಯನಿಗೆ ಸರ್ವಾತ್ ಜಯವೊದಗುವಂತೆ ತೋರುವುದಿಲ್ಲ. ಸತ್ಯ ಧರ್ಮ ನ್ಯಾಯ ನಿಷ್ಕಾಪಟ್ಯಗಳು ... ಮರೆ ಮೋಸ ಕುಟಿಲತೆಗಳಿಗೆ ಶರಣಾಗು... ವಿನಯದ ಸೋಗಿನಲ್ಲಿ ಕಪಟ ವಿಜೃಂಭಿಸು...ದೆ. ದರ್ಪಾಹಂಕಾರದುರ್ಮದಾಧಿಕಾರಿಗಳಿಗೆ ...ಕ ಶಕ್ತಿಗಳು ಮಣೆ ಹಾಕುವಂತೆ ಕಾಣಿಸುತ್ತದೆ. ಅಂಥ ವೈಪರೀತ್ಯಗಳು ಕ್ಷಣಿಕವೆಂದು ಮಹಾತ್ಮರ ಜೀವನ ಚರಿತ್ರೆಗಳು ಸಾರುತ್ತವೆ. ನನ್ನ ಪೂರ್ವಾರ್ಧ ಜೀವನ ಲಂಗರಿಲ್ಲದ, ಗೊತ್ತುಗುರಿಯಿಲ್ಲದ ದೋಣಿಯಂತೆ ತೂಗಾಡುತ್ತ ಶಕ್ತಿಗುಂದಿ ಅರ್ಥಹೀನವಾಯಿತೆಂಬುದು ನಿಜ. ಆ ಕೊರತೆಯನ್ನು ತುಂಬಲೆಂಬಂತೆ ಉತ್ತರಾರ್ಧವೆಲ್ಲ ದುಡಿಮೆಯಿಂದ ಸುಸಮೃದ್ಧವಾಗಿತ್ತು. ಸಂಸಾರ ಭಾರವನ್ನು ಹೊತ್ತುಕೊಂಡು, ನನ್ನ ದೋಷದೌರ್ಬಲ್ಯಗಳನ್ನು ಸಹಿಸಿಕೊಂಡು, ನಾಡಸೇವೆಗೆ ಮನಸ್ಸುಗಳನ್ನು ತೆತ್ತುಕೊಳ್ಳುವಂತೆ ಅನುವು ಮಾಡಿಕೊಟ್ಟ ಮಡದಿ ಮಕ್ಕಳ ಉಪಕಾರವನ್ನೆಂದೂ ಮರೆಯುವಂತಿಲ್ಲ. ಪವಿತ್ರ ಚೇತನಗಳ ಸಾನಿಧ್ಯ ಸಂಪರ್ಕದಿಂದಾಗಿ ಬಾಳಿನಲ್ಲಿ ತಕ್ಕ ಮಟ್ಟಿಗೆ ಶಿಸ್ತು ರೂಢಿಸಿಕೊಂಡಿದ್ದೇನೆ. ಅನ್ಯಾಯಕ್ಕೆ ಮಣಿಯದೆಯೇ, ಸತ್ಯ ಧರ್ಮಗಳ ಮಾರ್ಗದಲ್ಲಿ ಕ್ರಮಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ತುಸು ಹೆಚ್ಚೆನ್ನುವಂತೆ ಸ್ವಾಭಿಮಾನ, ಆತ್ಮಪ್ರತ್ಯಯಗಳನ್ನು ಬೆಳೆಸಿಕೊಂಡಿದ್ದರೂ ಅಹಂಕಾರದಿಂದ ಮೆರೆದಿಲ್ಲ, ಇತರರನ್ನು ನಿಕೃಷ್ಟರೆಂದು ಕಂಡಿಲ್ಲ; ಬಡತನದ ದಿನಗಳನ್ನು ಮರೆತಿಲ್ಲ. ನಾನು ವಿನಯಕ್ಕೆ ಶರಣಾಗುವೆನೆ ಹೊರತು ಅಹಂಕಾರಕ್ಕೆಂದೂ ಮಣಿದವನಲ್ಲ. ದರ್ಪ ಮಚನೆ ದುರಭಿಮಾನ ದುರಹಂಕಾರ ಕಾಪಟ್ಯಗಳನ್ನು ಕಂಡಾಗ ಸಿಡಿಮಿಡಿಗೊಂಡು ಸಿಡಿದದ್ದುಂಟು. ಅಂಥ ಸಂದರ್ಭದಲ್ಲಿ ಪರಿಣಾಮವನ್ನು ಸಹ ಲೆಕ್ಕಿಸಿದ್ದಿಲ್ಲ. ನೆರೆಯೋರಿ ಸಿಡಿಯುವಂತೆ ಸಿಡುಕು ತಕ್ಷಣ ಮಾಯವಾಗುದುಂಟು. ಸರಿಯಾದ ಕಾರಣಗಳಿಂದ ಪ್ರೇರಿತವಾದ ಸಿಡುಕು ತುಸು ಕಾಲ ನಿಲ್ಲುತ್ತದೆ. ನನ್ನ ತಪ್ಪು ತಿಳಿವಳಿಕೆಯಿಂದಾಗಿ ಸಿಡುಕು ಕೆರಳಿದ್ದಾದರೆ ನಾನು ಪಶ್ಚಾತ್ತಾಪದ ಮೂರ್ತಿಯಾಗುತ್ತೇನೆ.

ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಭಾಗ್ಯ ವೊದಗಿದ್ದರಿಂದಾಗಿ ನಾನಾ ತೆರನ ಜನರನ್ನು ನೋಡುವಂತಾಯಿತು; ಅನುಭವ ನಿಧಿಯನ್ನು ಪಡೆದಂತಾಯಿತು; ಅಧಿಕಾರದಿಂದ ನಿವೃತ್ತನಾದ ನಂತರ ಬಾಳಿನ ಗುಟ್ಟು ರಟ್ಟಾದಂತಾಯಿತು; ತಾರತಮ್ಯ ಅಂತರ್ಮುಖತೆಯ ಪರಿಣಾಮವಾಗಿ ವಿವೇಕ ಮೂಡಿ, ಹಿಂದೆಸಗಿದಗಳ ಸರಿ ತಪ್ಪು ಸ್ಪಷ್ಟವಾಯಿತು. ಮನಸ್ಸು ನೆಮ್ಮದಿಯಿಂದ ತಣಿಯಿತು. ಪ್ರಕಾಶಕರೊಬ್ಬರು ನನ್ನ ಮಿತ್ರರ ಮನೆಗೆ ಬಂದಿದ್ದಾಗ, "ನಿವೃತ್ತರಾದವರ ಗೋಜೇಕೆ ಸ್ವಾಮಿ ? ಅಧಿಕಾರದಲ್ಲಿರುವವರನ್ನು ಹಿಡಿದರೆ ತಾನೇ ನಮ್ಮ ಕೆಲಸ ಸಲೀಸು" ಎಂದರಂತೆ. ಅವರು ನಿಜಕ್ಕೂ ನಿಷ್ಕಪಟ ವ್ಯಕ್ತಿಯೆಂದೇ ತೋರುತ್ತದೆ. "ಅಪಮಾನವಾದರೆ ಒಳ್ಳಿತು" "ತಾಳುವಿಕೆಗಿಂತ ತಪವಿಲ್ಲ" "ಧರ್ಮವೇ ಜಯ" "ನಿಂದಕರಿರಬೇಕು" "ತುಲ್ಯನಿಂದಾಸ್ತುತಿರ್ಮೌನಿ ಸಂತುಷ್ಟೋಯೇನ ಕೇನ ಚಿತ್" "ಪರಚಿಂತೆ ಎನಗೇಕಯ್ಯ"—ಇವು ನನ್ನ ಜೀವನ ನನಗೆ ಕಲಿಸಿರುವ ಪಾಠ. ಕಲಿವು ಮುಗಿದಿಲ್ಲ, ಅನುಭವಕ್ಕೆ ಪಾರವಿಲ್ಲ, ಹೋರಾಟಕ್ಕೆ ಕೊನೆಯಿಲ್ಲ; ಇದೆಲ್ಲ ಮುಗಿಯದ ಕತೆ!

ಎನ್ನ ತಪ್ಪು ಅನಂತ ಕೋಟಿ; ನಿಮ್ಮ ಪ್ರೇರಣೆಗೆ ಲೆಕ್ಕವಿಲ್ಲಾ!

ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿಬ್ಯ. ಎಂಬ ಬಸವಣ್ಣನವರ ಮಾತು ನನ್ನ ಬಾಳಿನ ಬೀಜಮಂತ್ರವಾಗಿ, ನನ್ನನ್ನು ಕೈ ಹಿಡಿದು ನಡೆಸುವಂತೆ ಈತನಕ ನಡೆಸಿಕೊಂಡು ಬಂದಿರುವ ದೈವವನ್ನು ಪ್ರಾರ್ಥಿಸುತ್ತೇನೆ.

✡



ತೇಜಸ್ಸಿನಲಿ ಮರೆಯಾಗಿರುವ
ಸೂರ್ಯ ಪ್ರತಾಪವೇ,
ಬಾ ಹೊರಗೆ,
ನಿನ್ನ ಪ್ರಭೆಯ ರಾಮಬಾಣವ
ಶಾಖಕ್ಕೆ ಸುಕ್ಕಿಟ್ಟ ನನ್ನ ತೊಗಲಿಗೆ
ಹೊಗಿಸು:

ನೋಡುತ್ತಲೇ
ಬರಿದಾದ ನನ್ನ ಕಣ್ಣುಗಳ ಹೊಕ್ಕು
ಚರ್ಮರಂಧ್ರಗಳಿಗೆಲ್ಲ ದೃಷ್ಟಿಚಾಪಲ್ಯ
ನೀಡು.

ಮೇಲು ಮೇಲೇ ಅಲೆಯು
ಗದ್ದಲವಾಗಿ ಕೆರಳುತ್ತಲೇ
ಒಳ ನಿಂತ ಮೌನದಾಳಗಳ ಮರೆ
ಮಾಚಿರುವ ಕಡಲೇ
ಬಾ ಇತ್ತ.
ನನ್ನ ಅಂಗೈದುಂಬು. ನಿಲ್ಲು;
ಸದ್ದಿರದೆ ತುಳುಕು.

* * *

ಉರುಳು ಭೂಮಿಯೇ.
ನನ್ನ ಹೆಜ್ಜೆಗೆ
ಒಂದಿಷ್ಟು ಗಟ್ಟಿ ನೆಲ ನೀಡು .
ನನ್ನ ಹೆಜ್ಜೆ ಗುರುತು
ನಾನಿರುವವರೆಗಾದರೂ
ಮಾಸದಿರಲಿ:
ಅಷ್ಟು ಸಾಕು.

* * *

ನಿಂತು ಆರುವ ಅಗ್ನಿಯೇ,
ರಕ್ತನಾಳಗಳ ಬೆಚ್ಚಗಿಡು
ಸುಳಿದು.

ನನ್ನ ಸುಖದಲ್ಲುಂಟು ನಿನ್ನ ಪಾಲು.
ಕಷ್ಟಗಳ ನಿನ್ನಲಿ ಸುಡುತ್ತೇನೆ.
ಆರಿದರೆ ನಿನ್ನ ಗುರುತು ಹಿಡಿಯದ
ಬೂದಿ ನಾನು;

ನನ್ನ ಪೆನೇ.
ಬಾ ಹತ್ತಿರಕೆ,
ಹೃದಯಕ್ಕೆ ಹತ್ತಿರದ ಕೋರೆಗಳ
ಪ್ರೀತಿಸಿ, ಇಲ್ಲವಾಗಿಸು.
ಹೃದಯ ಹಸಿವುಗಳಿಗೆ
ನನ್ನ ದೇಹ ಮಾಂಸ ಉಣಿಸು.
ನನ್ನ ಬಿಸಿ ರಕ್ತ ತಣಿಸಲಿ
ನನ್ನ ಮನಸಿನ ದಾಹ;
ಅಲ್ಲಿ ಬತ್ತಲಿ ಹರಿದ ಪಾತ್ರಕೆ
ಅರಿಯುವಂಥ ಸ್ಮರಣೆಗಳ ಬಳಿಕ.

ಕೊನೆಗೆ, ನಿನ್ನ ತೆಕ್ಕೆಯಲಿ ಮಣಿದ
ನಿರಾಕಾರಕ್ಕೊಡೆದು ಕೈ ಕಾಲು,
ಮೂಗು, ಬಾಯಿ, ತಲೆ, ಕಣ್ಣು
ದೇಹ ತಳೆಯುತ್ತೇನೆ ನಾನು,
ಬರಿ ಆಕಾರವಾಗುತ್ತೇನೆ, ನೆಲಸಿ
ನಿನ್ನ ಪಕ್ಕ.

* * *

ನಿಂತು ನಿರ್ವಾತವಾಗುವ ಗಾಳಿಯೇ,
ಜೀವನವಾಗಿ ಬೀಸು.
ನನ್ನ ಶ್ವಾಸ ತುಂಬು.
ಈಗ ಉಸಿರಾಟಕ್ಕೇ ಸಾಲದ
ನೀನು ನಿತ್ರಾಣೆ.

ನನ್ನ ನಾನು ಪಿಸುಮಾತು
ನುಡಿಯುವುದು ಏನು?
ಮತ್ತು ತಿಳಿಯಬೇಕಾದ
ನನ್ನಿಂದ ನಾನು
ಪ್ರಾಣವಾದವರೆ ನೀನೊ
ಅಥವಾ ನಾನೊ ಬರಿ ರಹಸ್ಯ?

* * *

ಬಿಳ್ಳದೆ ನಾನುಗಳಿಯ ಆಕಾಶವೇ,
ನನ್ನ ಮನ ತುಂಬಿ ನಿಲ್ಲು.

ಅರ್ಪಿತದ ಘಸಘಸಗಳ ಹಾಡು.
ತೇಲಿಸು.

* * *

ದಣಿವಿರದ ಸಾವೇ,
ಆಹ್ವಾನಕ್ಕೆ ಮೊದಲೇ
ನೀನು ಅವಸರದಿ ಬಂದೆ.

ಕಾಯುತಿರು ಇಲ್ಲಿ ನೀನು
ಈಗ ನಿನ್ನ ಕಾಲ
ಕಾದು ನಿಲ್ಲು ಆರಾಮ.

* * *

ಮನಲಿನಾಚಿನ ಮುಂಕಡಲ
ತ್ರಿಕೂಟಿಸ್ಥ ಹೃದಯವೇ.
ನನ್ನ ಆವಾಹನೆಗೆ ತುಂಬಿ ಬಂದೆ.

ಮಿಕ್ಕೆಲ್ಲ ಆವಾಹಗೊಂಡಾವು ಈಗ:
ಬಂದು ಜೀವಕ್ಕಾಗಿ ಇಲ್ಲಿ
ಎಲ್ಲ ಹೊಣೆ ಹೊತ್ತು ನಿಲ್ಲಬೇಕು!
ನಿಲ್ಲುತ್ತವಾಗಿ,
ನನ್ನ ಅಂಗೈಯಲಿದ್ದ ಪ್ರಾಣ
ಈಗ ಸ್ವಸ್ಥಾನಕ್ಕೆ.

* * *

ನನ್ನ ಆಯುಷ್ಯ ಕೈ ಕೊಡದ
ಬರ್ಷದ ತುಣುಕು—
ಬತ್ತಿ ಹಾಕದೆ. ಕರಗುವವರೆಗೆ
ಹೊತ್ತು ನಡೆಯಬೇಕು:
ಮತ್ತು, ಅದರತ್ತ ನೋಡದೆ.
ಅದನ್ನೇ ಸದಾ ನೆನೆಸಿಕೊಳ್ಳುತ್ತ!

* * *

ಓಂ ಶಾಂತಿಃ

ಇಲ್ಲಿ ಸಲ್ಲದವರು

[illegible] ನೇ ಪುಟದಿಂದ

ರಾತ್ರಿ ಹೊತ್ತು ಊಟವಿಲ್ಲ ಎಂದು ಗೊತ್ತಾಯಿತು.

ದತ್ತ ಲೋಕಾಭಿರಾಮವಾಗಿ ಮಾತಾಡುತ್ತಾ ಮಾತನ್ನು ಬೆಟ್ಟದ ಗವಿಗಳ ಕಡೆ ತಿರುಗಿಸಿದ. ಆ ವಿಷಯದಲ್ಲಿ ಮಾತನಾಡಲು ವೆಂಕಭಟ್ಟ ಏಕೋ ಜಾರಿಕೊಳ್ಳುತ್ತಿದ್ದಾನೆ ಅನ್ನಿಸಿತು. ಕೊನೆಗೆ,

'ಬೆಳಗ್ಗೆ ನಾನು ಬೆಟ್ಟದ ಕಡೆ ಹೋಗಿ ಬರ್ತೇನೆ, ಒಬ್ಬರು ಯಾರನ್ನಾದರೂ ಜೊತೆ ಮಾಡಿ ಕೊಡ್ತಿರಾ' ? ಎಂದ ದತ್ತ.

'ಜನದ್ದೇ ತೊಂದರೆ ಮರಾಯ್ರೆ. ಎಲ್ಲ ಅಡಕೆ ತೋಟಕ್ಕೆ ಕೂಲಿಗೆ ಹೋಪರು ಕಾಣಿ,' ಎಂದ ವೆಂಕ ಭಟ್ಟ.

'ಕೂಲಿಗೆ ಬರೋ ಹಾಗಿದ್ರೆ ನಾನೂ ಕೊಡ್ತೀನಿ. ಹತ್ತು ರೂಪಾಯಿ ತಗೊಳ್ಳಿ ಪರ್ವಾಗಿಲ್ಲ.'

ಭಟ್ಟನ ಕಣ್ಣು ಕುಣಿಯಿತು. 'ಹತ್ತು ರೂಪಾಯಿ ಕೊಡೊಹಾಗಿದ್ರೆ ನಾನೇ ಬರ್ತೀನಿ ಮಾರಾಯ್ರೆ. ಏನು ಸೀತಾ, ಒಂದು ದಿನ ಅಂಗ್ಡಿ ನೋಡ್ಕೊಳ್ತಿ ಅಲ್ವಾ? ನಾನ್ ಹೋಪ್ ಬರ್ತೆ '

'ನಿಂಗೆ ದಾರಿ ಗೊತ್ತಾನೋ?'

'ಓ ಗೊತ್ತಿಲ್ವಾ ಕಾಣು! ನಾನು ಕಾಂಬದ ಬೆಟ್ಟವಾ ?'

'ಸರಿ ಹಾಗಿದ್ರೆ ಬೆಳಗ್ಗೆ ತಿನ್ನೊಕ್ಕೆ ಏನಾದ್ರೂ ತಗೊಂಡು ಹೋಗೋಣ. ವಾಪಸ್ ಬರಲು ಎಷ್ಟು ಹೊತ್ತಾಗುತ್ತೋ?' ಎಂದ ದತ್ತ. ಬಡಿಸುವ ಸೀತಾಳ ಕಣ್ಣುಗಳಲ್ಲಿ ಭಯ ಗೂಡು ಕಟ್ಟಿಕೊಳ್ಳುತ್ತಿತ್ತು.

ಊಟ ಮುಗಿದ ಮೇಲೆ ಹೆಚ್ಚು ಮಾತಿಗೆ ನಿಲ್ಲದೆ ಬೇಗ ಮಲಗಿಬಿಟ್ಟ ದತ್ತ. ಆಯಾಸವಾಗಿದ್ದರಿಂದ ನಿದ್ದೆಯೂ ಬೇಗ ಬಂದುಬಿಟ್ಟಿತು.

೨

ನಡು ರಾತ್ರಿಯಲ್ಲಿ ಧಿಗ್ಗನೆ ಎಚ್ಚರವಾದಾಗ ಸಣ್ಣಗೆ ಮಾಡಿದ್ದ ದೀಪದ ಬೆಳಕಿನಲ್ಲಿ ಮಂಚದ ಪಕ್ಕದಲ್ಲಿ ಯಾರೋ ನಿಂತು ಮೈ ಅಲ್ಲಾಡಿಸುತ್ತಿರುವುದು ಕಂಡು ಧಡಬಡಿಸಿ ಎದ್ದು, 'ಯಾರು, ಯಾರು?' ಎಂದ.

'ಹುಷ್, ನಾನು ಸೀತಾ ಅಲ್ವಾ? ಹೆದರ್ಕಂಡ್ರ್ಯಾ?' ಎನ್ನುತ್ತಾ ಅವಳು ಮಂಚದ ಮೇಲೆ ಕುಳಿತು, 'ಅಬ್ಬಾ ಎಂಥ ನಿದ್ದೆ ನಿಮ್ದು? ತಿವಿದ್ರೂ ಎಚ್ಚರ ಬೇಡ್ವಾ?' ಎಂದಳು.

ದತ್ತನ ಎದೆ ಇನ್ನೂ ಡಬ ಡಬ ಎನ್ನುತ್ತಿತ್ತು. ಮಂಪರು ಕಳೆದು ಪರಿಸ್ಥಿತಿಯ ಪೂರ್ತಿ ಅರ್ಥವಾದ ಮೇಲೆ ಅವನ ಎದೆ ಇನ್ನೊಂದು ರೀತಿ ಬಡಿದುಕೊಳ್ಳತೊಡಗಿತು. ಸಣ್ಣಗೆ ಬೆವರು ಕಾಣಿಸಿಕೊಂಡು ಮೈ ನಡುಗಿತು.

'ತುಂಬಾ ಹೆದರ್ಕಂಡ್ರ್ಯಾ? ನಾ ಹೇಳಿರಲಿಲ್ವಾ ರಾತ್ರಿ ಹೇಳ್ತೀ ಅಂತ?' ಎಂದು ಸರಿಯಾಗಿ ಕೂತಳು.

'ಭಟ್ಟ? ಭಟ್ಟ ಎಲ್ಲಿ ಮಲಗಿದಾನೆ ?'

'ಆ ಕಡೆ ದೂರ. ಕಾಣಿ–ಗೊರಕೆ ಕೇಳಿಸುತ್ತೋ ಇಲ್ಲೋ?' ಎಂದು ನಕ್ಕಳು. ಆ ನಗೆ ತುಂಬ ಮಾದಕವಾಗಿತ್ತು. ಉಸಿರು ದತ್ತನ ಕೆನ್ನೆಯ ಮೇಲೆ ಬಿಸಿ ಬಿಸಿಯಾಗಿ ಹರಿದಾಡುತ್ತಿತ್ತು. ಅವಳ ಕೈಯನ್ನು ಮುಟ್ಟುತ್ತಿದ್ದಂತೆಯೇ ಅವಳು ಅವನಿಗೆ ಮುಗಿಬಿದ್ದಳು.

ಅನಂತರ, 'ನಿನಗೆ ಮದುವೆ ಆಗಿಲ್ವಾ ಸೀತಾ?' ಎಂದ.

'ಆಗಿತ್ತು.'

'ಆಗಿತ್ತು ಅಂದ್ರೆ?'

'ಆಗಿತ್ತು, ಗಂಡ ಬಿಟ್ಟುಹೋದ.'

ದತ್ತ ಒಂದು ನಿಮಿಷ ಸ್ತಬ್ಧನಾದ. ಅವನ ಹಿಡಿತ ಸಡಿಲಿತು. ಸ್ವಲ್ಪ ಹೊತ್ತಾದ ಮೇಲೆ, 'ಇಲ್ಲಿ ಒಬ್ಬರು ಮೂರು ದಿನ ಇದ್ರು ಅಂದೆಯಲ್ಲ ಅದು ಯಾವಾಗ ಅಂತ ಹೇಳು?' ಎಂದ.

'ಊಂ...ವಾರದ ಹಿಂದೆ ಇರಬೇಕು. ನಿಮ್ಮ ಥರಾನೇ ರಾತ್ರಿ ಬಂದ್ರು, ಗವಿಗೆ ಹೋಗಬೇಕು. ಉಳಿಯಲು ಜಾಗ ಕೊಡಿ ಅಂದ್ರು. ಆಮೇಲೆ ಮೂರು ದಿನ ಇಲ್ಲೇ ಇದ್ರು. ಹಗಲು ಬೆಟ್ಟಕ್ಕೆ ಹೋಗಿ ಬರೋರು. ರಾತ್ರಿ ಬಹಳ ಹೊತ್ತಿನವರೆಗೆ ಏನೋ ಬರೀತಾ ಕೂತಿರುತ್ತಿದ್ದರು.'

'ಈ ಬೆಳಕಲ್ಲೆ?'

'ಲಾಟೀನು ಹಚ್ಚಿ ಕೊಡ್ತಾ ಇದ್ದೆ.'

'ಮೂರು ದಿನ ಸೇವೆಯೂ ಆಯ್ತೇ?' ಎಂದು ಅಪ್ಪಿದಾಗ ಅವಳು ನಾಚಿದಳು.

ದತ್ತನಿಗೆ ಬೇಸರವಾಯಿತು. ಅದು ಗೊತ್ತಾಗದಿದ್ದರೇ ಚೆನ್ನಾಗಿರುತ್ತಿತ್ತು. ಸದಾಶಿವಯ್ಯನವರನ್ನು ತುಂಬ ಗೌರವಿಸುತ್ತಿದ್ದ. ಈಗ ಅವರು ಅನುಭವಿಸಿದ ಪೆಟ್ಟನ್ನು ತಾನು ಅನುಭವಿಸಿದಂತಾಯಿತು. ಅವಳಿಂದ ಬಿಡಿಸಿಕೊಂಡು ಮಂಚದ ಅಂಚಿಗೆ ಕೂತ. ಅವನಿಗೆ ಬೇಜಾರಾದದ್ದು ಅವಳಿಗೂ ತಿಳಿಯಿತು.

'ಅವರು ನಮ್ಮ ಪ್ರೊಫೆಸರ್ ಸದಾಶಿವಯ್ಯ. ಇಲ್ಲಿ ಕಂಡು ಬಂದ ಪ್ರಾಚೀನ ಕಾಲದ ಗವಿಗಳನ್ನು ನೋಡಲು ಬಂದಿದ್ದರು. ಇಲ್ಲಿ ಮೂರೇ ದಿನ ಇದ್ದರು. ಆದರೆ ಅವರು ವಾಪಸ್ ಬಂದಿಲ್ಲವಲ್ಲ? ಬೇರೆ ಎಲ್ಲಿಗಾದರೂ ಹೋಗುತ್ತೇನೆ ಅಂತ ಹೇಳಿದ್ರಾ?'

'ಮೂರು ದಿನದ ಮೇಲೆ ತಮ್ಮ ಸೂಟ್‌ಕೇಸ್ ತೆಗೆಸಿಕೊಂಡು ಗುಡ್ಡಕ್ಕೆ ಹೋದ್ರು. ಅಲ್ಲಿ ಕಾಡು ಜನರ ಗುಡಿಸಲಿವೆಯಂತೆ. ಅಲ್ಲೇ ಇದ್ದು ನೋಡಬೇಕು' ಅಂತ ಹೇಳಿದರು.

'ಆಮೇಲೆ?'

'ಆ ಮೇಲೆ ಅವರನ್ನು ಯಾರೂ ನೋಡಿಲ್ಲ. ಅಲ್ಲಿಂದ ಊರಿಗೆ ಹೋದರೋ ಅಥವಾ......'

ನಡುಗುವ ಧ್ವನಿಯಲ್ಲಿ ಅವಳ ಮಾತು ಅರ್ಧಕ್ಕೆ ನಿಂತಾಗ ದತ್ತನಿಗೂ ಹೆದರಿಕೆಯಾಯಿತು. ಇನ್ನೂ ಹೆಚ್ಚಿನದೇನೋ ಅವಳಿಗೆ ಗೊತ್ತಿರಬೇಕು ಎಂದು ಅವನಿಗೆ ಅನುಮಾನವಾಯಿತು. ಮತ್ತೆ ಅವಳನ್ನು ರಮಿಸುತ್ತಾ,

'ಅಥವಾ ಏನಾಗಿರಬಹುದು? ಆ ಕಾಡು ಜನರು ಏನಾದ್ರೂ......' ಎಂದು ನಿಲ್ಲಿಸಿದ. ಅವಳೂ ಉತ್ತರ ಕೊಡಲಿಲ್ಲ. ಅಂದ ಮೇಲೆ ಉತ್ತರಕ್ಕೆ ಆ ಕಾಡು ಜನರ ಗುಡುಸಿಲಿನಲ್ಲಿ ಹುಡುಕಬೇಕು ಎಂದುಕೊಂಡ ದತ್ತ.

ಸ್ವಲ್ಪ ಹೊತ್ತಾದ ಮೇಲೆ 'ನೀವು ಪೋಲೀಸ್ ಸಿ. ಐ. ಡೀ ನಾ?' ಎಂದು ಕೇಳಿದಳು. ದತ್ತನಿಗೆ ಪಕ್ಕನೆ ನಗು ಬಂತು.

'ನಿಂಗೆ ಯಾಕೆ ಹಾಗನ್ನಿಸಿತು?' ಎಂದ.

'ನಂಗೆ ಅನ್ನಿಸಲಿಲ್ಲ. ವೆಂಕಭಟ್ಟನ ಊಹೆ ಅಷ್ಟೆ.'

— ೪ —

ಬೆಳಗ್ಗೆ ದತ್ತನಿಗೆ ಬೇಗ ಎಚ್ಚರವಾಯಿತು. ಹೊರಗೆ ಬಂದವನೆ ಜಗುಲಿಯ ಮೇಲೆ ನಿಂತು ಕಣ್ಣೆದುರು-ಬಿಚ್ಚಿಕೊಂಡ ಹಸಿರನ್ನು ನೋಡಿ ಖುಷಿಯಿಂದ ಶಿಳ್ಳೆ ಹಾಕಿದ. ಶಿಳ್ಳೆ ಧ್ವನಿ ಕೇಳಿ ಎಲ್ಲಿಂದಲೋ ಒಂದು ನಾಯಿ ಓಡಿ ಬಂತು. ಹತ್ತಿರದಿಂದ ನೋಡಿದಾಗ ಅದು ನಿನ್ನೆ ರಾತ್ರಿ ನೋಡಿ ಬೊಗಳಿದ ಬಡಕಲು ನಾಯಿಯೇ ಅನ್ನಿಸಿತು. ಈಗ ಅದು ಬಾಲ ಅಲ್ಲಾಡಿಸುತ್ತಾ ದೈಪ್ಯಾರ ಮಾಡುತ್ತಿತ್ತು.

ಆ ನಾಯಿಯೊಡನೆ ನಿನ್ನೆಯ ಘಟನೆಗಳೆಲ್ಲಾ ನೆನಪಿಗೆ ಬಂದು ಖುಷಿಯೂ ವಿಷಾದವೂ ಒಟ್ಟೊಟ್ಟಿಗೆ ಆದವು. ಆ ವೇಳೆಗೆ ಸ್ನಾನ ಮುಗಿಸಿ ಬಂದ ವೆಂಕಭಟ್ಟ.

'ಬೇಗ ಬೇಗ ಹೊರಡ್ರೀ ರಾಯ್ರೆ. ಆಮೇಲೆ ಬಿಸಿಲು ಏರಿದರೆ ಗುಡ್ಡ ಹತ್ತೋದು ಕಷ್ಟ' ಅಂದ.

ದತ್ತ ಎಲ್ಲಾ ಮುಗಿಸಿ ಸಿದ್ಧನಾದ. ಒಂದು ಹೆಗಲ ಚೀಲದಲ್ಲಿ ಟಾರ್ಚ್, ಕ್ಯಾಮರಾ ಇಟ್ಟುಕೊಂಡ ವೆಂಕಭಟ್ಟನಿಗೆ ಒಂದು ಸಲಿಕೆ ತೆಗೆದುಕೊಳ್ಳಲು ಹೇಳಿದ. ಆ ವೇಳೆಗೆ ಸೀತಾ ಕೆಸುವಿನ ಕಡುಬು ಮಾಡಿದ್ದಳು. ಒಂದಿಷ್ಟು ತಿಂದು ಉಳಿದದ್ದು ಕಟ್ಟಿಕೊಂಡು ಚೀಲದಲ್ಲಿಟ್ಟುಕೊಂಡರು. ಆ ಸಂದರ್ಭದಲ್ಲಿ ದತ್ತ ಸಮಯ ಸಾಧಿಸಿ ಅವಳ ದೃಷ್ಟಿಯಲ್ಲಿ ದೃಷ್ಟಿ ನೆಟ್ಟ. ಅವಳು ಏನೂ ಆಗದವಳಂತೆ ಇದ್ದಳು. ಅದು ಸಂಕೋಚದ ನೋಟವಲ್ಲ-ಅಥವಾ ಏನೂ ಆಗಿಲ್ಲವೇನೋ ಎಂಬಂತೆ ನಟಿಸುವ ಬಗೆಯೋ? ಅಥವಾ ಅದು ಅವಳ ಮಾಮೂಲೀ ಅನುಭವಗಳಲ್ಲಿ ಒಂದೋ ? ಆ ಯೋಚನೆ ಅವನನ್ನು ಸ್ವಲ್ಪ ಖಿನ್ನನನ್ನಾಗಿಸಿತು. ಆದರೆ ಏಕೆಂದು ಅರ್ಥವಾಗಲಿಲ್ಲ.

ಮತ್ತೆ ಐದು ನಿಮಿಷಕ್ಕೆಲ್ಲಾ ವೆಂಕಭಟ್ಟ ಮತ್ತು ದತ್ತ ಬೆಟ್ಟದ ಹಾದಿ ಹಿಡಿದಿದ್ದರು. ಸ್ವಲ್ಪ ದೂರ ಹೋಗುವಷ್ಟರಲ್ಲೇ ಊರು ಮುಗಿದು ಬೆಟ್ಟದ ಏರು ಹಾದಿ ಪ್ರಾರಂಭವಾಯಿತು. ಕಾಡು ಮುಚ್ಚಿದ ಬೆಟ್ಟ ತೀರಾ ದೊಡ್ಡದಲ್ಲವಾದರೂ ಏರಲು ಸಾಕಷ್ಟು ಶ್ರಮ ಕೊಡುವಷ್ಟು ಎತ್ತರವಾಗಿತ್ತು. ವೆಂಕಭಟ್ಟನಿಗೆ ಸುಮಾರಾಗಿ ಮಧ್ಯ ವಯಸ್ಸು. ಆದರೂ ಚಟುವಟಿಕೆ ಉಳಿದಿತ್ತು. ಚುಟು ಚುಟು ನಡೆಯುತ್ತಾ ಒತ್ತರಿಸಿಕೊಂಡ ಅಡಕೆಲೆಯ ರಸವನ್ನು ಆಗಾಗ ಉಗುಳುತ್ತಾ ಕಾಡಿನ ಮಧ್ಯೆ ಮೆಲ್ಲನೆ ಮೇಲೇರುವ ಹಾದಿಯಲ್ಲಿ ದತ್ತನನ್ನು ಕರೆದುಕೊಂಡು ಹೊರಟಿದ್ದ ಆತ. ವಾಗಾರ್ತಿಯ ಜನಜೀವನ,

ನೇರುಗಾರರು ಮತ್ತು ತೋಟದ ಕೆಲಸಗಾರರು ಮಳೆ ನಾತ ಮಳೆ-ಬೇಗೆ, ಅಡಿಕೆ ಬೇಯಿಸುವ, ಸಮು ಮದ ಚಟುವಟಿಕೆ ಮುಂತಾದವನ್ನು ಸ್ವಾರಸ್ಯವಾಗಿ ವಿವರಿಸುತ್ತಾ ಮೇಲೇರುತ್ತಿದ್ದ. ಆಮೇಲೆ ತನ್ನ ಜೀವನಚರಿತ್ರೆಗೆ ಬಂದ. ಬಡತನದಲ್ಲೇ ಹುಟ್ಟಿ ಬೆಳೆದುದು. ತಾಯಿ ಯಾರೋ ಸೆರೆಗಾರನ ಹಿಂದೆ ಓಡಿ ಹೋದದ್ದು, ಹುಚ್ಚು ಹಿಡಿದ ತಂದೆ ಕಾಡಿನಲ್ಲಿ ಅಕಸ್ಮಾತ್ತಾಗಿ ಹುಲಿ ಹಿಡಿದದ್ದು, ತಬ್ಬಲಿಯಾದ ತಾನು ಅವರವರ ಮನೆಯ ಮಗುವಾಗಿ ಬೆಳೆದದ್ದು ಕೊನೆಗೆ ಶಾಸ್ತ್ರಿಗಳವರು ಆಶ್ರಯ ಕೊಟ್ಟದ್ದು ಹೀಗೆ ಅವನ ಮಾತು ಸಾಗುತ್ತಿತ್ತು. ದತ್ತ ಅವನ ಮಾತು ಕೇಳಿಸಿಕೊಳ್ಳುತ್ತಿದ್ದರೂ ಸುತ್ತಮುತ್ತ ಒತ್ತಾಗಿ ಬೆಳೆದುನಿಂತ ಮರಗಳ ಸಮೂಹ ವೈಚಿತ್ರ್ಯ-ವೈವಿಧ್ಯ ನೋಡುತ್ತಾ ಬೆಳಗಿನ ತಂಪು ವಾತಾವರಣದಲ್ಲೂ ಏರಿಕೆಯಿಂದ ಏದುಸಿರಿಡುತ್ತಾ ಹೆಜ್ಜೆ ಕಿತ್ತಿಡುತ್ತಿದ್ದ. ಮೇಲೆ ಹೋಗುತ್ತಾ ಮರಗಳ ಸಾಂದ್ರತೆ ಕಡಿಮೆಯಾಗುತ್ತಾ ಬಂಡೆಗಳು ಜಾಸ್ತಿಯಾದವು.

ಎಂಟೂವರೆಯ ಸುಮಾರಿಗೆ ಮುಕ್ಕಾಲು ಭಾಗದಷ್ಟು ಎತ್ತರ ಏರಿ ಎಳೆಂಟು ಗುಡಿಸಲುಗಳಿದ್ದ ಜಾಗಾಕ್ಕೆ ಬಂದರು. ಒಂದು ದೊಡ್ಡ ಬಂಡೆ ಗೋಡೆಯಂತೆ ನೆಟ್ಟಗೆ ಮೇಲೆದ್ದು ನಿಂತಿತ್ತು. ಅದಕ್ಕೆ ಹೊಂದಿಕೊಂಡಂತೆ ಮುಂದಿನ ಒಂದಿಷ್ಟು ಜಾಗಾವನ್ನು ಬಯಲು ಮಾಡಿಕೊಂಡು ಅಲ್ಲಿ ಗುಡಿಸಲು ಕಟ್ಟಿಕೊಂಡಿದ್ದರು. ಆ ಗುಡಿಸಲುಗಳು ಕೂಡ ಕಿರೀಟದ ಹಾಗೆ ಚೂಪಾಗಿ ಮೇಲೆದ್ದಿದ್ದವು. ಕೌಪೀನ ಹಾಕಿಕೊಂಡು ಕವಡೆಯ ಸರ ಧರಿಸಿದ್ದ ಕರ್ರನೆಯ ಗಂಡಸರು ಗುಡಿಸಲ ಮುಂದೆ ಓಡಾಡುತ್ತಿದ್ದರು. ಇವರು ಹತ್ತಿರ ಬಂದುದನ್ನು ನೋಡಿ ಮೂರುನಾಲ್ಕು ಹುಡುಗರೂ ಅವರ ಹಿಂದೆ ಹೆಂಗಸರೂ ಹೊರಬಂದರು. ಅವರು ಸೊಂಟದವರೆಗೆ ಮಾತ್ರ ಬಟ್ಟೆ ಸುತ್ತಿಕೊಂಡಿದ್ದರು. ಒಬ್ಬಳು ಎತ್ತಿಕೊಂಡಿದ್ದ ಮಗು ಮೊಲೆ ಚೀಪುತ್ತಿತ್ತು.

ವೆಂಕಭಟ್ಟ ಅವರೊಡನೆ ಏನೋ ಮಾತನಾಡಿದ. ಅವರ ಭಾಷೆ ದತ್ತನಿಗೆ ಏನೇನೂ ಅರ್ಥವಾಗಲಿಲ್ಲ. ವೆಂಕಭಟ್ಟನಿಗೇ ಪ್ರಾಯಶಃ ಅರ್ಧಂಬರ್ಧ ಅರ್ಥವಾಗಿರಬೇಕು. ದತ್ತ ಆ ಭಾಷೆಗೆ ಕಿವಿಗೊಟ್ಟ. ಅದರಲ್ಲೆಲ್ಲೂ ಅಲ್ಲೊಂದು ಇಲ್ಲೊಂದು ಮಾತು ಸ್ವಲ್ಪ ಸ್ವಲ್ಪ ಅರ್ಥಸ್ತರದ ಹತ್ತಿರಕ್ಕೆ ಬರುತ್ತಿತ್ತು. ಮಾತ್ರ ಜಾರುತ್ತಿತ್ತು.

ಹತ್ತು ನಿಮಿಷದ ಮಾತಿನ ನಂತರ ಮತ್ತೆ ಇಬ್ಬರೂ ಮುಂದೆ ಹೊರಟರು. ದತ್ತ ಯೋಚಿಸುತ್ತಿದ್ದ: ನಾಗರಿಕತೆ ಇಷ್ಟರ ಮಟ್ಟಿಗೆ ಮುಂದುವರಿದ ಸಂದರ್ಭದಲ್ಲೂ ಈ ಕಾಡು ಜನ ಇನ್ನೂ ಉಳಿದಿದ್ದಾರಲ್ಲ. ವೆಂಕಭಟ್ಟನ ಸಂಭಾಷಣೆಯಿಂದ ಗೊತ್ತಾದ ಅಂಶಗಳಲ್ಲಿ ಪ್ರೊಫೆಸರರು ಅಲ್ಲಿ ಎರಡು ದಿನ ಕಳೆದರಂತೆ. ಅವರಿಗಾಗಿಯೇ ಅವರಿಗೊಂದು ಪ್ರತ್ಯೇಕ ಗುಡಿಸಲನ್ನೂ ಹಾಕಿಕೊಡಲಾಗಿತ್ತು: ಮೂರನೆಯ ದಿನ ಅವರು ಒಬ್ಬರೇ ಬೆಟ್ಟ ಹತ್ತಿ ಹೋದವರು ಮರಳಿ ಬರಲಿಲ್ಲ ಎಂದು ಗೊತ್ತಾಯಿತು. ಅವರ ಸೂಟ್‌ಕೇಸ್ ಅಲ್ಲೇ ಇತ್ತು ಎಂದೂ ಹೇಳಿದ್ದರು.

ದತ್ತನಿಗೆ ಅನುಮಾನ ಬರತೊಡಗಿತು. ಆ ಕಾಡು ಜನರ ಹೆಂಗಸರು ಅರೆಬತ್ತಲೆಯಾಗಿದ್ದರು. ನಗರದಿಂದ ಬಂದ ಮನುಷ್ಯ ಅದರಿಂದ ವಿಚಲಿತನಾಗುವುದು ಸಹಜ. ಸದಾಶಿವಯ್ಯನವರು ಹೊಸದಾಗಿ ಸೀತೆಯ ಸಹವಾಸ ಮಾಡಿದ ಮೇಲೆ ಈ ಕಾಡು ಜನರ ಗುಡಿಸಲಿನಲ್ಲಿ ಮತ್ತೆ ಯಾವ ಹೆಂಗಸಿಗೆ ಮನಸೋತರೋ? ಎರಡು ದಿನ ಅಲ್ಲಿ ಕಳೆದರು ಅಂದ ಮೇಲೆ ಅಂಥ ಏನಾದರೂ ಪ್ರಸಂಗ ನಡೆದಿರಬಹುದು. ಅದಕ್ಕೆ ಪ್ರತೀಕಾರವಾಗಿ ಆ ಗಂಡಸರು ಅವರ ಜೀವಕ್ಕೆ ಏನು ಅಪಾಯ ಮಾಡಿದರೋ? ಅವರ ಸೂಟ್‌ಕೇಸ್ ನೋಡಿದ್ದರೆ ಏನಾದರೂ ಸೂಚನೆ ದೊರೆಯಬಹುದಾಗಿತ್ತೇನೋ. ಆದರೆ ಅದನ್ನು ನೋಡುತ್ತಾ ಕುಳಿತುಕೊಳ್ಳುವಷ್ಟು ಸಮಯ ಈಗ ಇರಲಿಲ್ಲ. ಪ್ರಾಯಶಃ ಅವರು ದಿನಚರಿಯನ್ನು ಬರೆದಿದ್ದರೂ ಬರೆದಿರಬಹುದು. ಗವಿ ನೋಡಿಕೊಂಡು ಬಂದರೆ ಅನಂತರ ಉಳಿಯುವ ಕೊನೆಯ ಸಾಕ್ಷ್ಯವೆಂದರೆ ಆ ಸೂಟ್‌ಕೇಸ್ ಮಾತ್ರ ಎಂದು ಕಾಣುತ್ತೆ.

ಅಲ್ಲಿಂದ ಮುಂದೆ ಇನ್ನೂ ಸುಮಾರು ಅರ್ಧ ಮೈಲಿ ದೂರ ಏರಿ ಹೋದ ಮೇಲೆ ಪ್ರಾಚೀನ ಕಾಲದ ಗುಹೆಗಳ ಹತ್ತಿರ ಬಂದರು. ಅವು ಹೊಸದಾಗಿ ತೆರೆದುಕೊಂಡಿವೆ ಎಂಬುದಕ್ಕೆ ಸಾಕ್ಷ್ಯವಾಗಿ ಕಳಚಿಕೊಂಡು ಕೆಳಗುರುಳಿದ ದೊಡ್ಡ ಬಂಡೆ ಚೂರುಗಳು ಮರಗಳನ್ನು ಮುರಿದು ಮುಂದೆ ಹೋಗಿದ್ದುದು ಕಾಣುತ್ತಿತ್ತು. ಪ್ರಾಯಶಃ ಭೂಕಂಪದ ಪರಿಣಾ-

ದೋ ಕಾಲದಲ್ಲಿ ಜಾರಿ ಬಂದು ಈ ಗವಿಗಳ ಬಾಗಿಲನ್ನು ಮುಚ್ಚಿದ್ದಿರಬಹುದಾದ ಈ ಬಂಡೆ ಮತ್ತೆ ಈಗ ಎಷ್ಟೋ ಕಾಲದನಂತರ ಇನ್ನೂ ಕೆಳಕ್ಕೆ ಜಾರಿ, ಈವರೆಗೆ ಕಾಪಾಡಿದ್ದ ವಿವರಗಳನ್ನು ಬಯಲಿಗೊಡ್ಡಿತ್ತು. ಸಾಕಷ್ಟು ಎತ್ತರವಾಗಿದ್ದ ಮೊದಲನೆಯ ಗವಿಯೊಳಗೆ ಅವರಿಬ್ಬರೂ ಪ್ರವೇಶಿಸಿದರು. ಈಗಾಗಲೇ ಅಲ್ಲಿ ದೊರೆತಿದ್ದ ಅಸ್ಥಿ ಪಂಜರಗಳು ಹಾಗೂ ಶಿಲಾಯುಧಗಳನ್ನು ಜಿಲ್ಲೆಯ ವಸ್ತು ಸಂಗ್ರಹಾಲಕ್ಕೆ ಸಾಗಿಸಿದ್ದರು. ಪ್ರಾಯಶಃ ಸದಾಶಿವಯ್ಯನವರೂ ಅಲ್ಲಿಗೆ ಹೋಗಿರಬಹುದೆ? ಗೋಡೆಯ ಮೇಲೆ ಕೊರೆದಿದ್ದ ಬೇಟೆಯ ಚಿತ್ರಗಳು ಮಾತ್ರ ಉಳಿದಿದ್ದವು. ಗವಿ ಮೊದಲ ಸ್ವಲ್ಪ ದೂರ ಪ್ರಾಕೃತಿಕವಾದದ್ದೂ ಅನಂತರದ್ದು ಕೊರೆದು ಮಾಡಿದ್ದೂ ಎಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಗವಿಯ ಗೋಡೆಯ ಮೇಲೆ ಟಾರ್ಚಿನ ಬೆಳಕಿನಲ್ಲಿ ಕಾಣುತ್ತಿದ್ದ ಚಿತ್ರಮಾಲಿಕೆ ಯಾವುದೋ ಅಜ್ಞಾತ ಸಂದೇಶವನ್ನು ಹೇಳುತ್ತಿರುವಂತೆ ತೋರುತ್ತಿತ್ತು. ಆ ಗವಿಯ ಒಳಗೆ ಹೋದ ಮೇಲೆ ಎಷ್ಟೋ ಸಾವಿರ ವರ್ಷಗಳ ಹಿಂದೆ ಅಲ್ಲಿ ವಾಸಿಸುತ್ತಿದ್ದಿರಬಹುದಾದ ಗವಿಮಾನವರ ಕಲ್ಪನೆಯನ್ನು ದತ್ತ ಮಾಡಕೊಳ್ಳತೊಡಗಿದ. ಸ್ವಲ್ಪ ಹೊತ್ತಿನ ಹಿಂದೆ ಗುಡಿಸಲಿನಲ್ಲಿ ನೋಡಿದ ಕಾಡು ಜನರು ಪ್ರಾಯಶಃ ಈ ಗವಿಗಳಲ್ಲಿದ್ದ ಜನರ ತಳಿಯವರೇ ಇರಬಹುದೇನೋ? ಪ್ರೊಫೆಸರರಿಗೂ ಈ ಯೋಚನೆ ಬಂದಿರಬಹುದು. ಅದೇ ಕಾರಣಕ್ಕೆ ಅವರ ನಡುವೆಯೇ ಇದ್ದು ಅವರ ಜೀವನ ವಿಧಾನವನ್ನು ಅಧ್ಯಯನ ಮಾಡಲು ಪ್ರೊಫೆಸರರು ಅಲ್ಲಿಗೆ ಹೋದರೇನೋ ಎನ್ನಿಸಿತು.

ಮೊದಲ ಗವಿಗಿಂತ ಎರಡನೆಯ ಗವಿ ಸ್ವಲ್ಪ ದೊಡ್ಡದಾಗಿತ್ತು. ಅಗಲ ಹಾಗೂ ಉದ್ದ-ಎರಡರಲ್ಲೂ ವಿನ್ಯಾಸದಲ್ಲೂ ವ್ಯತ್ಯಾಸವಿತ್ತು. ನೇರವಾಗಿ ಸ್ವಲ್ಪ ದೂರ ಹೋಗಿ ಅನಂತರ ಕವಲಾಗಿ ಮುಂದೆ ಮತ್ತೆ ಸೇರಿತ್ತು. ಪ್ರಾಯಶಃ ಇದನ್ನು ಆಹಾರದ ಸಂಗ್ರಹಕ್ಕೆ ಉಪಯೋಗಿಸಿರಬಹುದೆಂದು ಊಹಿಸಲು ಆಧಾರಗಳಿದ್ದವು. ಆಯುಧ ಮಸೆದು ಬಂಡೆರಡು ಕಡೆ ಕಲ್ಲು ನುಣುಪಾಗಿತ್ತು. ಇನ್ನೊಂದು ಕಡೆ ಯಾವುದೋ ಭಾರವಾದ ವಸ್ತುವನ್ನು ಇಟ್ಟೂ ಇಟ್ಟೂ ಅಷ್ಟು ಜಾಗ ಕಲ್ಲು ತಗ್ಗುಬಿದ್ದಿತ್ತು. ಪ್ರೊಫೆಸರರು ಈ ಅಂಶಗಳ ಬಗೆಗೆ ಏನು ಟಿಪ್ಪಣಿ ಮಾಡಿಕೊಂಡಿರುತ್ತಾರೋ, ಅವರ ನಿರ್ಣಯ ಏನೋ ಎಂದು ಯೋಚಿಸಿದ ದತ್ತ. ಹೋಗುತ್ತಾ ಹೋಗುತ್ತಾ ಕಿರಿದಾದ ಒಂದು ಭಾಗದಲ್ಲಿ ಗವಿಯ ಮೇಲು ಭಾಗ ಕೂಡ ಇದೇ ರೀತಿ ಸವೆದಿತ್ತು. ಗಡುಸಾದ ಶಿರಸ್ತ್ರಾಣ ಅಥವಾ ಕೊಂಬಿನ ಪ್ರಾಣಿಯ ಕೊಂಬು ಉಜ್ಜಿ ಹೀಗಾಗಿರಬಹುದು. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುವಾಗ ದತ್ತನಿಗೆ ಆಗಿನ ಜನಜೀವನದ ಕಲ್ಪನೆ ಮೂಡತೊಡಗಿತು. ಅನಂತರ ಅವನ ಯೋಚನೆ ಇನ್ನೂ ಹಿಂದಕ್ಕೆ ಓಡಿ, ಮನುಷ್ಯ ಈ ಗವಿಯಲ್ಲಿ ವಾಸಿಸಲು ಆರಂಭಿಸಿದ್ದಕ್ಕಿಂತ ಹಿಂದೆ ಪ್ರಾಣಿಗಳು ಕೂಡಾ ಏಕೆ ಇದ್ದಿರಬಾರದು ಎಂದು ಊಹಿಸಿತು. ಅವುಗಳ ಮೈಯುಜ್ಜಿನಿಂದ ಕೂಡ ಎಷ್ಟೋ ಗುರುತುಗಳು ಉಳಿದಿರಬಹುದು. ತಾನು ಗಮನಿಸಿದ ಅಂಶಗಳನ್ನು ವೆಂಕಭಟ್ಟನಿಗೂ ವಿವರಿಸುತ್ತಾ ಉಪಯುಕ್ತ ಅನ್ನಿಸಿದ ಭಾಗಗಳ ಚಿತ್ರ ಬರೆದುಕೊಳ್ಳುತ್ತಾ ಅಥವಾ ಫ್ಲಾಷ್ ಫೋಟೋ ತೆಗೆದುಕೊಳ್ಳುತ್ತಾ ದತ್ತ ಆ ಗುಹೆಯಲ್ಲಿ ಬಹಳ ಹೊತ್ತು ಕಳೆದ. ಅಲ್ಲಿಂದ ಹೊರಬಂದಾಗ ಅವರಿಗೇ ಆಶ್ಚರ್ಯವಾಯಿತು. ಗಂಟೆ ಹನ್ನೆರಡು ಮುಕ್ಕಾಲು ಆಗಿತ್ತು. ಹೊಟ್ಟೆ ಚುರುಗುಟ್ಟತೊಡಗಿತ್ತು.


ಹೊರಗೆ ಮರದ ನೆರಳಿನಲ್ಲಿ ಕೂತರು. ವೆಂಕಭಟ್ಟ ಹತ್ತಿರ ಝರಿಯಿಂದ ನೀರು ತೆಗೆದುಕೊಂಡು ಬಂದ. ಕಡಬು ಚಟ್ನಿ ಈಗ ಕಾಡಿನ ನಡುವೆ ಹೆಚ್ಚು ರುಚಿಯಾಗಿದ್ದಕ್ಕೆ ಹೊಟ್ಟೆಯ ಹಸಿವೊಂದೇ ಕಾರಣವಲ್ಲ ಎಂದುಕೊಂಡರು ಇಬ್ಬರೂ. ಸ್ವಲ್ಪ ಹೊತ್ತು ಮಲಗಿ ವಿಶ್ರಾಂತಿ ತೆಗೆದುಕೊಂಡರೂ ಕೊನೆಯ ಗವಿಯೊಂದನ್ನು ನೋಡಿಕೊಂಡು ಕೆಳಗಿಳಿಯಲು ಪ್ರಾರಂಭಿಸೋಣ ಎಂದುಕೊಂಡರು. ಹೊಟ್ಟೆಯ ಭಾರಕ್ಕೋ ಆಯಾಸಕ್ಕೋ ಮರದ ನೆರಳ ತಂಪಿಗೋ ಬೇಗ ನಿದ್ರೆ ಬಂದುಬಿಟ್ಟಿತು.

೫

ಯಾವುದೋ ಭಯಂಕರ ಶಬ್ದ ಕೇಳಿ ಇಬ್ಬರಿಗೂ ಥಟ್ಟನೆ ಎಚ್ಚರವಾಯಿತು. ಹತ್ತಿರ ಬಂದಿದ್ದ ದೈತ್ಯಾಕಾರದ ಹದ್ದೊಂದು ಸ್ವಲ್ಪ ಹಾರಿ ಎದುರಿನ ಕೋಡುಗಲ್ಲಿನ ಮೇಲೆ ಕೂತು ಕ್ರೂರವಾದ ಕಣ್ಣುಗಳನ್ನು ಹೊರಳಿಸಿ ಕೊಕ್ಕೆ ಮಸೆಯಿತು. ತಾವು ಕೇಳಿದ ಶಬ

ಆದರ ಕೂಗೇನೋ? ಆ ಗಾತ್ರದ ಹದ್ದನ್ನು ದತ್ತ ಪ್ರಾಣಿ ಸಂಗ್ರಾಲಯದಲ್ಲೂ ನೋಡಿರಲಿಲ್ಲ. ವೆಂಕಭಟ್ಟ ಒಂದು ಕಲ್ಲು ತೆಗೆದುಕೊಂಡು ಅದರ ಕಡೆಗೆ ಬೀಸುತ್ತಿದ್ದಂತೆಯೇ ಅದು ತನ್ನ ವಿಶಾಲವಾದ ರೆಕ್ಕೆಗಳನ್ನು ರಿವ್ವನೆ ಬೀಸಿ ಸಶಬ್ದ ಹಾರಿ ಹೋಯಿತು. ತಮ್ಮ ಮರನಿದ್ದೆಯನ್ನು ಶಪಿಸಿಕೊಳ್ಳುತ್ತಾ. ಪ್ರತ್ಯಕ್ಷ ಮೃತ್ಯುವಿನೆದುರು ತಪ್ಪಿಸಿಕೊಂಡು ಬಂದಂತೆ ಗಡಗಡ ನಡುಗಿ. ಅಬ್ಬಾ ಇಂಥಾ ಹದ್ದನ್ನು ಇಷ್ಟು ಹತ್ತಿರದಿಂದ ಎಂದೂ ನೋಡಿರಲಿಲ್ಲ ಎಂದು ಮಾತಾಡಿಕೊಂಡರು.

ಗಂಟೆ ನಾಲ್ಕರ ಹತ್ತಿರ ಬಂದಿತ್ತು. ನೇರವಾಗಿ ಮೂರನೆಯ ಗುಹೆಗೆ ಹೋದರು. ಅದು ಇವೆರಡಕ್ಕಿಂತ ಸ್ವಲ್ಪ ದೂರದಲ್ಲಿತ್ತು. 'ಆ ಹದ್ದಿನ ಕೊಕ್ಕು ನೆನೆಸಿಕೊಂಡರೆ ಇನ್ನೂ ಭಯವಾಗುತ್ತೆ ಕಾಣೆ' ಎಂದ ವೆಂಕಭಟ್ಟ. ಇನ್ನೂ ಅದರ ಗುಂಗಿನಲ್ಲೇ ಇದ್ದ ದತ್ತ ಆಗಲೇ ಗುಹೆಯ ಒಳಾವರಣದ ವಿವರಗಳನ್ನು ಗಮನಿಸುತ್ತಿದ್ದ. ಸಣ್ಣ ಒಂದು ಟಿಪ್ಪಣಿ ಪುಸ್ತಕದಲ್ಲಿ ಏನೇನೋ ಗುರುತು ಹಾಕಿಕೊಳ್ಳುತ್ತಿದ್ದ. ನಿರ್ಜೀವವಾದ ಈ ಗುಹೆ ಅವನಲ್ಲಿ ಎಷ್ಟೆಲ್ಲಾ ಕೂತೂಹಲವನ್ನು ಮೂಡಿಸಿದ್ದು ನೋಡಿದರೆ ವೆಂಕಭಟ್ಟನಿಗೆ ಆಶ್ಚರ್ಯ. ಆದರೆ ದತ್ತನ ಪಾಲಿಗೆ ನಿರ್ಜೀವ ಗುಹೆ ಅನ್ನಿಸುತ್ತಿರಲಿಲ್ಲ. ಅದರ ಅಂಗುಲ ಅಂಗುಲವೂ ತನ್ನದೇ ಆದ ಭಾಷೆಯಲ್ಲಿ ತಾನು ಆಶ್ರಯವಿತ್ತಿದ್ದ ಜೀವರಾಶಿಗಳ ಗುಣ, ಸ್ವಭಾವ, ಚಹರೆ, ಚಟುವಟಿಕೆಗಳನ್ನು ಹೇಳತೊಡಗಿತ್ತು. ಅದನ್ನು ಕೇಳುವ ಕಿವಿ, ನೋಡುವ ಕಣ್ಣು, ಅರ್ಥ ಮಾಡಿಕೊಳ್ಳುವ ಹೃದಯ ಬೇಕಾಗಿತ್ತು. ಅಷ್ಟೆ.



"ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕಪ್ ಕೊಡುತ್ತಾರಂತೆ... ಬಸಿಯನ್ನು ಮಾತ್ರ ಅವರವರೇ ತೆಗೆದುಕೊಳ್ಳಬೇಕಂತೆ!"

ಒಳಗೆ ಹೋಗುತ್ತಾ ಗವಿ ತಟಕ್ಕನೆ ಮುಗಿದು ಹೋಗಿತ್ತು. ಆದರೆ ಆ ಮುಗಿದ ರೀತಿ ಅಸ್ವಾಭಾವಿಕವಾಗಿತ್ತು. ಹೊಸದಾಗಿ ಜರುಗಿದ ಮಣ್ಣಿನ ರಾಶಿ ಗುಹೆಯನ್ನು ಅರ್ಧದಲ್ಲೇ ನಿಲ್ಲಿಸಿದಂತಿತ್ತು. ಪ್ರಾಯಶಃ ಈ ರಾಶಿಯ ಆಚೆಗೂ ಗವಿ ಇನ್ನೂ ಇರಬೇಕು. ಆ ಯೋಚನೆ ಬರುತ್ತಲೇ ದತ್ತ ವೆಂಕಭಟ್ಟನಿಗೆ ಹೇಳಿದ. ಅದು ಅವನಿಗೆ ಸರಿ ಎನ್ನಿಸಿತು. ಆದರೆ ದತ್ತನ ಉತ್ಸಾಹ ನೋಡಿದರೆ ಅದನ್ನು ಅಗೆದು ತೆಗೆದು ಮುಂದೆ ಏನಿದೆ ನೋಡುವ ಯೋಚನೆ ಇದ್ದಂತೆ ಕಾಣುತ್ತಿತ್ತು. ಅದು ತಮ್ಮಿಬ್ಬರಿಗೆ ಸಾಧ್ಯವೆ? ಇರುವುದು ಒಂದು ಸಲಿಕೆ. ಆದರೆ ದತ್ತ ಅಷ್ಟಕ್ಕೆ ಬಿಡುವ ಹಾಗೆ ಕಾಣಲಿಲ್ಲ. ಎಷ್ಟು ಗಾತ್ರದ ಮಣ್ಣು ಬಿದ್ದಿದೆಯೋ ಎಂದು ವೆಂಕಭಟ್ಟ ನಿರುತ್ಸಾಹಗೊಳಿಸಿದರೂ ಸ್ವಲ್ಪ ಪ್ರಯತ್ನ ಮಾಡಿ ನೋಡೋಣ ಎಂದು ಸಲಿಕೆ ಇಸಿದುಕೊಂಡು ಅಗೆಯಲು ಪ್ರಾರಂಭಿಸಿಯೇಬಿಟ್ಟ. ನಿರ್ವಾಹವಿಲ್ಲದೆ ವೆಂಕಭಟ್ಟ ತಾನು ಸಲಿಕೆ ಇಸಿದುಕೊಂಡು ಮಣ್ಣು ಎಳೆಯಲು ತೊಡಗಿದ.

ಅದು ಅವನಿಗೆ ಅಭ್ಯಾಸವಿಲ್ಲದ ಕೆಲಸ. ಸ್ವಲ್ಪ ಹೊತ್ತಿಗೆಲ್ಲಾ ಕೈಗಳು ಬೊಬ್ಬೆ ಬಂದವು, ದತ್ತ ಹೇಳಿದ: ಸಲಿಕೆಯ ಕಾವನ್ನು ಬಿಗಿಯಾಗಿ ಹಿಡಿದುಕೊಂಡರೆ ಹಾಗೇ. ಇಲ್ಲಿ ನೋಡಿ, ಹೀಗೆ ಸಡಿಲ ಹಿಡಿಯಬೇಕು ಎಂದು ತಾನು ಮಣ್ಣು ಎಳೆದು ತೋರಿಸಿದ. ಸ್ವಲ್ಪಹೊತ್ತಿಗೆ ಒಂದು ಕಿಂಡಿ ಬಿತ್ತು, ದತ್ತ ಸಂತೋಷದಿಂದ ಕೂಗಿದ. ಸಲಿಕೆಯ ಕಚ್ಚಿನ ಪ್ರತಿಧ್ವನಿಯ ಜೊತೆಗೆ ಅವನ ಕೂಗು ಪ್ರತಿಧ್ವನಿಗೊಂಡು ಮತ್ತೆ ಅವರಿಗೆ ಬಂತು.

'ಬೇಗ ಬೇಗ ತೆಗೀರಿ. ಆ ಕಡೆ ಏನಿದೆ ನೋಡೋಣ' ಎಂದ.

ವೆಂಕಭಟ್ಟ ಮಣ್ಣು ಕಲ್ಲು ಎಳೆಯುತ್ತಾ ಗವಿಯ

ಬಾಯಿ ತೆರೆದುಕೊಳ್ಳುವಾಗ, ನೀರಿನೊಳಗೆ ಸಿಡಿಮದ್ದು ಸಿಡಿದಂಥ ಸದ್ದು ಕೇಳಿ ಒಂದೇ ಸಲ ಕತ್ತಲು ಮುಚ್ಚಿಕೊಂಡಿತು. ಏನೆಂದು ತಿರುಗಿ ನೋಡಿದಾಗ ಅವರು ಬಂದ ದಾರಿಯಲ್ಲಿ ಮಣ್ಣು ಕುಸಿದು ಮುಚ್ಚಿಕೊಂಡಿತ್ತು. ದತ್ತ ಟಾರ್ಚ್ ಆ ಕಡೆ ತಿರುಗಿಸಿ ನೋಡಿದ. ಹಸಿ ಮಣ್ಣು ಕಲ್ಲುಗಳ ರಾಶಿಯೊಂದು ಹಲ್ಲು ಕಿಸಿಯುತ್ತಾ ಅವರು ಬಂದ ದಾರಿಯನ್ನು ಪೂರ್ತಿ ಮುಚ್ಚಿತ್ತು. ಒಂದು ಕ್ಷಣದಲ್ಲಿ ಅವನಿಗೆ ಸನ್ನಿವೇಶ ಏನೆಂದು ಅರ್ಥವಾಯಿತು.ಗವಿ ಮುಂದಿನ ಬಾಗಿಲನ್ನು ತೆರೆದಿತ್ತು. ಆದರೆ ಬಂದ ಬಾಗಿಲನ್ನು ಮುಚ್ಚಿತ್ತು. ಅವರು ಅದರಲ್ಲಿ ಸೆರೆಯಾಗಿದ್ದರು.

ವೆಂಕಭಟ್ಟನ ಮುಂದ ಬುದ್ಧಿಗೂ ಕೂಡ ಹೊಳೆಯುವಷ್ಟು ಸರಳವಾದ ಸಂಗತಿ ಅದಾಗಿದ್ದರಿಂದ ಅವನು.

'ಏನು ರಾಯ್ರೆ, ನಮ್ಮ ಜೀವಂತ ಸಮಾಧಿ ಆಯ್ತುಂತೆ ಕಾಂಬು?' ಎಂದ ಗಾಬರಿ ತುಂಬಿದ ಧ್ವನಿಯಲ್ಲಿ.

ದತ್ತ ಅಧೀರನಾಗದೆ, 'ಹೆದರಬೇಡಿ ಭಟ್ಟರೆ, ಜಾಸ್ತಿ ಮಣ್ಣೇನೂ ಬಿದ್ದಿಲ್ಲ. ಐದು ನಿಮಿಷದಲ್ಲಿ ತೆಗೆದು ಗುಹೆಯಿಂದ ಹೊರಗೆ ಹೋಗಬಹುದು. ಮೊದಲು ಈ ಕಡೆ ಏನಿದೆ ಅಂತ ನೋಡಿಕೊಂಡು ಹೋಗಿಬಿಡೋಣ?' ಎಂದ.

ವೆಂಕಭಟ್ಟನ ಕೈ ಗಡ ಗಡ ನಡುಗುತ್ತಿತ್ತು. ದತ್ತನೇ ಅವನನ್ನು ಹಿಡಿದುಕೊಂಡು ಮುಂದೆ ಕರೆದುಕೊಂಡು ಹೋದ. ಸ್ವಲ್ಪ ದೂರ ಹೋದ ಗವಿ ಎಡಕ್ಕೆ ತಿರುಗಿಕೊಂಡಿತ್ತು. ಇಬ್ಬರೂ ತಿರುಗುತ್ತಿದ್ದಂತೆಯೇ ಯಾರೋ ಕೂತಿರುವುದು ನೋಡಿ ಧಕ್ಕನೆ ಬೆಚ್ಚಿ ನಿಂತರು. ಭಟ್ಟ 'ರಾಯ್ರೆ' ಎಂದು ಕುಸಿಯತೊಡಗಿದ, ದತ್ತನ ಧೈರ್ಯವೂ ಕುಸಿಯತೊಡಗಿತು. ಬೆಳಕನ್ನು ಸರಿಯಾಗಿ ಬಿಟ್ಟು ನೋಡಿದ. ಪ್ರೊಫೆಸರ್ ಸದಾಶಿವಯ್ಯನವರು. ಗೋಡೆಗೊರಗಿ ಕೂತಿದ್ದರು.

ಭಟ್ಟನನ್ನು ಎಳೆದುಕೊಂಡು ದತ್ತ ನಾಲ್ಕು ಹೆಜ್ಜೆ ಮುಂದೆ ಹೋದ, ಸದಾಶಿವಯ್ಯನವರು ಸತ್ತಿದ್ದರು. ಅವರ ದೇಹಕೊಂಚ ಕುಗ್ಗಿತ್ತು. ಆದರೆ ಹೊರರೂಪದಲ್ಲಿ ಹೆಚ್ಚಿನ ಬದಲಾವಣೆಯಾಗಿರಲಿಲ್ಲ. ವಾಸನೆ ಕೂಡ ಬಂದಿರಲಿಲ್ಲ. ಗುಹೆಯ ಯಾವುದೋ ಗುಣ ಅವರ ದೇಹವನ್ನು ಕೆಡದಂತೆ ಕಾಯ್ದಿರಿಸಿತ್ತು. ಮಣ್ಣು ಕುಸಿದು ದಾರಿ ಮುಚ್ಚಿ ತಾವು ಗುಹೆಯಲ್ಲಿ ಸಿಕ್ಕಿಹಾಕಿಕೊಂಡೆವೆಂಬ ಹೆದರಿಕೆಯಿಂದಲೇ ಅವರು ಹೃದಯಾಘಾತ ಹೊಂದಿ ಸತ್ತ ಹಾಗೆ ಕಾಣುತ್ತಿತ್ತು. ಏಕೆಂದರೆ ಕುಸಿದು ಬಿದ್ದ ಮಣ್ಣಿನ ರಾಶಿಯನ್ನು ಬಯಲು ಮಾಡಲು ಅವರು ಯಾವುದೇ ರೀತಿಯ ಪ್ರಯತ್ನವನ್ನೂ ಮಾಡಿದಂತೆ ಕಂಡಿರಲಿಲ್ಲ. ಅವರ ಪಕ್ಕದಲ್ಲಿ ನಂದಿ ಹೋದ ಟಾರ್ಚ್, ಕ್ಯಾಮರಾ, ಟಿಪ್ಪಣಿ ಪುಸ್ತಕ ಕೈಚೀಲ-ಎಲ್ಲಾ ಇದ್ದವು. ನೋಡಿದರೆ ಬಹಳ ಶ್ರಮದ ಕೆಲಸದ ನಂತರ ವಿಶ್ರಮಿಸಲು ಗೋಡೆಗೊರಗಿ ಕೂತಿದ್ದಾರೇನೋ ಎಂಬಂತೆ ಕಾಣುತ್ತಿತ್ತು. ಆದರೆ ಅವರು ಶಾಶ್ವತ ವಿಶ್ರಾಂತಿ ಅರಸಿ ಹೋಗಿದ್ದರು.

ಅಲ್ಲಿ, ಮೃತ್ಯುವಿನೆದುರು ಹೆಚ್ಚು ಹೊತ್ತು ನಿಲ್ಲುವ ಧೈರ್ಯ ಇಬ್ಬರಲ್ಲೂ ಉಳಿದಿರಲಿಲ್ಲ. ಮೊದಲ ದಾರಿಗೆ ಹಿಂತಿರುಗಿ ಎದುರಾದ ಮಣ್ಣಿನ ರಾಶಿಯನ್ನು ಸಲಿಕೆಯಿಂದ ಎಳೆಯುತೊಡಗಿದರು. ಐದು ನಿಮಿಷವಲ್ಲ ಹತ್ತು ನಿಮಿಷವಾದರೂ ಮುಗಿಯಲಿಲ್ಲ. ಇಬ್ಬರೂ ಅಧೀರರಾಗತೊಡಗಿದರು. ಒಬ್ಬರಾದ ಮೇಲೊಬ್ಬರಂತೆ ಮಣ್ಣು ಎಳೆದರು. ಇಬ್ಬರ ಕೈಗಳು ಸೋತು ಬಿದ್ದವು. ಮಾತನಾಡುವ ಧೈರ್ಯವಾಗಲಿ, ಚೇತನವಾಗಲಿ ಇಬ್ಬರಿಗೂ ಉಳಿದಿರಲಿಲ್ಲ. ಸ್ವಲ್ಪ ಹೊತ್ತು ದಿಕ್ಕು ತೋಚದೆ ಸುಮ್ಮನೆ ಕೂತರು. ಮತ್ತೆ ದತ್ತ ಎದ್ದ. ನಿಧಾನವಾಗಿ ಲೆಕ್ಕಾಚಾರ ಹಾಕಿಕೊಂಡು ಸಲಿಕೆಯಿಂದ ಮಣ್ಣು ಎಳೆಯುತೊಡಗಿದ. ವೆಂಕಭಟ್ಟ ಬೆಳಕು ಬಿಡುತ್ತಿದ್ದ. ಮುಂದಿನ ನಿಮಿಷದಲ್ಲಿ ತಣ್ಣನೆಯ ಗಾಳಿ-ಬೆಳಕು ಒಳಗೆ ನುಗ್ಗಿದವು. ಇಬ್ಬರಿಗೂ ಜೀವ ಬಂತು. ದಾರಿ ಕ್ಷಣ ಕ್ಷಣಕ್ಕೆ ಅಗಲವಾಯಿತು. ಅದರಲ್ಲಿ ತೂರಿಕೊಂಡು ಹೊರಗೆ ಹಾರಿದರು. ಕಾಲಲ್ಲಿ ಶಕ್ತಿ ಇಲ್ಲದಿದ್ದರೂ ಹೊರಗೆ ಓಡಿ ಬಂದರು. ಒಬ್ಬರ ಮುಖವನೊಬ್ಬರು ನೋಡಿಕೊಂಡರು. ಮೃತ್ಯುವಿನೊಡನೆ ಕೈ ಕುಲುಕಿ ಬಂದವರಂತೆ ಇಬ್ಬರೂ ಬಿಳಿಚಿಕೊಂಡಿದ್ದರು. ಸ್ವಲ್ಪ ಹೊತ್ತು ಸುಧಾರಿಸಿಕೊಂಡು, ಅನಂತರ ಕತ್ತಲಾಗುವ ಒಳಗೆ ತಳ ಸೇರಬೇಕಲ್ಲಾ ಎಂಬ ತಳ್ಳಂಕದಲ್ಲಿ ಸರಸರ ಕೆಳಗಿಳಿಯತೊಡಗಿದರು.

✡

ಆ ಹೂವು ಅರಳಲು ಬಿಡಿ



ಹುಟ್ಟಿದ ಮೊದಲ ಮೂರು ವರ್ಷಗಳು ಮಗುವಿನ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಅತ್ಯಂತ ಪ್ರಮುಖವಾದ ಕಾಲ. ಈ ಅವಧಿಯಲ್ಲಿ ನೀವು ಮಗುವನ್ನು ಅತ್ಯಂತ ಕಾಳಜಿಯಿಂದ ಮತ್ತು ಪ್ರೀತಿಯಿಂದ ನೋಡಬೇಕು. ಈ ಅವಧಿಯಲ್ಲಿ ಮತ್ತೊಂದು ಮಗುವನ್ನು ಹೊಂದಿ ಈ ಮಗುವಿಗೆ ನಿಮ್ಮ ಪ್ರೀತ್ಯಾದರಗಳ ಕೊರತೆಯುಂಟು ಮಾಡಬೇಡಿ. ಎರಡು ಮಕ್ಕಳ ನಡುವೆ ಮೂರು ವರ್ಷಗಳ ಅಂತರ ಇರುವುದು ತಾಯಿಯ ಆರೋಗ್ಯದ ರಕ್ಷಣೆಯ ದೃಷ್ಟಿಯಿಂದಲೂ ಅಗತ್ಯ.

ಮಹಿಳೆಯರಿಗೆ ಐಯುಡಿ ಮತ್ತು ಮಾತ್ರೆಗಳು ಗಂಡಸರಿಗೆ ನಿರೋಧ್

ಉಚಿತ ಮಾರ್ಗದರ್ಶನ ಮತ್ತು ಸೇವೆಗೆ

ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ಕೊಡಿ

davp 78/160



ತೆರೆ ಸರಿದಾಗ

ಆರ್ಯಾಂಬ ಪಟ್ಟಾಭಿ

ಮೈತುಂಬ ಥಳಥಳ ಹೊಳೆಯುವ ಒಡವೆಗಳು, ತಲೆ ತುಂಬ ಅರಳಿದ ಮಲ್ಲಿಗೆಯ ಮಾಲೆ, ಹೊಸ ಹಸಿರುಬಣ್ಣದ ಜರತಾರಿ ಅಂಚಿನ ರೇಶ್ಮೆಸೀರೆ-ಯುಟ್ಟು ಕನ್ನಡಿಯಲ್ಲಿ ಮುಖ ನೋಡಿಕೊಂಡು ಸಂಭ್ರಮಪಡುತ್ತಿದ್ದಾಗ ಪಾತಜ್ಜಿ ನನ್ನನ್ನು ಹುಡುಕಿಕೊಂಡು ಬಂದರು.

"ಇನ್ನೂ ನಿನ್ನ ಅಲಂಕಾರ ಮುಗೀಲಿಲ್ವೇನೆ? ಗೌರಿ ಪೂಜೆಗೆ ಹೊತ್ತಾಯ್ತು, ನಡಿ." ಹಿರಿ ಮುತ್ತೈದೆಯೊಬ್ಬರು ಬಿಳಿ ರೇಷ್ಮೆ ಸೀರೆಯನ್ನು ಮೇಲು ಹೊದಿಕೆಯಾಗಿ ಹೊದ್ದಿದ್ದರು. ಬಿಳೀ ಸೀರೆಗೆ ಕುಂಕುಮದ ಕೆಂಪಿನಂಚು...ಅಂಚಿನಲ್ಲಿ ಜರತಾರಿಯ ಕುಚ್ಚುಗಳು...ಸೀರೆಯನ್ನು ಸರಿಪಡಿಸಿಕೊಳ್ಳುತ್ತಾ ನಾನು ದೇವರ ಕೋಣೆಗೆ ಬಂದೆ. ಆ ಪುಟ್ಟ ಕೋ-ಣೆಯ ಮೂಲೆಯಲ್ಲಿ ಕರಿಮರದ ಮಂದಾಸನವಿತ್ತು. ...ಅದರೊಳಗೆ ಬೆಳ್ಳಿಯ ಪೆಟ್ಟಿಗೆಯಲ್ಲಿ ಪುಟ್ಟ ಮಂಗಳಗೌರಿಯ ವಿಗ್ರಹ...ಮಂಟಪದ ಸುತ್ತ ನಾಲ್ಕೈದು ದೇವರ ಪಟಗಳು...ಇನ್ನು ನಾಲ್ಕಾರು ದೇವರ ಬೆಳ್ಳಿಯ ವಿಗ್ರಹಗಳಿದ್ದವು. ಮಂಟಪದ ಮುಂದುಗಡೆ ನಾಲ್ಕಾರು ಕಟ್ಟೆಗಳಲ್ಲಿ ಪೂಜಾ ಸಾಮ-ಗ್ರಿಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿತ್ತು. ಬೆಳ್ಳಿಯ ತಟ್ಟೆಯಲ್ಲಿ ಅರಿಶಿನ, ಕುಂಕುಮದ ಬಟ್ಟಲುಗಳು...ಬೆಳ್ಳಿಯ ಬುಟ್ಟಿಯ ತುಂಬ ಬಣ್ಣ ಬಣ್ಣದ ಬಿಡಿ ಹೂಗಳು...ನಾನು ಸಂಭ್ರಮದಿಂದ ಎಲ್ಲವನ್ನೂ ನೋಡಿದೆ. ಹಣ್ಣು ಕಾಯಿ, ಎಲೆ, ಅಡಿಕೆ... ಊದುಬತ್ತಿ...ಮಂಟಪದ ಎಡಭಾಗದಲ್ಲಿ ಉರಿಯುವ ನಂದಾದೀಪ...ಕರಿಮರದ ಮಣೆಯ ಮೇಲೆ ಕುಳಿತುಕೊಂಡೆ ಪಾತಜ್ಜಿ ನನಗೆ ಶಾಸ್ತ್ರೋಕ್ತವಾದ ರೀತಿಯಲ್ಲಿ ಗೌರಿಪೂಜೆ ಮಾಡುವಂತೆ ಹೇಳಿಕೊಡಲು ನನ್ನ ಪಕ್ಕದಲ್ಲೇ ಕುಳಿತುಕೊಂಡರು.



ಪಾತಜ್ಜಿ ಎಂಬತ್ತು ವರ್ಷದ ಹಿರಿ ಮುತ್ತೈದೆ... ನಮ್ಮಮ್ಮನ ಕಡೆಯ ಸಮೀಪ ಬಂಧು. ಆಕೆಯನ್ನೊಮ್ಮೆ ಕುತೂಹಲದಿಂದ ಗಮನಿಸಿದೆ... ಆಕೆಯದು ನೋಡಿದವರಿಗೆ ಗೌರವ, ಭಕ್ತಿ ಮೂಡಿ ಸುವಂತಹ ವ್ಯಕ್ತಿತ್ವ...ಆ ಇಳಿವಯಸ್ಸಿನಲ್ಲೂ ಏಳೆ ಮಗುವಿಗಿರುವಂತಹ ದುಂಡಾದ ಮುಗ್ಧ ಮುಖ, ಕೆನ್ನೆ ತುಂಬಾ ಅರಿಶಿನ, ಹಣೆಯ ಮೇಲೆ ಅಗಲವಾದ ಅಷ್ಟು ಕುಂಕುಮ...ಹತ್ತಿಯಂತೆ ಬಿಳು [illegible] ಹೂವಿನ ದಂಡೆ...ಮೈ ತುಂಬ ಧರ್ಮಾವರದ ಸೆರಗು...ಎರಡು ಕೈಗಳಲ್ಲೂ ಝಣಗುಟ್ಟುವ ಕೆಂಪು ಹಸಿರು ಗಾಜಿನ ಬಳೆಗಳು, ಕಾಲಂದುಗೆ...

ನಿರ್ಜೀವವಾದ ಬೆಳ್ಳಿಯ ಗೌರಿಯ ವಿಗ್ರಹಕ್ಕೆ ಪೂಜಿಸುವ ಬದಲು ಜೀವಂತ ಪಾತಜ್ಜಿಯನ್ನೇ ಮಂಟಪದಲ್ಲಿ ಕೂರಿಸಿ ಪೂಜೆ ಮಾಡುವ ಆಸೆ ಉಂಟಾಯಿತು ನನಗೆ. ಪಾತಜ್ಜಿ ಅಪ್ಪಣೆ ಕೊಡಿಸಿದರು.

"ಗೌರಿ ಪೂಜೆಯನ್ನು ತುಂಬ ಶ್ರದ್ಧೆಯಿಂದ, ಭಕ್ತಿಯಿಂದ ಮಾಡಬೇಕು. ನಿನ್ನನ್ನು ಧಾರೆಯ ಮಂಟಪಕ್ಕೆ ಕರೆದುಕೊಂಡು ಹೋಗುವವರೆಗೂ ಪೂಜೆ ಮಾಡ್ತಿರಬೇಕು. ಪೂಜಾವಿಧಾನವನ್ನು ನಾನು ಹೇಳಿಕೊಡ್ತೀನಿ...ನಿಧಾನವಾಗಿ ಮಾಡು..."

ಹೆಂಗಸರೆಲ್ಲ ನನ್ನನ್ನು ಮುತ್ತಿಕೊಂಡರು.

"ವಧುವಿನ ಉಡುಪಿನಲ್ಲಿ ನೀನಿವತ್ತು ತುಂಬ ಚೆನ್ನಾಗಿ ಕಾಣಿಸ್ತಿದೀಯ..."

"ಸೀರೆ ಸೊಗಸಾಗಿದೆ ಕಣೆ. ನಿನಗೆ ಈ ಹಸಿರು ಬಣ್ಣ ಚೆನ್ನಾಗಿ ಒಪ್ಪತ್ತೆ."

"ಗೌರಮ್ಮನ್ನ ಏನು ಕೊಡು ಅಂತ ಬೇಡ್ಕೋತೀಯೇ ?"

"ಅವಳಿಗೆ ಏನು ತಾನೆ ಕಡಿಮೆಯಾಗಿದೆ? ಮುತ್ತೈದೆ ಭಾಗ್ಯ ಕೊಡು ತಾಯಿ ಅಂತ ಬೇಡ್ಕೊಂಡ್ರೆ

ಸಾಕು."

ಪಾತಜ್ಜಿ ವಯಸ್ಸಿಗೆ ಅನುಗುಣವಾದ ಮಾತ ನ್ನಾಡಿ ಎಳೆಯರ ಬಾಯನ್ನು ಮುಚ್ಚಿಸಿದರು.

"ಹುಂ...ದೀಪ, ಊದುಬತ್ತಿ ಹಚ್ಚಿ ಪೂಜೆಗೆ ಪ್ರಾರಂಭಮಾಡು..."

ಧಾರೆ ಮಂಟಪದಲ್ಲಿ ಮಂಗಳವಾದ್ಯದ ಸದ್ದು. ಕಿಕ್ಕಿರಿದು ತುಂಬಿದ್ದ ಜನರ ಮಾತು. ಮಾಡಲು ಏನು ಕೆಲಸವಿಲ್ಲದಿದ್ದರೂ ಹೊಸ ಸೀರೆಗಳನ್ನುಟ್ಟು ಸಂಭ್ರಮದಿಂದ ಓಡಾಡುವ ಹೆಂಗಸರು...ಕುಣಿದು ಕೇಕೆ ಹಾಕಿ ಕುಪ್ಪಳಿಸುವ ಮಕ್ಕಳ ಗುಂಪು...ನಡುವೆ ಎಳೆಯ ಮಗುವೊಂದರ ಆಕ್ರಂದನವೂ ಕೇಳಿಸು ತ್ತಿತ್ತು. ಪಾತಜ್ಜಿ ನುಡಿದಂತೆ ಯಾಂತ್ರಿಕವಾಗಿ ನನ್ನ ಕೈ ಕೆಲಸ ಮಾಡುತ್ತಿತ್ತು......ಹೂವು...... ಕುಂಕುಮ ಅರಿಶಿನ...ಚಂದ್ರದಿಂದ ಕೈ ಬೆರಳುಗಳು ಗೌರಮ್ಮನನ್ನು ಪೂಜಿಸುತ್ತಿದ್ದವು......

ಕ್ರಮೇಣ ಚಪ್ಪರದಲ್ಲಿ ಆಗುತ್ತಿದ್ದ ಮಾತು. ನಗು. ಕೂಗಾಟ, ಮಂಗಳವಾದ್ಯ, ಓಡಾಟದ ಸಂಭ್ರಮ ಕೇಳಿಸದಂತಾಯ್ತು...ನೆನಪುಗಳ ಪ್ರವಾಹದಲ್ಲಿ ಕೊಚ್ಚಿ ಹೋಗುವ ಹುಲ್ಲುಕಡ್ಡಿ ನಾನಾಗ.

ನಾನು ತಂದೆತಾಯಿಯರಿಗೆ ಹುಟ್ಟಿದ ಕಡೆಯ ಮಗಳು...ನಾಲ್ಕು ಗಂಡು ಮಕ್ಕಳಾದ ಮೇಲೆ ಹುಟ್ಟಿದ ಪ್ರೀತಿಯ ಮಗಳು...ಹೈಸ್ಕೂಲು ವಿದ್ಯಾ ಭ್ಯಾಸ ಮುಗಿದ ಕೂಡಲೆ ಮನೆಯಲ್ಲಿ ನನ್ನ ಮದು- ವೆಯ ಪ್ರಸ್ತಾಪ ಬಂತು.

"ಇನ್ನೂ ಚಿಕ್ಕ ವಯಸ್ಸು...ಓದಲಿ" ಅಪ್ಪ, ಪ್ರೋತ್ಸಾಹಿಸಿದರು.

ಪಥವೀಧರಳಾದ ನನ್ನ ಮದುವೆಗೆ ಅಪ್ಪ ಒಂದೆ ರಡು ಕಡೆ ಪ್ರಯತ್ನಪಟ್ಟಿದ್ದರೂ ಅದರ ಬಗ್ಗೆ ನಾನು ತುಂಬ ಉದಾಸೀನಳಾಗಿದ್ದೆ. ಮದುವೆ ಮಾಡಿಕೊಳ್ಳುವುದೇ ಇಲ್ಲವೆಂದು ಹೇಳುತ್ತಿದ್ದರೂ ಮದುವೆ, ಗಂಡ, ಮನೆ, ಸಂಸಾರ ಎಂದೆಲ್ಲಾ ಹಗಲು ಕನಸು ಕಾಣುವುದನ್ನು ಸಂಪೂರ್ಣವಾಗಿ ನಿಲ್ಲಿಸಿರ ಲಿಲ್ಲ.

ಅಂದು ಆನಂದನನ್ನು ಭೇಟಿಯಾದ ಸಂಜೆ ಚೆನ್ನಾಗಿ ನನ್ನ ನೆನಪಿನಲ್ಲಿದೆ. ಮನೆಯಲ್ಲಿ ಬೇಸರ ವೆಂದು ಒಂಟಿತನದ ಬೇಸರವನ್ನು ನೀಗಿಕೊಳ್ಳಲು ಸಮುದ್ರದ ತೀರಕ್ಕೆ ಹೋದೆ. ಮರಳಿನ ಗುಪ್ಪದ ಮೇಲೆ ಕುಳಿತು ಅಲೆಗಳ ಉರುಳಾಟವನ್ನು ತನ್ಮಯ ಳಾಗಿ ನೋಡಿದೆ. ಸೂರ್ಯ ಮುಳುಗಿದ ಮೇಲೆ ಅಲೆಗಳ ಬಡಿದಾಟ ಹೆಚ್ಚಾಯಿತು. ಯಾವ ಬಂದು ಹೋದದ ತುಂಡಾಗಲಿ ಗಾಳಿಯ ಬಡಿತವಾಗಲಿ ಶುಭ್ರವಾದ ಬಿಳಿಯ ಆಕಾಶದ ಮೌನವಾಗಲಿ ಸಮುದ್ರದ ಸೌಂದರ್ಯವನ್ನು ನಾಶಗೊಳಿಸಲಿಲ್ಲ. ಸಮುದ್ರ ತೀರದಲ್ಲಿ ಹೆಣ್ಣು ಗಂಡುಗಳು ಜೋಡಿ ಜೋಡಿಯಾಗಿ ವಿಹರಿಸುತ್ತಿದ್ದರು.

ಮದುವೆ...ಹೌದು ನಾನೇಕೆ ಮದುವೆಯಾಗ ಬಾರದು? ಮದುವೆಯಾದರೆ ಒಂಟಿತನದ ಬೇಸರ ಮಾಯವಾಗಬಹುದು...

ಮದುವೆ...ಹಸಿರು ಚಪ್ಪರ...ಮಂಗಳವಾದ್ಯ ...ಹೊಸ ಸೀರೆ...ನನ್ನತ್ತ ಪ್ರೇಮನೋಟ ಬೀರುವ ಸುಂದರ ಯುವಕ...ನಾನು ಹಗಲುಗನಸು ಕಾಣು ತ್ತಲೇ ಮನೆಯೊಳಗೆ ಬಂದೆ. ಹಜಾರದಲ್ಲಿ ಅಣ್ಣ ಸುಂದರ ತರುಣನೊಬ್ಬನ ಪಕ್ಕದಲ್ಲಿ ಕುಳಿತು ಅತ್ಮೀ ಯತೆಯಿಂದ ಹರಟುತ್ತಿದ್ದ...

"ನನ್ನ ತಂಗಿ...ಆನಂದ...ಇಂಜನೀಯರ್ ಆಗಿ ದ್ದಾನೆ. ನಮ್ಮೂರಿಗೆ ವರ್ಗವಾಗಿ ತಿಂಗಳಾಯಿತು. ನಾವಿಬ್ಬರು ಹೈಸ್ಕೂಲಿನಲ್ಲಿ ಒಟ್ಟಿಗೆ ಓದಿದವರು..."

ಸಂಕೋಚ ಬದಿಗಿಟ್ಟು ತಲೆ ಎತ್ತಿ ನೋಡಿದೆ... ಆನಂದ! ಹೆಸರಿಗೆ ತಕ್ಕ ರೂಪು...ತುಂಬ ಸುಂದರ ಯುವಕ...ಅಂದೇ ಅವನಿಗಾಗಿ ನಾನು ಸಂಪೂರ್ಣ ಸೋತು ಶರಣಾಗತಳಾದೆ. ಆನಂದ ಅಣ್ಣನಿಗಾಗಿ ಆಗಾಗ ಮನೆಗೆ ಬರುತ್ತಿದ್ದರು. ಅವರ ಸ್ವಭಾವ, ನಡೆ, ನುಡಿ ಹೆಚ್ಚು ಹೆಚ್ಚಾಗಿ ಪರಿಚಯವಾದಂತೆಲ್ಲ ನನ್ನ ನಿರ್ಧಾರ ಬಿಗಿಯಾಯಿತು.

"ಇವರು ನನ್ನವರಾದರೆ ಹೇಗೆ?" ಎಂದುಕೊಂಡೆ. ಯಾರೋ, ಏನೋ, ನನ್ನನ್ನು ಮದುವೆಯಾಗುವ ಆಸೆ ಅವರಿಗೂ ಇರಬೇಕಲ್ಲ?

ಆನಂದ ಭಾನುವಾರ ಮನೆಗೆ ಬರುತ್ತಿದ್ದರು. ಸ್ವಲ್ಪ ಸಮಯ ಎಲ್ಲರೊಡನೆ ಹರಟೆ ಹೋಗುತ್ತಿದ್ದರು... ಅವರು ಬರುವ ಸಮಯಕ್ಕೆ ಸರಿಯಾಗಿ ನಾನು ಅಲಂಕಾರ ಮಾಡಿಕೊಂಡು ಗೇಟಿನ ಬಳಿ ನಿಲ್ಲು ತ್ತಿದ್ದೆ... ಅವರು ಬಾರದೆ ಇದ್ದ ದಿನ ತುಂಬ ನಿರಾಶೆ ಯಾಗುತ್ತಿತ್ತು. ಇದೇಕೆ ನಾನು ಹೀಗಾದೆ? ಯಾರೂ ನನಗಿಷ್ಟು ಹುಚ್ಚು ಹಿಡಿಸಿರಲಿಲ್ಲ...

ಒಂದು ಭಾನುವಾರ ಮನೆಯಲ್ಲಿ ನಾನೊಬ್ಬಳೆ... ಆನಂದ ಗೇಟು ತೆಗೆದು ನಗುತ್ತಾ ನನ್ನ ಬಳಿ ಬಂದರು.

...ನನ್ನ ಕೈ ಹಿಡಿದು ಕೇಳಿದರು:

"ನಾನೊಂದು ಪ್ರಶ್ನೆ ಕೇಳುತ್ತೇನೆ... ನನ್ನ ಹೃದಯ, ಮನ ನೀನು ಹಂಚಿಕೊಳ್ಳುತ್ತೀಯಾ?"

ಆನಂದನ ಹಿಡಿತದಲ್ಲಿದ್ದ ನನ್ನ ಕೈ ಕ್ಷಣ ಕಾಲ ನಡುಗಿತು. ಕೈ ಬಿಡಿಸಿಕೊಂಡು ನಗುತ್ತಾ ಮನೆಯೊಳಗೆ ಓಡಿದೆ. ಅಂದು ನನಗಂತೂ ಹಿಡಿಸಲಾರದಷ್ಟು ಸಂತೋಷ...ನನ್ನಾಸೆ ಇಷ್ಟು ಸುಲಭವಾಗಿ ಈಡೇರುವುದೆಂದು ನಾನೆಣಿಸಿರಲಿಲ್ಲ.

ಪರಸ್ಪರ ಒಪ್ಪಿಕೊಂಡ ಮೇಲೆ ನಮ್ಮ ನಿರ್ಧಾರವನ್ನು ಹಿರಿಯರಿಗೆ ಮುಟ್ಟಿಸಿದೆವು.

"ನೀನೇನು ಎಳೆಯ ಮಗುವಲ್ಲ...ಮುಂದೆ ಕಷ್ಟ ಸುಖ ಅನುಭವಿಸಬೇಕಾದವಳು ನೀನು. ನಿನ್ನ ಮನಸ್ಸು ಎಲ್ಲ ರೀತಿಯಲ್ಲೂ ಅವನನ್ನು ಮೆಚ್ಚಿಕೊಂಡಿದ್ದರೆ ನನ್ನ ಅಡ್ಡಿಯಿಲ್ಲ...ಒಟ್ಟಿನಲ್ಲಿ ನೀನು ಸುಖವಾಗಿರುವುದು ಮುಖ್ಯ..."

ದೊಡ್ಡ ಜವಾಬ್ದಾರಿಯನ್ನು ನನ್ನ ಹೆಗಲ ಮೇಲೆ ಹಾಕಿ ಅಪ್ಪ ನಿಶ್ಚಿಂತರಾದರು.

"ಆನಂದನಂತಹ ಗಂಡು ಸಿಕ್ಕಬೇಕಾಗಿದ್ರೆ ನೀನು ಪುಣ್ಯ ಮಾಡಿರಬೇಕು."

ಅಣ್ಣ ಕಿವಿ ಹಿಂಡಿ ನನ್ನನ್ನು ಗೇಲಿ ಮಾಡಿದ.

"ಆನಂದ ಒಳ್ಳೆಯವ, ಚಿನ್ನಂದಂತಹ ಹುಡುಗ..." ಅಮ್ಮನ ಬೆಂಬಲವೂ ಸಿಕ್ಕಿತು.

ಮದುವೆಗೆ ಹಿರಿಯರ ಒಪ್ಪಿಗೆ ಪಡೆಯುವದು ನನಗೆ ಬಹಳ ಮುಖ್ಯವಾಗಿತ್ತು. ತಂದೆ ಒಪ್ಪದಿದ್ದರೆ? ಒಪ್ಪದಿದ್ದರೂ ಆನಂದನನ್ನು ನಾನು ಬಿಡಲಾರದವಳಾಗಿದ್ದೆ. ಆದರೆ ಆ ಸಮಸ್ಯೆ ನನಗೆ ಎದುರಾಗಲೇ ಇಲ್ಲ. ಮೆಚ್ಚಿದವನನ್ನೇ ಮದುವೆಯಾಗಬೇಕೆಂದಿದ್ದ ನಾನು ಹಕ್ಕಿಯಂತೆ ಆಕಾಶದಲ್ಲೇ ವಿಹರಿಸತೊಡಗಿದೆ.

ಮದುವೆಗೆ ದಿನ ನಿಶ್ಚಯವಾಯಿತು...ಮದುವೆಯ ದಿನ ಹತ್ತಿರ ಹತ್ತಿರ ಬಂದಂತೆ ಮನಸು ಆತಂಕಗೊಂಡಿತು. ಇನ್ನೆರಡು ದಿನಗಳಿಗೆ ನನ್ನ ಮದುವೆ...ಮನೆಯವರಿಗೆಲ್ಲ ಕೈ ತುಂಬ ಕೆಲಸ... ಆದರೆ ಯಾಕೋ ಏನೋ ಮನಸ್ಸಿಗೆ ವಿಪರೀತ ಕಳ

ವಳೆ…ಆತಂಕ…ಉಳಿದವರ ಸಂಭ್ರಮ ನನಗಿಲ್ಲ… ಕಾರಣ? ಆನಂದ ನಾನೇ ಮೆಚ್ಚಿಕೊಂಡ ಹುಡುಗ… ಹಿರಿಯರ ಒಪ್ಪಿಗೆಯೂ ಇದೆ ಎಂದ ಮೇಲೆ ಕಳವಳಕ್ಕೆ ಕಾರಣ? ಒಂದು ಬಗೆಯ ನಿರ್ಲಿಪ್ತತೆ… ನಿರುತ್ಸಾಹ…ಸಂಜೆ ಮನೆಯವರ ಕಣ್ಣು ತಪ್ಪಿಸಿ ಸಮುದ್ರ ತೀರಕ್ಕೆ ಹೋದೆ…ಅಲೆಗಳೊಡನೆ ಸ್ವಲ್ಪ ಹೊತ್ತು ಮಗುವಿನಂತೆ ಆಟವಾಡಿದಾಗ ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಕ್ಕಿತು……

'ಆನಂದನನ್ನು ಮದುವೆಯಾದರೆ ಮೊದಲಿನಂತೆ ಸ್ವತಂತ್ರವಾಗಿರಲು ಸಾಧ್ಯವೇ? ಒಂದು ಸಲ ತಾಳಿ ಕತ್ತಿಗೆ ಬಿದ್ದರೆ ಹೆಣ್ಣಿನ ಕಥೆ ಮುಗಿಯಿತು. ಕಷ್ಟವೋ, ಸುಖವೋ, ಬಡತನವೋ ಬಂದದ್ದು ಅನುಭವಿಸಬೇಕು…ಪಾಲಿಗೆ ಬಂದದ್ದು ಕಹಿ ಬೇವಾದರೂ ಪಂಚಾಮೃತವೆಂದು ಬಾಯಿಗೆ ಹಾಕಿಕೊಂಡು ಚಪ್ಪರಿಸಬೇಕು. ಇದು ಸಾಧ್ಯವೇ? ದಾಂಪತ್ಯ-ಜೀವನ ಹೂವಿನ ಹಾಸಿಗೆಯಾಗದೆ ಮುಳ್ಳಿನ ಹಾದಿಯಾದರೆ?'

"ಏನು…ಕನಸು ಕಾಣ್ತಾ ಇದೀಯ…ಗೌರಿಗೆ ಗೆಜ್ಜೆವಸ್ತ್ರ ಇಡಮ್ಮ…" ಪಾತಜ್ಜಿಯ ಧ್ವನಿ ಕೇಳಿ ನೆನಪಿನಾಳದಿಂದ ನಾನು ಎದ್ದು ಬಂದೆ. ಅಕ್ಕ ಗಿರಿಜ ನನ್ನ ಪಕ್ಕದಲ್ಲೇ ಗೋಡೆಗೊರಗಿ ನಿಂತಿದ್ದಳು. ಮದುವೆಯಾದ ನಾಲ್ಕು ವರ್ಷಗಳಲ್ಲಿ ರಸ ಹಿಂಡಿದ ಕಬ್ಬಿನಂತಾಗಿದ್ದಳು…

ಆನಂದನಂತೆ ಭಾವನೂ ಸ್ಫುರದ್ರೂಪಿ…ಸುಂದರನಾದ ಪ್ರೀತಿಸುವ ಗಂಡ. ಮುದ್ದಾದ ಎರಡು ಮಕ್ಕಳು…ಅಕ್ಕ ಎಷ್ಟು ಸುಖಿ! ಎಂದುಕೊಂಡಿದ್ದ ನನ್ನ ಆ ಕನಸನ್ನು ತುಂಡರಿಸಿ ಹಾಕಿದವಳು ಅಕ್ಕನೇ…

"ಒಂದು ನೋಟಕ್ಕೆ ಕಾಣುವುದು ಬಾಹ್ಯರೂಪ ಮಾತ್ರ…ಆದರೆ ವ್ಯಕ್ತಿಯ ಸ್ವಭಾವ, ಗುಣ, ಅಂತರ್ಯ ತಿಳಿಯುವುದು ಸಂಸಾರ ಹೂಡಿದ ಮೇಲೆ ತಾನೇ?

ಅಕ್ಕ ಒಂದು ದಿನ ಆಡಿದ ಮಾತು ನನ್ನೆದೆಯನ್ನು ಇರಿಯಿತು.

ಭಾವನಿಗೆ ಅಕ್ಕನಲ್ಲಿ ಮೊದಲಿನ ಪ್ರೀತಿಯಿಲ್ಲ. ಹೆಂಡತಿಯನ್ನು ಕಂಡರೆ ಒಂದು ಬಗೆಯ ತಾತ್ಸಾರ, ನಿರ್ಲಿಪ್ತತೆ.

ಗಂಡ ಹೆಂಡತಿಯರದು ಭಿನ್ನ ಅಭಿರುಚಿ, ವ್ಯಕ್ತಿತ್ವ…ಒಂದು ಭೂಮಿ ಮತ್ತೊಂದು ಆಕಾಶ. ದೂರದಿಂದ ನೋಡಿದರೆ ಒಂದುಗೂಡಿದಂತೆ ಕಾಣುತ್ತದೆ. ಇಬ್ಬರ ನಡುವೆ ಅಂತರ, ಅಜಗಜಾಂತರ. ಅಕ್ಕನ ಬದುಕು ಯಾಂತ್ರಿಕವಾಗಿ ಸ್ವಾರಸ್ಯವಿಲ್ಲದೆ ಸಪ್ಪೆಯಾಗಿತ್ತು. ಮದುವೆಯಾದ ಹೊಸತರಲ್ಲಿ ಇದ್ದ ಸಂಭ್ರಮ, ಸಡಗರ ಈಗೆಲ್ಲಿ?

ಅಕ್ಕ ತುಂಬ ನೆಮ್ಮದಿಯಿಂದ ಸಂಸಾರ ಮಾಡಿಕೊಂಡಿದ್ದಾಳೆ ಎಂದುಕೊಂಡಿದ್ದ ನನಗೆ ಅವಳು ತನ್ನ ಸಂಕಟ ತೋಡಿಕೊಂಡು ಅತ್ತಾಗಲೇ ತಿಳಿದದ್ದು.

ಚಿಕ್ಕಮ್ಮ ನನ್ನ ಸಮೀಪದಲ್ಲೇ ನಿಂತು ನಾನು ಮಾಡುತ್ತಿದ್ದ ಗೌರಿ ಪೂಜೆಯನ್ನು ನೋಡುತ್ತಿದ್ದರು. ಥಟ್ಟನೆ ಅವರ ಮಗಳು ಗೀತಳ ನೆನಪಾಯಿತು ನನಗೆ…

ಗೀತ…ತಂದೆತಾಯಿಗಳಿಗೆ ಒಬ್ಬಳೇ ಮಗಳು… ಮದುವೆ ಅದ್ಧೂರಿಯಿಂದಲೇ ಮಾಡಿ ಅವಳನ್ನು ಗಂಡನ ಮನೆಗೆ ಕಳುಹಿಸಿದ್ದರು. ಎರಡು ವರ್ಷದಲ್ಲೇ ಅವಳು ನರಕಯಾತನೆ ಅನುಭವಿಸಿದಳು…ಮೃದು ಸ್ವಭಾವದ ಗಂಡ…ಆದರೆ ಮನೆಯ ಯಜಮಾನಿ ಅತ್ತೆ. ಗೀತಳಿಗೆ ರಾಕ್ಷಸಿಯಂತಹ ಅತ್ತೆ ಸಿಕ್ಕದ್ದು ಅವಳ ದೌರ್ಭಾಗ್ಯ…ಗೀತಳ ಗಂಡ ತಾಯಿಗೆ ಹೆದರಿ ನಡುಗುತ್ತಿದ್ದ. ತಾಯಿಯ ಮಾತು ಕೇಳಿಸಿಕೊಂಡು ಹೆಂಡತಿಯನ್ನು ಹಿಡಿದು ಚುಚ್ಚುತ್ತಿದ್ದ. ಜೀವನದಲ್ಲಿ ಬೇಸರ ಹೊಂದಿದ ಮೂರು ತಿಂಗಳ ಗರ್ಭಿಣಿ ಗೀತ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು…

ಚಿಕ್ಕಮ್ಮ ದಿನವೂ ಅವಳ ಭಾವಚಿತ್ರದ ಮುಂದೆ ಕುಳಿತು ಕಣ್ಣೀರು ಹಾಕುವುದನ್ನು ನಾನೇ ಎಷ್ಟು ಸಲ ಕಂಡಿಲ್ಲ ?

'ಗೀತಳಿಗೆ ಮದುವೆ ಮಾಡದೆ ಇದ್ದಿದ್ದರೆ ಎಷ್ಟೋ ಚೆನ್ನಾಗಿತ್ತು…ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಗಿಣಿ ಹಾಗೆ ಸಾಕಿ ಕಟುಕನ ಕೈಲಿಟ್ಟ ಹಾಗಾಯ್ತು'

ಗೆಳತಿ ಯಶೋದ…ಕೈ ಹಿಡಿದ ಪತಿಯೇ ಪರದೈವ ಎಂದು ನಂಬಿ ನಡೆದಳು. ಗಂಡ ಕೆಲಸ ಕಳೆದುಕೊಂಡು ಪಾಡುಪಟ್ಟಾಗ ತಾನು ಕೆಲಸಕ್ಕೆ ಸೇರಿ ಸಂಸಾರದ ರಥ ಉರುಳುವಂತೆ ಮಾಡಿದಳು. ಆದರೆ ಮತ್ತೊಂದು ಹೆಣ್ಣಿಗಾಗಿ ಅವನು ಕೈ ಹಿಡಿದ ಹೆಂಡತಿಯನ್ನೇ ಬಿಟ್ಟು ಹೋದ. ಯಾರೊಬ್ಬರ ಹಂಗಿಲ್ಲದೆ ಮದುವೆಯೇ ಬೇಡವೆಂದು ಕೆಲಸ ಮಾಡು

ಪ್ರೀತಿ. ಗಂಡಸರನ್ನು ಮೆಚ್ಚಿ ಮದುವೆಯಾದದ್ದು ಅವಳ ದೌರ್ಭಾಗ್ಯ. ಅವಳೀಗ ಪುರುಷದ್ವೇಷಿ. 'ಗಂಡಸರೆಲ್ಲ ವಂಚಕರು. ದ್ರೋಹಿಗಳು, ಅವರನ್ನು ನಂಬಿ ಹಾಳಾಗಬೇಡಿ...'

ಎಳೆಯ ತರುಣಿಯರಿಗೆ ಅವಳು ಸಮಯ ಸಿಕ್ಕಿದಾಗಲೆಲ್ಲ ಎಚ್ಚರಿಕೆ ಕೊಡುತ್ತಿದ್ದಳು.

ಸೋದರತ್ತೆಯ ಮಗಳು ಪದ್ಮಿನಿ ದೇವರ ಕೋಣೆಯಾಚೆ ನಿಂತು ದೂರದಿಂದಲೇ ನಾನು ಮಾಡುತ್ತಿದ್ದ ಗೌರಿಪೂಜೆಯನ್ನು ಗಮನಿಸುತ್ತಿದ್ದಳು... ಅವಳ ಚಲುವಾದ ಮುಖದಲ್ಲಿ ಮುತ್ತೈದೆಯ ಕುರುಹಾದ ಕುಂಕುಮವಿರಲಿಲ್ಲ. ಅವಳದೊಂದು ದುರಂತ ಕಥೆ...ಸಿಕ್ಕಿದ ಗಂಡ ಒಳ್ಳೆಯವನೇ... ತಲೆಯ ಮೇಲೆ ಹೊತ್ತು ಮೆರೆಸುವ ಅತ್ತೆ ಮಾವಂದಿರು...ಆದರೆ ಮದುವೆಯಾದ ನಾಲ್ಕು ವರ್ಷಗಳಲ್ಲಿ ಮೂರು ಮಕ್ಕಳ ತಾಯಿಯಾಗಿ, ಗಂಡನನ್ನು ಕಳೆದುಕೊಂಡು ವಿಧವೆಯಾಗಿ ತೌರೂರಿಗೆ ಬಂದಿದ್ದಳು. ಸಂಸಾರದ ಸುಖವನ್ನು ಅನುಭವಿಸುತ್ತಿದ್ದ ಆದಿಯಲ್ಲೇ ಅವಳ ಬಾಳು ಮುರಿದು ಬಿತ್ತು... ಚಲುವೆಯಾದ ಮಗಳು ಬರಿ ಹಣೆಯಲ್ಲಿ ಮನೆಗೆ ಬಂದ ತಿಂಗಳಲ್ಲೇ ತಾಯಿ ಎದೆ ಒಡೆದು ಸತ್ತರು... ವೈಧವ್ಯದ ಸುಡುಬೆಂಕಿಯಲ್ಲಿ ದಹಿಸುತ್ತಾ ದಿನ ಕಳೆಯುವ ಪದ್ಮಿನಿ ನನಗೊಮ್ಮೆ ಅಳುತ್ತಾ ಹೇಳಿದ್ದ ಮಾತು ನೆನಪಾಯಿತು.

'ನೀನು ಖಂಡಿತ ಮದುವೆಯಾಗಬೇಡ...ನಾನು ಎರಡೂ ಕೈಲಿ ಉಂಡ ಸುಖ ಸಾಕು...ಈ ಮಕ್ಕಳಿಗಾಗಿ ನಾನು ಬದುಕಬೇಕು. ಇಲ್ಲದಿದ್ದರೆ ಎಂದೋ ಆತ್ಮಹತ್ಯೆಮಾಡಿಕೊಳ್ಳುತ್ತಿದ್ದೆ.' ಕೈ ಹಿಡಿದ ಗಂಡನ ಮೇಲೆ ತನ್ನ ಭವಿಷ್ಯ ರೂಪಿಸಿಕೊಂಡಿದ್ದ ಪದ್ಮಿನಿ ಬಾಳುವಂತಾದ ನತದೃಷ್ಟೆ....ಅವಳ ಸ್ಥಿತಿ ಕಂಡಾಗ ಲೆಕ್ಕಾ ಖಂಡಿತ ಮದುವೆಯಾಗಬಾರದು ಎಂದುಕೊಳ್ಳುತ್ತಿದ್ದೆ...

ಆದರೂ ನಾನೇಕೆ ಈ ಮದುವೆಗೆ ಒಪ್ಪಿಕೊಂಡೆ?

ಛೀ ಯಾಕಿಷ್ಟು ಕಳವಳ...ನಾನೇಕೆ ಇದ್ದಕ್ಕಿದ್ದಂತೆ ನನ್ನ ಮದುವೆಯ ದಿನ ಇಷ್ಟೊಂದು ಭಾವುಕಳಾಗಿಬಿಟ್ಟೆ! ಎಂಥಾ ಮನೋದೌರ್ಬಲ್ಯ ನನ್ನದು! ಇಲ್ಲ ...ಆನಂದ ತುಂಬ ಒಳ್ಳೆಯವರು...ಅವರನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ...

ಮಧುರಳದೂ ನನ್ನಂತೇ ಪ್ರೇಮವಿವಾಹ... ಮೆಚ್ಚಿದವನನ್ನೇ ಮದುವೆಯಾಗಿದ್ದಳು. ಎಂತಹ ಭಾಗ್ಯವಂತೆ ಎಂದು ನಾನು ಅಸೂಯೆಪಟ್ಟಿದ್ದುಂಟು. ಆದರೆ ಕಾಲೇಜಿನಲ್ಲಿ ಕಂಡ ಕಂಡ ಹೆಣ್ಣು ಮಕ್ಕಳ ಹಿಂದೆ ಸುತ್ತುವುದೇ ಅವನ ಕೆಲಸ...

'ಗಂಡಸರೆಲ್ಲ ನಾಯಿಗಳು...ಹೆಂಗಸರ ಹಿಂದೆ ಸುತ್ತುವುದೇ ಅವರ ಜಾಯಮಾನ. ಮೂರ್ಖರಾದ ನಾವು ಅವರ ಪ್ರೀತಿಯ ಮಾತುಗಳಿಗೆ ಬಲಿಯಾಗಿ ನಮ್ಮ ಮನಸ್ಸು, ದೇಹವನ್ನು ಒಪ್ಪಿಸುತ್ತೇವೆ. ಅಲ್ಲಿಗೆ ನಮ್ಮ ಕಥೆ ಮುಗಿಯಿತು... ಆ ಕ್ಷಣವೇ ನಮ್ಮನ್ನು ಕಾಲಿನಿಂದ ತುಳಿಯುತ್ತಾರೆ.'

ಮಧುರಳ ಮಾತುಗಳು ನನ್ನ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿದವು...ಕೈ ಹಿಡಿದ ಗಂಡನನ್ನೇ ಗೆಳತಿಯೆದುರು "ನಾಯಿ" ಎನ್ನಬೇಕಾದರೆ ಅವಳ ಎದೆಯ ಸಂಕಟ ಎಷ್ಟಿರಬಹುದು!

ನನ್ನ ಮದುವೆಯ ಸುದ್ದಿ ತಿಳಿದ ಕೂಡಲೆ ಮನೆಗೆ ಓಡಿ ಬಂದು ಕೈ ಕುಲುಕಿದಳು ವಿಜಯಲಕ್ಷ್ಮಿ... ತುಂಬ ಚೂಟಿಯಾದ ಪಾದರಸದಂತಹ ಹುಡುಗಿ... ಕಲ್ಲನ್ನು ಹಿಡಿದು ಮಾತನಾಡುವಷ್ಟು ವಾಚಾಳಿತನ ...ಸದಾ ನಗು, ಮಾತು...ವಿನೋದ. ಮೊನ್ನೆ ಕಂಡಾಗ ನನಗೆ ಆಶ್ಚರ್ಯವಾಗುವಷ್ಟು ಅವಳು ಬದಲಾಯಿಸಿದ್ದಳು; ಈಗ ಅವಳು ಮೊದಲಿನಂತಿಲ್ಲ... ಮಾತಿಲ್ಲ, ಕತೆಯಿಲ್ಲ. ಮಾತು ಮರೆತ ಮೂಕಿಯ ಹಾಗೆ ಮುಖದ ಮೇಲೆ ಸ್ಪಷ್ಟವಾದ ದುಃಖದ ಛಾಯೆ.

"ಯಾಕೆ ವಿಜಯ...ನೀನು ಮೊದಲಿನ ಹಾಗಿಲ್ಲ... ತುಂಬ ಸಪ್ಪಗಿದ್ದಿ ?"

"ಹುಂ...ಮದುವೆಯಾಗಿ ಸಂಸಾರದ ಕೂಪಕ್ಕೆ ಬಿದ್ದಮೇಲೆ ಮೊದಲಿನ ಹಾಗೆ ಇರೋದಕ್ಕಾಗುತ್ತಾ? ಮನೆ ತುಂಬ ಜನ...ಬೆಳಗಿನಿಂದ ರಾತ್ರಿಯವರೆಗೆ ದುಡಿತ...ಮೊದಲು ಹುಡುಗಿ...ಈಗ ಗಂಡ, ಅತ್ತೆ, ಮಾವ ಎಲ್ಲರೂ ಹೇಳಿದ ಹಾಗೆ ಕೇಳೋ ಸೇವಕಿ..." ಅವಳಾಡಿದ ಮಾತಿನಲ್ಲಿ ನೋವಿನ ಛಾಯೆಯಿತ್ತು.

"ಮನೆಯವರೆಲ್ಲ ನನ್ನ ಮನೆಯ ಕೆಲಸದವಳಂತೆ ಕಾಣ್ತಾರೆ. ನಾನು ಮದುವೆಯಾದದ್ದು ಯಾವ ಸೌಭಾಗ್ಯಕ್ಕೆ?"

ವಿಜಯ ಅಳತೊಡಗಿದಾಗ ಅವಳನ್ನು ಸಮಾನು

ಭೀತಿಯಿಂದ ಎಳೆದು ತೊಡೆಯ ಮೇಲೆ ಮಲಗಿಸಿಕೊಂಡೆ. ಆದರೆ ಅಳಬೇಡ ಎಂದು ಮಾತ್ರ ಹೇಳಲಿಲ್ಲ. ಕಣ್ಣೀರು ಹಾಕುವುದರಿಂದ ಅಲ್ಪಸ್ವಲ್ಪ ಮನಶ್ಶಾಂತಿ ಅವಳಿಗೆ ಸಿಕ್ಕುವುದಾದರೆ ಅದನ್ನು ನಾನೇಕೆ ತಪ್ಪಿಸಲಿ? ನಾನು ಚಿಂತೆಯ ಕೊಳದಲ್ಲಿ ಮುಳುಗಿದೆ.

"ದಾಂಪತ್ಯ ಜೀವನದಲ್ಲಿ ದ್ರೋಹ ನಗುತ್ತಿದೆ, ನ್ಯಾಯ ಅಳುತ್ತಿದೆ, ವಂಚನೆ ನೆಮ್ಮದಿಯಿಂದ ಬಾಳುತ್ತಿದೆ, ನಂಬಿಕೆ ನಾಶವಾಗುತ್ತದೆ...!

'ಪ್ರೇಮದ ಹುಚ್ಚು ಹತ್ತಿಸಿಕೊಂಡು ಬಾಹ್ಯ ರೂಪಕ್ಕೆ ಮೋಸಹೋಗಿ ಆನಂದನನ್ನು ಮದುವೆಯಾಗಿ ನನ್ನ ಬದುಕು ನರಕವಾದರೆ?'

'ದಾಂಪತ್ಯ ಜೀವನದಲ್ಲಿ ಸುಖ! ಅದನ್ನು ಹುಡುಕಲು ಹೋಗುವ ನಾನು ಮೂರ್ಖಳೆ?'

ಗೊಂಬೆಯಂತೆ ಕುಳಿತು ಗೌರಿಪೂಜೆ ಮಾಡುತ್ತಿದ್ದ ನನ್ನ ಮುಖ ಶಾಂತವಾಗಿದ್ದರೂ ಆ ಬಿಗಿದ ತುಟಿಗಳ ಹಿಂದೆ ಸಪ್ತಸಮುದ್ರಗಳು ಭೋರ್ಗರೆಯುತ್ತಿದ್ದವು. ಸುತ್ತ ನೆರೆದಿದ್ದ ಹೆಂಗಸರ ಕಣ್ಣಿಗೆ ಸೌಮ್ಯವಾಗಿ, ರಮ್ಯವಾಗಿ, ಮೋಹಕವಾಗಿ ಕಾಣುತ್ತಿದ್ದ ನನ್ನ ಎದೆಯ ಆಳದಲ್ಲಿ ಪ್ರಚಂಡ ಮಾರುತ ವೆದ್ದಿತ್ತು.

ಧಾರೆಯ ಮಂಟಪಕ್ಕೆ ಕರೆದುಕೊಂಡು ಹೋಗಲು ಮಾವ ನನ್ನ ಸಮೀಪಕ್ಕೆ ಬಂದಾಗ ವಿಪರೀತ ಹೆದರಿಕೆಯಾಯಿತು. ಓಡಿಹೋಗಲೇ ಎನಿಸಿತು...ಛೀ ನಾನೇಕೆ ಇಷ್ಟೊಂದು ಹೇಡಿಯಾದೆ? ನನ್ನ ಅಚಲ ನಿರ್ಧಾರ, ಧೈರ್ಯ ಎಲ್ಲಿ ತಲೆ ಮರೆಸಿಕೊಂಡು ಹೋಯಿತು?

ಮಾವ ನನ್ನ ಬೆನ್ನಿನ ಮೇಲೆ ಕೈಯಿಟ್ಟಾಗ ಯಾಕೋ ಏನೋ ದುಃಖ ಉಮ್ಮಳಿಸಿ ಬಂತು. ಈವರೆಗೆ ಒತ್ತಾಯದಿಂದ ಹಿಡಿದಿದ್ದ ಸಂಯಮದ ಕಟ್ಟೆ ಒಡೆಯುವಂತಾಯ್ತು...

ಬಾಳ್ವೆಯನ್ನು ಧೈರ್ಯವಾಗಿ ಎದುರಿಸುವಂತಿದ್ದರೆ ಪ್ರೀತಿಸಬೇಕು. ಅದು ಬಿಟ್ಟು ಹೀಗೆ ಹೇಡಿಯಂತೆ ಅತ್ತರೆ ಏನು ಸಾಧಿಸಿದ ಹಾಗಾಯಿತು?

ತುಟಿ ಕಚ್ಚಿ ಪ್ರಯಾಸದಿಂದ ಅಳು ನುಂಗಿದೆ.

ಮಾವನ ಜೊತೆಯಲ್ಲಿ ಧಾರೆಯ ಮಂಟಪಕ್ಕೆ ಬಂದೆ.

ಹಸೆಮಣೆಯ ಮೇಲೆ ನಿಂತಿದ್ದ ಆನಂದನ ಮುಖ ನನಗೆ ಕಾಣಿಸುತ್ತಿರಲಿಲ್ಲ...

ನಮ್ಮಿಬ್ಬರ ನಡುವೆ ತೆರೆಹಿಡಿಯಲಾಗಿತ್ತು.

ತೆರೆ ಸರಿಯಿತು. ಆನಂದನ ನಗು ಮುಖ ನನ್ನ ಹೃದಯ ತುಂಬಿಕೊಂಡಿತು. ಬಿರುಗಾಳಿಗೆ ಸಿಕ್ಕ ತೂಗಾಡುತ್ತಿದ್ದ ಹರಿಗೋಲು ಮತ್ತೆ ಶಾಂತವಾಯಿತು. ಆನಂದನ ಸುಂದರ ಮುಖ, ಆ ನಗು, ನಗುವಿನಿಂದ ಅರಳಿದ ಮುಖವನ್ನೇ ನೋಡುತ್ತಾ ನಿಂತ ನಾನು ಪ್ರಪಂಚವನ್ನೇ ಮರೆತೆ...

ಅಲೆ ಅಲೆಯಾಗಿ ಚಿಮ್ಮಿ ಬರುತ್ತಿದ್ದ ಆ ನಗು ನನ್ನ ದೇಹದ ಸಮಸ್ತವನ್ನೂ ಹೊಂಬಿಸಿಲಿಗೆ ಹರವಿದಂತಾಯ್ತು....ತೆರೆ ಸರಿದಾಗ ನನ್ನಲ್ಲಿ ಕವಿದಿದ್ದ ಕತ್ತಲೆ, ಅಜ್ಞಾನದ ತೆರೆಯನ್ನು ಸರಿಸಿದಂತಾಗಿ ಬೆಳ್ಳಿಯ ಬೆಳಕು ಮೂಡಿತು.

ಕೇವಲ ಅಂತರ್ಮುಖಿಯಾಗಿ ವೈಯಕ್ತಿಕ ಅನಿಸಿಕೆಗಳ ಸೆಳವಿನಲ್ಲಿ ದಾಂಪತ್ಯದ ಬದುಕನ್ನು ಅರ್ಥೈಸುವದನ್ನು ಬಿಟ್ಟು ಎಚ್ಚೆತ್ತುಕೊಂಡೆ. ಹಠಾತ್ತನೆ ಮತ್ತೊಂದು ಸುಂದರ ಪ್ರಪಂಚಕ್ಕೆ ಜಾರಿದಂತಾಯ್ತು...

ಪ್ರೇಮದ ಬೆಳಕಿನಲ್ಲಿ ನೋಡಿದಾಗ ಆನಂದನ ಕಣ್ಣುಗಳು ಹೊಳೆಯುತ್ತಿದ್ದವು. ಅದೇ ನಗು–ಮುಖ...ಎತ್ತರವಾದ ನಿಲುವು...

ಎಲ್ಲವನ್ನೂ, ಎಲ್ಲರನ್ನೂ ಮರೆತು ನಾನು ಆನಂದನ ಪ್ರೀತಿಯ ನೋಟವನ್ನು ಎದುರಿಸಿ ನಕ್ಕೆ...

ಜಡತೆಯನ್ನು ಝಾಡಿಸಿ ಗೆಲುವಿನಿಂದ ಕೈಯೊಳಗಿದ್ದ ಹೂಮಾಲೆಯನ್ನು ಆನಂದನ ಕೊರಳಿಗೆ ಹಾಕುವಾಗ ನನ್ನ ನಗುವಿನ ಪ್ರತಿಛಾಯೆಯನ್ನು ಅವನ ಕಣ್ಣುಗಳಲ್ಲಿ ಕಂಡೆ.

✡

ಪಕ್ಕದ ಮನೆ ಪದ್ಮಾವತಮ್ಮನಿಗೆ ಸೀತಾಬಾಯಿ ಹೇಳಿದಳು: "ನಮಗೆ ಇಷ್ಟರಲ್ಲೇ ಒಳ್ಳೇ ನೆರೆ ಹೊರೆ ಜನ ಬರ್ತಾರೆ."

"ನಮಗೂ," ಅಂದಳು ಪದ್ಮಾವತಮ್ಮ.

"ಯಾಕೆ? ನೀವು ಬೇರೆ ಮನೆಗೆಹೋಗ್ತಿದ್ದೀರೇನು?"

"ಇಲ್ಲ. ನಾವಿಲ್ಲೇ ಇರ್ತೀವಿ," ಅಂದಳು ಪದ್ಮಾವತಮ್ಮ.

ಮೂಗರ್ಜಿ ಮಹಾತ್ಮೆ

ಎಂ. ಕೆ. ಗೋಪೀನಾಥ

"ಶರಣ್ರೀ ಅಪ" ಎಂದು ಮೂಢಬಿದ್ರಿ.

ಬೆಳಿಗ್ಗೆ ಎದ್ದ ಕೂಡಲೇ ಯಾರ ಮುಖ ನೋಡಿದ್ದೆ ಎಂಬುದನ್ನು ನೆನಪಿಗೆ ತಂದುಕೊಳ್ಳಲು ಪ್ರಯತ್ನಿಸಿದೆ. ಆಗ ಹೊಳೆದದ್ದು: ನನ್ನ ಕೋಣೆಯಲ್ಲಿ ಇರುವವನು ನಾನೊಬ್ಬನೇ ಎಂಬುದು. ಎದ್ದವನೇ ಕ್ಯಾಲೆಂಡರ್ ಕಡೆ ನೋಡಿದ್ದೆ. ಕ್ಯಾಲೆಂಡರ್‌ನಲ್ಲಿ ಯಾವ ಪ್ರಸಿದ್ಧ ಅಥವಾ ಅಪ್ರಸಿದ್ಧ ಅಥವಾ ಕುಪ್ರಸಿದ್ಧ ಸಿನಿಮಾ ನಟನಟಿಯರ ಚಿತ್ರ ಕೂಡ ಇರಲಿಲ್ಲ. ಬರೇ ಅಂಕಿಗಳನ್ನು ಮಾತ್ರ ತೋರಿಸುವ ಕ್ಯಾಲೆಂಡರ್ ಆರಿಸಿ ತಂದಿದ್ದೆ. ಆದರೂ ಮೂಢಬಿದ್ರಿ ಮಾತಾಡಿಸಿದ್ದೇಕೆ?

ಮೂಢಬಿದ್ರಿ ನನ್ನ ಆಫೀಸಿನ ನಾಲ್ಕನೆ ದರ್ಜೆ ನೌಕರ. ಬಲು ಮಾತಾಳಿ. ಆಫೀಸಿನ ಎಲ್ಲಾ ತರಲೆಗಳಲ್ಲೂ ಇವನ ಹೆಸರು ಹೇಗೋ ಸೇರಿಕೊಂಡುಬಿಡುತ್ತದೆ. ಸಾಧಾರಣವಾಗಿ ನನ್ನನ್ನು ಕಂಡಾಗ ಮೂಗುಳ್ಳಕ್ಕು ಸರಿದುಬಿಡುತ್ತಾನೆ. ನನ್ನ ಸಲಹೆ ಅಥವಾ ನೆರವು ಬೇಕಾದಾಗ ಮಾತ್ರ 'ಶರಣ್ರೀ ಅಪ' ಎಂದು ಪ್ರಾರಂಭಿಸಿ ಬಂದು ಪಕ್ಕದಲ್ಲೇ ಕೂರುತ್ತಾನೆ. ಮೂಢಬಿದ್ರಿ 'ಶರಣ್ರೀ ಅಪ' ಎಂದಾಗ, ತಾನು ನಡೆಸಿದ ಯಾವುದೋ ಒಕಮತ್ತಿನಲ್ಲಿ ತನಗೆ ದೊರೆತ ವಿಜಯ ಅಥವಾ ತನಗಾದ ತೇಜೋವಧೆಯ ಬಗ್ಗೆ ಒಂದು ಕಥೆ ಹೇಳುತ್ತಾನೆಂಬುದು ಸ್ಪಷ್ಟವಿರುತ್ತದೆ. ಆದ್ದರಿಂದ ಮೂಢಬಿದ್ರಿಯನ್ನು ಸುಲಭವಾಗಿ ಅತ್ತ ತಳ್ಳುವಂತಿಲ್ಲ. ಮೂಢಬಿದ್ರಿ ಸ್ವಲ್ಪ ಗಾಬರಿಪಡುವ ಆಸಾಮಿ. ತಾನು ಹೆದರಿ, ಇತರರನ್ನೂ ಹೆದರಿಸುವ ಕಲೆ ಅವನಿಗೆ ಹುಟ್ಟಿನಿಂದಲೇ ಬಂದಿದೆ. ಕತ್ತಲಲ್ಲಿ ಕಂಡ ಹಗ್ಗವನ್ನು ಹಾವೆಂದು ಭ್ರಮಿಸಿ, ಆ ಹಾವಿನ ಸಂಹಾರಕ್ಕೆ ತನ್ನ ಶಕ್ತಿಯನ್ನೆಲ್ಲಾ ವ್ಯಯ ಮಾಡುತ್ತಾನೆ.

ಒಂದು ಸಲ ಈ ಮೂಢಬಿದ್ರಿ ಹೀಗೇ ಮಹಡಿ ಮೇಲಿನ ಖಾಲಿ ಜಾಗದಲ್ಲಿ ಅಡ್ಡಾಡುತ್ತಾ ಇದ್ದನಂತೆ. ಮಹಡಿಯ ಮೇಲೆ ಅತ್ತಿಂದಿತ್ತ ಅಡ್ಡಾಡ್ಡಲಾಗಿ



ಕಟ್ಟಿದ್ದ ತಂತಿಯನ್ನು ಮೂಢಬಿದ್ರಿ ಅಕಸ್ಮಾತ್ ಮುಟ್ಟಿದನಂತೆ.

"ಹಾ ಕರೆಂಟು...ಷಾಕ್...ಸತ್ತೇ..." ಎಂದು ಚೀರಿಕೊಂಡು ಕೆಳಕ್ಕೆ ಕುಸಿದನಂತೆ. ಸರಿ, ಇವನ ಸುತ್ತ ಜನ ಜಮಾಯಿಸಿಕೊಂಡರು.

"ಯಾಕಯ್ಯಾ ಮೂಢಬಿದ್ರಿ, .ಏನಾಯಿತು?" ಎಂದು ಯಾರೋ ಕೇಳಿದರಂತೆ. ಹವಾ ಸೇವನೆಗೆಂದು ಮಾಳಿಗೆ ಮೇಲೆ ಹೋದದ್ದನ್ನೂ ವಿದ್ಯುತ್ ತಂತಿ ತಗಲಿ, ಚೀರಿಕೊಂಡು ತಾನು ಕೆಳಗೆ ಕುಸಿದ ಕಥೆಯನ್ನೂ ಸಾಕಷ್ಟು ರಾಗದ ಸಮೇತ ಮೂಢಬಿದ್ರಿ ಎಲ್ಲರಿಗೂ ತಲುಪಿಸಿದ.

ಪರೀಕ್ಷಿಸಿ ನೋಡಿದಾಗ, ವಾಸ್ತವವಾಗಿ ಮೂಢಬಿದ್ರಿ ವಿದ್ಯುತ್ ತಂತಿ ಮುಟ್ಟಿರಲೇ ಇಲ್ಲ! ಅವನು ಮುಟ್ಟಿದ್ದುದು, ಬಟ್ಟೆ ಒಣಗಹಾಕಲು ಕಟ್ಟಿದ್ದ ತಂತಿಯನ್ನು!

ಮೂಢಬಿದ್ರಿಗೆ ಸಂಗೀತದಲ್ಲೂ ಅಷ್ಟಿಷ್ಟು ಪರಿಶ್ರಮ ಉಂಟು. ಒಮ್ಮೆ ನನ್ನನ್ನು.

"ಸಾಹೇಬ್ರ, ನಿಮಗೆ ಸಂಗೀತ ತಿಳೀತದೇನ್ರಿ?" ಎಂದು ಕೇಳಿ ಬೆಚ್ಚಿಸಿದ್ದ.

"ನಂಗೆ ಸಂಗೀತದ ಗಂಧ ಇಲ್ಲ ಕಣೋ ಮೂಢಬಿದ್ರಿ. ಆದರೂ ಕೆಟ್ಟ ಸಂಗೀತ ಯಾವುದು ಎಂಬುದನ್ನು ಮಾತ್ರ ಥಟ್ಟನೆ ಗುರುತಿಸಬಲ್ಲೆ" ಎಂದಿದ್ದೆ.

"ಹಾಂಗಾದ್ರೆ ಈ ದಿನ ಸಂಜೆ ಟೌನಹಾಲ್‌ಗೆ ಬರ್ರಿ" ಎಂದ ಮೂಢಬಿದ್ರಿ.

"ಯಾಕೆ? ಯಾರದಾದರೂ ಕೆಟ್ಟ ಸಂಗೀತ ಇದೆಯೆ?"

"ಇಲ್ಲರೀ, ಜಬರ್‌ದಸ್ತ್ ಸಂಗೀತ ಐತ್ರೀ. ವಿಷಕಂಠಯ್ಯರ್ ಅಂಬೋರು ಹಾಡ್ತಾರ್ರೀ ...ನೀವು ಬರಲಿಕ್ಕೇ ಬೇಕ್ರಿ...ಆಗದು ಅನ್ನಬಾರದ್ರಿ......" ಎಂದೆಲ್ಲಾ ಹೇಳಿ ಒಂದು ರೂಪಾಯಿನ ಒಂದು ಟಿಕೆಟ್ಟನ್ನೂ ನನ್ನ ತಲೆಗೆ ಕಟ್ಟಿದ್ದ.

ಮೊದಲೇ ಮಾತಾಗಿದ್ದಂತೆ, ಮೂಢಬಿದ್ರಿ ನನ್ನನ್ನು ಟೌನ್‌ಹಾಲ್ ಬಳಿ ಭೇಟಿ ಆದ. ವಿಷಕಂಠಯ್ಯರ ಅಮೋಘ ಸಂಗೀತ ಲೌಡ್‌ಸ್ಪೀಕರ್ ಮೂಲಕ ಕೇಳಿಬರುತ್ತಿತ್ತು. ಮೂಢಬಿದ್ರಿ ಸುರು ಮಾಡಿದ–

"ನೋಡ್ರಿ, ಹ್ಯಾಂಗ ಹಾಡ್ತಾರ ಅವ್ರು. ಏನು ರಾಗ, ಏನು ಭಾವ, ಏನು ಧ್ವನಿ......ಹೂಂ ಇನ್ನೂ ಏನು ನೋಡ್ತೀರಿ. ಅವ್ರು ಹಾಡೋದನ್ನ ಕೇಳುಕ್ಕಿಂತ ಹೆಚ್ಚಾಗಿ ನೋಡಬೇಕ್ರಿ. ಭಾರಿ ಮಜ ಸಿಗ್ತೈತ್ರಿ. ಒಂದು ಸಲಕ್ಕ ಹಾರ್ಮೋನಿಯಮ್ ಕಡೀಕ್ಕ ನೋಡ್ತಾರ್ರೀ...ಇನ್ನೊಂದು ಸಲಕ್ಕ ತಬಲಾದೋನ್ನ ಕಡೆಕ್ಕ..." ಎಂದೆಲ್ಲಾ ಹೇಳುತ್ತಾ ನನ್ನನ್ನೂ ನೂಕಿಕೊಂಡು ಟೌನ್‌ಹಾಲ್ ಒಳಹೊಕ್ಕ ಮೂಢಬಿದ್ರಿ.

ಅಲ್ಲೇನಿತ್ತು? ವಿಷಕಂಠಯ್ಯರಿಗೆ ನಿಧಿ ಕೊಡಿಸಲು ಅವರ ಗಾಯನದ ಧ್ವನಿ ಮುದ್ರಿಕೆಗಳನ್ನು ಹಾಕಿಕೊಂಡು ಕೂತಿದ್ದರು, ಒಂದಿಬ್ಬರು ಮರಿ ಗಾಯನ ಚಕ್ರವರ್ತಿಗಳು! ಗಲಾಟೆಯಲ್ಲಿ ಮೂಢಬಿದ್ರಿ ಎಲ್ಲೋ ನುಸುಳಿಬಿಟ್ಟಿದ್ದ!

ಇಷ್ಟೆಲ್ಲಾ ಇತಿಹಾಸ ಇರುವ ಮೂಢಬಿದ್ರಿ "ಶರಣು" ಅಂದಾಗ ಅವನಿಗೆ ಪ್ರತಿ ಶರಣು ಹೇಳದವರೆ ಉಳಿಗಾಲವುಂಟೆ? ನನ್ನ ಪ್ರತಿ ಶರಣು ಸ್ವೀಕರಿಸಿದವನಾದ ಮೂಢಬಿದ್ರಿ, ಪಕ್ಕದ ಸ್ಟೂಲನ್ನು ತಾನೇ ಎಳೆದುಕೊಂಡು ಕೂತು ಸುರು ಮಾಡಿದ.

"ಏನಾರೆ ಸುದ್ದಿ ಕಿವಿ ಮ್ಯಾಲೆ ಬಿತ್ತೇನ್ರಿ?" ಎಂದು ಕೇಳಿದ. ಇಲ್ಲ ಎಂದು ಸೂಚಿಸಿ ತಾನು ತಲೆ ಅಲ್ಲಾಡಿಸಿದಾಗ ಮೂಢಬಿದ್ರಿಗೆ ಅಸಾಧ್ಯ ಸಿಟ್ಟು ಬಂತು. ತನಗೆ ತಿಳಿದಿದ್ದ ನೀತಿಗೆಟ್ಟ ವರ್ತಮಾನ ನನಗೂ ತಿಳಿದಿರಲೇಬೇಕೆಂದು ಮೂಢಬಿದ್ರಿಯ ತಕರಾರು!

"ಊರಿಗೆಲ್ಲಾ ತಿಳಿದದ್ದು ನಿಮಗೆ ತಿಳೀದು ಅಂದ್ರ ಹ್ಯಾಂಗ್ರಿ?"

"ಯಾವ ಸುದ್ದಿ ಬಗ್ಗೆ ನಿನ್ನ ಈ ಪೀಠಿಕೆ?"

"ಅದೇರಿ. ಈ ಆಫೀಸಿನಾಗಿನ ನಾಲ್ಕಾರು ಮಂದಿ ಕಾರಕೂನರ ಮ್ಯಾಲೆ ಯಾರೋ ಮೂಗರ್ಜಿ ಬರದು ಹಾಕ್ಯಾರಂತಲ್ರೀ........."

"ಕಾರಕೂನರ ಮ್ಯಾಲೆ ಅಂದರೆ ಯಾರ್‍ಯಾರ ಮೇಲೆ?"

"ಎಲ್ಲಾರ ಮ್ಯಾಲೂ."

"ಎಲ್ಲಾರ ಮ್ಯಾಲೂ ಅಂದರ ಯಾರ್‍ಯಾರ ಮೇಲೆ?

"ಎಲ್ಲಾರ ಮ್ಯಾಲೂ ಅಂದರ ಎಲ್ಲಾರ ಮ್ಯಾಲೂ. ಒಟ್ಟಿನಾಗ ಮೂವತ್ತು ಮಂದಿ ಮ್ಯಾಲ ಬರದಾರಂತ್ರೀ."

"ಹಾಗಾದರೆ ಒಂದು ದಸ್ತು ಕಾಗದ ಹಾಳು ಮಾಡಿದ್ದಾರೆ ಅನ್ನು. ಏನೇನು ಬರೆದಿದ್ದಾರಂತೆ?"

"ಅದನ್ನೋ ಬಿಡ್ರಿ ಆ ಕಥೀನ. ನಳನ ಅಂಬೋನು

[illegible] ಸುರು ಮಾಡ್ತಿದ್ರು ಕತ್ತೀ [illegible] ಸರವಿ......ಅರುಣ ಎಂಜಲ ಕೈಯ್ಯಾಗ ಕಾಗಿ ಹೊಡೆ ಯೂವವಿಲ್ಲ......ಹಲ್ಲುಗಳು ಅಲ್ಲಾಡಲಿಕ್ಕೆ ಬಂದಿ ದ್ದೂ ಕೃಷ್ಣವೇಣೀಗೆ ಇನ್ನೂ ಮದುವಿ ಯಾಕಿಲ್ಲ... ರತ್ನಾನ ಜೊಗೆ ಸಾಗಿಸಬೇಕು...ಗಾಣಿಗ ಗುಮಾಸ್ತ ಗಿರಿ ಬಿಟ್ಟುಕೊಟ್ಟು ಎಮ್ಮಿ ಕಾಯಲಿಕ್ಕೆ ಹೋಗ್ಲಿ... ಕಚಿನಯ್ಯಾ ಹೆಸರಿಗೆ ತಕ್ಕ ಹಾಂಗ ಅಡ್ಯಾನ...ಹಿಂಗೇ ಇನ್ನೂ ಏನೇನೋ ಬರೆದಾರಂತ್ರೀ"

ಕಥೆಯನ್ನು ಮೂಢಬಿದ್ರಿ ಸ್ವಾರಸ್ಯಕರವಾಗಿ ಮುಂದೆ ಸಾಗಿಸುತ್ತಿದ್ದಾಗ ನಾನು ಒಂದು ಮಂಕು ಪ್ರಶ್ನೆ ಕೇಳಿಬಿಟ್ಟೆ—

"ಇವನ್ನೆಲ್ಲಾ ಬರೆದೋರು ಯಾರಂತೆ?" ಎಂದು.

"ಸಾಹೇಬ್ರ ನಿಮ್ಮ ಹತ್ರ ತಲೀ ಚಚ್ಕೋಬೇಕ್ರಿ. ಮೂಗರ್ಜಿ ಬರೆಯೋರು ಹೆಸರು ನಮೂದಿಸ್ತಾರೇನ್ರಿ? ಎಳೀ ಕೂಸು ಕೇಳಿದ್ಹಂಗ ಕೇಳ್ತೀರಲ್ರಿ... ಒಟ್ಟಿನಾಗ ನಿಮಗ ಈ ಕಥಿ ಮ್ಯಾಲ ಆಸಕ್ತಿ ಇಲ್ಲ ಅಂಬೋಹಂಗ ಕಾಣ್ತದ. ಹೌದಲ್ರಿ...?" ಎಂದು ಹೇಳಿ, ಕಥೆ ನಿಲ್ಲಿಸಿ ಮುಷ್ಕರ ಸುರು ಮಾಡಿಬಿಟ್ಟ ಮೂಢಬಿದ್ರಿ. ಅವನನ್ನು ಪುನಃ ಹಾದಿಗೆ ಹಚ್ಚಲಿಕ್ಕೆ ಅರ್ಧ ತಾಸು ಬೇಕಾಯ್ತು. ಕಾಫೀಗೆಂದು ನಾಲ್ಕಾಣೆ ಭಕ್ಷೀಸು ಬೇರೆ.

ಆಟ ನಡೆಯುತ್ತಿರುವಾಗ ಕಾಮೆಂಟ್ರಿ ಹೇಳ್ತಾರಲ್ಲ, ಅವರ ಪಾಲಿಗೆ ಸೇರಿದವನು ಈ ಮೂಢಬಿದ್ರಿ. ಮುಖ್ಯವಾಗಿ ನಡೆದಿರುವದನ್ನು ಬಿಟ್ಟು ಮತ್ತೆಲ್ಲಾ ಹೇಳಿದ್ದ. ಅಂದಿನ ಕಥೆ ಅಲ್ಲಿಗೆ ನಿಂತಿತ್ತು.

ಮೂರು ನಾಲ್ಕು ದಿನ ಮೂಢಬಿದ್ರಿಯಿಂದ ಯಾವ ಸಂಗತಿಯೂ ತಿಳಿದುಬರಲಿಲ್ಲ. ಈ ಮಧ್ಯೆ ಮೂಢಬಿದ್ರಿಗೆ ಮದುವೆ ಎಂದು ವದಂತಿ ಹಬ್ಬಿತು. ನಾನೇ ಮೂಢಬಿದ್ರಿಯನ್ನು ಹಿಡಿದು ಮಾತಾಡಿಸಿದೆ.

"ಏನಯ್ಯಾ ಮೂಢಬಿದ್ರಿ, ಮದುವೆಯಂತೆ ನಿನಗೆ? ಯಾರಿಗೂ ತಿಳಿಸದೆ ಮದುವೆ ಮಾಡ್ಕೊಂತಿಯೇನು?" ಎಂದು ಕೇಳಿದೆ.

"ಮದುವಿ? ಯಾರಿಗ್ರೀ? ನಂಗೇನ್ರಿ? ನನ್ನ [illegible] ಇಷ್ಟೇ ಆಗ್ತೈತೋ, ಹ್ಯಾಂಗೋ ಆಗ್ತೈತೊ ಹೇಳಲಿಕ್ಕ ಬರೂದಿಲ್ಲರಿ......"

"ಯಾಕೋ ಜೈಲು ಗ್ಯೈಲು ಅಂತ ಹೆದರಿಸ್ತೀ!"

"ನಾನು ನಿಮ್ಮನ್ನೆಲ್ಲಿ ಹೆದರಿಸಿದೇರೀ... ನಾನೇ ಹೆದರಿಕೊಂಡು ಬಿದ್ದೀನ್ರಿ......"

"ಯಾಕೆ?"

"ಆ ಸುಡುಗಾಡು ಮೂಗರ್ಜೀನ ಬರೆದು ಹಾಕಿದೋನು ನಾನೇ ಅಂತ ಯಾರೋ ಪುಣ್ಯಾತ್ಮರು ಪಟಾಕಿ ಹಚ್ಚಿಬಿಟ್ಟಿದ್ದಾರ್ರೀ......ಆ ಗೂಬಿ ಈಗ ನನ್ನ ತಲೀ ಮ್ಯಾಲ ಬಂದು ಕೂತೈತರೀ ಅಪ್ಪ. ಏನು ಮಾಡಬೇಕೋ ತಿಳೀದಲ್ರೀ......ಎನ್‌ಕ್ವೈರಿ ಆಫೀಸ್‌ನೋರು ಕರೆದು ಕೇಳಿದ್ರ ಏನು ಹೇಳಲ್ರಿ?"

"ನನಗೇನೂ ತಿಳಿಯದು ಅಂತ ಹೇಳು. ಬಾಯಿ ಇಲ್ಲವೆ?"

"ಎನ್‌ಕ್ವೈರಿ ಆಫೀಸ್‌ನೋರ್ಗೆ ಬಾಯಿ ಮುಚ್ಕೋ ಅಂದು ಹ್ಯಾಂಗೆ ಅಂತ ತಿಳೀದ್ರೇನ್ರಿ?"

"ಇಲ್ಲಿ ಮೂಗರ್ಜಿಗಳನ್ನು ಬರೆದುಕೊಡಲಾಗುತ್ತದೆ" ಅಂತ ನೀನೇನು ಬೋರ್ಡು ಹಾಕಿಕೊಂಡಿದ್ದೀಯೇನು? ನಿನ್ನ ಮ್ಯಾಲೇ ಯಾಕೆ ಅನುಮಾನ ಬರಬೇಕು?"

"ಈ ಮೂಗರ್ಜಿ ಕಥೀನೇ ಹಾಂಗದೆ. ಯಾರು ಅಂದರ ಅವರಿಗೆ ತಗಲಿಸಲಿಕ್ಕೆ ಬರ್ತೈತ್ರೀ...ಹುಟ್ಟಿನಾಗೆ ನನ್ನ ಹಣೇಬರಹ ಛಲೋ ಇಲ್ಲರಿ...ಈ ಪೀಡೆ ಗಂಟುಬಿತ್ತು..."

"ಹೆದರ ಬ್ಯಾಡ. ಎನ್‌ಕ್ವೈರಿ ಆಫೀಸ್‌ನೋರು ನಿನ್ನ ಕರೆಯೊಲ್ಲ, ಹಾಗೆಲ್ಲಾ ಹೇಳಿದೋರು ಮಾತು ಕೇಳಿ ಯಾರನ್ನೂ ಕರೆಯೋ ಹಾಗಿಲ್ಲ."

"ಎಲ್ಲಾ ಸರಿ ಸಾಹೇಬ್ರ. ತಾಜಾ ಮಾಡಿ ಕ್ವಾಣ್ಯಾಗ ಕರೆದೊಯ್ದು ಕ್ವಾಣಕ್ಕೆ ಬಡಿದ್ಹಂಗ ನಾಲ್ಕು ಬಡಿದರೆ ಏನು ಮಾಡು ಅಂತೀರಿ?"

"ನಿನ್ನ ಯಾರೂ ಬಡಿಯೊಲ್ಲ. ಎನ್‌ಕ್ವೈರಿ ಆಫೀಸಿನೋರು ಮಾತ್ರ ಖಂಡಿತ ಬಾಯಿ ಬಡಿದುಕೊಳ್ಳುತ್ತಾರೆ, ಇಂಥವರೂ ಇದ್ದಾರಲ್ಲ, ಎಂದು."

"ಇಲ್ರೀ ಸಾಹೇಬ್ರ......ನಿಮಗ ವಿಷಯ ಸರಿಯಾಗಿ ತಿಳಿದ್ಹಂಗ ಕಾಣೂದಿಲ್ಲರೀ...ಪ್ರಸಂಗ ಅಗದೆ ಭಯಂಕರ ಮುಂದೆ ಹೋಗೈತ್ರೀ. ಮೂರು ನಾಲ್ಕು ಮಂದಿ ಮ್ಯಾಗ ಅನುಮಾನ ಮಾಡಿಕೊಂಡು ಅನುಮಾನ ಇರೋರ್ ಹಿಂದೆಲ್ಲಾ ಸಿ.ಐ.ಡಿ. ಗಳನ್ನು ಹಾಕ್ಯಾರಂತ್ರೀ. ಏನು ಮಾಡೂ ಅಂತೀರಿ..."

"ಭಾವಿಯಲ್ಲಿ ಬಿದ್ದುಬಿಡು."

"ನಾನು ಭಾವ್ಯಾಗ ಬೀಳೊರಿಂದ ಏನ್ರೀ ಫಲ?"

"ನಿನ್ನ ಹಿಂದೆ ಇರೋ ಸಿ.ಐ.ಡಿ. ಸಾಯ್ತಾನೆ. ಅದೇ ಫಲ."

"ಹಾಳು ಒಂದು ಮೂಗರ್ಜಿ ದೆಸೆಯಿಂದ ಎಷ್ಟು ಜನ ಸಾಯ್ಬೇಕ್ರಿ...?"

ಮತ್ತೆ ನಾಲ್ಕಾರು ದಿನ ಮೂಢಬಿದ್ರಿಯಿಂದ ಯಾವ ಸುದ್ದಿಯೂ ಬರಲಿಲ್ಲ. ಮೂಗರ್ಜಿಗಳು ತಮ್ಮಷ್ಟಕ್ಕೆ ತಾವೇ ಸತ್ತುಹೋಗಿರಬೇಕು ಎಂದು ಕೊಳ್ಳುತ್ತಿರುವಾಗ ಮೂಢಬಿದ್ರಿ ಹಾಜರು.

"ವ್ಯಾಪಾರ ಹೈಲಾತ್ರೀ......"

"ಏನಾಯ್ತು?"

"ಅದೇ ಈ ಮೂಗರ್ಜಿ ಪ್ರಸಂಗದಾಗ ಅನು ಮಾನ ಇರೋರ ಹಿಂದೆ ಗುಪ್ತಚಾರರು ತಿರುಗುತ್ತಾ ಇದ್ದಾರ ಅಂತ ಹೇಳಿದ್ದೆಸಲ್ಲರಿ......"

"ಹೌದು."

"ನನ್ನ ಹಿಂದೇನೂ ಯಾರಾದ್ರೂ ತಿರುಗ್ತಾ ಇರ ಲಿಕ್ಕೆ ಸಾಕು."

"ನೀನು ಯಾರಿಗೂ ಹಣ ಬಾಕಿ ಇಲ್ಲವಷ್ಟೆ?"

"ಒಬ್ಬ ಮನಿಷಾ ನನ್ನ ಹಿಂದೆ ಹಿಂದೇನೆ ತಿರು ಗಾಡಲಿಕ್ಕೆ ಹತ್ಯಾನ್ರಿ."

"ಇದೊಳ್ಳೆ ಗ್ರಹಚಾರ ಬಂತಲ್ಲ ನಿನಗೆ."

"ನೋಡ್ರಿ ಯಾರೋ ಹಚ್ಚಿದ ಸುರ್‌ಸುರ್‌ಬತ್ತಿ ಕಿಡಿ ನನ್ನ ಮ್ಯಾಗೆ ಹಾರೈತ್ರೀ. ಏನು ಮಾಡಿ ಸಾಯಲ್ರಿ......?"

"ಸಾಯಬೇಕಾದರೆ ಊಟ ಬಿಟ್ಟುಬಿಡು."

"ನಾನೇನ್ರಿ ಬಿಡುದೂ, ಅದೇ ಸೇರ್ತಾ ಇಲ್ಲರೀ. ತಣ್ಣೀರು ಅಂತ ತಿಳ್ಕೊಂಡು ಸುಡ ಸುಡ ಮರಳೋ ನೀರ್ನ ಹೋಯ್ಕೊಂಬೋದ್ರಾಗಿದ್ದೇರಿ. ಹಚ್ಚಿದ ಬೀಡೀನ ಹಿಂದು ಮುಂದಾಗಿ ಬಾಯಾಗಿಟ್ಟು ಕೊಂಡುಬಿಡ್ತಾ ಇದ್ದೇರಿ. ಎಲ್ಲಾ ಮೂಗರ್ಜಿ ದೆಸಿ ಯಿಂದ ನನ್ನ ತಲಿ ಕೆಟ್ಟುಹೋಗೈತ್ರೀ......"

"ನಿದ್ದೆ?"

"ಅದೊಂದು ಮಾತ್ರ ಪಸಂದಾಗಿ ಬರ್ತೈತ್ರಿ. ಆ ಪುಣ್ಯಾತ್ಮ, ನಮ್ಮಪ್ಪ ಕುಂಭಕರ್ಣನ ವರ ನಂಗೆ ಚೆನ್ನಾಗಿ ಅಂಟೈತ್ರಿ."

ಮೂಢಬಿದ್ರಿಯದು ಜೆಕ್ಕೀ ಹಾಟ್ ಜೆಕ್ಕೀ ಕೋಲ್ಡ್ ವ್ಯಕ್ತಿತ್ವ. ಈ ನಿಮಿಷ ನಗು; ಮರುನಿಮಿಷ ಅಳು. ಈ ಕ್ಷಣ ಅಳು; ಮರುಕ್ಷಣವೇ ಪ್ರಸನ್ನಚಿತ್ತ.

ಮರುದಿನ.



"ಹೋಯ್ತುರೀ ... ಪೊರಟ್ಹೋಯ್ತುರೀ," ಎನ್ನುತ್ತಲೇ ಬಂದ ಶ್ರೀ ಮೂಢಬಿದ್ರಿ.

"ಏನು?"

"ಅದೆನ್ನೆಲ್ಲ ಕಡೀಕ್ಕ ಹೇಳ್ತೀನರಿ. ನಿನ್ನೆ ಸಂಜಿನಾಗ ಏನೇನು ನಡೀತು ಅಂಬೋದನ್ನ ಈಗ ಹೇಳ್ತೀನರಿ. ...ನೀವು ಮಾತ್ರ ಮಧ್ಯೆ ಮಧ್ಯೆ ಬಾಯಿ ಹಾಕಿ ಪ್ರಶ್ನಾ ಕೇಳಬಾರ್ದು ನೋಡ್ರಿ," ಎಂದು ಎಚ್ಚರಿಸಿ ಮೂಢಬಿದ್ರಿ ಪ್ರಾರಂಭಿಸಿದ.

"ನಿನ್ನೆ ನಾನು ಮನಿ ಸೇರೋ ಹೊತ್ಗೆ, ನಮ್ಮ ಮನೀ ಮುಂದಿನ ಲೈಟು ಕಂಬದ ಬಳಿ ಒಬ್ಬ ಮನಿಷಾ ನಿಂತಿದ್ದನರೀ. ಆತ ನನ್ನ ಕಡೀನೇ ನೋಡ್ತಾ ಇದ್ದನರೀ. ನನ್ನ ಧೈರ್ಯ ಹಾರಿಹೋಯಿತ್ರೀ. ಒಳ ಗಿನಿಂದ ಕಿಟಕಿಯಾಗ ಇಣಿಕಿ ನೋಡ್ದೇರಿ. ಆತ ಅಲ್ಲೇ ನಿಂತಿದ್ದನರೀ. ನಂಗೆ ಹ್ಯಾಂಗೆ ಹ್ಯಾಂಗೋ ಆಗಲಿಕ್ಕೆ ಸುರು ಆತ್ರೀ. ಒಂದು ನಿದ್ದಿ ಗುಳಗಿ ನುಂಗಿ ಮುಸುಕು ಹಾಕ್ಕೊಂಡು ಮಲಗಿಬಿಟ್ಟೆನರಿ......"

"ಎದ್ದಾಗ ರಾತ್ರಿ ಎಂಟು ಘಂಟೆ ಆಗಿತ್ತರೀ. ಬೀದಿ ಬಾಗಿಲಿಗೆ ಬಂದು ನೋಡ್ತೀನಿ...

"ಆತ, ಅದೇ ಆ ಸಿ.ಐ.ಡಿ. ಧಿಮಾಕಿನಿಂದ ಸಿಗ

ರೇಟು ಸೇದ್ತಾ ಅಲ್ಲೇ ನಿಂತಿದ್ದನರೀ. ನಾನು ಮೈ ಮ್ಯಾಲೆ ಒಂದು ತಂಬಿಗೆ ನೀರು ಹೊಯ್ಕೊಂಡು, ತಿರುಪತಿ ತಿಮ್ಮಪ್ಪಗ ಬಿಡ್ಡಿ ಹಚ್ಚಿಟ್ಟೆರಿ. ಆರತಿ ಮಾಡೋಣ ಅಂದ್ರೆ ಕರ್ಪೂರ ಆಗಿಹೋಗಿತ್ತರೀ. ಹಾಂಗೆ ಶಿರಸಿ ಮಾರಮ್ಮಗ ಕೋಳಿ ಕಳಿಸ್ತೇನು ಅಂತ ಮನಸ್ನ್ಯಾಗ ಹರಕೆ ಮಾಡಿಕೊಂಡೇರೀ… ಆಗ ನೆನಪಾತ್ರಿ ಇಲಿ ಪಾಷಾಣ ತರಬೇಕು ಅಂಜೋ ನು ….."

"ಇಲಿ ಪಾಷಾಣ! ಅಂಥಾದ್ದೇನಾದರೂ ಮಾಡಿ ಕೊಂಡುಬಿಟ್ಟೀಯುಪ್ಪಾ ಸಧ್ಯ."

"ಈಗೀಗ ಇಲಿ ಪಾಷಾಣ ಬೆರಕಿ ಬರ್ತೈತ್ರೀ. ಅದನ್ನು ತಿಂದ್ರೆ ಇಲಿಗಳು ಚೆನ್ನಾಗಿ ಕೊಬ್ತಾವ್ರೀ. ನಾನು ಸಾಯ್ತೀನೇನ್ರಿ?"

"ಸರಿ, ಆಮೇಲೆ.?"

"ಇಲಿ ಪಾಷಾಣಕ್ಕೆ ಅಂತ ಹೊಂಟೆನರೀ. ಸ್ವಲ್ಪ ದೂರ ಹೋಗಿ ಹಿಂದಕ್ಕೆ ನೋಡ್ತೀನ್ರೀ ಅಪ್ಪ… ಅಂವ ನನ್ನ ಹಿಂದೇನೇ ಬರ್ತಾ ಅದಾನ್ರಿ. ನಾನು ನಿಂತರೆ ಅವನೂ ಮರೆಯಾಗ ನಿಲ್ಲತಾನ್ರಿ. ನಾನು ಹೊಂಟರೆ ಅವನೂ ಹೊರಡತಾನ್ರಿ. ನೀ ಯಾರು? ಯಾಕ ಹಿಂಗ ನನ್ನ ಬೆನ್ನು ಹತ್ತಿದ್ದೀ ಅಂತ ಕೇಳೋ ಮನಸ್ಸಾತರೀ….ಆದರೆ ನಂಗೆ ಗುಂಡಿಗೆ ಎಷ್ಟು ದೆ ಅಂಬೋದು ನಿಮಗೆ ಗೊತ್ತಲ್ರೀ…ಮಾತು ತಗಿ ಲಿಕ್ಕ ಹೋದರ ಗಂಟಲು ಒಣಗ್ತಿತ್ರೀ…"

"ನೀನು ನಿರಪರಾಧಿ. ಅಷ್ಟ್ಯಾಕೆ ಹೆದರಬೇಕು? ಮನಸಿದ್ದೋರ ಮೇಲೆ ಹಾವ್ನ ಬಿಟ್ಟರು ಅಂತ ಗಾದೆ ಕೇಳಿಲ್ಲೇ?"

"ಆಗೋರೀ…ನೀವೂ ಒಂದು ಗಾದಿ ಬಿಟ್ಟು ನನ್ನ ಹೆದ್ರಿಸ್ತೀರಿ. ನಮ್ಮ ಜನ ನೋಡ್ರಿ ಮಾತು ಮಾತಿಗೂ ಒಂದು ಗಾದಿ ತೂರಸ್ತಾರ್ರೀ. 'ಉಪ್ಪು ತಿಂದವ ನೀರು ಕುಡಿಲಿಕ್ಕೇ ಬೇಕು' ಅಂತ ಒಬ್ಬ ಒಂದು ಗಾದಿ ಹೇಳ್ದ ನೋಡ್ರಿ. ಉಪ್ಪು ತಿಂದೋನೆ ಯಾಕೆ ನೀರು ಕುಡೀಬೇಕ್ರಿ? ಸಕ್ಕರಿ ತಿಂದೋನು ಯಾಕೆ ನೀರು ಕುಡಿಬಾರದರಿ…ನೀರಡಿಕೆ ಎಲ್ಲಾ ಮನಿಷರಿಗೂ ಆಗ್ತದರೀ. ನಮ್ಮ ಗಾದಿಗಳೂ ಹಂಗೇ ಅವ ತಗೋಳ್ರೀ. ಹೆದರಿಸೊ ಸರಕೂ ಅವ. ಸಮಾಧಾನ ಹೇಳೋವೂ ಅವ……"

"ಅದಿರಲಿ, ನಿನ್ನ ಹಿಂದೆ ಬರ್ತಿದ್ದೋನು ಏನಾದ?"

"ನಾನು ಸೆಟ್ಟಿ ಅಂಗಡ್ಯಾಗ ಇಲಿ ಪಾಷಾಣ ಇಲ್ಲ ಅನ್ನಿಕೊಂಡೆನರೀ. ಆ ಸಿ.ಐ.ಡಿ.ನೂ ಅದೇ ಸೆಟ್ಟಿ ಅಂಗ ಡೀಗೇ ಬಂದಾರಿ. ಬೆಂಕಿ ಪಟ್ಣ ಕೇಳ್ತಾರೀ….

"ನಂಗೆ ಭಾಳ ಹಸಿವಿ ಆಗಿತ್ತರೀ. ಅಲ್ಲೇ ಇದ್ದ ಚಾ ದುಕಾನದೊಳಕ್ಕೆ ನುಗ್ಗಿ ತಿಂಡೀಗೆ ಆರ್ಡ್ರ ಮಾಡಿ ಕುಂತಿದ್ದೆನರೀ………

"ಆ ಸಿ.ಐ.ಡಿ. ಮಗ ಚಾ ದುಕಾನಕ್ಕೂ ಬರಬೇಕರೆ? ನಾನು ತಿಂಡಿ ತಿನ್ನಾದು ಬಿಟ್ಟು ಆ ಸಿ.ಐ.ಡಿ. ಮುಕ ನೋಡ್ತಾ ಕುಂತೆನರೀ. ಆ ಮಗ ಹೋಟೆಲ್‌ನಾಗಿನ ದೇವರ ಪಟದ ಕಡಿ ನೋಡ್ತಾ ಕುಂತಿದ್ದನರೀ…

"ತಿಂಡಿ ತಿಂದು ಮುಗಿಸಿ ನಾನು ದುಕಾನದಿಂದ ಹೊರಬಿದ್ದೆನರೀ……ಮತ್ತೆ ಆ ಸಿ. ಐ. ಡಿ. ನನ್ನ ಹಿಂದೆ ಬಿದ್ದಾರೀ…ಆಕಳ ಹಿಂದಿನ ಗೂಳಿ ಹಾಂಗ…

"ನಂಗೆ ಏನು ಮಾಡಲಿಕ್ಕೂ ತೋಚಲಿಲ್ಲರೀ. ಇದ್ಯಾವುದೋ ಗ್ರಹಚಾರ ಬಂದು ವಕ್ಕರಿಸಿಕೊಂ ಡೈ. ತಿ. ಮಾರಮ್ಮನ ಗುಡಿಗಾದ್ರೂ ಹೋಗಿ ಒಂದು ಪ್ರದಕ್ಷಣಿ ಹಾಕಿ ಕೈ ಮುಗಿದು ಬರಾಣ ಅಂತ ಮಾರಮ್ಮನ ಗುಡಿ ಕಡೆಹೊಂಟೆನರೀ. ರಾತ್ರಿ ಒಂಬತ್ತರ ಹೊತ್ತಿನಾಗ ಮಾರಮ್ಮನ ಗುಡಿ ತೆಗದಿ ದಿರ್ತಾರೋ ಇಲ್ಲೋ ಅಂಜೋ ಅನುಮಾನ. ತತಿ





"ನನಗೆ ತಮ್ಮ ಅಥವಾ-ತಂಗಿ ಯಾರಾದ್ರೂ ಆಟಕ್ಕೆ ಬೇಕು ಅಂತ ನಾನು ಸುಮ್ನೆ ಅಪ್ಪ ಹೇಳಿದ್ದು, ಆ ದಿನ."

ಹೊಕ್ಕಿತಿರೀ. ಗುಡಿ ಬಾಗಿಲು ತೆಗೆದಿದ್ರೆ ಸರಿ. ತೆಗೆ ದಿರದಿದ್ರೂ ಹೊರಗಿನಿಂದ ಒಂದು ನಮ ಸ್ಕಾರ ಹಾಕಿದರೆ ಮಾರಮ್ಮ ಬ್ಯಾಡ ಅಂತಾಳೇನು ಅಂದ್ಕೊಂತಾ ಮಾರಮ್ಮನ ಗುಡಿಗೇ ಬಂದೇರಿ. ಪುಣ್ಯಕ್ಕೆ ಮಾರಮ್ಮನ ಗುಡಿ ಬಾಗಿಲು ತೆಗೆದೇ ಇತ್ತರಿ.

"ನನ್ನ ಗ್ರಹಚಾರ ನೋಡ್ರಿ. ಆ ಸಿ. ಐ.ಡಿನೂ ನನ್ನ ಹಿಂದೇನೇ ಬಂದನರೀ. ಅವನೂ ಪ್ರದಕ್ಷಣೆ ಹಾಕಲಿಕ್ಕೆ ಸುರು ಮಾಡ್ತಾರೀ...

"ಮಾರಮ್ಮಗ ಒಂದು ಸುತ್ತು ಬಂದಿದ್ದೇರೀ. ಇನ್ನೇನು ಎರಡನೇ ಸುತ್ತು ಹೊರಡಬೇಕು, ಆ ಸಿ.ಐ.ಡಿ. ಮಗ ಬಂದು ನನ್ನ ಮ್ಯಾಲೇ ಬೀಳೋನ್ಹಂಗ ಮಾಡಿದನರೀ. ಅವನ ಮೈಗೆ ನನ್ನ ಮೈ ತಾಕಿತರೀ ......"

"ಆಮೇಲಿ "

"ಅಷ್ಟಾದದ್ದೇ ಆ ಸಿ. ಐ. ಡಿ. ಎಲ್ಲೋ ಹಾಳಾಗಿ ಹೋಗಿಬಿಟ್ಟನರೀ."

"ಸಿ.ಐ.ಡಿ. ಜೊತೆ ಜಗಳ ಕಾಯಬೇಕಾಗಿತ್ತು. ಮೇಲೇಕೆ ಬಿದ್ದೆ ಅಂತ."

"ನಾನು ಪ್ರದಕ್ಷಿಣೆ ಮುಗಿಸಿ, ಮಂಗಳಾರತಿಗೆ ಹತ್ತು ಪೈಸೆ ಹಾಕೋಣ ಅಂತ ಜೇಬಿಗೆ ಕೈ ಇಡತೀನ್ರಿ ......ಎದಿ ಒಡೀತ್ರೀ."

"ಏನು? ಏನಾಗಿತ್ತು?"

"ಜೇಬಿನಾಗಿದ್ದ ನೋಟುಗಳು-ಒಟ್ಟು ಹದಿನೈದು ರೂಪಾಯಿನಾಗೆ, ಒಂದು ನೋಟೂ ಉಳಿದಿದ್ದಿಲ್ಲರಿ ...."

"ಹುಷಾರಾಗಿರಬೇಕಪ್ಪ ಮೂಢಬಿದ್ರಿ."

"ಎಲ್ರೂ ಹಂಗೇ ಅಂತಾರ ತಗೀರಿ. ಹುಷಾರಂತೆ ಹುಷಾರು. ಆ ಹುಷಾರಿಗಿಷ್ಟು ಕೊಳ್ಳಿ ಹಚ್ಚಿದ್ರು. ಪ್ರಸಂಗ ನಡೆದಮ್ಯಾಗ ಎಲ್ರೂ ಹುಷಾರೇ ತಗೀರಿ ......"

ತುರ್ತು ಕೆಲಸದ ನೆವ ಹೇಳಿ ಮೂಢಬಿದ್ರಿ ಯಿಂದ ಪಾರಾಗುವ ಹೊತ್ತಿಗೆ ನಾನು ಸುಸ್ತು. ✡

ಕ್ರಾಫ್ಟ್ ಮಾಸ್ತರರು ಹುಡುಗರಿಗೆ ಮರುದಿನ ಬರುವಾಗ ವಿಮಾನವನ್ನು ಮಾಡಿಕೊಂಡು ಬರುವ ಮನೆಗೆಲಸ ಕೊಟ್ಟರು. ಮರುದಿನ ರವಿಯೊಬ್ಬನನ್ನುಳಿದು ಬೇರೆ ಹುಡುಗರೆಲ್ಲಾ ಒಳ್ಳೊಳ್ಳೆಯ ವಿಮಾನಗಳನ್ನು ಮಾಡಿ ತಂದಿದ್ದರು. "ಯಾಕೋ, ಮಾಡಿಕೊಂಡು ಬರಲಿಲ್ಲಾ?" ಎಂದು ಕೇಳಿದ ಮಾಸ್ತರರಿಗೆ ರವಿ ಹೇಳಿದ: "ಸಾರ್, ಮನೆಯಿಂದ ಸ್ಕೂಲಿಗೆ ಹಾರಿಸಿಕೊಂಡು ಬರುವಾಗ ಯಾರೋ ಹೈಜಾಕ್ ಮಾಡಿದ್ರು."


ಮೂಕಜ್ಜಿಯ
ಕನಸುಗಳು
ಮೂಲ:
ಡಾ. ಶಿವರಾಮ ಕಾರಂತ
ಸಂಗ್ರಹ: ದುಷ್ಯಂತ

ಮೂಕಜ್ಜಿಯ ಕನಸುಗಳು

ಮುನ್ನುಡಿಯಿಂದ—

ಈ ಕಾದಂಬರಿಗೆ ಕಥಾನಾಯಕನಿಲ್ಲ; ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿನ ನಾಯಕಿಯಲ್ಲ. ಸಾಂಪ್ರದಾಯಿಕತೆಯಿಂದ ಹೆರೆಗಟ್ಟಿದ ಮನಸ್ಸುಗಳನ್ನು ತುಸು ಕಾಯಿಸಿ ಕರಗಿಸುವ ಕೆಲಸ ಅವಳದ್ದು. ಅಂಥ ಅಜ್ಜಿಯೊಬ್ಬಳು ಇದ್ದಾಳೆಯೇ —ಎಂಬ ಸಂಶಯ ಬಂದರೆ ನಮ್ಮ ಸಂಸ್ಕೃತಿಯ ನಂಬಿಕೆಗಳನೇಕವನ್ನು ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು. ಆದರೂ ಅವಳು ನಮ್ಮಲ್ಲನೇಕರಲ್ಲಿ—ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹದ ರೂಪದಲ್ಲಿ ಬದುಕಿಕೊಂಡು ಇದ್ದಾಳೆ.

ರಾಮಣ್ಣ ಎಣ್ಣೆ ಮಾರಿ ಜೀವಿಸುವವನು. ಮನೆಯಲ್ಲಿ ಗಾಣವುಂಟು. ಅವನು ಮಾಡಿದ ಒಂದು ತಪ್ಪು ಕೆಲಸವೆಂದರೆ, ಲಕ್ಷಣವಾದ ಒಂದು ಹುಡುಗಿಯನ್ನು ಮದುವೆಯಾಗಿ ಮನೆಗೆ ಕರೆದು ತಂದದ್ದು. ಅವಳ ಹೆಸರು ನಾಗಿ, ಅವಳನ್ನು ಹಾರಿಸಿಕೊಂಡು ಹೋದವರು ನಾಲ್ಕು ವರ್ಷಗಳ ಮೇಲೆ ಎಂಜಲೆಲೆಯ ಹಾಗೆ, ಉಂಡು ಎಸೆದರಂತೆ. ಅವಳ ತವರು ಮನೆಯವರೇ ಮನೆಗೆ ಬರಹೇಳಿದರಂತೆ. ಚಿನ್ನ, ಬೆಳ್ಳಿಗಳ ಆಸೆ ತೋರಿಸಿ ಪುಸಲಾಯಿಸಿದರಂತೆ. ನಾಲ್ಕು ದಿನ ಅಲ್ಲೆಲ್ಲೊ ಅಡಗಿಸಿಟ್ಟರಂತೆ. ಆಮೇಲೆ "ಹೊಳೆಗೆ ಇಳಿದ ಮೇಲೆ ಚಳಿ ಇಲ್ಲ" ಎಂಬ ಗಾದೆ ಆಯಿತು. ಇಷ್ಟೆಲ್ಲ ಉಪಾಯ ಮಾಡಿದವರು ಅವಳನ್ನು ಇರಿಸಿಕೊಂಡರು. ಒಡವೆ, ಆಭರಣ ಕೊಟ್ಟು ಆ ಬಡವನನ್ನು ಮರೆಯುವ ಹಾಗೆ ಮಾಡಿದರು. ಸಮನಲ್ಲವೆ? ಗಂಡನ ಮನೆಯಲ್ಲಿದ್ದರೆ ಅವಳು ಗಾಣದ ಎತ್ತಾಗಬೇಕಿತ್ತಲ್ಲ! ಎಳೆಯ ಪ್ರಾಯ, ಎಷ್ಟು ಬುದ್ಧಿ ಇದ್ದೀತು—ಅವನನ್ನು ಬಿಟ್ಟು ಓಡಿ ಬರುವುದಕ್ಕೆ. ಸರಿ, ಎರಡು ಮಕ್ಕಳಾದವು. ಆಗ ಅವರ ಮನಸ್ಸು ಮತ್ತೆಲ್ಲೆಲ್ಲೊ ಹರಿಯಿತು. ಒಂದು ದಿವಸ ಅವಳಿಗೆ ಕೊಟ್ಟ ಚಿನ್ನಗಿನ್ನಗಳನ್ನು ಮುರಿಸಿ ಹೊಸತು ಮಾಡುವ ಆಸೆ ತೋರಿಸಿ, ತಂದಿಟ್ಟುಕೊಂಡರು. ಮತ್ತೆ ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದರು. ಅವಳಿಗೆ ಊಟಕ್ಕೆ ಕೊಡುವುದನ್ನೂ ನಿಲ್ಲಿಸಿದರು. ಇವಳು ಕಂಗಾಲಗೊಂಡು ಅವರ ಮನೆಯ ಬಾಗಿಲಿಗೂ ಹೋಗಿ ಅತ್ತಳಂತೆ. ಅದಕ್ಕವರು "ರಂಡೆ, ನಮ್ಮ ಅಂಗಳಕ್ಕೆ ಕಾಲಿಟ್ಟರೆ ಸೊಂಟ ಮುರಿಸಿಯೇನು" ಎಂದರಂತೆ. ಅಷ್ಟು ಮಾಡಿಸುವವರೇ. ಇಷ್ಟೆಲ್ಲ ಕತೆ ನಡೆದ ಮೇಲೆಯೂ, ಆ ರಾಮಣ್ಣ ಇವಳ ಹತ್ತಿರ ಹೋಗಿ "ಬಾ" ಎಂದು ಬೇಡಿದನಂತೆ, ಅವಳು ನಾಚಿ, ಅತ್ತು, "ಬೇಡ ನಿಮಗೆ ಈ ಎಂಜಲು ಜೀವ" ಎಂದು ಮಾತಿಗೂ ನಿಲ್ಲದೆ ಓಡಿದಳಂತೆ.

ಹೆಣ್ಣು ಗಂಡಿನ ಹಿಂದೆಯೋ, ಗಂಡು ಹೆಣ್ಣಿನ ಹಿಂದೆಯೋ ಓಡಿ ಹೋದದ್ದು ಕತೆಗಳಲ್ಲೂ ಉಂಟು; ಬದುಕಿನಲ್ಲೂ ಉಂಟು. ಇದರಲ್ಲಿ ನನಗೆ ಕಾಣಿಸಿದ ವಿಶೇಷವೆಂದರೆ, ಆಕೆಯ ತವರು ಮನೆಯ ಪಾತ್ರವೂ ಇರಬಹುದಾದದ್ದು, ಎಳೆಯ ಮಕ್ಕಳನ್ನು ಸಾಕುವ ಭಾರ ತಾನೇ ಹೊತ್ತದ್ದು. ಅಷ್ಟಿದ್ದರೂ ತಾನು ರಾಮಣ್ಣನ ಜೊತೆಗೆ ಹೋಗದೆ, ಅವನ ಗೌರವ ಉಳಿಸಿದ್ದು.

ಒಮ್ಮೆ ನಮ್ಮೂರಿನ ಜಾತ್ರೆಯಲ್ಲಿ ಅವಳನ್ನು ಕಂಡಾಗ ಇದೆಲ್ಲ ವಿಷಯ ತಿಳಿದುಬಂದಿತ್ತು. ನನಗಾಗ ಹದಿನಾರರ ಪ್ರಾಯ. ಅವಳನ್ನು ಹತ್ತಿರದಿಂದ

ಮಾತನಾಡಿಸಬೇಕೆಂಬ ಚಪಲ ಮೂಡಿತು. ಅವಳು ಮಕ್ಕಳಿಗಾಗಿ ಅರ್ಧಾಣೆಯ ಬೆಲೆಯ ಮಂಡಕ್ಕಿ ಖರೀದಿ ಮಾಡಿ ಜನರ ಗದ್ದಲವಿಲ್ಲದ ಒಂದು ಮರದ ಕೆಳಗೆ ಕುಳಿತಿದ್ದಳು. ನಾನು ಹಬ್ಬಕ್ಕೆ ತಂದಿದ್ದ ಎರಡಾಣೆ ಪಾವಲಿಯನ್ನು ಅವಳ ಕಡೆಗೆ ಎಸೆದು "ಆ ಮಕ್ಕಳಿಗಾದರೂ ತೆಗೆದುಕೊ" ಎಂದೆ. ಅವಳು ಆಗ ಮಾಡಿದ ಕಣ್ಣನ್ನು ನೆನೆದರೆ ಈಗಲೂ ಭಯವಾಗುತ್ತದೆ.

"ನಾನು ನಿಮ್ಮ ನಾಯಿಯಲ್ಲ" ಎಂದಳು.

"ಏ ಮಹಾರಾಯತಿ, ಈ ಸಣ್ಣ ಮಕ್ಕಳ ಪಾಪ ಕಂಡು ದುಡ್ಡನ್ನೆಸೆದೆ. ಬೇಡವಾದರೆ ಬಿಡು. ನಾನೂ ಈ ಊರಿನವನೇ, ಅಡಿಗಳ ಮನೆಯವನು. ಮೂಕಜ್ಜಿಯ ಮೊಮ್ಮಗ" ಎಂದೆ.

ಆಕೆ ನನ್ನನ್ನು ಬಿರಬಿರನೇ ನೋಡಿದಳು. "ಅಯ್ಯ, ನಾನು ಮಾಡಿದ ಪಾಪವನ್ನು ನಾನೊಬ್ಬಳೇ ಅನುಭವಿಸಿ ತೀರುತ್ತೇನೆ. ನನಗೆ ಯಾರದ್ದೂ ಕಾಸು ಬೇಡ. ಅದು ನನ್ನ ಮಕ್ಕಳಿಗೂ ಬೇಡ. ನನ್ನ ರಟ್ಟೆ ಗಟ್ಟಿಯಿದೆ. ದುಡಿಯುತ್ತೇನೆ." ಅವಳ ಕಣ್ಣುಗಳಲ್ಲಿ ಒಂದು ತೊಟ್ಟು ನೀರು ಹನಿದ ಹಾಗೆ ಕಂಡಿತು. ಆದರೂ ಧಿಮಾಕಿನಿಂದ ಕಣ್ಣರಳಿಸಿ ಮಕ್ಕಳನ್ನು ಎತ್ತಿಕೊಂಡು ಹೊರಟು ನಿಂತಳು. "ಅಯ್ಯ, ನೀವು ದೊಡ್ಡವರ ಮನೆಯವರು. ನಿಮ್ಮ ಅಜ್ಜಮ್ಮ ದೇವರ ಹಾಗೆ. ಆದರೂ ನನಗೆ ಯಾರ ಹಂಗೂ ಬೇಡವೆಂದು ಹಾಗಂದೆ. ಸಿಟ್ಟು ಮಾಡಬೇಡಿ," ಎಂದಳು.

"ನನಗೆ ಯಾತಕ್ಕೆ ಸಿಟ್ಟು? ನಿನ್ನ ಧೈರ್ಯ ಕಂಡರೆ ಮಾತ್ರ ಆಶ್ಚರ್ಯವೇ ಆಗುತ್ತದೆ."

"ಒಡೆಯ, ಆಟದ ಪ್ರಸಂಗದಲ್ಲಿ ಭೀಷ್ಮಾಚಾರ್ಯರ ಎದುರಿನಲ್ಲಿ ಶಿಖಂಡಿ ನಿಂತ ಹಾಗೆ, ನನ್ನದೊಂದು ಹಟ. ಈ ಮಕ್ಕಳನ್ನು ದೊಡ್ಡದು ಮಾಡಿ ನನ್ನ ದುಡಿತದಿಂದಲೇ ದೊಡ್ಡದು ಮಾಡಿ ಅವರನ್ನು ಆ ಒಡೆಯರ ಮುಂದಕ್ಕೆ ನಿಲ್ಲಿಸಿ, 'ನೋಡಿ ಇವನ್ನು; ನೋಡಿದ ಮೇಲೆ ಬಾವಿಗೆ ಹಾರಿಕೊಳ್ಳಿ' ಎಂದು ಹೇಳಿ ಬರುವವಳು, ನಾನು."

"ನನ್ನ ಹತ್ತರ ಏನು ಪಂಥ ನಿನ್ನದು? ಶಾಲೆಗೆ ಹೋಗುವ ಹುಡುಗ, ನಾನು."

"ನಿಮಗೆ ಹೇಳಿದ್ದಲ್ಲ ಆ ಮಾತು. ಆ ಮಾತು [illegible]" [illegible]

ಅವಳ ಮಾತಿಂದ ನನ್ನ ಮನಸ್ಸು ಕುದಿಯಿತು. ಜಾತ್ರೆಯೂ ಬೇಡ, ಏನೂ ಬೇಡ ಎಂಬ ಭಯವಾಗಿ ನೆಟ್ಟಗೆ ಮನೆಗೆ ಹೋದೆ. ಮನೆಯ ಮುಂಗಡೆಯ ಅಶ್ವತ್ಥ ಕಟ್ಟೆಯ ಮೇಲೆ ಅಜ್ಜಿ ಕುಳಿತಿದ್ದರು. ಅಜ್ಜಿಗೆ ನಡೆದ ವಿಷಯವನ್ನೆಲ್ಲ ಹೇಳಿದೆ."ಅಜ್ಜಿ, ನನಗೆ ಎಷ್ಟು ಮಂದಿ ಮಾವಂದಿರು? ನನ್ನ ಅಮ್ಮನಿಗೊ ಅಣ್ಣ ತಮ್ಮಂದಿರಿಲ್ಲ" ಎಂದು ಕೇಳುತ್ತ ಆ ಪಾವಲಿಯನ್ನು ಅವರ ಕೈಲಿರಿಸಿದೆ.

" ಈ ಪಾವಲಿಯನ್ನು ಅವಳು ಮುಟ್ಟಿರಬೇಕಲ್ಲವೆ. ಬಿಸಿಯಿಂದ ಕುದಿಯುತ್ತದೆ. ನಾಗಿ ಮುಟ್ಟಿದ್ದಾದರೆ ಹಾಗೆಯೇ. ಅವಳ ಜೀವನದ ಕುದಿಯಲ್ಲ ಅದಕ್ಕೆ ಬಂದಿತು" ಎಂದರು.


"ಅವಳ ಮಕ್ಕಳು ಬೆಳೆದು ದೊಡ್ಡದಾದ ಮೇಲೆ ಅವಳು ಹೇಳಿದ ಹಾಗೆ ಮಾಡಿಯಾಳೇ?"

"ಮಾಡಿಯಾಳು. ಒಂದು ಲೆಕ್ಕಕ್ಕೆ ಸತ್ಯವಂತೆ."

"ಆ ಮಕ್ಕಳಿಂದ ಅವರನ್ನು ಕೊಲ್ಲಿಸದಿದ್ದರೆ ಸಾಕು. ನನಗೆ ಹೆದರಿಕೆ ಬಂದಿದೆ." ಅಜ್ಜಿ ಅದನ್ನು ಕೇಳಿ ನಕ್ಕರು. "ಮರುಳ ನೀನು, ಸಾವೊಂದು ದೊಡ್ಡದೇ ಮಾನಕ್ಕಿಂತಲೂ" ಎಂದರು. ಆ ನಂತರ ಆ ಮಾವನ ವಿಚಾರವನ್ನು ಹೇಳಿದರು. ಆತ ನಮ್ಮ ತಂದೆಯ ಮೊದಲನೆಯ ಹೆಂಡತಿಯ ತಮ್ಮ; ನನ್ನ ಖಾಸ ಮಾವನಲ್ಲ–ಎಂದು ತಿಳಿದು ಸಮಾಧಾನವಾಯಿತು. ನಾಗಿಯ ಕೋಪ ತಾಪ ನನ್ನನ್ನು ಬಾಧಿಸಬೇಕಾಗಿಲ್ಲ ತಾನೇ.

ಈ ನಮ್ಮ ಅಜ್ಜಿ ನನಗೆ ನೇರಾದ ಅಜ್ಜಿಯಲ್ಲ. ನನ್ನ ತಂದೆಯ ತಂದೆಯ ತಂಗಿ ಅವರು. ನಮ್ಮ ಮುತ್ತಜ್ಜ ಕೊಲ್ಲೂರು ಮೂಕಾಂಬಿಕೆಯ ನೆನಪಿನಿಂದಲೋ ಏನೋ, ಅವರಿಗೆ ಚಿಕ್ಕಂದಿನಲ್ಲಿ "ಮೂಕಿ" ಯೆಂದೇ ಹೆಸರಿಟ್ಟು ಕರೆಯುತ್ತಿದ್ದರಂತೆ. ಹತ್ತು ತುಂಬುವ ಮೊದಲೇ ಅವರಿಗೆ ಲಗ್ನವಾಯಿತು. ಗಂಡನಿಗೆ ಹದಿನಾಲ್ಕೊ, ಹದಿನೈದೊ, ಅಷ್ಟೇ, ಮದುವೆಯಾಗಿ ಆರೋ ಮೂರೋ ತಿಂಗಳಲ್ಲಿ ಆತ ಸನ್ನಿಪಾತದಿಂದ ತೀರಿಕೊಂಡ. ಇವರಿಗೆ ಪತ್ತು ತುಂಬದೆ ಹೋದರೂ ವಿಪತ್ತು ಮಾತ್ರ ತುಂಬಿಬಂದಿತು. ಈ ವಿಪತ್ತಿನಿಂದಾಗಿ ಅವರ ಹೆಸರು ಅನ್ವರ್ಥವಾಯಿತು. ಮನೆಗೆಲಸಗಳಲ್ಲಿ ಎಂದೂ ಆಲಸ್ಯ ತೋರಿದವರಲ್ಲವಾದರೂ ಯಾರೊಡನೆಯೂ ಮಾತುಕತೆ ಇಟ್ಟಿಸಲಿಲ್ಲವಂತೆ, ಮುಂದೆ ಅವರು ಗ್ರಾಮದ ಗಡಿ

ಕಾರಂತರು ಮತ್ತು ಮೂಕಜ್ಜಿ



ಮೂಕಜ್ಜಿ ಈ ಕಾದಂಬರಿಯಲ್ಲಿ ಅಕ್ಷರಶಃ ವಯೋವೃದ್ಧಳು, ಜ್ಞಾನವೃದ್ಧಳು. ಕಾರಂತರು ತಾವೇ ಹೆಣ್ಣು ವೇಷ ಕಟ್ಟಿ ಆಕೆಯಾಗಿ ಈ ಕನಸುಗಳನ್ನು ಕಂಡು ಕಥೆ ಹೇಳಿದರೆ...?

ಯನ್ನು ಬಿಟ್ಟು ಹೋದವರೂ ಅಲ್ಲ, ಎನ್ನುತ್ತಾರೆ. [illegible] ಕಾಲ ಸಂದಿತು. ಅವರ ಸ್ಥಾನ [illegible] ಮನೆಯ ಒಂದು ಗೋಡೆಯಷ್ಟು ಆಧಾ[illegible]. ನನ್ನ ತಂದೆ ಮೂಕಜ್ಜಿಯ [illegible] ಮೇಲೆ ಬೆಳೆದರು. ಸಂಸಾರದಲ್ಲಿ ಇನ್ನೂ [illegible] ಹುಟ್ಟು ಸಾವುಗಳಾದವು. ಮುಂದೆ [illegible] ತಂದೆ ತೀರಿಕೊಂಡಾಗ ನಾನಿನ್ನೂ ಹುಡುಗ, ಆ ದಿವಸ ಅವರ ಶವದ ಮುಂದೆ ನಿಂತು. "ನೀನು ಒಂದು ಕೆಲಸ ಒಳ್ಳೆಯದು ಮಾಡಿದ್ದೀಯ. ಅವಳನ್ನು (ಅಂದರೆ ನನ್ನ ತಾಯಿ) ಮೊದಲೇ ಕಳುಹಿಸಿಕೊಟ್ಟೆ. ಈ ಮಕ್ಕಳ ಚಿಂತೆ ಬೇಡ, ನಾನು ನೋಡಿಕೊಂಡೇನು. ಹೋಗಿ ಬಾ" ಎಂದರು. ಕಂಬನಿಯಿಂದ ಥರಥರಿ ಸುತ್ತಿದ್ದ ನನ್ನನ್ನು ಕಂಡು "ಯಾರು ಶಾಶ್ವತ? ಇದೆಲ್ಲ ಒಂದು ಆಟ– ಕನಸು ಅಂದರೆ ಕನಸು. ಸಂಸಾರವೂ ಹಾಗೆಯೇ ಸುಖದುಃಖಗಳೂ ಹಾಗೆಯೇ. ದೇವರೂ ಹಾಗೆಯೇ, ದಿಂಡರೂ ಹಾಗೆಯೇ. ಎಲ್ಲವೂ ನಾವು ಕಟ್ಟಿಕೊಂಡ ಹಾಗೆ. ಹೋಗು ಕಳುಹಿಸಿ ಕೊಟ್ಟು ಬಾ" ಎಂದರು.

ತಂದೆಯವರು ತೀರಿಕೊಂಡರೂ ಅಜ್ಜಿ ನನ್ನ ಮತ್ತು ನನ್ನ ತಮ್ಮ ನಾರಾಯಣನ ಓದು ಬರಹಗಳನ್ನು ಹಾಳುಗೆಡಯಲು ಅವಕಾಶ ಕೊಡಲಿಲ್ಲ. ಅವರ ಪ್ರೀತಿ, ಆದರ, ಪೋಷಣೆಗಳಲ್ಲಿ ಬೆಳೆದ ನನಗೆ ನಮ್ಮ ಬಾಂಧವ್ಯಗಳು ಬೆಸೆದ ರೀತಿಯೆಂದೂ ಮರೆಯಾಗುವುದಿಲ್ಲ. ಈಗಲೂ ನನಗೆ ನಮ್ಮ ಅಜ್ಜಿಯ ಮುಂದಕ್ಕೆ ನಾನು ದೊಡ್ಡವನಾಗಿದ್ದೇನೆ ಎಂದು ಕಾಣಿಸುತ್ತಲಿಲ್ಲ. ನನಗೀಗ ಮದುವೆಯಾಗಿದೆ. ಇಬ್ಬರು ಚಿಕ್ಕ ಮಕ್ಕಳಿದ್ದಾರೆ. ನಮ್ಮ [illegible] ನಮಗೆ ಕತೆ ಹೇಳಿದಂತೆ, ಇವರಿಗೆ ಮಾತ್ರ ಕತೆ ಹೇಳಿದ್ದನ್ನು ಕಾಣೆ. ಸೀತೆ ನಮ್ಮ ಮನೆಯಲ್ಲಿ ಕಾಲಿರಿಸಿದಂದಿನಿಂದ ಅವಳಿಗೇ ಯಜಮಾನಿಕೆಯ ಪಟ್ಟವನ್ನು ಕಟ್ಟಿ ದೂರ ಉಳಿದಿದ್ದಾರೆ. ಆದರೆ ನಮ್ಮ ಮನೆಗೆ ಬಂದು ಹೋಗುವ ಯಾರಿಗಾದರೂ ಸರಿಯೆ, ಅವರ ವಿಷಯದಲ್ಲಿ, ಆದರ ಇದ್ದಹಾಗೆ ಕಾಣಿಸುವುದಿಲ್ಲ. ಎಂಬತ್ತರ ವಯಸ್ಸಿನ ನಮ್ಮ ಅಜ್ಜಿಗೆ ಅರೆಮರುಳು ಎಂಬ ಅಭಿಪ್ರಾಯ ಊರವರದು.

ಅದಕ್ಕೆ ಇದೊಂದು ಕಾರಣವಿರಬಹುದು. ಅವರ ಕೈಗೆ ಏನಾದರೂ ವಸ್ತು ಒಡವೆ ಬಂದಿತೆಂದರೆ ಅಥವಾ ಮಕ್ಕಳು ಕೈಗೇನಾದರೂ ಕೊಟ್ಟವೆಂದರೆ ಎರಡು ನಿಮಿಷ ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತಾರೆ. ಆ ಬಳಿಕ ತಮ್ಮಷ್ಟಕ್ಕೆ ಏನೇನೋ ಕನಸು ಕಂಡವರ ಹಾಗೆ ಗೊಣಗುತ್ತಾರೆ. ಮೂಕಜ್ಜಿಗೆ ಮುಪ್ಪಿನ ಮರುಳು ಎನ್ನುತ್ತಾರೆ ಜನ. ಜನರ ಆ ಭಾವನೆ ಮಾತ್ರ ನನ್ನ ಮನಸ್ಸನ್ನು ತುಂಬಾ ನೋಯಿಸುತ್ತದೆ.

ಇಂಥ ಮನಸ್ಥಿತಿಯಲ್ಲಿ ನಾನೊಮ್ಮೆ ಅವರ ಜೊತೆಯಲ್ಲಿ ಅಶ್ವತ್ಥನ ಕಟ್ಟೆಯ ಮೇಲೆ ಕುಳಿತಿದ್ದೆ. ಅವರು ನನ್ನ ಕಡೆ ದೃಷ್ಟಿ ಹರಿಸದೆಯೇ ಏನೇನೊ ತಮ್ಮಷ್ಟಕ್ಕೆ ಗೊಣಗುತ್ತಿದ್ದರು. ಅದನ್ನು ಕಂಡಾಗ ನನಗೆ, "ಇಷ್ಟು ಪ್ರಾಯವಾಗುವ ತನಕ ಯಾರೂ

ಬದುಕಿರಬಾರದಪ್ಪಾ" ಎಂಬ ಯೋಚನೆ ಬಂತು. ಮರುಕ್ಷಣಕ್ಕೆ ಅವರು, "ಮಗು ನಿನ್ನ ಅಜ್ಜಿ ನಿನಗೆ ಭಾರವಾದಳೆ?" ಎಂದು ಹೇಳಿ ನಕ್ಕುಬಿಟ್ಟರು. ಆಗ ನನ್ನ ಎದೆ ಧಡಲ್ ಎಂದಿತು. "ಅಜ್ಜಿ [illegible] ಅದು ನೀವು ಬೇಡವಾಗಿಯೂ ಅಲ್ಲ, ಭಾರವಾಗಿಯೂ ಅಲ್ಲ. ಮನಸ್ಸಿನ ಮೇಲೆ ಹತೋಟಿ ಇಲ್ಲದಾಗ ಬದುಕಿ ಫಲವೇನು--ಎಂದು ಕಾಣಿಸಿದ್ದು ನಿಜ. ತಪ್ಪಾಯಿಂತು ನನ್ನಿಂದ," ಎಂದೆ.

"ನಿನ್ನ ಮನಸ್ಸು ನನಗೆ ಗೊತ್ತಿಲ್ಲವೆ? ಆದರೂ ಹೇಳಿದೆ ಚೇಷ್ಟೆಗೆ."

"ನಿಮಗೆ ಹೇಗೆ ಗೊತ್ತಾಯಿತಪ್ಪ, ಅದು?"

"ಹೇಗೊ! ನೀನು ಎಣಿಸಿದ್ದೆಲ್ಲ ನಾನೇ ಎಣಿಸಿದಷ್ಟು ಸ್ಪಷ್ಟವಾಯಿತು. ಹೇಳಿದೆ. ನನಗೆ ಏನೇನೊ ಕಾಣಿಸುತ್ತದೆ. ಏನೇನೋ ಅನ್ನುತ್ತೇನೆ. ಅದೂ ಒಂದು ತರ ಕನಸಿದ್ದರೂ ಇದ್ದೀತು. ಅಂದ ಹಾಗೆ ಮಾಣಿ. ನಿನ್ನೆ ರಾತ್ರಿ ಅಷ್ಟು ಹೊತ್ತಿನ ತನಕ ಎಲ್ಲಿ [illegible] ನನಗೆ ಗೊತ್ತೇ ಆಗ ಲಿಲ್ಲ," ಎಂದರು ಅಜ್ಜಿ.

"ಅದೇ? ನಾಗನಕಾಲು ಬರೆಯಲ್ಲಿ ಋಷಿಗಳ ಗುಹೆ ಗಿಹೆ ಇದೆ ಎನ್ನುತ್ತಾರಲ್ಲ. ಇರುವುದಾದರೆ ಹೌದೇ--ಎಂದು ಜನ್ನನನ್ನು ಕಟ್ಟಿಕೊಂಡು ನೋಡುವುದಕ್ಕೆ ಹೋದೆ."

"ಹಿಂದೆ ಋಷಿಗಳು ಅಲ್ಲಿ ಇದ್ದದ್ದುಂಟು ಅನ್ನು [illegible] ಬೇಕೆಂದು ಕಂಡರೆ, ಕಾಡಿಗೆ ಹೋಗಬೇಕೆಂದು ನನಗೆನಿಸುವುದಿಲ್ಲ."

"ಮನೆಯಲ್ಲಿ ಹೆಂಡತಿ ಮಕ್ಕಳ ಗಲಾಟೆಯಲ್ಲಿ, [illegible] ಬಂದೀತೇ ಅಜ್ಜಿ?"

"ನಾನು ಇಷ್ಟು ವರ್ಷವೂ ಇಲ್ಲಿ ಮಾಡಿಕೊಂಡಿ [illegible] ಏನು? ಮಕ್ಕಳು ಮರಿಗಳು ನನಗೇನು ಮಾಡಿ [illegible] ಮನೆ [illegible] ಮಲಗಿದ್ದಾಗ ಚಾಪೆಯ ತಗಣೆ ಕಡಿದರೆ ಅಲ್ಲಿ [illegible] ಕಚ್ಚೀತು. ಗುಹೆಗೆ ಹೋದವರಿಗೆ ಉಪದ್ರ ಕಡಿಮೆ ಎನ್ನುತ್ತೀಯಾ?"

"ಹಾಗಿದ್ದರೆ ಅವರು ಯಾಕೆ ಹೋಗುತ್ತಿದ್ದರು?"

"ನೀನು ಚೇರಟೆ ಹುಳು ಕಂಡಿಲ್ಲವಲ್ಲ. ಅದನ್ನು ಮುಟ್ಟಿದರೆ ಥಟ್ಟನೆ ಮುರಟಿಕೊಂಡು ಬಿಡುತ್ತದೆ, ಹೊರಗಿನ ಭಯಕ್ಕೆ. ಋಷಿಗಳು ಗುಹೆ ಸೇರುವುದಕ್ಕೆ ಸಂಸಾರದ ಭಯವೇ ಕಾರಣ. [illegible] ಅಂದ ಮೇಲೆ ಸುಖ ದುಃಖ ನೋವು ವಗೈರೆ ಇದ್ದೇ ಇರುತ್ತವೆ. ಇವರಿಗೆ ಅಂಥ ನೋವುಗಳು ಬೇಡ"

"ಹಾಗಿದ್ದರೆ ಅದನ್ನು ತಪ್ಪಿಸುವ ದಾರಿ ಯಾವುದೆನ್ನುತ್ತೀರಿ?"

"ಒಂದೇ ದಾರಿ. [illegible] ಆದರೆ ದೇವರು ಸಂಸಾರದ ಒಳಗೆ ಅವರನ್ನು ಹುಟ್ಟಿಸಿಯಾಯಿತು. ಏನು ಮಾಡಬೇಕು. ಹಡೆದ ತಾಯಿಯ ಹೊಟ್ಟೆಯನ್ನು ತಿರುಗಿ ಸೇರುವುದು ಅಸಾಧ್ಯವಾದದ್ದಕ್ಕೆ [illegible] ಸಂಸಾರ ಎಲ್ಲಿಲ್ಲವಂತೆ? ಗುಹೆಯೂ ಸಂಸಾರವೇ. ದೇಹ ಇರುವ ತನಕವೂ ನಾವಾಗಿ ಅದನ್ನು ಬಿಡಲಿಕ್ಕೆ ಬರುವದಿಲ್ಲ."

ನಮ್ಮ ಪರಂಪರೆಯು [illegible] ಮೋಹ ಬಿಡಬೇಕು ಎನ್ನು [illegible] ಅಜ್ಜಿ ಮಾತ್ರ ಹೀಗೆ ಹೇಳುತ್ತಿ [illegible] ವಿಸ್ಮಯವಾಯಿತು. ಅವರಿಗೆ ಸ್ವ [illegible] ಸುಖ ದೊರೆಯಲಿಲ್ಲವೆಂಬುದರಿಂದ ಹೀಗೆ ಅನ್ನುತ್ತಿದ್ದಾರೆಯೇ?

"ಅಜ್ಜಿ, ನಿಮ್ಮಲ್ಲಿ ಕೇಳಲಿಲ್ಲ ಈ ತನಕ. ಗೊತ್ತಿಲ್ಲದ್ದಕ್ಕೆ ಕೇಳುತ್ತೇನೆ. ನಿಮಗೆ [illegible] ಆಯಿತಂತಲ್ಲ."

"ಉಡುತ್ತ ಇದ್ದೇನಲ್ಲ - ನನ್ನ ಹತ್ತು ವರ್ಷದ ಪ್ರಾಯದಿಂದಲೂ ಇಂಥ ಕೆಂಪು ಸೀರೆಯನ್ನು! ನನಗೆ ಪ್ರಾಯ ತುಂಬಿದಾಗ ನನ್ನಷ್ಟಕ್ಕೆ ನಾನು ಏನೇನೋ ಮಾತನಾಡುತ್ತ ಇದ್ದೆನಂತೆ. ನನಗೆ ಭೂತ ಹಿಡಿದಿದೆ ಎಂದು ಹೆದರಿದರು. ಯಾವನೊ ಒಬ್ಬ ಮಂತ್ರವಾದಿ ಬಂದು ನನ್ನನ್ನು ಹುಣಿಸೆ ಅಡರಿನಿಂದ ಹೊಡೆದೇ ಹೊಡೆದ. 'ಹೋಗು ಹೊರಟು ಹೋಗು' ಎಂದು ಕೂಗಿದ. ಅಂತೂ ಹೆದರಿಸಿ ಬಿಟ್ಟದು ನನ್ನ 'ಬಾಯಿಂದ ಹೋಗುತ್ತೇನೆ' -ಅನ್ನಿಸಿ. 'ಇನ್ನು ಈ ಮನೆಯೊಳಗೆ ಕಾಲಿಡಕೂಡದು' ಎಂದು

ತಾಕೀತು ಮಾಡಿದ. ಎಂಟು ದಿನಗಳ ತನಕ ನನ್ನ ಬೆನ್ನಿನಲ್ಲಿ ಬಿದ್ದ ಬಾಸುಂಡೆ ಮಾಯವಾಗಲಿಲ್ಲ. ನಾನು ಮಾತನಾಡಿದ್ದರ ಫಲ ಎನ್ನಿಸಿ ಬಾಯಿ ಮುಚ್ಚಿ ಬದುಕಲು ಕಲಿತೆ. ಆಗ ನನ್ನ ಮನಸ್ಸಿನ ನಮೂನೆ ಬೇರೆ ಒಂದು ತೆರನಾಯಿತು. ಈ ಮನೆಯನ್ನು ಬಿಟ್ಟು ಹೊರಗೆ ಹೋದರೆ ಸಾಕು, ಅಥವಾ ಗುರುತು ಇರುವವರು ಯಾರಾದರೂ ಬಂದರೆ ಸಾಕು, ದೇವಸ್ಥಾನಕ್ಕೆ ಹೋದರೂ ಸರಿಯೇ, ಏನಾದರೂ ಹೊಸತನ್ನು ಮುಟ್ಟಿದರೂ ಸರಿಯೇ, ಒಂದು ಬಾರಿಗೆ ಮೈ ಜುಮ್ಮ ಆಗುತ್ತದೆ. ಯಾಕೆ ಹಾಗಾಗುತ್ತದೆ, ಎಂದು ಕಣ್ಣುಮುಚ್ಚಿ ಯೋಚಿಸಿದರೆ ಏನೇನೆಲ್ಲ ಕಾಣಲಿಕ್ಕೆ ತೊಡಗುತ್ತದೆ. ಹಾಗೆ ಕಾಣಿಸ ತೊಡಗಿತು—ಅಂದರೆ ನನ್ನ ಬಾಯಿ ಗೊಣಗಲಿಕ್ಕೆ ಶುರು ಮಾಡುತ್ತದೆ." ಎಂದರು.

ನನ್ನ ತಮ್ಮ ನಾರಾಯಣ ನೆರೆ ಗ್ರಾಮದ ಮಂಜುನಾಥನ ದೆಸೆಯಿಂದಾಗಿ ಮೈಸೂರಲ್ಲಿ ವಿದ್ಯಾಭ್ಯಾಸ ಮುಗಿಸಿದ. ಶಿವಮೊಗ್ಗೆಯಲ್ಲಿ ಚಾಕರಿ ಹಿಡಿದ. ದೊಡ್ಡ ರಜೆಗೆ ಊರಿಗೆ ಬಂದರೆ ನಾಲ್ಕಾರು ದಿನ ಮಾತ್ರ ಇರುತ್ತಾನೆ. ನಮ್ಮ ಮೂಡೂರಿನ ಮೋಹ ಅವನಲ್ಲಿ ಉಳಿದಿಲ್ಲ. ನನಗಾದರೂ ಊರಿನ ಜನಗಳ ಮೇಲೆ ಅಷ್ಟು ಆದರ ಬೆಳೆದಿಲ್ಲ, ಏನೇನೊ ಅಲ್ಪತನ, ವಂಚನೆ ನಡೆದದ್ದನ್ನು ಕೇಳಿದಾಗ ಅವರಲ್ಲಿಗೆ ಹೋಗಿಬರುವುದಕ್ಕೆ ಮನಸ್ಸು ಹಿಂಜರಿಯುತ್ತದೆ. ನನಗೆ ಹಿಡಿಸುವ ಸ್ನೇಹಿತ ಜನಾರ್ದನ ಒಬ್ಬನೇ. ನಮ್ಮ ಮನೆಗೆ ಆಗಾಗ ಬರುತ್ತಿರುತ್ತಾನೆ. ಅವನಿಗೂ ಅಜ್ಜಿಯ ಬಗ್ಗೆ ಆದರ ಕಮ್ಮಿ. "ಅವರು ತಮ್ಮಷ್ಟಕ್ಕೆ ಗೊಣಗುವದು ಈಗೀಗ ಹೆಚ್ಚಾಗಿದೆ ಅಂತ ವರ್ತಮಾನ" ಎಂದೊಮ್ಮೆ ನುಡಿದ.

"ಅವರಷ್ಟಕ್ಕೆ ಗೊಣಗಿದವರಿಗೆ ಬುದ್ಧಿ ಸ್ವಯವಿಲ್ಲ ಎಂಬ ಲೆಕ್ಕ ನಿನ್ನದು," ಎಂದೆ.

"ಬುದ್ಧಿ ಸ್ವಯವಿದ್ದವರು ಹಾಗೆ ಮಾಡುತ್ತಾರೇನಯ್ಯ ?"

"ಮನಸ್ಸು ಸುಮ್ಮನೆ ಕುಳಿತಿರಲಾರದೆ ನೂರು ಕಡೆಗೆ ಓಡುವುದಿಲ್ಲವೇ? ನನಗೂ ಹಾಗಾಗುತ್ತದೆ, ನಿನಗೂ. ಅಜ್ಜಿ ಒಳಗಿದ್ದದ್ದನ್ನೆಲ್ಲ ಬಾಯಿ ಬಿಟ್ಟು ಹೇಳುತ್ತಾರೆ. ನಾನು ನೀನೂ ಹೇಳುವುದಿಲ್ಲ. ಅಷ್ಟೇ ವ್ಯತ್ಯಾಸ. ಆಗ ಏನೆಂದ ಹಾಗಾಯಿತು? ಮನಸ್ಸಿಗೆ ಕಂಡದ್ದನ್ನು ಬಾಯಿಯಿಂದ ಆಡಿದರೆ ಮಾತ್ರ ಸ್ವಯಗೆಡುವುದು ಎಂದಲ್ಲವೆ ?" ಈ ಮಾತಿಗೆ ನನ್ನ ಸ್ನೇಹಿತ ನಕ್ಕು ಸುಮ್ಮನಾದ.

ಅವರ ಜೀವನದಲ್ಲಿ ಆರಂಭದ ಹತ್ತು ವರ್ಷವನ್ನಷ್ಟೆ ಅವರು ನೆಮ್ಮದಿಯಿಂದ ಕಳೆದಿರಬಹುದು. ಮುಂದೆ ಕುಂಕುಮ ಅಳಿಸಿದ ಮೇಲೆ, ಕಳೆದಂಥ ಎಪ್ಪತ್ತು ವರ್ಷಗಳ ಬಾಳ್ವೆ, ಯಾರೊಡನೆಯೂ ತೋಡಿಕೊಳ್ಳದ ಜೀವನ-ಅದನ್ನು ನೆನೆದರೇನೇ ನನಗೆ ಭಯವಾಗುತ್ತದೆ. ಆ ಕಾಲದಲ್ಲಿ ಅವರ ಅಣ್ಣ–ನನ್ನ ಅಜ್ಜ–ಒಬ್ಬರೇನೆ ತಮ್ಮ ಮಾತು ನಡತೆಗಳಿಂದ ಸಮಾಧಾನ ಕೊಟ್ಟವರಂತೆ. ನಮ್ಮ ತಂದೆಯೂ ಅವರನ್ನು ತುಂಬ ಚೆನ್ನಾಗಿಯೇ ಕಂಡುಕೊಂಡರು. ನಮ್ಮ ತಾಯಿಗೂ ಅವರ ಮೇಲೆ ಬಹಳ ಗೌರವ ಇತ್ತಂತೆ. ಆದರೆ ನಮ್ಮ ತಾಯಿ ಒಂದು ಸಂಗತಿಯನ್ನು ಹೇಳುತ್ತಿದ್ದುದುಂಟು. ಅದೆಂದರೆ ಅವರಿಗೆ ದೈವಭಕ್ತಿ ಇತ್ತೇ ಇಲ್ಲವೇ ಎಂಬ ವಿಚಾರದಲ್ಲಿನ ಸಂಶಯ. ಮನೆಯಲ್ಲಿ ಅಷ್ಟೆಲ್ಲ ಪೂಜೆ ಪುನಸ್ಕಾರಗಳಾಗುತ್ತಿದ್ದರೂ ಉಳಿದದರಂತೆ ಯಾವ ನಿಷ್ಠೆಯನ್ನು ತೋರಿಸಿದವರಲ್ಲವಂತೆ, ಅಜ್ಜಿಯ ಕೈಯಲ್ಲಿ ಜಪಸರ ಕಂಡವರಿಲ್ಲ. ಅವರು ತುಟಿ ಅಲುಗಿಸಿ "ಓಂ ನಮಃ ಶಿವಾಯ" ಎಂದವರಲ್ಲ. ಇದರಿಂದಾಗಿ ನನ್ನ ತಾಯಿ "ಇವರು ತಮಗಾದ ಅನ್ಯಾಯವನ್ನು ನೆನೆದು ದೇವರ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರಲ್ಲ" ಎಂದು ಅರ್ಥ ಮಾಡಿಕೊಂಡದ್ದುಂಟು. ಒಮ್ಮೆ, "ಅಜ್ಜಿ, ನಿಮಗೆ ದೇವರಲ್ಲಿ ನಂಬಿಕೆ ಇಲ್ಲವೆ?" ಎಂದು ನೇರವಾಗಿ ಪ್ರಶ್ನಿಸಿದೆ. ಅವರು ಅಶ್ವತ್ಥವೃಕ್ಷಕ್ಕೆ ಒಂದು ಸುತ್ತು ಹಾಕಿ ಅದೇ ಕುಳಿತುಕೊಂಡಿದ್ದರು.

"ದೇವರು ಎಂಬುದು ನಾವು ನಂಬಿದರೆ ಉಂಟು. ನಂಬಿದ್ದಾರೆ ಜನ. ಭೂಮಿಯಲ್ಲಿ ಹುಟ್ಟಿದ ಎಲ್ಲರೂ ಒಟ್ಟುಗೂಡಿ ಒಂದು ದೇವರನ್ನು ಮಾಡಿಕೊಂಡಿದ್ದಾರೆ. ಅವನ ಜೊತೆಯೇ ಇಲ್ಲದ ಪ್ರಾಣಿಗಳಿಲ್ಲವೆ? ಅವುಗಳನ್ನೂ ಬದುಕಿಸಿ ಇರಿಸಿದ್ದಾನಲ್ಲ? ನಾವು ಅವನನ್ನು ಹುಡುಕಿದಂತೆ ಅವನು ನಮ್ಮನ್ನು ಹುಡುಕಿಕೊಂಡು ಬರಬೇಕಾದುದು ಇಲ್ಲ. ನಮಗೆ ದೇವರ ತಲೆ, ಬುಡಗೊತ್ತಿಲ್ಲ. ಸುಮ್ಮನೆ ಗೊತ್ತಿದೆ ಎನ್ನುತ್ತೇವೆ. ಅವನ ಇಚ್ಛೆ ಹಾಗೆ; ಅವನ ಇಚ್ಛೆ ಹೀಗೆ ಎಂತ ಆಡುತ್ತಿರುತ್ತೇವೆ. ಮಕ್ಕಳಾಟಿಕೆ ಮಾತು."

"ನನ್ನ ಅಜ್ಜಿ, ದೊಡ್ಡವರು ಅನ್ನುತ್ತಾರಲ್ಲ—ಇದೆಲ್ಲ ಪರಮಾತ್ಮನ ಆಟ ಎಂತ."

"ಆಯಿತು ಇದು ಆಟ ಅಂತಿಟ್ಟುಕೊ, ಆಮೇಲೆ ಏನು?"

"ನಮ್ಮನ್ನು ಅವನು ಕುಣಿಸುತ್ತಾನೆ."

"ಅಂತಿಟ್ಟುಕೋ."

"ಅವನು ಅಂದ ಹಾಗೆ ನಾವು ಕುಣಿಯಬೇಡವೆ?"

"ಅವನು ಏನು ಅಂದ ಅಥವಾ ಅನ್ನುತ್ತಾನೆ—ಎಂಬುದು ನಿನಗೆ ತಿಳಿಯುತ್ತದೆಯೆ? ಹಾಗೆ ಕುಣಿಯುತ್ತೇನೆ ಅನ್ನಲಿಕ್ಕೆ. ಅವನು ಅಂದದ್ದು ಎನ್ನುವುದೆಲ್ಲ ನಾವು ನಮ್ಮ ಮನಸ್ಸಿಗೆ ಕಂಡ ಹಾಗೆ ಅಂದದ್ದು."

ನನ್ನ ವಿಚಾರ ಸರಣಿ ಮತ್ತಷ್ಟು ಗೊಂದಲಕ್ಕೆ [illegible]. "ಹೋಗು ಮನೆಗೆ. ಯಾರೋ ಅಂಗಳದಲ್ಲಿ ಬಂದು ಕುಳಿತಿದ್ದಾರೆ," ಎಂದರು.

ನಿಜಕ್ಕೂ ಒಬ್ಬರು ಬಂದು ಕುಳಿತಿದ್ದರು. ಬಂದವನು ನಾಗನ ರಾಮಣ್ಣ. ತಿಂಗಳು ತಿಂಗಳಿಗೊಮ್ಮೆ ಮನೆಗೆ ಬರುತ್ತಿದ್ದ. ಅವನೊಂದಿಗೆ [illegible] ಮಾತುಕತೆ ನಡೆಯಿತು. "ಅಂತೂ ನಿನ್ನದೊಂದು ಪ್ರತಿಜ್ಞೆ. ಮದುವೆ ಆಗಲೇ ಇಲ್ಲ ತಿರುಗಿ, ಈಗ ಹಳಬನಾದೆ!"

"ಅದೆಲ್ಲ ಹಣೆಯಬರಹ ಅಲ್ಲವೇ ಒಡತಿ? ಅವನೇ ಅವಳ ಹಣೆಯ ಮೇಲೆ 'ನೀನು ಓಗಾಗು, ಹಾದಿಯ ಮೇಲೆ ಬಿದ್ದು ಸಾಯು' ಎಂದು ಬರೆದ. ಅವಳನ್ನು ನೆನೆದಾಗಲೆಲ್ಲ ಸಿಟ್ಟೂ ಬರುತ್ತದೆ. ಆದರೂ [illegible] ಪ್ರಮಾಣಕ್ಕೂ [illegible], ಇನ್ನೊಂದು ಹೆಣ್ಣಿನ ಕೈಯನ್ನು ಹಿಡಿಯಬೇಕೆಂದು ಆಸರೆಯಾಗುವುದಿಲ್ಲ."


ರಾಮಣ್ಣ ಹೊರಟು ಹೋಗಿ ತುಸು ಸಮಯವಾಗಿರಬೇಕು. ನನ್ನೆರಡು ಮಕ್ಕಳು ಕೂಗುತ್ತ ಕಿರುಚುತ್ತ [illegible] 'ಅದು ನನಗೆ' 'ಅದು ನನಗೆ' ಎಂದು ಬೊಬ್ಬಿರಿಯುತ್ತ ನನ್ನ [illegible]. ಅಪ್ಪನ ಕೈಯಲ್ಲಿ ಏನೋ ಸಿಕ್ಕಿರಬೇಕು. ಅದಕ್ಕೆ ಈ ಬೊಬ್ಬೆ. ನಾನು ಜನಾರ್ದನನ ಮನೆಗೆ ಹೊರಟೆ.

ಜನ್ನ ಮನೆಯಲ್ಲಿರಲಿಲ್ಲ. ಆಚೆ ಈಚೆ ಅಲೆದಾಡಿ ಕೊಂಡು [illegible] ಹೊತ್ತಿಗೆ ಮನೆಗೆ ಬಂದೆ. [illegible] ಕಟ್ಟೆಗೆ ಹೋಗಿ [illegible] ಅಲ್ಲಿಯೆ ಒಂದಿಷ್ಟು ಸಂಧ್ಯಾವಂದನೆಯ ಚಟುವಟಿ[illegible] [illegible]ಕೊಂಡೆ. [illegible] ಅಜ್ಜ[illegible] [illegible] ಕೊಂಡು ಕಂಬಕ್ಕೊರಗಿಕೊಂಡು ಮಣ ಮಣ ಮಾಡುತ್ತಿದ್ದರು. ಅವರ ಧ್ವನಿ, ಮಾತುಗಳು ಕಿವಿಗೊಟ್ಟು ಕೇಳಿದರೆ ಕೇಳಿಸುವ ಹಾಗಿತ್ತು.

"ಹೌದು. ಇದು ನಿನಗೆ ಬೇಕು. ಈ ಕರಡಿಗೆ ಮರೆತಿಲ್ಲ ನೀನು! ಅವಳು ಕಾಡಿಗೆ ಹೋಗಿ ಬೆತ್ತ ತಂದು ಸಿಗಿದು ಗೀಸಿ ಹೆಣೆದು ಕೊಟ್ಟಳಲ್ಲವೆ – ನಿನ್ನ ವೀಳೆಯಕ್ಕಾಗಲಿ ಎಂದು. ನಿನ್ನ ಮನೆಗೆ ಅವಳು ಒಲಿದೇ ಬಂದಳು. [illegible] ಅವಳ ಮುಂದೆ ನಿನ್ನ ಗಂಡುಸುತನದ ಜರ್ಬನ್ನೇ ತೋರಿಸಿದೆ. ಏನೆಂದೆ ನೀನು? ನಿನ್ನ ಚಂದಕ್ಕೆ ನಾನು ಮರುಳಾದವನಲ್ಲ? ಮತ್ತೆ ಈ ಮಾತು ಅಂದಿಲ್ಲವೆ? 'ಮೈ ಬಿಯನಾಗಿದ್ದರೇನಂತೆ? ದುಡಿಯದೆ ತಿಂಬ ಮನೆ ಇದಲ್ಲ. ದುಡಿಯುವರಲ್ಲಿ ಕಳ್ಳತನ ಮಾಡಿದರೆ ಗುದ್ದಿ ಗುದ್ದಿ ಹಣ್ಣು ಮಾಡಿಯೇನು' ಅಂದಿಲ್ಲವೇ ನೀನು?

'ಯಾರು ದುಡಿಯುವದಕ್ಕೆ ಹೆದರುತ್ತಾರೆ?' ಅಂದಿಲ್ಲವೇನು ಅವಳು? ಆದರೂ ನೋಡು ರಾಮಣ್ಣ, ಮದುವೆಯಾಗಿ ಮೂರು ವರ್ಷ ಸಂದರೂ ಒಂದು ಹೊಸ ಸೀರೆ ತುಂಡನ್ನು ಅವಳ ಮೈ ಮುಚ್ಚಲಿಕ್ಕೆ ನೀನು ಕೊಡಬೇಡವೇ? ಹೆಣ್ಣಲ್ಲವೆ ಅವಳು? ನೀನು ಕೌಪೀನ ತೊಟ್ಟು, ಗಾಣ ತಿರುಗಿಸಿದ ಹಾಗೆ ನಿನ್ನ ಹಿಂದೆ ಅವಳು ಹರಕು ಅರಿವೆಯಲ್ಲಿ ತಿರುಗಬೇಕೆಂದರೆ? ನಿನ್ನನ್ನು ಹೆದರಿಸಲಿಕ್ಕೆ ಓಡಿಹೋದಳು. [illegible] ಹೋಗಿ ಮಂದಿಯ ಗಂಡನನ್ನು ಸೇರಿದ ಹಾಗಾಯಿತು. ಅವಳ ಮೇಲೆ [illegible] ಇಟ್ಟಿದ್ದನೋ! ನಿನ್ನ ಗಂಡಸುತನದ ಡೌಲು ಇಳಿದು ಬುದ್ಧಿ ಬರುವಾಗ ಎಲ್ಲವೂ ಮುಗಿದು ಹೋಗಿತ್ತು.

"ಆದರೂ ನಿನ್ನ ಮನಸ್ಸು ದೊಡ್ಡದು, ರಾಮಣ್ಣ. ನಲ್ವತ್ತು ಒಂದು ಹೆಚ್ಚಲ್ಲ ಪ್ರಾಯ. ನಾಗಿ ಹಾಗಿನ ರಂಭೆ ಸಿಗಲಾರಳು. ಬೇಕೆನಿಸಿದರೆ ಮದುವೆ ಆಗು. ಅದೊಂದನ್ನು ಅವನೇ ಮಾಡಿದ್ದಾನಲ್ಲ ಪ್ರಾಕಿನಿಂದ. ಈ ಜಗತ್ತು ದೇವರ ಮಾಯೆ ಅನ್ನುತ್ತಾರೆ ಎಲ್ಲರೂ. ನಾನು ಅನ್ನುತ್ತೇನೆ—ಗಂಡು ಹೆಣ್ಣಿನ ಮಾಯೆಯು-


"ಹೂದೋಟದ ದಿವ್ಯ ಪರಿಮಳವನೆಲ್ಲ
ತಂದಿಹೆವು ಬಳಿಗೀಗ ನಿಮ್ಮ ಭಕ್ತಿಪ್ರಸನ್ನತೆಗಾಗಿ"
ಮೈವನಾ
• ಸೌಗಂಧಿಕಾ • ಮಲ್ಲಿಕಾ • ಕೇವರಾ
• ಅಪರಾಜಿತಾ • ಗುಲಾಬಿ
ಅಗರಬತ್ತಿಗಳು
ಹಾಗೂ ಆಯ್ದ ಸುಗಂಧಗಳ ವಿಶೇಷ ಉಡುಗೊರೆಯ ಪ್ಯಾಕುಗಳು
"ತಮ್ಮನ್ನು ಸ್ವರ್ಗೀಯ ಪ್ರಶಾಂತಭಾವದಲ್ಲಿ
ವಿರಾಮಿಸುವ ಅವರ್ಣನೀಯ ಸುಗಂಧಲೋಕ"
ತಯಾರಕರು ಹಾಗೂ ರಫ್ತುದಾರರು :
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ
ಮೈಸೂರು 570 001 ದೂರವಾಣಿ : 220 09
Aparajita
AGARBATHI

ದಲೇ ಜಗತ್ತು. ಅದನ್ನು ನೋಡಿದ್ದರಿಂದಲೇ ಸಾವಿರ ಸುಖ, ಸಾವಿರ ದುಃಖ ಹುಟ್ಟಿಕೊಂಡಿತು. ಇರಬೇಕು ಈಜಬೇಕು, ಇದ್ದು ಜಯಿಸಬೇಕು–ಎಂಬ ಛಲವೂ ಜೀವಗಳಲ್ಲಿ ಕಾಣಿಸಿಕೊಂಡಿತು......"

ಈಗ ಯಾಕಿಷ್ಟು ಅಜ್ಜಿಯ ಮಾತು? ರಾಮಣ್ಣ, [illegible] ತಿಳಿದುಬಂತು. ಮುಂದೆ ಆ ನಾಗಿ ಏನಾದಳು, [illegible] ಗೊಂಡಿತು–ಎಂಬ ವಿಚಾರಗಳು ನನ್ನಲ್ಲಿ ಮೂಡಿದುವು. ಅಷ್ಟರಲ್ಲಿ ಯಾರದೋ ಬೀಸು ಹೆಜ್ಜೆಯ [illegible] ಬಂದ ಎಂದು ಕಾಣುತ್ತದೆ. ಮರೆತು ಹೋಗಿದ್ದ, ಈ ಎಲೆ ಅಡಿಕೆ ಚಂಚಿಯನ್ನು" ಎಂದರು.

ಹೌದು, ರಾಮಣ್ಣನೇ.

"ನಿಮ್ಮ ಕೈಯಲ್ಲಿ ಹೇಗೆ ಬಂತಜ್ಜಿ?" ಎಂದು ಕೇಳಿದೆ, ನಾನು.

"ನನ್ನ ಮಾಣಿ ಹಿಡಿದುಕೊಂಡು ಬಂದಿತಪ್ಪ, [illegible] ಯಣನೇ ಕಾಣಿಸಿತು."

ಅದೊಂದು ಹಳೆಯ ಲಡ್ಡು ಪೆಟ್ಟಿಗೆ. ರಾಮಣ್ಣನಿಗೆ ಅದನ್ನು ಕೊಟ್ಟು ಕಳಿಸಿದೆ.

"[illegible] ಮಗ್ಗುಲಲ್ಲಿಟ್ಟುಕೊಂಡು ಮ ಲ ಗಿ ಯಾ ನು" ಎಂದರು ಅಜ್ಜಿ.

"ಹೋ. ಅದನ್ನು ನೆನೆದು ನೀವು ಗಂಡು–ಹೆಣ್ಣಿನ ಮಾಯೆ ಅಂಥದು ಎಂದೆಲ್ಲ ನುಡಿದಿರಿ."

"ನಾನು ಹಾಗೆಲ್ಲಿ ಹೇಳಿದೆನ? ಹಾಗೆ ಕಾಣಿಸಿದ್ದು ಹೌದು, ಚಂಚಿಯನ್ನು ಕಂಡು."

"ಅಜ್ಜಿ, ದೇವರು ಯಾಕೆ ಹಾಗೆ ಹೆಣ್ಣು, ಗಂಡು ಅಂತ ಸೃಷ್ಟಿ ಮಾಡಬೇಕು? ಈ ಮಾಯೆಯಲ್ಲಿ ಜಗತ್ತನ್ನು ಯಾಕೆ ಮುಳುಗಿಸಬೇಕು—ಎಂಬ ವಿಚಾರ ಮಾತ್ರ ತಲೆ ಚಚ್ಚಿಕೊಂಡರೂ ನನಗೆ ತಿಳಿಯುವ ಹಾಗೆ ಇಲ್ಲ. ಅದರಿಂದಲೇ ಬಲ್ಲವರು– [illegible] ಅನ್ನುವುದು."

"ಅನ್ನುತ್ತಾರೆ, ಅನ್ನುತ್ತಾರೆ. ಅಂದು ನಾಲ [illegible] ತಿಟ್ಟೆ ತೀರಿಸಿಕೊಂಡದ್ದರಿಂದ ಯಾರೂ [illegible] ಮತರಾಗುವುದಿಲ್ಲ. ಅದೇ ಮಾಯೆಗೆ ರಾಮ, ಶಿವ, ಬ್ರಹ್ಮ–ಎಲ್ಲ ದೇವರನ್ನೂ ಸಿಕ್ಕಿಸಿ ಹಾಕಿದ್ದೇವೆ, ನಾವೇ! ಏನು ಮೋಕ್ಷ [illegible]! ಒಂದೊಂದು ಸಾರಿ ನಗು ಬರುತ್ತದೆ–ಮಗು, ಹೆಂಡತಿ–ಮಕ್ಕಳನ್ನು ಬಿಟ್ಟರು [illegible] ನನ್ನು ನಂಬಿ ಹಾಡಿದರು. [illegible] ಅವರು ತಮ್ಮ ಹೆಂಡಿರನ್ನು [illegible] ಕೆಡೆದು ಹೋದದ್ದೂ ನಿಜ. ಹಾಗೆ ಮಾಡಿ ಬೇಡಿದ್ದು ಯಾರನ್ನು? ತಂತಮ್ಮ ಹೆಂಡಿರೊಡನೆ ಸುಖವಾಗಿ ಇರುವ ವಿಷ್ಣುವನ್ನು, [illegible] ಅವರ ಹೆಂಡಂದಿರಿಂದ ಮುಕ್ತಿ ಸಿಗದೆ ಇರುವಾಗ, ಇವರಿಗೇನು ಕೊಟ್ಟಾರು? ಕನಸು, ಭ್ರಮೆ ಅನ್ನುತ್ತಾರಲ್ಲ, ಮಗು; ಅದು ಇದು. ತಾವೇ ಮೋಹಪಾಶ ಕಡಿದುಕೊಳ್ಳಲಾರದ ದೇವರು ಇವರ [illegible] ಎಂಬುದು."

ಅಜ್ಜಿಯ ಈ ವಿಚಾರಸರಣಿ ನನ್ನನ್ನು ತಬ್ಬಿಬ್ಬಾಗಿ ಮಾಡಿತು. "ಅಂದರೇನಜ್ಜಿ, ಈಗ ದೇವರು ಉಂಟು ಅಂತಲೆ, ಇಲ್ಲ ಅಂತಲೆ?"

"ನಂಬುವವರಿದ್ದರೆ ಮಾತ್ರವೇ ಅವನಿರುವುದು. [illegible] ನಂಬಿದವರೂ, ನಂಬದೆ ಇದ್ದವರೂ ಸ[illegible] ಮಾತ್ರ ತಪ್ಪದ್ದಿಲ್ಲ. [illegible] ಸತ್ತ ಮೇಲೆ ಹುಟ್ಟು ಇದೆ–ಎಂದು ನಂಬಿದರೆ ಸಾಲದೆ? ದೇವರು ಯಾಕೆ ಸೃಷ್ಟಿ ಮಾಡಿದ, ಎಂದು ಕೇಳುವುದರ ಬದಲು, ಅವನೇ ಹುಟ್ಟಿಸಿದ ಸೃಷ್ಟಿಯಿದು–ಎಂದು ಇದ್ದದ್ದನ್ನು ನಂಬಿದರೇ ನಾಗುತ್ತದೆ? ಇರುವ ನಾಲ್ಕು ದಿನ ಚಂದವಾಗಿ ಇರುವುದಪ್ಪ, ದೇವರ ಸೃಷ್ಟಿಯಂತೆ! ನನ್ನ ಅಪ್ಪ ನನ್ನನ್ನು ಕೇಳಿ ಹುಟ್ಟಿಸಿದನೇನು? ನಮ್ಮಪ್ಪನನ್ನು ದೇವರೂ ಕೇಳಿ ಹುಟ್ಟಿಸಿರಲಾರರು..."

ನನಗೆ ತಲೆ ಬಿಸಿಯಾಗುತ್ತ ಬಂದಿತು. ನಾನು ನಂಬಿ ಬಂದಿರುವ ಯಾವ ತರ್ಕಸರಣಿಯೂ ನನ್ನ ಅಜ್ಜಿಯಲ್ಲಿ ಕಾಣಿಸಲಿಲ್ಲ. ಅವರ ಈ ಎಲ್ಲ ಮಾತು ಕತೆ ಮರುಳತನವಾಗಿಯೂ ಕಾಣಿಸಲಿಲ್ಲ.

೨

ನನ್ನ ತಮ್ಮ ನಾರಾಯಣನಿಗೆ ಪ್ರಾಯ ಆಗಿದೆ. ಬೇಗನೇ ಮದುವೆಯಾಗುವ ಆಸೆ. ಒಂದು ಕನ್ಯೆ

ಯನ್ನು ನೋಡಿದ್ದ. ಊರಿಗೆ ಬಂದಾಗ ತನ್ನ ಭಾವೀ ಬೀಗ ಅನಂತರಾಯರನ್ನು ಕರೆದುಕೊಂಡು ಬಂದಿದ್ದ. ನಾನು ಶಿವಮೊಗ್ಗೆಗೆ ಹೋಗಿ ಅವನ ಭಾವೀ ಮಾವನ ಹತ್ತಿರ ಮಾತನಾಡಿ ಬಂದಿದ್ದೆ, ಮುಂದಿನ ಎಲ್ಲ ವಿಚಾರಗಳನ್ನು ಗೊತ್ತುಮಾಡಿಕೊಂಡು ಬರಬೇಕು ಎಂಬುದು ಅವನ ಅಪೇಕ್ಷೆ, ಆದರೆ ಒಂದು ಮದುವೆಗೆ ಏನೇನು ಬೇಕು–ಎಂಬ ವಿಚಾರ ನನಗೆ ಗೊತ್ತೇ ಇಲ್ಲ. ಮದುವೆ ನಿಶ್ಚಯ ಅಂದರೆ ಏನಪ್ಪ? ಅದರಲ್ಲಿ ತಕರಾರು ಬಂದರೆ ಗಂಡಿನ ಕಡೆಯವರಿಂದ ಬರಬೇಕು. ಚಿನ್ನ ಎಷ್ಟು, ದಾರಿ ಖರ್ಚಿಗೆ ಎಷ್ಟು, ಬಿಡಾರ ಎಲ್ಲಿ ಎಂತ ನಾವು ಹೇಳಬೇಕು. ನನಗೆ ಅಂಥ ಯಾವ ಆಡಂಬರವೂ ಇಲ್ಲ ಆದ್ದರಿಂದ "ಏ ಮಹಾರಾಯಾ, ನೀನೇ ಆ ಕೆಲಸ ಮಾಡಿಬಿಡು" ಎಂದೆ.

ನನ್ನ ಸೀತೆ ನಾರಾಯಣನ ಪಾರ್ಟಿಯನ್ನು ಸೇರಿಕೊಂಡು "ನೀವು ಮನೆಯ ಯಜಮಾನರಾಗಿರುವುದು ಯಾತಕ್ಕೆ?" ಎಂದಳು.

"ಅದನ್ನೂ ಅವನೇ ವಹಿಸಿಕೊಳ್ಳಲಿ" ಎಂದೆ ನಾನು.

"ಅಂದರೆ ನೀವು ಇನ್ನೊಂದು ಮದುವೆ ಮಾಡಿಕೊಳ್ಳುತ್ತೀರಿ ಅಂತಲೋ" ಎಂದಳು. ಆಗ ನನಗೆ ಕಾಣಿಸಿತು, ನನ್ನ ಸೀತೆ ಪಾತಾಳ ಸೂಜಿ, ಎಂದು.

"ಆಯಿತು ಮಹಾರಾಯಿತಿ. ನಿನ್ನ ಹುಕುಮು ಹೇಗೋ ಹಾಗೆ ನಡೆಯುತ್ತೇನೆ."

"ನೋಡಿ ನಾರಾಯಣನಿಗೆ ಆ ಮನೆಯಲ್ಲಿ ಸಣ್ಣವಳ ಮೇಲೆ ಖಾಯಿಸು. ಹಿರಿಯವಳು ಲಗ್ನವಾಗುವ ತನಕ ಅವನು ಕಾಯುವುದು ಬೇಡ. ಅವನಿಗೆ ಈ ವರ್ಷವೇ ಮದುವೆಯ ಯೋಗವಿದೆ."

"ಈ ವರ್ಷ ಅಂದರೆ? ಇದು ವೈಶಾಖ, ಮುಂದೆ ಮಳೆಗಾಲ. ಈ ತಿಂಗಳೇನೋ ವಾಸಿ. ತಿಂಗಳಿರುವುದು ಮೂವತ್ತು ದಿವಸವಷ್ಟೆ; ಅದರಲ್ಲಿ ಹತ್ತು ಹೊರಟುಹೋಯಿತು. ಚಿನ್ನಗಿನ್ನ ಮದುವೆ ತಯಾರಿ ಇದಕ್ಕೆಲ್ಲ ದಿನ ಬೇಡವೆ?!"

"ಮನಸ್ಸಿದ್ದರೆ ಮೂರು ದಿನದಲ್ಲಿ ಆಗುತ್ತದೆ, ಮದುವೆ."

"ಹಾಗಿದ್ದರೆ ನೀನು ಒಂದಿಷ್ಟು ಹೆಚ್ಚಿಗೆ ಮನಸ್ಸು ಮಾಡಿ ಒಂದೇ ದಿನದಲ್ಲಿ ಮುಗಿಸಿಬಿಡು! ಅವರು ಬರುವಾಗ ಹೆಣ್ಣನ್ನು ಕರೆದು ತಂದಿಲ್ಲ. ಕರೆದು ತರುತ್ತಿದ್ದರೆ ಸಾಯಂಕಾಲದೊಳಗೇ ದಿಬ್ಬಣ ಹೊರಟು ಹೋಗಿಯೂ ಆಗುತ್ತಿತ್ತು."

"ಮನಸ್ಸಿದ್ದರೆ ಅದೂ ಸಾಧ್ಯವೇ" ಎಂದಳು ಅವಳು. ಸೀತೆ ರಾಗವಾಗಿ ಎಲ್ಲವೂ ನಿಶ್ಚಯವಾಗಿಯೇ ಹೋದಂತೆ "ನಾವೂ ಒಂದಿಷ್ಟು ಚಿನ್ನ ಮಾಡಿಸ ಬೇಡವೆ? ಎಂದು ಮಾಡಿಸುವುದು?" ಎಂದು ಕೇಳಿದಳು.

"ಅದನ್ನೆಲ್ಲ ನಿಂತ ಮೆಟ್ಟಿಗೆ ಮಾಡಲು ಬರುವುದಿಲ್ಲ, ನಿನಗಾದರೆ ಒಂದೇ ದಿನದಲ್ಲಿ ಸಾಧ್ಯ."

"ಮದುವೆಗೆ ಒಂದು ದಿನ ಸಾಕು ಎಂದದ್ದು, ತಯಾರಿಗಲ್ಲ" ಎಂದು ನುಡಿದು ನಕ್ಕಳು. ನನ್ನ ಸೀತೆ ಕೊಂಕಿನಿಂದಾಗಲೀ, ಸಿಟ್ಟಿನಿಂದಾಗಲೀ ತನ್ನ ಇಚ್ಛೆಯನ್ನು ಸಾಧಿಸುವವಳು. ಮದುವೆಯಾಗಲು ನಾರಾಯಣನಿಗೆ ಎಷ್ಟು ಆತುರವಿದೆಯೋ ದಿಬ್ಬಣದ ಯಜಮಾನಿಯಾಗಿ ಮೆರೆಯುವದಕ್ಕೆ ಅವಳಿಗೂ ಅಷ್ಟೇ ಆತುರ.

ಕೊಲ್ಲೂರಿನ ಮೂಕಾಂಬಿಕೆಯ ಸನ್ನಿಧಾನದಲ್ಲಿ ಮದುವೆ ಚೆನ್ನಾಗಿಯೇ ನೆರವೇರಿತು. ಮದುವೆಯಲ್ಲಿ ಸೀತೆ ಒಂದಿಷ್ಟು ಹೆಚ್ಚಾಗಿಯೇ ಮೆರೆದಳು. ಸಂತೋಷಪಟ್ಟಳು. ನನಗಾದ ಒಂದು ಸಮಾಧಾನವೆಂದರೆ ಬಹಳ ದಿನಗಳಿಂದಲೂ ಊರು ಬಿಡದ ನಮ್ಮ ಅಜ್ಜಿ ಕೊಲ್ಲೂರಿಗೆ ಹೋಗಿ, ಆ ಮದುವೆಗೆ ಸಾಕ್ಷಿಯಾದುದು. ಮದುವೆ ಸಮಾರಂಭ ಮುಗಿದ ಮೇಲೆ, ಮಾಡಲು ಏನೂ ಕೆಲಸವಿಲ್ಲದಾಗ, ಅಜ್ಜಿಯೊಡನೆ ದೇವಸ್ಥಾನದ ಹೊರ ಚಾವಡಿಯಲ್ಲಿ ಕುಳಿತಿದ್ದಾಗ ಕೇಳಿದೆ.

"ಅಜ್ಜಿ, ಬೇರೆ ಎಲ್ಲಿಯೂ ಅಮ್ಮನವರಿಗೆ ಮೂಕಾಂಬಿಕೆ ಅಂತ ಹೆಸರಿದ್ದುದನ್ನು ಕಾಣೆ. ಏನು ಅವಳು ಮಾತನಾಡದ ಮೂಕಿಯೆಂತಲೋ!"


"ಇವಳು ಮೂಕಾಸುರನನ್ನು ಕೊಂದವಳು ಅಂತ ಇರಬೇಕು."

"ಹಾಗೋ, ಹಿಂದೆ ಈ ಕೊಲ್ಲೂರು ಕಾಡಿನಲ್ಲಿ ಮೂಕಾಸುರ ಎಂತ ಒಬ್ಬ ರಾಕ್ಷಸ ಇದ್ದ ಎಂದು ಲೆಕ್ಕವಲ್ಲವೇ ?"

"ಅಂತ ಲೆಕ್ಕ; ಮಹಿಷಾಸುರ ಇದ್ದ ಹಾಗೆಯೇ."

"ಹಾಗೆ ಇರಲಿಲ್ಲ ಅಂತೀರಾ? ದೇವರು ಅವತಾರ ಮಾಡಿದ್ದು, ದುಷ್ಟರನ್ನು ನಾಶ ಮಾಡಿದ್ದು ಸುಳ್ಳು ಅಂತಲೇ?"

"ಏನೋ ಅಪ್ಪ, ದುಷ್ಟರ ನಾಶಕ್ಕೆ ದೇವರು


ಸೂಪರ್ 777
ಕೊಳೆಗೆ ಆಪತ್ತು, ಬಿಳಿಪಿನ ತಾಕತ್ತು
SUPER 777
ಭಾರತದ ಲಕ್ಷಾಂತರ ಗೃಹಿಣಿಯರ ಮೆಚ್ಚಿನ
ಸೂಪರ್ 777 ಡಿಟರ್ಜೆಂಟ್ ಒಗೆಯುವ ಬಾರ್.
ಹಣ ಉಳಿಸಿರಿ, ಬಿಳುಪು ಹೆಚ್ಚಿಸಿರಿ
Shilpi dm 15A/78 kan

167 2 4

ಅವತಾರವನ್ನು ಎತ್ತಬೇಕೆ ? ಒಂದು ಮರ ದೊಡ್ಡದೇ? ಎಲೆಯೇ?"

"ಮರ."

"ಒಂದು ಎಲೆ ಉದುರಿಸಿಕೊಳ್ಳುವುದಕ್ಕೆ ಮರಕ್ಕೆ ಮರವೇ ಕುಣಿದಾಡುವುದನ್ನು ಕಂಡಿದ್ದೀಯಾ ? ಅಲ್ಲ, ಈ ಪಾಟಿ ಅವತಾರ ಯಾಕೆ ಅಂತೇನೆ ? ಅವನಿಗೆ ಕೆಲಸವಿಲ್ಲವೆಂತಲೇ? ದೇವರು ಎಷ್ಟು ಮಂದಿ? ಒಂದು ದೇವರು ಅವತಾರವನ್ನೆತ್ತುವುದೇ ಜಾಸ್ತಾಯಿತು. ಅವನು ಬಿಟ್ಟು ವಿಷ್ಣುವೇ ಅವತಾರ ಹೊರಡಿಸುವುದೇ. ಶಿವನೂ ಹೊರಡಿಸುವುದೇ. ದುರ್ಗೆಯೂ ಹೊರಡಿಸುವುದೇ. ಪುಣ್ಯಕ್ಕೆ ಬ್ರಹ್ಮನಿಂದ ಹೆಚ್ಚು ಗಲಾಟೆಯಿಲ್ಲ.

"ಮತ್ತೂ ನೋಡು ಅವನೇ ಹುಟ್ಟಿಸಿದಂಥ ಒಂದು ಹುಳವನ್ನು ಕೊಲ್ಲಲಿಕ್ಕೆ ಒಂದು ಅವತಾರ ಬೇಕೇ? ರಾವಣನನ್ನು ಕೊಲ್ಲುವುದಕ್ಕೆ ರಾಮನ ಅವತಾರ ಎಂದಿಟ್ಟುಕೋ. ದುಷ್ಟರ ಉಪದ್ರ ಶುರುವಾಯಿತು ಎಂದು ದೂರು ಬಂದದ್ದು ಯಾವಾಗ? ಇವನು ದಶರಥರಾಯನ ಹೊಟ್ಟೆಯಲ್ಲಿ ಹುಟ್ಟಿ ೧೬–೧೮ ವರ್ಷಗಳ ಕಾಲ ಬೆಳೆದು, ಮತ್ತೂ ಹದಿನಾಲ್ಕು ವರ್ಷಕಾಲ ವನವಾಸವಾಗಿ ರಾವಣನನ್ನು ಕೊಲ್ಲುತ್ತಾನೆ. ಅಂದರೆ ಮೂವತ್ತೆರಡು ವರ್ಷಗಳ ಕಾಲ. ಅಷ್ಟರ ಅನ್ಯಾಯ ಮಾಡಲಿಕ್ಕೆ ರಾವಣನಿಗೆ ಪುರುಸೊತ್ತು ಕೊಡಬೇಕೆ? ಅಲ್ಲಿಯವರೆಗೆ ಅವನನ್ನು ನಂಬಿದ ಭಕ್ತರ ಗತಿಯೇನು? ಅಲ್ಲದೆ ಮಗು, ಯಾರನ್ನೂ ನಾಶಮಾಡುವುದಕ್ಕೆ ಮನುಷ್ಯ ರೂಪವನ್ನೋ ಮತ್ತೊಂದನ್ನೋ ತಾಳಬೇಕು ಯಾಕೆ? ಒಂದು ಸಿಡಿಲೆರಗಿಸಿದರೆ ಬೇಕಾದ್ದನ್ನು ಸುಡಬಹುದು. ಅದಕ್ಕೊಂದು ನಾಟಕ ಬೇಕೆ?"

"ಹಾಗಿದ್ದರೆ. ಇಷ್ಟೆಲ್ಲ ದೇವರು. ಅವತಾರ ಎಲ್ಲವೂ ಸುಳ್ಳು ಅಂತೀರಾ ?"

"ಇದೆಲ್ಲ, ಅವನನ್ನು ಕಾಣುವ ನಾವು ಸಾವಿರ ಮಂದಿ. ಸಾವಿರ ಬುದ್ಧಿಯವರಾದುದರಿಂದ. ಅವನು ಒಬ್ಬನೇ. ಸಾವಿರ ಜನರ ಕಣ್ಣು ಕಂಡ ಮಾತ್ರಕ್ಕೆ ಒಂದು ಆಕಾರ ಸಾವಿರ ಆಗುತ್ತದೆಯೆ?"

ಅಜ್ಜಿಯ ವಾದಕ್ಕೆ ನಾನು ಬೆರಗಾದೆ. ಈ ಅಜ್ಜಿ ಹಳೆಯ ನಂಬಿಕೆಗಳಾವುವನ್ನೂ ಸುಲಭದಲ್ಲಿ ಹೊತ್ತು ಬಂದವರಲ್ಲ ಎನಿಸಿತು.

"ದೇವರು ಗಂಡೋ, ಹೆಣ್ಣೋ?" ಎಂದು ಕೇಳಿದೆ.

"ಗಂಡೂ ಅಲ್ಲ. ಹೆಣ್ಣೂ ಅಲ್ಲ. ನಾವು ಹಾಗೆಲ್ಲ ಎಣಿಸಿಕೊಂಡವರು. ಮಕ್ಕಳಿಗೆ ತಾಯಿಗಿಂತ ದೊಡ್ಡ ವಸ್ತುವಿಲ್ಲ ತಾನೇ. ಅಪ್ಪನಿಲ್ಲವಾದರೂ ನಡೆಯುತ್ತದೆ. ಅಮ್ಮ ಇಲ್ಲದಿದ್ದರೆ ? ಹಾಗಾಗಿ ದೇವರೇ ನಮ್ಮ ಅಮ್ಮ ಎಂದು ತಿಳಿದರೆ ತಪ್ಪೇನಿಲ್ಲ. ಕೆಲವರ ಪಾಲಿಗೆ ಆದೇ ಅಮ್ಮನೆಂಬವಳು ತಂಟೆ ಮಾಡಿದ ಮಕ್ಕಳನ್ನು ಹೊಡೆಯುವ ಅಮ್ಮನಂತೆ ಕಂಡಿರ

ಬೇಕು. ತಮಗೆ ಆಪತ್ತು ಬಂದಾಗ ಅದು ಅಮ್ಮನೇ ಕೊಟ್ಟ ಶಿಕ್ಷೆ ಎಂದು ನಂಬಿದರು. ಕಾಳಿ, ದುರ್ಗೆ ಅಂಥ ಅಮ್ಮಂದಿರಾದರು. ಶಿರ್ಶಿ ಮಾರಿಯಮ್ಮ ಅಂಥ ಇನ್ನೊಂದು ಅಮ್ಮ. ಆದರೆ ಈ ಊರಿನ ಅಮ್ಮ ಮೂಕಮ್ಮ ನಾವು ಇವಳನ್ನು ಹೊಗಳಿದರೂ ಅಷ್ಟೆ, ಬೈದರೂ ಅಷ್ಟೆ, ಇವಳಲ್ಲಿ ಬೇಡಿದರೂ ಫಲವಿಲ್ಲ; ಕಾಡಿದರೂ ಫಲವಿಲ್ಲ."

"ದೇವರಲ್ಲಿ ಏನನ್ನಾದರೂ ಬೇಡುವುದು ತಪ್ಪು ಎನ್ನುತ್ತೀರಾ?"

"ಸಣ್ಣವರಾದರೆ ಒಂದು ಲೆಕ್ಕ. ಬುದ್ಧಿ ಬಂದ ಮೇಲೆಯೂ ಸಣ್ಣ ಮಕ್ಕಳ ಹಾಗೆ 'ಅಮ್ಮ ತೊಡುವಾಗುತ್ತದೆ, ಬೆಲ್ಲ ಕೊಡು; ಚಾಟಿ ಮಾಡಿದೆ, ಪುಕಳಿ ತೊಳೆಸು' ಅಂದರೆ ಹ್ಯಾಗಾದೀತು? ಅವನೇ ನಮ್ಮನ್ನು ಹುಟ್ಟಿಸಿದ್ದಾನೆ ಬಂದ ಮೇಲೆ ಕೊಡುವಷ್ಟನ್ನು ಕೊಟ್ಟೆ ಹುಟ್ಟಿಸಿದ್ದಾನೆ ಎಂತ ತಿಳಿಯಬೇಕಪ್ಪ. ನಮ್ಮ ಹಾಗೆಯೇ ಸಾವಿರ, ಸಾವಿರ ಅಲ್ಲ, ಕೋಟಿ ಪ್ರಾಣಿಗಳಿದ್ದಾವೆ. ಅವು ಯಾವದಾದರೂ ಯಾರನ್ನಾದರೂ ಬೇಡುವುದನ್ನು ಕಂಡಿದ್ದೀಯಾ? ಹುಲಿ, ಎದುರಿಗೆ ಬಂದರೆ ಹುಲ್ಲೆ 'ಸಹಾಯ ಮಾಡು' ಎಂತಲೂ ಬೇಡುವುದಿಲ್ಲ. ಬುದ್ಧಿ ಬಂದ ಮನುಷ್ಯ ಅದಕ್ಕಿಂತಲೂ ಕಳಪೆಯಾದರೆ ಹೇಗೆ, ಮಾಣಿ ? ಸಂಕಟ ಬಂದಾಗಲೆಲ್ಲ ದೇವರ ಹತ್ತಿರ ಹೋಗಿ 'ಅದನ್ನು ಕೊಡು; ಇದನ್ನು ಕೊಡು' ಎಂದು ಬೇಡುತ್ತೇವೆ. ಸಮಾಧಾನ ಬಂದರೆ ಆಗ ಅವನು ಕೊಟ್ಟ ಎನ್ನುವುದು. ನಮ್ಮ ಭಕ್ತಿಗೆ ಪರಮಾತ್ಮ ಒಲಿದು ಬಿಟ್ಟ ಅನ್ನುವುದು ಸಮಾಧಾನ ಸಿಗದೇ ಹೋದರೆ ಅದು ಅವನ ಮನಸ್ಸಿಗೆ ಬರಲಿಲ್ಲ ಅವನು ಕೊಡಲಿಲ್ಲ' ಎನ್ನುವುದು. ನಮಗೆ ಕೊಟ್ಟಿದ್ದರ ಬಿಟ್ಟಿದ್ದರ ಮೇಲಿಂದ ಅವನನ್ನು ಅಳೆಯುವರು ನಾವು."

"ಇನ್ನೊಂದು ಸಂಗತಿಯಿದೆ, ಅಜ್ಜಿ ನಿಮಗೆ ಭಕ್ತರ ಕತೆಗಳು ಗೊತ್ತಿವೆಯಲ್ಲ. ಪುರಂದರದಾಸರಂಥವರು, ದೇವರನ್ನು ನೀವು ಹೇಳುವ ಹಾಗೆ 'ಹೊಟ್ಟೆಗೆ ಕೊಡು, ಬಟ್ಟೆಗೆ ಕೊಡು' ಎಂದು ಬೇಡಿದವರೇ ಅಲ್ಲ. ವೈರಾಗ್ಯ ಜೀವನ ಅವರದ್ದು. ಅವರು ಕೇಳಿದ್ದೇನು? 'ಏ ವಿಠ್ಠಲ, ನನ್ನನ್ನು ನಿನ್ನ ಹತ್ತಿರ ಕರೆದುಕೋ' ಎಂದಲ್ಲವೆ ?"

"ಕರೆದುಕೊಳ್ಳುವವ ಅವನಾದರೆ, ಹೊತ್ತು ಬಂದಾಗ ಅವನೇ ಕರೆಯುತ್ತಾನೆ. ಹಾಗೆ ಕರೆಯಲಿಲ್ಲ ಅಂತಲೇ ನಾನಿಲ್ಲಿ ಇರುವುದು."

"ಅಲ್ಲ ಅಜ್ಜಿ ಸಂಸಾರ ದುಃಖಮಯ –ಎಂಬ ಭಾವನೆ ಇದ್ದಿತಲ್ಲ. ಮನುಷ್ಯ ದೇಹವನ್ನು ನೆನೆದರೇನೆ ಅವರಿಗೆ ಜಿಗುಪ್ಸೆ ಬರುತ್ತಿತ್ತು. ಒಂಬತ್ತು ತೂತಿನ ದೇಹ ಅಂದಿದ್ದರು, ಅವರು." ಅಜ್ಜಿ ನಕ್ಕರು.

"ನಿನ್ನ ದಾಸರಿಗೆ ದೇಹದ ತೂತುಗಳನ್ನು ಕಂಡು ಬೇಸರ ಬಂದಿದ್ದಾದರೆ, 'ದೇವರೇ, ಇನ್ನೊಂದು ಜನ್ಮದಲ್ಲಿ ತೂತೆಲ್ಲ ಹೊಲಿದು, ಬರಿ ಒಂದು ಚೀಲದ ಹಾಗೆ ಮಾಡಿ ನನ್ನನ್ನು ಹುಟ್ಟಿಸು' ಎಂದು ಬೇಡಲಿ. ದೇವರ ಹತ್ತಿರ ಹೋಗಿ ಅಲ್ಲೇ ಇದ್ದು ಬಿಡುವ ಪಂಚಾತಿಕೆ ಮಾತ್ರ ನನಗೆ ಅರ್ಥವಾಗುವುದಿಲ್ಲ. ಮಗು ಸಹಜಕ್ಕೆ ಹೇಳುತ್ತೇನೆ. ಎಲ್ಲೆಲ್ಲಿಯೂ ಅವನು ಇದ್ದಾನೆ–ಎನ್ನುವ ಬಾಯಿಯಿಂದಲೇ, ಅವನದ್ದು ಒಂದು ಬೇರೆ ಬಿಡಾರವಿದೆಯೆಂದು ಹೇಳುವ ರೀತಿ–ಇದು."

"ಹಾಗಿದ್ದರೆ ನೀನು ಹೇಳುವುದೇನು ?"

"ನನ್ನ ಲೆಕ್ಕಾಚಾರ ಇದು. ಹುಟ್ಟಿದ್ದೇವೆ; ಬದುಕಿದ್ದೇವೆ, ಯಾಕೆ ಅಂತ ನಮಗೆ ಗೊತ್ತಿಲ್ಲ. ಇರುವಷ್ಟು ದಿವಸ ನಮಗೂ ಹಿತವಾಗಿ ನಾಲ್ಕು ಜನರಿಗೂ ಹಿತವಾಗಿಯೂ ಬಾಳುವುದು. ಪರರಿಗೆ ಸುಖ ಕೊಡಲು ಬಾರದೆ ಹೋದರೆ, ದುಃಖ ಕೊಡದೆ ಇರುವದಪ್ಪ."

ಅಲ್ಲಿಂದ ಮುಂದೆ ನನ್ನ ಮನಸ್ಸು; ಅನೇಕ ಆದಿ ಅಮ್ಮಗಳ ಕಲ್ಪನೆಗೆ ಜೋತುಕೊಂಡು ವಿಹರಿಸ ತೊಡಗಿತು. ಈ ಬಹುಧಾವದಂತಿ ಅಮ್ಮಗಳ ಒಂದೊಂದು ಕಲ್ಪನೆಗೂ ಕಾರಣವಾದ ಮನೋಧರ್ಮ ಯಾವ ತೆರನದು–ಎಂಬ ವಿಚಾರ ಮಾಡ ತೊಡಗಿದೆ. ಅಜ್ಜಿಯು ನನ್ನೀ ಯೋಚನೆಗಳ ಕೋಲಾಹಲವನ್ನು ಕೊನೆಗೊಳಿಸಲೆಂಬಂತೆ, "ಬೆಳಗಿನ ಜಾವಕ್ಕೆ ಗಾಡಿ ಕಟ್ಟಿಸಿ ಊರಿಗೆ ಮರಳಬೇಕಲ್ಲವೆ?" ಎಂದರು.

ನಾವು ಮೂಡೂರಿನ ಮನೆ ಸೇರಿದಾಗ ಇನ್ನೂ ಎರಡು ದಿನ ಮದುವೆಯ ಗದ್ದಲದಿಂದ ತುಂಬಿಕೊಂಡಿತ್ತು. ಜತೆಯಾಕ್ತ್ರ ಬೇಗನೂ ಬಂದಿದ್ದರು. ಸೀತೆಗೆ ಮಾತ್ರ ಮದುವೆಯ ಮಗಳ ವಿಷಯದಲ್ಲೇ ಅಸಮಾಧಾನ. ಅವಳೊಡನೆ ಸೀತೆ "ನೋಡು, ಒಂದು ನಾಲ್ಕು ದಿವಸ ಈ ಊರು ಬಿಡುವತನಕ ನಿನ್ನ ಗಂಡ

ನೋಡಿದ ಎಲ್ಲರ ಇಂದಿರಳೇ ಬದುಕಿ ಮಾತನಾಡ ಬೇಡ. ಈ ಶುದಿಯ ಬಗ 'ನಿನು ಅಜ್ಜಿಗೇನು ಬೇಕು' ಅಂದಾರು !!" ಎಂದಳಂತೆ. ಅವಳು ಅದಕ್ಕೆ "ಅದೆಲ್ಲ ನಮ್ಮ ಕಾಲಕ್ಕಾಯಿತು" ಎಂದಳಂತೆ. ಈ ಓದ ಬರಹ ಬಾರಿ ಪೆಟ್ಟನ್ನು ನಾರಾಯಣ ಮಾವನ ಯಾವುದು ಮಾಡಿರೀತನ ಎಂದೇ ಅವಳಿಗೆ ಕಂಡಿತು. ಅದಕ್ಕೆ ಕಾರಣವೂ ಇದೆ. ಹಿಂತೆ ಮಾವನೊಡನಾಗಿ ನಮ್ಮ ಮನೆಗೆ ಬಂದ ಒಂದು ವರ್ಷ ತನಕವೂ ತುಟಿಗಳ ಬದಿಯಲ್ಲಿ ಕಣ್ಣು ಹಾಕದೆಯೇ ಬಿಟ್ಟಿರುವಳಲ್ಲ. ನನ್ನ ಹಿತೆಯನ್ನು ನೋಡಿ-ಅವಳೊಡನೆ ಶ್ರೀ ರಾಮಾಯಣದ ಪೆಂಡಕ್ಕೆ ಆ ಹಿಂದು ಬಂದಿರೇ ಬರಿಸುತ್ತದೆ. ಈಗ ನಾನೇ ಅವಳಿಗೆ ಸಮಾಧಾನ ಹೇಳಿದೆ. ಬಿಟ್ಟ ಮುಗಿಯುತ್ತಲೇ ಅವಳು ಬಸ ಮಣಿಗೆ ಹೊರಟು ಹೋದಳು. ಅವರ ಮನೆಯಿನ ಯಾತಕ್ಕೋ ಅಜ್ಜಿಯ ಪ್ರಸ್ತಾಪ ಬಂತು. ನಾವಬ್ಬರೇ ಇದ್ದೆವು. ಹಿತೆ "ನಮ್ಮ ಅಜ್ಜಿಯ ಬಿಡುತ್ತಿಲ್ಲ" ಅಂದಳು.

"ಏನು ಬಂತಪ್ಪ?"

"ಹೀಗಾದ ಮಗ ಅಂತಹವನ್ನು ಮಾತನಾಡಿಸಲಿಕ್ಕೆ ಬಂದರೆ ಅವರ ಮಗುವಿನ ವಿಷಯದಲ್ಲಿ ಬಿಸಿಬಿಸಿಕೆ ಹೇಳಿದರು. 'ಪಾರಮಾರ್ಥದ ಕಡೆಗೆ ನನ್ನ ಬಂದ್ದ ಹೆಚ್ಚು. ಮಗುವೆ ಒಂದು ಬಂಧನ' ಎಂದು ಅದರಿಂದರೆ ಅಜ್ಜಿ "ಮಗುವೆ ಯೆಂತ ಯೆಂತ ಒಂದು ನಾಟಕದಾರಿ ಕೆಲವರು ಬಗೆಯುದೇಳಿಗೆ ಹೇಗೆ ಹೇಗೋ ಇದ್ದದ್ದನ್ನು ಕಂಡಿದ್ದೇನೆ. 'ಮಗುವೆ ಮನೆಯಲ್ಲಿ ನಿನ್ನ ಬಿಡಾಟ ಕಂಡ ನನಗೆ ಅಂಥ ಪಾರಮಾರ್ಥವೇನೂ ಕಾಣಿಸಲಿಲ್ಲ. ಹೆಣ್ಣುಗಂಡಿಗೆ ಬಂಧನ ಅದೇ ಪಾರಮಾರ್ಥಕ್ಕೆ ಕುಂದು-ಬಂದು ಹಿಡಿದು ಕಟ್ಟಿಕೊಂಡ ಆ ಹೊರೆಯಾಗಿ ಆಗಿಸಿದೆ. ಹೆಣ್ಣನ್ನು ಸೃಷ್ಟಿಸುತ್ತಲೇ ಇರಲಿಲ್ಲ. ಪುರಾಣಗಳಲ್ಲೇ ಪತ್ನಿಯರು ಗಂಡಿಗರು ಸಂಸಾರ ಕಟ್ಟಿಕೊಂಡು ಇದ್ದ ಕತೆ ಬರುತ್ತದೆ. ದೇವರನ್ನು ಪ್ರೀತಿ ಮಾಡುವುದಕ್ಕೆ ಸಂಸಾರ ಬಾಧಕವಲ್ಲ. ನೀನು ಬ್ರಹ್ಮಚರ್ಯದ ನಿರ್ಧಾರ ಮಾಡಬೇಕಾದುದು ಯಾವಾಗ. ಗೊತ್ತೆ? ಹೆಣ್ಣಿನ ರೂಪ ಹಗಲೂ ರಾತ್ರಿಯೂ ಕನಸಿನಲ್ಲಿ ಸುಳಿದಾಡುವುದು ನಿಂತಮೇಲೆ ಬಿನ' ಬಗ್ಗೆ ಮಾತನಾಡಿದರೆ ಹೇಗೆ?" "ಅಜ್ಜಿ ಒಂದೇ ಬಾಗಿ ಹೇಳುವವರಲ್ಲ" ಎಂದೆ ನಾನು. ಆಗ ಬಿಗಿಯಾದ ಅಜ್ಜಿಯ ಮಾ. ಕೇಳಿಸಿತು. "ಮಗೂ ನನ್ನ ಮಡಿಲಿಗಾಗಿ ನೀನು ಹಿತೆಯ ಪತ್ರಿದ ಬಗ್ಗೆ ಮಾತಾಡಿದ."

ಹೀಗಾದ ನಮ್ಮಲ್ಲಿಗೆ ಬಂದಿದ್ದ ಸಮಯದಲ್ಲಿ ಮಂಜುನಾಥ. ಅವನ ಹೆಂಡತಿ ಶ್ರೀದೇವಮ್ಮ ನನ್ನ ಮಗಳ ಬಿದ್ದ ಯಾವತ್ತೂ ಹೊರೆಯನ್ನು ಹೊತ್ತರು. ಅವರ ಸಹಾಯವಿಲ್ಲದಿದ್ದರೆ ನಾನಂತು ಕಂಗಾಲಾಗುತ್ತಿದ್ದೆ. ಹಿತೆ, ಎಲ್ಲವನ್ನೂ ಮಂಡಿಕಾಯಿಕೆ ನಡೆಕೊಟ್ಟಳು-ಎನ್ನುತ್ತಾಳೆ. ನಮ್ಮ ಮಂಜುನಾಥ ನನ್ನ ಕೇಳಿದರೆ. ತಾನು ನೀಡಿದ ಬಿಂದುಗಾಗಿದ ಕೊಡುವುದನ್ನೇ ನಡೆಸುತ್ತಿದ್ದರಂತೆ. ಬಿಂದುಗಳನ್ನ ನಮ್ಮಲ್ಲಿಂದ ಬರೆದು ಹೊಯ್ದು ಮಾಡದಿದ್ದರೂ ನಾನು ಅಲ್ಲಿಗೆ ವಿಶೇಷ ಹೋಗಿಯಿಲ್ಲ. ಮಂಜುನಾಥ, ಶ್ರೀದೇವಮ್ಮರ ಉಪಕಾರವನ್ನು ಸ್ಮರಿಸಲೆಂದು ಅವರ ಮನೆಗೆ ಹೊರಟು ನಿಂತಾಗ ಅಜ್ಜಿ ಹೇಳಿದರು. "ಮಗೂ. ನೀ ಹೋಗುವುದಾದರೆ. ನನ್ನ ಬಿಡಿಗಳ ಅಕ್ಕನನ್ನು ನೋಡಿಕೊಂಡು ಬಾ. ಅವಳಿಗೆ ಕಣ್ಣು ಕಾಣಿಸುವುದಿಲ್ಲ."

ಮಂಜುನಾಥನ ಮಗನನ್ನು ಕರೆದುಕೊಂಡು ಆ ಮನೆಗೆ ಹೋದೆ. ನನ್ನ ಅಜ್ಜಿಗಿಂತಲೂ ತುಸು ಹಿರಿಯವಳಾಗಿದ್ದ ಅವರ ದೇಹವು ಕುಗ್ಗಿ ಅರ್ಧಕ್ಕರ್ಧವಾಗಿದ್ದಳು. ಮೈಯು ಅಂಗಾಲಂಗಾಲವೂ ನಿಗಳೆ. ಅವರನ್ನು ಕಂಡು ನನಗೆ ತುಂಬ ಅವರ ಮುಟ್ಟಿಕೊಂಡಿತು.

"ಸುಬ್ಬಣ್ಣ. ನಿನ್ನನ್ನು ಸಣ್ಣದರಲ್ಲಿ ಕಂಡಿದ್ದೆನಪ್ಪ. ಕಣ್ಣು ಕಾಣುವ ತನಕವೂ ನಮ್ಮಲ್ಲಿಗೆ ಬರುತ್ತಿದ್ದಳ್ಳದೆ. ಈಗ ಮೂಲೆಯನ್ನು ಹಿಡಿದು ಇಷ್ಟೊಂದು ವರ್ಷವೇ ಕಳೆದಾಯಿತು. ನಿನ್ನ ಅಜ್ಜಿಯೂ ನನ್ನ ಹಾಗೇ ಆಗಿದೇಯೇ."

"ಇಲ್ಲ ಅವರ ಕಣ್ಣು ಸರಿಯಾಗಿದೆ."

"ಹೌದೆ? ಮೂಲೆ ಹಿಡಿದಿಲ್ಲವಲ್ಲ. ನಾನು ನೋಡದೆ ವರ್ಷ ಎಷ್ಟಾಯಿತೋ?"

"ಅಜ್ಜಿ. ನಿಮಗೆ ಅವರನ್ನು ಕಾಣುವ ಆಸೆಯಾಗಿದ್ದರೆ ನೋಡುವ. ನಮ್ಮ ಮಂಜುನಾಥ ಅವರನ್ನು ಕೋಟಿಳವ್ಮನವರ ಸಂತರ್ಪಣೆಗೆ ಕರೆಯಿಸುವ ಅಂತಿದ್ದಾನೆ."

"ಸುಬ್ಬಣ್ಣ. ಅದು ಒಂದು ಕೆಲಸ ಮಾಡು" ಎಂದರು-ಗಾಬರಿಯಿಂದ.

"ಏನಜ್ಜಿ ಗಾಬರಿ?"

“ಅವಳು ಈಗ ಹುಷಾರಾಗಿದ್ದಾಳೆ ಅನ್ನುತ್ತೀ, ಹಾಗೇ ಇರಲಿ. ಮೊದಲ ಸಾರಿ ಅವಳು ಈ ಗುಡಿಗೆ ಬಂದಾಗ ಮೈಮೇಲೆ ಬಂದಿತ್ತು. ಅದೇ ಮಂಜುನಾಥನ ಅಜ್ಜಯ್ಯ ದೊಡ್ಡ ಪೂಜೆ ಮಾಡಿಸಿದ್ದರು. ನೂರಾರು ಜನ ಇದ್ದರು. ದೇವರಿಗೆ ಮಂಗಳಾರತಿ ತೊಡಗುತ್ತಲೇ ಹೆಮ್ಮಕ್ಕಳ ಎಡೆಯಲ್ಲಿ ಕುಳಿತಿದ್ದ ಆಕೆ ಕಿರುಚಿ ಅರ್ಭಟಿಸಿದಳು. ನಾನಿದ್ದೆ. ಆ ದಿವಸ ಕಂಗಾಲಾದೆ. ನನ್ನ ನಾಚಿಕೆ ಹೇಳತೀರದು. ಆ ಪ್ರಾಯದಲ್ಲಿ ಮೈಯ ಅರಿವೆಯನ್ನೇ ಕಿತ್ತೆಸೆದು ಉಡು ನೂಲಲ್ಲಿ ತಲೆ ಕೆದರಿ ನಿಂತದ್ದು! ಆಗ ನಿನ್ನ ಅಜ್ಜನೂ ಮತ್ತ್ಯಾರೋ ಸೇರಿ ಅವಳನ್ನು ಹಿಡಿದುಕೊಂಡು, ತಲೆಯ ಮೇಲೆ ತಣ್ಣೀರು ಸುರಿದು ಆಚೆಯ ಹಾಡಿಗೆ ಕರೆದೊಯ್ದರು. ಆಗ ಅವಳ ಮೈಗೆ ಬಂದಿದ್ದ ತ್ರಾಣವೆಂದರೆ ಹುಲಿಗೆ ಸಮ. ಅಂಥ ಸ್ಥಿತಿಯಲ್ಲೇ ಅವಳ ಕೈಕಾಲನ್ನು ಕಟ್ಟಿ, ಒಂದು ಕೋಣೆಯಲ್ಲಿ ಹಾಕಿದರು. ಅವಳು ಕೂಗುತ್ತಲೇ ಇದ್ದಳು: ‘ಓಹೋ ನನ್ನ ಈ ರೂಪ ಬೇಡವೇ ನಿಮಗೆ?’ ಅಂತ ಆ ಮೇಲೆ ಯಾರ್‍ಯಾರ ಒಡನಾಟವೂ ಬೇಡವೆಂಬಂತೆ ಮೂಲೆ ಹಿಡಿದುಬಿಟ್ಟಳು. ಈಗ ಬಯಿನಾಗಿದ್ದಾಳಲ್ಲ. ಸಾಕು ನನ್ನ ಮೂಕಿಗೆ ಹೇಳು. ತಿಪ್ಪಜ್ಜಿ ಚೆನ್ನಾಗಿದ್ದಾಳೆ. ಕೇಳಿದೆ ಅವಳನ್ನು—ಎನ್ನು” ಎಂದರು.

ಹಿಂಡುಗಾನ ಅಮ್ಮನವರ ಉತ್ಸವವನ್ನು ಮಂಜುನಾಥ ಬಹಳ ವೈಭವದಿಂದಲೇ ನಡೆಸಿದ. ತಿಪ್ಪಜ್ಜಿಯಿಂದ ಹಳೆಯ ಪ್ರಕರಣವನ್ನು ಕೇಳಿದಂಥ ನನಗೆ ನಮ್ಮ ಅಜ್ಜಿಯನ್ನು ಕರೆದೊಯ್ಯುವ ಇಷ್ಟವಿಲ್ಲದಿದ್ದರೂ ಅವರು ಹೊರಟು ಬಂದೇಬಿಟ್ಟರು. ಮಧ್ಯಾಹ್ನ ಸಮಾರಾಧನೆಯ ಕೆಲಸ ಮುಗಿದೊಡನೆ “ಮಾಣಿ ನನ್ನನ್ನು ತಿಪ್ಪಕ್ಕನ ಮನೆಗೆ ಕರೆದುಕೊಂಡು ಹೋಗು” ಎಂದು ಆಜ್ಞೆ ಮಾಡಿದರು.

ಅವರ ಅಂಗಳಕ್ಕೆ ಹೋದಾಗ ತಿಪ್ಪಜ್ಜಿ ಚಾವಡಿಯಲ್ಲಿ ಜಪಸರ ಹಿಡಿದು ಕುಳಿತಿದ್ದು ಕಾಣಿಸಿತು. ನನ್ನ ಅಜ್ಜಿ. “ತಿಪ್ಪಕ್ಕ, ಇಂದೀಗ ನಿನ್ನನ್ನು ಕಾಣುವ ಯೋಗ ಬಂದಿತು. ನನಗೆ” ಎಂದು ಹೇಳುತ್ತ, ಅವರನ್ನು ಸಮೀಪಿಸಿ ಕುಳಿತರು. ಅವರ ಬೆನ್ನನ್ನು ಮೆಲ್ಲಗೆ ಸವರಿದರು. ಗಲ್ಲವನ್ನು ಎತ್ತಿ ಅವರ ಕಣ್ಣುಗಳನ್ನು ಇಣಿಕಿ ನೋಡಿದರು. ತಮ್ಮ ಹಸ್ತಗಳಿಂದ ಅವರ ಮುದುಡಿದ ಕೈಗಳನ್ನು ಹಿಡಿದುಕೊಂಡರು. ಆಕೆ ಕಣ್ಣೀರನ್ನು ಸುರಿಸುತ್ತ “ಮೂಕಿ, ನೀನು ಇಲ್ಲಿಗೆ ಬಾರದೆಯೇ, ನಾನು ನಿನ್ನ ಹತ್ತಿರ ಬರುವುದಕ್ಕುಂಟೇ?” ಎಂದರು.

“ತಿಪ್ಪಕ್ಕ, ಬರಬಹುದಿತ್ತು ಈ ಮೊದಲೂ, ಒಂದು ಸಾರಿ ನನಗೆ ಇಲ್ಲಿಗೆ ಬಂದು ಅನುಭವಿಸಿ ಸಾಕಾಗಿತ್ತು. ಆ ಅಮ್ಮನವರ ಮುಖವನ್ನೇ ನೋಡುವುದಿಲ್ಲ ಎಂದುಕೊಂಡಿದ್ದೆ. ನನ್ನನ್ನು ಮರುಳು ಮಾಡಿ ಆ ದಿನ ಕರೆಸಿಕೊಂಡದ್ದು ಅವಳೇ ಅಲ್ಲವೆ. ‘ನನಗೂ ಅರಿವೆಯಿಲ್ಲ, ನಿನಗೂ ಬೇಡ. ನೀನು ನನ್ನ ಮಗು’ ಎಂದು ಹೇಳಿದಳು. ಅವಳ ಮಾತನ್ನು ನಂಬಿ ‘ನಿನ್ನ ಹಾಗೆಯೇ ನಾನು’ ಎಂದು ಕುಣಿದಾಡಿದೆ. ನನ್ನ ಒಬ್ಬಳ ಮರುಳಿಗೆ ಊರಿನ ನೂರು ಮರುಳುಗಳು ಸೇರಿ, ಸಾವಿರ ಬಗೆಯಿಂದ ಕಾಡಿದರು. ಹೊಡೆದು, ಬಡಿದು ನನ್ನ ಜೀವ ತಿಂದರು. ನನಗೆ ಯಾವುದೂ ಮರೆತುಹೋಗಿಲ್ಲ. ಅದಕ್ಕೇನೆ ಅಮ್ಮನವರ ಹತ್ತಿರ ಹೋಗಿ ‘ನಿನ್ನ ಆಟವೇ! ದಿನಕ್ಕೆ ನಿನ್ನದು ಒಂದೊಂದು ವೇಷವೇ’ ಎಂದಂದೂ ಬಂದೆ. ಅದರಲ್ಲಿಯೂ ತಿಪ್ಪಕ್ಕ, ಈ ಹಿಂಡುಗಾನ ಅಮ್ಮ ಮಾಯಾವಿ ಅಂದರೆ ಮಾಯಾವಿ. ಲೋಕವನ್ನು ಹುಟ್ಟಿಸಿದಳು. ಅವಳೇ ಮಕ್ಕಳಿಂದ ಕಪ್ಪಕಾಣಿಕೆ ಕೇಳಿದಳು. ರಕ್ತ ಬಲಿ ಬೇಡಿದಳು. ಅವಳನ್ನು ಭಕ್ತರೂ ನಂಬಿದರು; ಕಳ್ಳಕಾಕರೂ ನಂಬಿದರು. ಮಂತ್ರವಾದಿಗಳೂ ನಂಬಿದರು. ಹೆಣ್ಣೇ ಸರ್ವಸ್ವ. ಹೆಣ್ಣಿದ್ದರೇ ಗಂಡು ಎಂತ ಮಾಯೆಯನ್ನು ಹೂಡಿದಳು, ಭಗವತಿ ಆದಳು. ಭಗವೇ ತಾನು ಎಂದಳು. ನಾನಿದ್ದರೆ ಪುರುಷ; ಇಲ್ಲವಾದರೆ ಏನುಂಟು? ಎಂದಳು: ದೇವರ ಗುಡಿಯ ಎದುರು ನಿಂತ ಕ್ಷಣದಲ್ಲಿ ಅವಳ ಈ ಸಾವಿರ ಆಟವೂ ಕಾಣಿಸಿತು ನನಗೆ.”

ನನ್ನ ಅಜ್ಜಿ ತುಂಬ ಭಾವತಲ್ಲೀನರಾಗಿ ನುಡಿಯುತ್ತಿದ್ದರು. ತುಟಿ ಬಿಗಿ ಹಿಡಿದು ಆಲಿಸುತ್ತಿದ್ದ ತಿಪ್ಪಕ್ಕ ಚೇತನ ಬಂದವರಂತೆ, “ನೀನೊಬ್ಬಳು ಪುಣ್ಯಾತ್ಗಿತ್ತಿ ಅಮ್ಮ ನಿನ್ನನ್ನು ಒಲಿದಿದ್ದಾಳೆ. ಆದರೆ ಮೂಕಿ, ನನ್ನಂಥವಳು ಇದ್ದು ಏನು ಆಗಬೇಕಿನ್ನು? ಅವನೂ ಕೊಂಡು ಹೋಗುವುದಿಲ್ಲ.”

“ಅಯ್ಯೋ ತಿಪ್ಪಕ್ಕ. ಅದೆಂಥ ಯೋಚನೆ? ಅವನು ಸಾಗಿಸುವ ಕತೆ! ಇರುತ್ತೀಯಾ ಇನ್ನೊಂದು ಅಷ್ಟು ದಿವಸ. ನಿನ್ನ ಈ ಅಂಗಿ ಇನ್ನೂ ನಾಲ್ಕು

ವರ್ಷಕ್ಕೆ ಸಾಕು."

"ಇನ್ನೂ ನಾಲ್ಕು ವರ್ಷ ಇರಬೇಕು ಅನ್ನುತ್ತೀಯಾ?"

"ಅಂದರೆ ಒಂದು ಮಾತಿಗೆ. ಇರುವ ಜೀವ ಇದ್ದರೇನು, ಬಿದ್ದರೇನು? ಅದಕ್ಕೆ ನಾಶವಿಲ್ಲ ಅನ್ನುತ್ತಾರೆ. ಯಾವತ್ತು ಲೋಕವೇ ಕರಗುವಾಗ ಅದೂ ಕರಗುತ್ತದೆಯೋ ಏನೋ. ಆಗ ಅದು ನೂ ಇಲ್ಲ. ಅದೇ ಇರುವ ತನಕ ನಾವು: ನಾವಿರುವ ತನಕ ಅದು. ಎರಡೂ ಇರುವ ತನಕ ಲೋಕ."

"ಅಷ್ಟೇ ಅಂತೀಯಾ?"

"ಅಷ್ಟಲ್ಲದೆ ಮತ್ತೇನು? ಜೀವಿಗಳು ಕುಣಿಯಾಡಲಿ—ಅಂತ ಈ ಸೃಷ್ಟಿ. ಕುಣಿದಾಟ ಮುಗಿದ ಮೇಲೆ. ಅದಿಲ್ಲ ಯಾತಕ್ಕೆ ಹೇಳು."

ತಿಪ್ಪಕ್ಕನನ್ನು, ಅನಂತರ ಮಂಜುನಾಥನನ್ನು ಬೀಳ್ಕೊಂಡು ಊರ ಮನೆಯ ಕಡೆಗೆ ಹೊರಟಾಗ ಕತ್ತಲಾಗತೊಡಗಿತ್ತು. ಸೀರೆ ಸೆಕ್ಕವನ್ನು ಕಟ್ಟಿಕೊಂಡು ಮುಂದಕ್ಕೆ ಹೋಗಿಯೇ ಬಿಟ್ಟಳು. ಮನೆಗಿರುವ ದೂರ ಸ್ವಲ್ಪವಾದರೂ ಅದು ಅಗಲ ಕಿರಿದಾದ ದಾರಿ; ಅಂಕುಡೊಂಕಾದ ಬೇರೆ. ಅರ್ಧ ದಾರಿಯ ಬಳಿಕ ಕವಲೊಡೆಯುವಲ್ಲಿ ನಾವು ಬಲಗಡೆಗೆ ತಿರುಗಬೇಕು. ಅದನ್ನು ಮರೆತು ಎಡಕ್ಕೆ ತಿರುಗಿದೆವು. ದಾರಿ ತಪ್ಪಿದ್ದು ಇಬ್ಬರ ಗಮನಕ್ಕೂ ಬಂದಿರಲಿಲ್ಲ. ಆದರೆ ಸ್ವಲ್ಪ ಮುಂದಕ್ಕೆ ಹೋಗುತ್ತಲೇ ಅವರು ಥಕ್ಕನೆ ನಿಂತುಕೊಂಡರು— ಹೊಸ್ತ ಹಾಸೆಕಲ್ಲಿನ ಮಗ್ಗುಲಿಗೆ "ಮಗು, ಸಾವಾಗಿ ಕೇಳಿಸುತ್ತದೆ. ಬ್ರಾಹ್ಮಣರ ಧ್ವನಿ—ಓಂ ಇಂದ್ರಾ ಇದಂ ನ ಮಮ: ಓಂ ವರುಣಾ ಇದನ್ನಮಃ ಓಂ ಮಿತ್ರಾ ಇದನ್ನಮ ..."

"ಎಲ್ಲಿ ಅಜ್ಜಿ? ಈ ಕಾಡಿನಲ್ಲಿ ಯಾತಕ್ಕೆ ಮಂತ್ರ ಹೇಳುತ್ತಾರೆ?"

"ಓ. ಅಲ್ಲಿ ನೋಡು. ಯಾರೋ ಯಜ್ಞವನ್ನು ಮಾಡುತ್ತಿದ್ದಾರೆ. ಮೂರು ನಾಲ್ಕು ಮಂದಿ ಗಡ್ಡದ ಬ್ರಾಹ್ಮಣರು ಕಾಣಿಸುತ್ತಾರೆ. ಮಂತ್ರವನ್ನು ಹೇಳುತ್ತಿದ್ದಾರೆ. ತುಪ್ಪ. ಸಮಿತ್ತು ಎರೆಯುತ್ತಿದ್ದಾರೆ. ಅಯ್ಯೋ ನಮ್ಮ ಹಾವೇ. ಯಾರು ಈ ಕಾಲದಲ್ಲಿ ನಮ್ಮನ್ನು ಪೂಜಿಸುವವರು? ಮೊದಲಿಂ ನಾಲ್ಕು ದಿನ ಬ್ರಾಹ್ಮಣರು ಮರೆಯುವದರು ನಮ್ಮನ್ನು. ನಮ್ಮಿಂದ ಅವರು ಬದುಕಿಕೊಂಡರು. ಆಗ ಬಿಲ್ಲದಕ್ಕೂ ಇಂದ್ರನೇ, ವರುಣನೇ ಬಿಲ್ಲದಕ್ಕೂ ಮಿತ್ರನೇ. ಅಗ್ನಿಕುಂಡದಲ್ಲಿ ತುಪ್ಪ ಸುರಿದದ್ದೇ ಸುರಿದದ್ದು. ಆಯಿತು. ಅದೊಂದು ಕಾಲ. ಈಗ ನಮ್ಮನ್ನು ಯಾರು ಕೇಳುತ್ತಾರೆ. ಅಗ್ನಿ. ನೀನಾದರೆ ಹೊತ್ತಿಯಿಲ್ಲ. ಇಂದ್ರ ಹೋದ ಮೇಲೆಯೂ ನೀನು ಉಳಿದು ಕೊಂಡೆ. ನಿನ್ನ ಇಂದ್ರನ ಹಾಗೆಯೇ ನನ್ನ ಅಪ್ಪನ ಗತಿಯಾಗಲಿಲ್ಲ. ಅವಳು ಜೀವಗಳನ್ನು ಹಡೆದವಳು, ಕಾಯುವವಳು. ಬಿಟ್ಟರೆ ಅವಳೇ ಬಿಡುವವಳು. ಅವಳಿಗೆ ಯಾವತ್ತೂ ಕಾಲಕ್ಕೂ ಮುಪ್ಪಾಗದೆ ಉಂಟು. ಅವಳಿಂದ ಅದು ಬದುಕುವವುಗೂ ಉಂಟು."

"ಅವನಿಗೆ ಅಂದರೆ ಯಾರಿಗೆ. ಅಜ್ಜಿ?"

"ಅವನಿಗೆ ಅಂದರೆ. ಅವನಿಗೆ. ಹೆಣ್ಣು ಬಾಯಿಂದ ಹೇಳುವ ಮಾತಲ್ಲ. ಅನ್ನುತ್ತಾರೆ. ಹೇಳಬೇಕೇನು? ಲಿಂಗಕ್ಕೆ! ಅವರಿಬ್ಬರೂ ಕೂಡಿಯೇ ಸೃಷ್ಟಿ. ಯಾರೇ ಅವರೆಡನ್ನು ಬಿಟ್ಟರೆ ಬದುಕಲುಂಟೆ? ಅದನ್ನು ಗೊತ್ತಿದ್ದರೂ ನಮಗೆ ಸತ್ಯವನ್ನು ಕಂಡರೆ ನಾಚಿಕೆ.

"ಅಲ್ಲದಿದ್ದರೂ ಮಗು. ಈ ನರಮನುಷ್ಯರ ಬುದ್ಧಿ ಚಪಲ. ಇಂದಿದ್ದುದು ನಾಳೆಗೆ ಬದಲುತ್ತದೆ. ಅಲ್ಲದೆ ಹೋದರೆ—ಇಂದ್ರ. ವರುಣ. ಅಗ್ನಿ ದ್ವಾ ಲಕರು ಮತ್ತೊಂದು—ಬಂದವರು ಅವರೆಲ್ಲರನ್ನೂ ಮರೆತುಬಿಟ್ಟು ಬೇರೆ ಹೊಸ ದೇವರುಗಳನ್ನು ಪೂಜಿಸುವುದುಂಟೆ? ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಊರಿನ ಜನ ಅಷ್ಟೇ ದೇವರನ್ನೂ. ಹೆಸರನ್ನೂ ಮಾಡಿಕೊಂಡಿರಬೇಕು."

"ಅದರೂ ಬುದ್ಧಿಗೆ ಹೋಗುವುದಿಲ್ಲವೆ. ಅಜ್ಜಿ?"

"ಅಂಥ ಜ್ಞಾನವಿರುತ್ತಿದ್ದರೆ—ಇಂದ್ರ. ವರುಣ, ಅಗ್ನಿ. ಮಿತ್ರ ಅಂತ ನಾಲ್ಕು ನಾಲ್ಕು ಪ್ರತ್ಯೇಕ ಹೆಸರುಗಳನ್ನು ಹೇಳಿ. ಅವರಿಗೆ ನಾಲ್ಕು ನಾಲ್ಕು ಸಾರಿ ಹವಿಸ್ಸನ್ನು ಕೊಡುತ್ತಾರೆಯೇ? ದೇವರು—ಅವನೊಬ್ಬನೇ. ಅವನೋ ಬೇರಾಗಿ ಎರಡು ಹೆಸರಾಗಿ ಬಿಟ್ಟಿತು. ಎಲ್ಲಾ ಅಜ್ಞಾನದ ಆಟ! ಅಲ್ಲದೇ ಹೋದರೆ. ಮಗು. ಅಪ್ಪನ ಗುಡಿಯ ಮುಂದೆ ಅವಳಿಗೆ ಮುಟ್ಟಿನ ಹುಡಿ, ಕೋಣ ಕಡಿಯುತ್ತಾರೆಯೇ, ಅದು ಅಪ್ಪನಿಗೆ ಪ್ರೀತಿ—ಅಂತ. ಅಜ್ಞಾನದ ಜೊತೆಗೆ ಅನ್ಯಾಯವೂ ನಡೆಯುತ್ತದೆ."

ಅಜ್ಜಿಯ ಬುದ್ಧಿ ಹಾದರಸದಂತೆ ಯಾವ ರೀತಿ



A. K. Publis ity

ನಿಂದ ಯಾವ ದಿಕ್ಕಿಗೂ ಹರಿದೀತು. ಅವರ ಮಾತಿನಲ್ಲಿ ನನಗೆ ಅಸಂಗತವೇನೂ ಕಾಣದೇ ಹೋದರೂ ಮಾತಿನ ಬಿಡು ತುಣುಕುಗಳನ್ನು ಒಂದು ಪೂರ್ಣ ಚಿತ್ರವಾಗಿ ಎಣಿಸಿಕೊಳ್ಳುವ ತಾಕತ್ತು ನನ್ನಲ್ಲಿರಲಿಲ್ಲ.

ಮರುದಿನ ಸಂಜೆ ಹಗಲಿನಲ್ಲಿ, ಅಜ್ಜಿಗೆ 'ಇಂದ್ರಾಯ ಸ್ವಾಹಾ ಕೇಳಿ ಬಂದ ತಾಣವನ್ನು ಅರಸಿಕೊಂಡು ಹೊರಟೆ. ನೂರು ಮಾರು ಸರಿಯುತ್ತಲೇ ವಿಶಾಲವಾದ ಆ ಹಾಸೆ ಜೊತೆಗೆ ಒಂದು ಕಲ್ಲು ಮರಿಗೆಯೂ ಕಾಣಿಸಿತು. ಅದರ ಮಗ್ಗುಲಲ್ಲೇ ಒಂದು ಕಂಬ. ಅದರ ಆ ಕಲ್ಲು ಮರಿಗೆ ಏತಕ್ಕಿದ್ದೀತು? ಉತ್ತರ ಸ್ಪಷ್ಟವಾಗಿತ್ತು—ಬಾಯಾರಿದ ದನಗಳಿಗಾಗಿ. ನೀರು ತುಂಬಿಸಲೆಂದು. ಅಂದ ಮೇಲೆ ಸಮೀಪದಲ್ಲಿ ಒಂದು ಬಾವಿಯೂ ಇದ್ದಿರಬೇಕೆಂಬ ವಿಚಾರ ಹುಟ್ಟಿ ಅಲ್ಲೆಲ್ಲ ಸುತ್ತಾಡತೊಡಗಿದೆ. ಅಜ್ಜಿಗೆ 'ಇಂದ್ರಾಯ ಸ್ವಾಹಾ' ಮಂತ್ರ ಕೇಳಿಸಬೇಕಾದರೆ ಪೂರ್ವಕಾಲದಲ್ಲಿ ಇಲ್ಲೇನಾದರೂ ಆಶ್ರಮವು ಇದ್ದಿತ್ತೆ? ಇದ್ದರೆ ಅವರ ವಸತಿಯ ಮುಂದೆ ಯಜ್ಞಕುಂಡವೂ ಇದ್ದೀತು. ಇದ್ದರೂ ಈಗ ಅದು ಇನ್ನೂ ಉಳಿದುಕೊಂಡಿರಲು ಸಾಧ್ಯವೇ—ಎಂದು ತೋಚುತ್ತಲೇ ನಕ್ಕೆ. ಅಜ್ಜಿಗೆ ಅಂಥ ಪುರಾತನ ಕಾಲದ ಸಂವೇದನೆಯುಂಟಾಗಿ ಅವರು ಗೊಣಗಿದರು. ನಾನು ನಮ್ಮ ಅಜ್ಜಿ ಅಲ್ಲವಲ್ಲ.

ಅಷ್ಟು ಹೊತ್ತಿಗೆ ಅದೇ ದಾರಿಯಾಗಿ ಇಬ್ಬರು ಹುಡುಗರು ಏನನ್ನೋ ಹೊತ್ತುಕೊಂಡು ಆ ಕಡೆಗೇ ಬಂದರು. ಅವರ ಹಿಂದೆ ಒಬ್ಬ ಹೆಂಗಸು ಮತ್ತೊಂದು ಹೊರೆ ಹೊತ್ತುಕೊಂಡು ಬರುವುದೂ ಕಾಣಿಸಿತು. ದಣಿದು ಬಂದ ಅವರು ಹೊರೆಗಳನ್ನಿಳಿಸಿ ಸುರಿಯುತ್ತಿದ್ದ ಬೆವರನ್ನು ಉಜ್ಜಿಕೊಂಡರು. ನಾನಾಗಿಯೇ ಅವರನ್ನು ಸಮೀಪಿಸಿದಾಗ 'ಇವಳನ್ನು ಎಂದೋ ಒಂದು ದಿನ ಕಂಡಿದ್ದೇನಲ್ಲ' ಎನಿಸಿತು, ನನಗೆ. "ಮೂಕಮ್ಮನವರು ಅಂತ ಒಬ್ಬರಿದ್ದಾರಲ್ಲ, ಅವರ ಮನೆ ಯಾವುದು ಒಡೆಯ" ಎಂದು ಅವಳು ಕೇಳಿದಳು. "ಅದು ನಮ್ಮ ಮನೆಯೇ ಬನ್ನಿ" ಎಂದು ಅವರನ್ನು ಕರೆತಂದೆ. ನಮ್ಮ ಮನೆಯ ಮುಂದಿನ ಅಶ್ವತ್ಥದ ಕಟ್ಟೆಯನ್ನು ಕಂಡಾಗ ಆಕೆಗೆ ಒಂದು ಛತ್ರವೇ ಸಿಕ್ಕಷ್ಟು ಸಂತೋಷವಾಯಿತು. ಬೆಲ್ಲ, ನೀರು ತಂದುಕೊಟ್ಟೆ. "ಈಗ ಅಡುಗೆಯಾಗುತ್ತದೆ ಉಂಡು ಹೋಗಿ" ಎಂದೆ. "ಬೇಡ, ಒಡೆಯಾ." ಎಂದು ಹೊರಡಲು ಚಡಪಡಿಸಿದಳು. ನಮ್ಮ ಚಾವಡಿಯಲ್ಲಿ ಲಾಟೀನು ಉರಿಯುತ್ತಿತ್ತು. ಅದರ ಬೆಳಕಿನಲ್ಲಿ ಆಕೆಯ ಮುಖವೂ ಸೊಂಪಾಗಿ ಕಾಣುತ್ತಿತ್ತು. ಸುಮಾರು ಹದಿನೈದು ವರ್ಷಗಳ ಹಿಂದೆಯೇ ಜಾತ್ರೆಯಲ್ಲಿ ಕಂಡಂಥ ನಾಗಿಯ ನೆನಪು ತಿರುಗಿ ಹೊಳೆಯಿತು. ಆಗ ಅವಳಿಗೆ ಇನ್ನೂ ಹೆಚ್ಚಿನ ಚೆಲುವಿತ್ತು. ಆದರೂ ಕಟ್ಟುಮಸ್ತಾದ ಜೀವ. ಕಂಗಾಲು ಜೀವಿಯಲ್ಲ. ಅವಳ ಮಕ್ಕಳಲ್ಲಿ ಈಗ ಯೌವನ ತುಂಬಿ ಕಾಣುತ್ತಿತ್ತು. ಅಷ್ಟು ಹೊತ್ತಿಗೆ ಅಜ್ಜಿ ಅಲ್ಲಿಗೇ ಬಂದರು.

"ಯಾರು ನಾಗಿಯೆ? ನಮ್ಮೂರಿನ ನಾಗಿಯೇ?" ಎಂದರು.

ಆಕೆಯ ಮುಖ ಪೆಚ್ಚಾಯಿತು. "ದೊಡ್ಡೊಡತಿ, ಈ ಊರಿನ ಋಣ ಮುಗಿದದ್ದು ಎಂದೋ ಏನೊ. ನಾವಿನ್ನು ಹೊರಡುತ್ತೇವೆ" ಎಂದಳು ಅವರು "ಚಿಂತೆಯಿಲ್ಲ ನೀನು ನಿನ್ನ ಹಟವನ್ನು ಸಾಧಿಸಿದೆ" ಎಂದು ನಕ್ಕರು. "ನಾಗಿ, ನಿನ್ನ ದೌಲೆಲ್ಲ ಸಾಕು. ಮೂಕಜ್ಜಿ ಮನೆಯಲ್ಲಿ ಒಂದು ತುತ್ತು ಅವನ್ನನ್ನು ಉಂಡುಹೋದರೆ ನಿನಗೇನೂ ಕೇಡು ಬರಲಾರದು" ಎಂದರು.

"ನನ್ನ ದೇವರು ಹೇಳಿದ ಮೇಲೆ..." ಎಂದಳು ಆಕೆ.

"ಹಾಗೆ ಹೇಳು ಮತ್ತೆ, ಯಾಕೋ ಏನೋ, ನಿನ್ನ ನೆನಪು ಸಣ್ಣದರಿಂದಲೂ ಉಳಿದುಕೊಂಡಿದೆ, ನನ್ನ ಮನಸ್ಸಿನಲ್ಲಿ. ನೀನು ಬಂದದ್ದು ಭಾರೀ ಒಳಿತಾಯಿತು. ಇವು ನಿನ್ನೆರಡು ಮಕ್ಕಳಲ್ಲವೇ ?"

"ಹೌದು ಒಡತಿ, ಅವು ಮುಂದೆ ಬೆಳೆದು ಸಂಸಾರ ಮಾಡಿಕೊಂಡಿರುವುದನ್ನು ನಾನು ಕಂಡರೆ ಸಾಕು. ಈ ಮಕ್ಕಳದ್ದೇ ಚಿಂತೆ. ಅವುಗಳ ಹಣೆಯ ಮೇಲೆ ಏನೇನು ಬರೆದಿದೆಯೋ" ಎನ್ನುತ್ತಲೇ ನಾಗಿಯ ದನಿ ದುಃಖಪೂರಿತವಾಗುತ್ತ ಬಂದಿತು.

"ಸಾಕು. ನೀನು ಅದನ್ನು ಹೇಳುವುದು ಬೇಡ, ನಿಮ್ಮ ಊಟ ಮುಗಿಯಲಿ ಆಮೇಲೆ ಒಂದು ಮಾತು ಹೇಳುತ್ತೇನೆ—ನಾಲ್ಕು ಹೊಟ್ಟೆ ತಂಪಾಗುವ ಮಾತನ್ನೇ ಹೇಳುತ್ತೇನೆ" ಎಂದು ತಮ್ಮ ಕೋಣೆಗೆ ಹೋದರು.

ನಮ್ಮೆಲ್ಲರ ಊಟ ಮುಗಿದು, ಮಕ್ಕಳು ನಿದ್ದೆ ಹೋಗಿದ್ದವು. ನನಗೂ ತೂಕಡಿಕೆ. ಆಗ ಸೀತೆ "ಎಷ್ಟು

ಹೊತ್ತು ಮಾತುಕತೆ! ಯಾವ ಋಣಾನುಬಂಧವೋ ಏನೋ, ಇನ್ನೂ ಮುಗಿಸಿದ ಹಾಗಿಲ್ಲ" ಎಂದು ಗೊಣಗಿದಳು. ಮರುದಿನ ನನಗೆ ಬೆಳಿಗ್ಗೆ ಎಚ್ಚರಾದಾಗ ನಾಗಿ ತನ್ನ ಮಕ್ಕಳೊಡನೆ ಹೊರಟು ಹೋಗಿದ್ದಳು.

ಕೆಲ ದಿನಗಳ ಮೇಲೆ ರಾಮಣ್ಣ ಮಳೆಯಲ್ಲಿ ನೆನೆದು, ನಮ್ಮ ಮನೆಗೆ ಬಂದಾಗ ಅಜ್ಜಿ ಅವನೊಡನೆಯೂ ದೀರ್ಘ ಸಂಭಾಷಣೆಯನ್ನು ನಡೆಸಿದರು. ನಾಗಿಯ ವಿಷಯದಲ್ಲಿ ಅವನಿಗೆ ಅದೆಷ್ಟು ಮೋಹ! ಅಜ್ಜಿ ಅನ್ನುತ್ತಿರುವ ಹಾಗೆ, ಗಂಡು ಹೆಣ್ಣಿನ ಮೋಹ ಮೊತ್ತದು. ದೇವರು–ಮೋಹಿನಿ ಮೇಲೆ ಅವತಾರ ತಾಳಿದರೂ–ಪ್ರತಿ ಜನ್ಮದಲ್ಲಿಯೂ 'ಅವನೇ ಗಂಡ, ಅವಳೇ ಹೆಂಡತಿ' ಆಗಿ ಮದುವೆಯಾಗಿ ಬಾಳಿದರು. ಲಕ್ಷ್ಮಿ ಜನಕರಾಯನ ಮಗಳಾಗಿ, ವಿಷ್ಣು ದಶರಥರಾಯನ ಮಗನಾಗಿ ಹುಟ್ಟಿದರು. ಸೀತೆಗೆ ಸ್ವಯಂವರ ನಿರ್ಣಯವಾಗಿ, ಸಾವಿರಾರು ಜನ ಅರಸು ಮಕ್ಕಳು ಬಂದರೂ ಸೀತೆ ಮಾತ್ರ ರಾಮನವೇ ಹೆಂಡತಿಯಾಗುವುದು ಸಾಧ್ಯ. ಉಳಿದವರಿಗೆ ಸಾಧ್ಯವೆ ? ನನ್ನ ಹೆಂಡತಿಯ ಹೆಸರೂ ಸೀತೆಯಷ್ಟೆ. ಇವಳೂ ಹೀಗೆ ಜನ್ಮಜನ್ಮಾಂತರ ದಿಂದಲೂ ನನ್ನನ್ನು ಬೆನ್ನಟ್ಟಿ ಬಂದವಳಿರಬಹುದೇ? ಹಿಂದೆಯೂ ಇವಳು ನನ್ನನ್ನು ಸ್ವಲ್ಪ ಮಟ್ಟಿಗಾದರೂ ಹೆದರಿಸಿಕೊಂಡೇ ಇದ್ದಳು! ಈ ಪುನರ್ಜನ್ಮವೆಂಬುದು ನಿಜವಾದರೆ ನಮ್ಮ ರಾಮಣ್ಣನಿಗೆ ಈ ಜನ್ಮದಲ್ಲಿ ನಾಗಿ ಸಿಗದೇ ಹೋದರೂ, ಇನ್ನೊಂದು ಜನ್ಮದಲ್ಲಾದರೂ ಅವನಿರಿಸಿದ ಪ್ರೀತಿಗೆ ಬಹುಮಾನವಾಗಿ ದೇವರು ಅದೇ ನಾಗಿಯನ್ನು ಅವನಿಗೆ ಕೊಡಿಸಲಾರನೇ? ಒಂದು ವೇಳೆ ಸಿಕ್ಕರೂ ಕೂಡ ಏನು ಪ್ರಯೋಜನ ? ಇನ್ನೊಂದು ಜನ್ಮದಲ್ಲಿ ರಾಮಣ್ಣ ಗಾಣದ ರಾಮಣ್ಣನಾಗಿ ಹುಟ್ಟುತ್ತಾನೆಯೆ ? ಅಥವಾ ನಾಗಿ ನಾಗಿಯಾಗಿಯೇ ಹುಟ್ಟುತ್ತಾಳೆಯೆ? ಮುಂದಾದರೂ ಅವರು ಕೂಡಿ ಬಾಳಬೇಕೆಂಬ ನನ್ನ ಆಶಯವನ್ನು ಅಜ್ಜಿಗೆ ಹೇಳಿದಾಗ ಅವರು "ಹಾಗೆ ಗಂಡ ಹೆಂಡಿರಾಗಿ ಬದುಕುವುದಾದರೆ ಇಂದೇ ಬದುಕಿದರೆ ಪಸಂದ. ಮುಂದಿನ ಜನ್ಮವಿದ್ದರೂ, ಅವನು ಕಾಗೆ, ಇವಳು ಗುಬ್ಬಚ್ಚಿಯಾದರೂ ಅಷ್ಟೇ" ಎಂದು ನುಡಿದರು.

ಮಳೆಗಾಲದಲ್ಲಿ ಒಂದು ದಿವಸ ಅನಿರೀಕ್ಷಿತವಾಗಿಯೇ ನಾಗಿಯು ನಮ್ಮ ಮನೆಯ ಮುಂದೆ ಕಾಣಿಸಿಕೊಂಡಳು. ಒಳ್ಳೆದೊಂದು ಚಿತ್ರದ ಪೆಟ್ಟಿಗೆಯನ್ನು ಹೆಣೆದು ತಂದು ನಮ್ಮ ಮನೆಯ ಚಾವಡಿ ಮೇಲಿರಿಸಿ "ಸಣ್ಣೊಡತಿಯರೇ" ಎಂದು ಕರೆದಳು. ಸೀತೆ ಒಳಗಿನಿಂದ ಬಂದು ನಾಗಿಯನ್ನು ಕುರಿತು "ಇದಕ್ಕೆ ಎಷ್ಟು ಹಾನೆ ಅಕ್ಕಿ?!" ಎಂದು ಪ್ರಶ್ನಿಸಿದಳು.

"ನಿಮಗೆ ಚಂದ ಕಾಣಿಸುತ್ತದೆಯೇ, ಇಲ್ಲವೆ? ಚಿತ್ರವು. ಸೀರಿಗೀರೆ ಹಾಕಿಡಲು ಒಯಿನಾಗಿದೆ. ಒಳಕ್ಕೆ ತೆಗೆದಿರಿಸಿ."

"ನೀನು ಕ್ರಯ ಹೇಳಿಲ್ಲವಲ್ಲ. ವಾಜ್ಮಿ ಕ್ರಯ ಹೇಳಿದರೆ, ಇನ್ನೂ . ಸ್ವಲ್ಪ ಸಾಮಾನು ಬೇಕಾಗಿದೆ; ಒಂದೆರಡು ಪಟ್ಟೆಗಳು. ಇರಿಕೆಗಳು ಬೇಕು."

"ನೀವು ಮೊದಲು ಇದನ್ನು ತೆಗೆದಿರಿಸಿ, ಒಡತಿ. ನಾನು ಮಾರಾಟಕ್ಕೆ ತಂದವಳಲ್ಲ." ಎಂದಳು ನಾಗಿ. ಹತ್ತು ಮಾರು ಅಚೆ ಹಸಿ ತೆಂಗಿನ ಸೋಗೆಯೊಂದನ್ನು ಹಿಡಿದು ನಾನು ಮಡಲನ್ನು ಹೆಣೆಯುತ್ತಿದ್ದೆ. ಎದ್ದು ಹೋಗಿ, ಆ ಪೆಟ್ಟಿಗೆಯನ್ನೆತ್ತಿ ನೋಡಿದೆ, ಒಳ್ಳೆಯ ಹೆಣಿಗೆಯ ಕೆಲಸ. ಆಗ ನೆನಪಿಗೆ ಬಂದಿತು. ರಾಮಣ್ಣನಕೈಯಲ್ಲಿದ್ದ ಎಲೆಅಡಿಕೆ ಪೆಟ್ಟಿಗೆಯ ಚಿತ್ರ! ನಾನು "ಇಷ್ಟು ಒಳ್ಳೆಯ ಪೆಟ್ಟಿಗೆಗೆ ನಿನಗೆ ಹದಿನೈದು ದಿನಗಳ ಕೆಲಸವಾದರೂ ಹಿಡಿದಿರಬಹುದು, ದಾಕ್ಷಿಣ್ಯ ಮಾಡಬೇಡ. ಎಷ್ಟು ಹಾನೆ ಅಕ್ಕಿ ಎಂದು ಹೇಳು" ಎಂದು ಕೇಳಿದೆ.

"ಅಯ್ಯೋ ಅದೊಂದು ಸುದ್ದಿಯನ್ನು ಮಾತನಾಡಬೇಡಿ. ನಾನು ಅದಕ್ಕೆಂದೇ ಬಂದವಳೂ ಅಲ್ಲ. ಅಜ್ಜಮ್ಮನನ್ನು ಮಾತಾಡಿಸಿ ಹೋಗೋಣ ಎಂದು ಬಂದೆ. ಬರಿಗೈಯಲ್ಲಿ ದೊಡ್ಡವರನ್ನು ಕಾಣಬಾರದು –ಎಂಬುದರಿಂದ ಇದನ್ನು ತಂದೆ. ಚಿತ್ರಕ್ಕೂ ದುಡ್ಡು ಕೊಟ್ಟವಳಲ್ಲ; ಇದಕ್ಕೂ ಕೇಳುವವಳಲ್ಲ" ಎಂದಳು.

ಅಷ್ಟರಲ್ಲಿ ಒಳಕೋಣೆಯಿಂದ ನಮ್ಮ ಅಜ್ಜಿಯ ಧ್ವನಿ ಕೇಳಿಸಿತು. "ಮಗು, ನಾಗಿಯಲ್ಲವೇ ತಂದದ್ದು? ಅದನ್ನು ಒಳಗೆ ತೆಗೆದಿಡು. ಅವಳು ನನ್ನದೊಂದು ತಬ್ಬಲಿ ಕರುವಿದ್ದ ಹಾಗೆ" ಎಂದರು. ಅವರ ಧ್ವನಿಗೆ ನಾಗಿಯ ಮುಖ ಅರಳಿತು. ಸೀತೆ "ಇನ್ನು ಮೇಲೆ ನನ್ನ ಮಾತಿಲ್ಲ. ಮಧ್ಯಾಹ್ನ ಉಂಡು ಹೋಗು. ಹಾಗೇ ಹೋಗಬೇಡ" ಎಂದು ನುಡಿದು ಪೆಟ್ಟಿಗೆಯನ್ನು ಒಳಗಿರಿಸಿದಳು. ನಾನು ತೋಟಕ್ಕೆ ಹೋಗಿಬಂದೆ. ಮಧ್ಯಾಹ್ನದ ಊಟ, ನಿದ್ರೆಗಳನ್ನು ಮುಗಿಸಿದೆ.

ಒಂದು ಜಾವ ಹೊತ್ತಿನ ಮೇಲೆ ಕಟ್ಟೆಯಲ್ಲಿ ಅಜ್ಜಿ ಒಬ್ಬರೇ ಕುಳಿತದ್ದು ಕಾಣಿಸಿತು. ಆ ಕಡೆಗೆ ನಾನು ಸರಿದಾಗ “ಮಾಣಿ ಬಾ” ಎಂದು ಅವರಾಗಿಯೇ ನನ್ನನ್ನು ಕರೆದು ಹೇಳಿದರು.

“ಮಾಣಿ, ನಾನು ಒಂದು ಕೆಲಸವನ್ನು ಮಾಡಿದೆ. ತಪ್ಪೋ ಒಪ್ಪೋ, ಗೊತ್ತಿಲ್ಲ. ಅಂದು ನಾನು ಈ ನಾಗಿಗೆ ಏನೇನೋ ಹೇಳಿದ್ದೆ. ಮತ್ತೆರಡು ದಿನಗಳಲ್ಲಿ ರಾಮಣ್ಣನೂ ಬಂದಿದ್ದನಲ್ಲ. ಅವನೂ ಒಂಟಿಯೇ ಮೊನ್ನೆಯ ತನಕ. ಅಕ್ಕನೋ ತಂಗಿಯೋ ಹತ್ತಿರ ಇರುತ್ತಿದ್ದರಂತೆ. ಈಗ ಅವರೂ ಬಿಟ್ಟು ಹೋದರು. ಅದ್ದರಿಂದ ರಾಮಣ್ಣನಿಗೆ ನಾನೆಂದೆ, ನಾಗಿಯು ಕೆಟ್ಟದ್ದು ನಿಜ, ಆಮೇಲೆ ಮನುಷ್ಯರ ಮುಖವನ್ನು ಕಂಡವಳಲ್ಲ. ಅವಳಿನ್ನೂ ಹೆಣ್ಣಾಗಿಯೇ ಉಳಿದಿದ್ದಾಳೆ. ಅವಳ ಮಕ್ಕಳಿಂದ ನಿನಗೇನೂ ಅಪಚಾರವಾಗಲಿಕ್ಕಿಲ್ಲ. ಅವು ದೊಡ್ಡದಾದವು. ಬಡಾ ಘಟ್ಟಕ್ಕೆ ಹೋಗಿ ಎಲ್ಲಾದರೂ ದುಡಿದುಕೊಂಡಿರಲಿ. ಹೇಳುವುದಕ್ಕೊಂದು ಅಪ್ಪನ ಹೆಸರಿದ್ದರೆ, ನಿನಗೆ ಅದು ನಾಚಿಕೆ ಎಂದು ಕಾಣಿಸದಿದ್ದರೆ, ಅವುಗಳ ಹಣೆಯ ಮೇಲೆ ಸಂಸಾರದ ಬರಹ ಬರೆದಿದ್ದರೆ, ಯಾರಾದರೂ ಅವಕ್ಕೆ ಹೆಣ್ಣು ಕೊಟ್ಟಾರು ಎಂದೆನಪ್ಪ.”

“ಅಜ್ಜಿ ನೀವು ಹಣೆ ಬರಹ, ಗಿರಹ ನಂಬುತ್ತೀರೊ?”

“ಹೇಳಿದೆ ಅಪ್ಪ, ಒಂದು ಮಾತಿಗೆ. ಆ ‘ಅಮ್ಮ’ ಗಂಡು ಅಂತ ಆ ಮಕ್ಕಳನ್ನು ಹುಟ್ಟಿಸಿದಕ್ಕೆ, ಅವಕ್ಕೆ ಬೇಕಾದ ಹೆಣ್ಣನ್ನು ಇನ್ನೆಲ್ಲಾದರೂ ಹುಟ್ಟಿಸಿಯೆ ಇರುತ್ತಾನೆ.”

“ಹೋ, ನೀವು ಇಷ್ಟೆಲ್ಲ ಪಂಚಾತಿಕೆ ಮಾಡಿದ್ದೀರಿ! ಮತ್ತೇನಾಯಿತು?”

“ನಾನು ಎಣಿಸಿದ ಹಾಗೆಯೇ ರಾಮಣ್ಣ ಅವಳ ಮನೆಯ ಬಾಗಿಲಿಗೇ ಹೋದ.”

“ರಾಮಣ್ಣ ಮೊದಲು ಕರೆದಾಗ ಅವಳಾಗಿಯೇ ತಾನು ಎಂಜಲಾದೆ–ಎಂದು ಹೇಳಿರಲಿಲ್ಲವೆ?”

“ಅದು ಅವಳ ದೊಡ್ಡಸ್ತಿಕೆ. ಆದರೆ ನೋಡು, ಗಂಡು ಹೆಣ್ಣಿಗೂ ಎಂಜಲು ಮುಸುರೆಗೂ ಜೋಡಿಯಿಲ್ಲ. ಇವರು ಇಬ್ಬರೊಳಗೂ ಕುದಿಯುತ್ತಿರುವ ಸಂಕಟ ಏನು. ಎಂಥದು ಅಂತ ನಿನಗೇನು ಗೊತ್ತಾಗುತ್ತದೆ? ಇರಲಿ. ಇವತ್ತು ನಾಗಿ ಬಂದಳು. ತಾವು ಚೆನ್ನಾಗಿದ್ದೇವೆ. ‘ಬಡಾ ಘಟ್ಟಕ್ಕೆ ಹೋದ ಮಕ್ಕಳನ್ನು ಬಿಟ್ಟಿರಲು ಕಷ್ಟವಾಗುತ್ತದೆ. ಎಲ್ಲರೂ ಊರಲ್ಲೇ ಇದ್ದರೆ, ಯಾರಾದರೂ ಏನಾದರೂ ಅಂದದ್ದು ಕೇಳಿ, ಅವಕ್ಕೆ ಹೆಣ್ಣು ಸಿಗದೇ ಹೋದೀತು’ ಎಂದಳು. ‘ಅಜ್ಜಿಯ ನೆನಪಾದಾಗ ಬಂದು ನೋಡುತ್ತವೆ. ಬಿಡು. ಅವಕ್ಕೆ ದುಡಿಯುವ ತ್ರಾಣವಿದೆ; ಅವಾಗಿ ಎಲ್ಲಾದರೂ ತಮಗೆ ಒಗ್ಗುವ ಹೆಣ್ಣುಗಳನ್ನು ಹುಡುಕಿಕೊಳ್ಳುತ್ತವೆ. ಒಂದು ಜಾತಿಯಲ್ಲಲ್ಲ. ಮತ್ತೊಂದು ಜಾತಿಯಲ್ಲಿ’” ಎಂದರು.

“ಈ ರೀತಿಯ ಮದುವೆ ಸಮವೇ?”

“ನೀನು ಮರುಳ, ದೇವರು ಮಾಡಿಟ್ಟ ಜಾತಿ ಎರಡೇ ಎರಡು; ಗಂಡು,ಹೆಣ್ಣು, ನಾವು ನೀವು ಮಾಡಿಕೊಂಡದ್ದು ನೂರು, ಸಾವಿರ ಜಾತಿ. ಈ ಪಾಟಿ ಜಾತಿ ಯಾವ ಜೀವಿಗಳಲ್ಲೂ ಇಲ್ಲ. ಗಂಡು ಗಂಡನ್ನು ಮದುವೆಯಾಗುವುದಿಲ್ಲ. ಹೆಣ್ಣು ಹೆಣ್ಣನ್ನು ಮದುವೆಯಾಗುವುದಿಲ್ಲ. ಈ ಎರಡು ಜಾತಿಗಳ ಕೂಡಿಕೆ ಹುಟ್ಟಿಸಿದ ದೇವರಿಗೆ ಇಷ್ಟದ್ದೇ,” ಎಂದರು. ✡



Printed & published by P. S. Bhat for the Jayakarnataka News Printers Ltd., at the Samyukta Karnataka Press, Koppikar Road, Hubli–580 020. Rep: Bombay: V. Satyamurthy Phone: 522412; Calcutta: H. Muzamdar 46–4233; Madras: A. K. Subramanian Phone: 842201; New Delhi P. R. Chopra Phone: 224130.


ಚಿಕ್ಕ ಮಕ್ಕಳು
ಪ್ರೀತಿಯ ಇನ್ನೊಂದು ಹೆಸರು
ಪಾರ್ಲೆ ಗ್ಲುಕೋ
ಅಪೂರ್ವವಾದ ರುಚಿ
ತುಂಬಿ ತುಳುಕುವ ಶಕ್ತಿ
ಗ್ಲುಕೋ
PARLE
Gluco

ಪ್ರಗತಿಗೆ ಈಗ ಹೊಸದೊಂದು ಹೆಸರಿದೆ :

ಮೈಪರ್

[illegible] — ನಮ್ಮ ಆರ್ಥಿಕಸ್ಥಿತಿಗೆ ಶಕ್ತಿ ಅಗತ್ಯವೆಂದು ನೀವು ಅರಿತಿದ್ದರೆ,

[illegible]ಂದ ಸಿಗುವ ಕೋಟಿಗಟ್ಟಲೆಯಿಂದ ದೇಶದಾದ್ಯಂತ
ಲಕ್ಷೋಪಲಕ್ಷ ಮಂದಿ ಜೀವನ ನಡೆಸಲಿದ್ದಾರೆ.

[illegible]ಂದ ಸಿಗಲಿರುವ ಕೋಟಿಗಟ್ಟಲೆ ಆ ಲಕ್ಷೋಪಲಕ್ಷ
ಜನರ ಜೀವನ ಇನ್ನಷ್ಟು ಉತ್ತಮಗೊಳ್ಳಲಿದೆ.

[illegible]ಡಿಗೆ ಲಿಂಗನಮಕ್ಕಿ, ವರಾಹಿ, ಗಂಗಾವಳಿಯಿಂದ
ಕೋಟಿಗಟ್ಟಲೆ ಸೇರಲಿದೆ.

[illegible], ಇದೇ **ಮೈಪರ್** ಕರ್ನಾಟಕದಲ್ಲಿ ಪ್ರಗತಿ ಎನ್ನುವುದಕ್ಕೆ ಹೊಸ
ಶಬ್ದವಿವು.

MYSORE POWER

CORPORATION LTD.

ಮೈಸೂರ್ ಪವರ್ ಕಾರ್ಪೊರೇಶನ್ ಲಿ,

ರಿಜಿಸ್ಟರ್ಡ್ ಕಛೇರಿ : ಭಾರತೀಯ ವಿದ್ಯಾಭವನ,
ರೇಸ್‌ಕೋರ್ಸ್ ರಸ್ತೆ,
ಬೆಂಗಳೂರು - ೫೬೦ ೦೦೧

ಶಕ್ತಿಯ ಅನ್ವೇಷಣೆಯಲ್ಲಿ, ನಿಮಗಾಗಿ

ಪ್ರಜಾಪ್ರಭುತ್ವ

ವ್ಯ. ಸಂ: ಎಚ್. ಆರ್. ಬಸವರಾಜ   ಸಂ: ಪಿ. ಎಸ್. ಭಟ್

ಇಂದಿನ ಪ್ರಜಾಯುಗಕ್ಕೊಂದು ಕೊಡುಗೆ!

ಕೆಲವರಿಗೆ ಆಟದಲ್ಲಿ ಬಹಳ ಇಷ್ಟ. ಎಲ್ಲ ಕ್ರೀಡೆಯಲ್ಲೂ ಬಹಳಷ್ಟು ಪ್ರೀತಿ. ಎಲ್ಲಿ ಹೋದಲ್ಲಿ ಅಲ್ಲಿ ಅವರಿಗೆ ಅದೇ ಬಂಡವಾಳ. ಮತ್ತೆ ಕೆಲವರಿಗೆ ಸಾಹಿತ್ಯದ ಗೀಳು. ಹೋದೆಡೆಯಲ್ಲೆಲ್ಲಾ ಅವರದೂ ಇದೇ ಪಿಟೀಲು. ಅವರವರಿಗೆ ವಿಚಿತ್ರ ಅದು ಪ್ರಿಯ. ಕೇಳುವವರಿಗೂ ಅಲ್ಲ. [illegible] ಇಷ್ಟ ಪಡುವ. ಕಿವಿತೆರೆದು ಆಲಿಸುವ. ಎಲ್ಲರಿಗೂ ಅಸ್ವಾದಿಸುವ ಒಂದು ವಸ್ತುವಿದೆ. ಅದು ರಾಜಕೀಯ ವಿಷಯ. ಇದು ಇಂದಿನ ಫ್ಯಾಷನ್. ಈ ವಿಷಯದಲ್ಲಿ ಈಗ ಎಲ್ಲರಿಗೂ ಇಷ್ಟ.

ದಿನದಿಂದ ದಿನಕ್ಕೆ, ನಿಮಿಷದಿಂದ ನಿಮಿಷಕ್ಕೆ ನಾನಾ ವರ್ಣಗಳನ್ನು ತಳೆಯುತ್ತಾ ಹೊರಳುವ ರಾಜಕೀಯ, ಈಗ ಯುವಕರು – ಯುವತಿಯರು ವಯಸ್ಕರು ಮನಸೋಇಚ್ಛೆಯಾಗಿ ಮಾತನಾಡುತ್ತಾರೆ. ಬೆಳಗಾದರೆ ಸಾಕು ತುಟಿಯಿಂದ ಕಿವಿಗೆ ವಿಷಯಗಳು ಹಬ್ಬುತ್ತವೆ. ಇವೆಲ್ಲಕ್ಕೂ ಮೂಲ ಯಾವುದು ಗೊತ್ತೇ ?

ಅದು : ಹೊಸದಾಗಿ ಆರಂಭವಾಗುವ " ಪ್ರಜಾಪ್ರಭುತ್ವ " ವಾರಪತ್ರಿಕೆ.

ವಾರ ವಾರ, ಅಪ್ಪಟ ರಾಜಕೀಯ ಸುದ್ದಿಗಾಗಿಯೇ ಮೀಸಲಾಗಿರುವ ಈ ಪತ್ರಿಕೆಯಲ್ಲಿ ವಾರವಾರವೂ ಹೊಸ ಹೊಸ ಬೆಳಕನ್ನೇ ಚೆಲ್ಲುವ ಸುದ್ದಿ.

ಅಲ್ಲದೆ, ಆರ್ಥಿಕ ಚಿಂತನೆಗಳು, ಅಪರಾಧಗಳು, ಕ್ರೀಡೆ, ವ್ಯಕ್ತಿ ಪರಿಚಯ, ವಿವಿಧ ಜಿಲ್ಲೆಗಳಿಂದ ಸುದ್ದಿಗಳು. ಉದ್ಯೋಗಾವಕಾಶ, ಭೀತಿಭೂತ, ಗೃಹಶ್ರೀ. ಸಿನಿಮಾ ಹೀಗೆ ನಾನಾ ವಿಷಯಗಳೂ ಅಡಕವಾಗಿರುವ ಇಷ್ಟೆಲ್ಲ ಇದ್ದರೂ **" ಪ್ರಜಾಪ್ರಭುತ್ವ " ವಾರಪತ್ರಿಕೆಯ ಬೆಲೆ ೬೦ ಪೈಸೆ** ಮಾತ್ರ. ಇಂಗ್ಲೀಷ್ "ಬ್ಲಿಟ್ಜ್" ಮಾದರಿಯ ಕನ್ನಡದ ಹೊರಡುವ ಈ ವಾರಪತ್ರಿಕೆಯದೇ ಕನ್ನಡ ನಾಡಿನಲ್ಲಿ ಮಾತು. ಕೈಯಿಂದ ಕೈಗೆ, ಮನೆಯಿಂದ ಮನೆಗೆ ಇದರ ಯಾತ್ರೆ.

ನಿಮ್ಮ ಮನೆಯಲ್ಲೂ ಒಂದು ಇರಲಿ " ಪ್ರಜಾಪ್ರಭುತ್ವ "

ಮೆ. ಜಯಕರ್ನಾಟಕ ನ್ಯೂಸ್ ಪ್ರಿಂಟರ್ಸ್ ಲಿಮಿಟೆಡ್
ಬೆಂಗಳೂರು – ಹುಬ್ಬಳ್ಳಿ.




ನೆಸ್‌ಕೆಫೆ®
NESCAF
Instant

KASTURI PRICE : 2-00 Regd. No. KRNG 43
Registered with the Registrar of Newspapers for India under No. 3533/57